# ಋಗ್ವೇದೀಯ ಪುರುಷಸೂಕ್ತ ಮಂತ್ರಾರ್ಥ ವಿವೇಚನೆ

ಲೇಖಕರು:

ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು

ಕ್ರಮಾಂಕ: 240

Price List Catalog Sl.No. 141

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ

ದೂರವಾಣಿ: 08175-273820

website: www.adhyatmaprakasha.org

E-mail: secretary@adhyatmaprakasha.org

coordinator_apk@yahoo.com

ಬೆಂಗಳೂರು ಶಾಖೆ :

ನಂ. 68, (ಹೊಸ ನಂ. 6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು - 560 028 ದೂ: 080-2676 5548

E-mai: shankara.bhaskara@gmail.com

2018

**Rugvedeeya purusha suktha Mantratha Vevechane** -
Written by Sri Sri Sachidanandra Saraswathi Swamijigalu,
Published by Adhyatma Prakasha Karyalaya, Holenarasipura-573211,
Hassan District, Karnataka State, INDIA.
**Phone: 08175-273820**

website : www.adhyatmaprakasha.org
E-mail : secretary@adhyatmaprakasha.org
coordinator_apk@yahoo.com

**1ನೇ ಮುದ್ರಣ 2009;**
**2ನೇ ಮುದ್ರಣ 2018 - 1000 ಪ್ರತಿಗಳು**

**ಮುದ್ರಣ ಕಾಗದ : 70 GSM NS Maplitho**

**ಪುಟಗಳು : 12+108=120**

**ಬೆಲೆ: ರೂ. 40/-**

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

*ಪ್ರತಿಗಳು ದೊರೆಯುವ ಸ್ಥಳ :*
**ಅಧ್ಯಾತ್ಮಪ್ರಕಾಶಕಾರ್ಯಾಲಯ**
**ಹೊಳೆನರಸೀಪುರ - 573 211, ದೂರವಾಣಿ: 08175-273820**

**Bengaluru Branch :**
**Adhyatma Prakasha Karyalaya**
No. 68, A.P.K. Road, 6th Main, 2nd Block
Thyagarajanagar, Bengaluru-560 028. Phone : 080-26765548
E-mail: shankara.bhaskara@gmail.com

**ಮುದ್ರಣ ಸ್ಥಾನ:**
**ಶ್ರೀರಾಮ ಪ್ರಿಂಟರ್ಸ್, ನಂ.25, 15ನೇ ಕ್ರಾಸ್, ಶ್ರೀನಿಧಿಲೇಔಟ್,**
**ಬೆಂಗಳೂರು - 560 062. ಮೊಬೈಲ್: ೯೮೪೫೩ ೪೬೧೯೭**

# ಮುನ್ನುಡಿ

## ಶ್ರೀರಂಗ ಮಹಾಪ್ರಭುವೇ ನಮಃ

ಸಮಸ್ತಪುರುಷಾರ್ಥಗಳ ಸಿದ್ಧಿಗೆ ಪರಮಸಾಧನವೂ ಸರ್ವಧರ್ಮ ಸಂಸ್ಕೃತಿಗಳಿಗೆ ಮೂಲಭೂತವೂ ಆಗಿರುವ ಸನಾತನ ಸಾಹಿತ್ಯವನ್ನು "ವೇದ" ಎಂದು ಕರೆಯುತ್ತಾರೆ. "ವೇದೋಽಖಿಲೋ ಧರ್ಮಮೂಲಂ" "ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪರಮಂ ಶ್ರುತಿಃ". ಅಂತಹ ವೇದಗಳಲ್ಲಿಯೂ "ವೇದೇಷು ಪೌರುಷಂ ಸೂಕ್ತಂ" ಎಂಬಂತೆ ಸಾರತಮವೂ ರಮಣೀಯತಮವೂ ಪುರಸ್ಕರಣೀಯತಮವೂ ಆಗಿರುವ ಪುರುಷಸೂಕ್ತವನ್ನು ಕುರಿತ ಈ ಪುಟ್ಟ ಪುಸ್ತಕವನ್ನು ಕುರಿತು ನಾರಾಯಣ ಸ್ಮರಣೆಗಳು.

ಇದಕ್ಕೆ ಋಷಿಯೂ ನಾರಾಯಣ. ದೇವತೆಯೂ ನಾರಾಯಣಾಂಶಜ ನಾದ ವಿರಾಟ್‌ಪುರುಷ. ಛಂದಸ್ಸು ಅನುಷ್ಟುಪ್ಪು. (ಕಡೆಯ ಋಕ್ಕುಮಾತ್ರ ತ್ರಿಷ್ಟುಪ್ ಆಗಿದೆ). ಋಗ್ವೇದದಲ್ಲಿ ಇದು ಹದಿನಾರು ಋಕ್ಕುಗಳಿಂದ ಅಲಂಕೃತವಾಗಿದೆ. ಕೃಷ್ಣಯಜುರ್ವೇದದಲ್ಲಿ ಇನ್ನೂ ಎರಡು ಋಕ್ಕುಗಳು ಸೇರುತ್ತವೆ. ಇದನ್ನು ನಾರಾಯಣಾನುವಾಕ ಎನ್ನುತ್ತಾರೆ. ಇದರನಂತರ ಉತ್ತರನಾರಾಯಣಾನುವಾಕವನ್ನೂ ಸೇರಿಸಿ ಹೇಳುತ್ತಾರೆ. "ಅಥ ಪುರುಷೋ ಹ ವೈ ನಾರಾಯಣೋಽಕಾಮಯತ ಪ್ರಜಾಸ್ಸೃಜೇಯೇತಿ" "ಅತೋಽಸ್ಮಿಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ" ಎಂದು ಹೇಳಲ್ಪಟ್ಟಿರುವ ಪುರುಷವರೇಣ್ಯನೂ ನಾರಾಯಣ, "ಪುರುಷೋ ವೈ ರುದ್ರಃ" "ಬ್ರಹ್ಮಾ ನಾರಾಯಣಃ" "ಶಿವಶ್ಚ ನಾರಾಯಣಃ" ಎಂಬಂತೆ ಪರಮಪುರುಷನೂ ಆತನ ವಿಶ್ವರೂಪವೂ ವರ್ಣಿಸಲ್ಪಟ್ಟಿರುವ ಸೂಕ್ತ ಇದು. ಇದನ್ನು ವೇದದ ಇತರ ಮುಖ್ಯ ಮಂತ್ರಗಳಂತೆ ಪಾರಾಯಣಕ್ಕೆ ಹೇಳಿರುವದಲ್ಲದೇ ವಿಷ್ಣುಸಂಬಂಧವಾದ ಎಲ್ಲ ಯಜ್ಞಗಳಲ್ಲಿಯೂ ಇದರ ವಿನಿಯೋಗವನ್ನು ಋಷಿಗಳು ಹೇಳಿರುತ್ತಾರೆ. ಭಗವಂತನ ಅಭಿಷೇಕಕ್ಕೆ ವಿಹಿತವಾಗಿರುವಂತೆ ಇದರ ಹದಿನಾರು ಅಥವಾ ಹದಿನೆಂಟು ಋಕ್ಕುಗಳನ್ನು ದೇವರ ಸರ್ವೋಪಚಾರಗಳಿಗೂ ವಿಧಾನಮಾಡಿರುತ್ತಾರೆ.

ಪ್ರಣವದಂತೆ ಮತ್ತು ಗಾಯತ್ರಿಯಂತೆ ಎಲ್ಲಾ ವೇದಗಳನ್ನೂ ಅಲಂಕರಿಸಿರುವ ಸೂಕ್ತರತ್ನ ಇದು. ಆಕಾರದಲ್ಲಿ ವಾಮನಮೂರ್ತಿಯಾಗಿದ್ದರೂ ಅರ್ಥಾನುಸಂಧಾನ ಮಾಡುತ್ತಾ ಹೋದಂತೆಲ್ಲಾ ತ್ರಿವಿಕ್ರಮನ ಮಹಿಮೆಯನ್ನು ತಾಳುತ್ತಿರುವ ಸೂಕ್ತ ಇದಾಗಿದೆ. ಶ್ರೀ ಸಾಯಣರು, ಶ್ರೀ ಭಟ್ಟಭಾಸ್ಕರರೇ ಮುಂತಾದ ಸಾಂಪ್ರದಾಯಿಕ ಭಾಷ್ಯಕಾರರು ಮಾತ್ರವಲ್ಲದೆ ಆಧುನಿಕ ವಿದ್ವಾಂಸರೂ ಕೂಡ ಇದಕ್ಕೆ ತಮ್ಮ ತಮ್ಮ ಭಾಷ್ಯಗಳ ಕಾಣಿಕೆಯನ್ನೂ ಸಮರ್ಪಣೆ ಮಾಡಿರುತ್ತಾರೆ. ದ್ವೈತಾದ್ವೈತವಿಶಿಷ್ಟಾದ್ವೈತಪರವಾದ ಭಾಷ್ಯಗಳೂ ಈ

ಸೂಕ್ತರತ್ನವನ್ನು ಅಲಂಕರಿಸಿವೆ. ಈ ನಾನಾ ಭಾಷ್ಯಗಳನ್ನೂ ಬಣ್ಣದ ಕನ್ನಡಕವಿಲ್ಲದೆ ಸಹಾನುಭೂತಿಯಿಂದಲೂ ಸಂಭಾವನಾಬುದ್ಧಿಯಿಂದಲೂ ವಿಮರ್ಶಿಸಿ ತಮ್ಮ ಮೌಲಿಕವಾದ ವ್ಯಾಖ್ಯಾನವನ್ನೂ ವಿಮರ್ಶೆಯನ್ನೂ ಅಧ್ಯಾತ್ಮಪ್ರಕಾಶಸಂಸ್ಥೆಯ ಸಂಸ್ಥಾಪಕರೂ ಸ್ಫೂರ್ತಿಯ ಚಿಲುಮೆಯೂ ಆಗಿರುವ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಶ್ರೀ ಶ್ರೀಗಳವರು ಇಲ್ಲಿ ಮಂಡಿಸಿ, ವೇದನಾರಾಯಣನನ್ನು ಆರಾಧಿಸಿದ್ದಾರೆ. ಹೀಗೆ **ಸರ್ವಾತ್ಮನಾ ನಾರಾಯಣ**ಮಯವಾಗಿರುವ ಈ ಅಮೂಲ್ಯವಾದ ಗ್ರಂಥರತ್ನವನ್ನು ಕುರಿತು ಮತ್ತೊಮ್ಮೆ ನಾರಾಯಣಸ್ಮರಣೆಗಳು.

ಶ್ರುತಿ, ಸ್ಮೃತಿ, ಪುರಾಣ, ಇತಿಹಾಸ, ಉಪನಿಷತ್ತುಗಳಿಂದ ಕೂಡಿ ಸರಳ ಶೈಲಿಯಲ್ಲಿದ್ದರೂ ವೈದುಷ್ಯಪೂರ್ಣವಾದ ಪ್ರೌಢಗಂಥವೂ ಆಗಿದೆ ಇದು. ಈ ಗ್ರಂಥದ ಕರ್ತೃಗಳು ವಿದ್ವನ್ಮಣಿಗಳೂ ಪರಮೋನ್ನತ ಮಟ್ಟದ ಲೇಖಕರೂ, ವಾಗ್ಮಿಗಳೂ ಜ್ಞಾನಭಕ್ತಿವೈರಾಗ್ಯನಿಧಿಗಳೂ ಆದ ಶ್ರೀಶ್ರೀಗಳು, ಗ್ರಂಥದ ವಿಷಯ ಪರಮಪುರುಷನಾದ ನಾರಾಯಣನ ಮಹಿಮೆ, ಗ್ರಂಥದ ಪ್ರಕಾಶಕರು ಅನ್ವರ್ಥನಾಮಧೇಯರಾದ ಅಧ್ಯಾತ್ಮಪ್ರಕಾಶಸಂಸ್ಥೆಯವರು, ಮೂರೂ ಸೇರಿ ಪೂರ್ವಸುಕೃತ ಎಂಬಂತೆ ಹೊರಬಂದಿರುವ ಈ ಗ್ರಂಥಕ್ಕೆ ಜಯ ಜಯಕಾರಗಳು. ಆಡುಭಾಷೆಯ ಸೊಗಡು, ದಾರ್ಶನಿಕತೆಯ ಗಾಂಭೀರ್ಯ ಮತ್ತು ಜನತೆಗೆ ಉಪದೇಶನೀಡುವ ಪರಮಾರ್ಥಬುದ್ಧಿ ಇವುಗಳಿಂದ ಆಪ್ಯಾಯಮಾನವಾಗಿರುವ ವಿಶಿಷ್ಟವಾದ ಗ್ರಂಥ ಇದು.

ತಮ್ಮ ಅಧ್ಯಾತ್ಮಪ್ರಕಾಶ ಸಂಸ್ಥೆಯ ಪ್ರಧಾನ ಪ್ರಯೋಜನ ಜನರಲ್ಲಿ ಅಧ್ಯಾತ್ಮಪ್ರಕಾಶವನ್ನು ತುಂಬುವುದು ಎಂಬುದನ್ನು ಪ್ರತಿ ಬರಹದಲ್ಲೂ ಶ್ರೀಶ್ರೀಗಳವರು ಸಿದ್ಧಪಡಿಸಿದ್ದಾರೆ. ವೇದಾನ್ತವಿದ್ವಾಂಸರು ಎಲ್ಲರನ್ನೂ ವೈರಾಗ್ಯಭಾವಕ್ಕೆ ಪ್ರೇರಿಸಿ ಲೋಕಜೀವನಕ್ಕೆ ವಿಮುಖರನ್ನಾಗಿಯೂ ಮಾಡಿಬಿಡುತ್ತಾರೆ. ಸಂಸಾರವಿಮುಖರಾದ ಸಂನ್ಯಾಸಿಗಳಾಗಲು ಪ್ರೇರಿಸುತ್ತಾರೆ. ಇವರು ಸಮಾಜದ ಶತ್ರುಗಳು ಎಂಬ ಅಲ್ಪಜ್ಞಾನಿಗಳ ಆರೋಪಕ್ಕೆ ಎಡೆಬರದಂತೆ ಪ್ರತಿಯೊಬ್ಬರೂ ಲೋಕದಲ್ಲಿ ತಮ್ಮ ತಮ್ಮ ವೃತ್ತಿಗಳಲ್ಲೇ ಇದ್ದು ಅಧ್ಯಾತ್ಮಚಿಂತನೆಯನ್ನೂ, ಅದಕ್ಕೆ ತಕ್ಕ ಜೀವನವನ್ನೂ ನಡೆಸಬಹುದು ಎಂಬ ತಿಳಿವಳಿಕೆಯನ್ನು ನೀಡಿರುತ್ತಾರೆ.

ಹತ್ತು ಲೇಖನಗಳಲ್ಲಿ ಋಗ್ವೇದದ ಹದಿನಾರು ಋಕ್ಕುಗಳನ್ನೂ ಮತ್ತು ಅನಂತರ ನಾರಾಯಣಾನುವಾಕವನ್ನೂ, ಉತ್ತರನಾರಾಯಣಾನುವಾಕವನ್ನೂ ಸಂಕ್ಷೇಪಿಸಿ ವ್ಯಾಸಸಮಾಸಾತ್ಮಕವಾಗಿ ಇಡೀ ಪುರುಷಸೂಕ್ತವನ್ನು ಇಲ್ಲಿ ಮನವರಿಕೆ ಮಾಡಿಕೊಟ್ಟಿರು ತ್ತಾರೆ. ಪ್ರತಿಯೊಂದು ಋಕ್ಕಿನ ಅರ್ಥಾನುವಾದವನ್ನು ಮಾಡಿ ಅದರ ವಿಮರ್ಶಾತ್ಮಕ ವಿವರಣೆಯನ್ನೂ ನೀಡಿರುವದು ಪಂಡಿತಪಾಮರರೆಲ್ಲರಿಗೂ ಪರಮೋಪಕಾರಕವಾಗಿದೆ.

ವಿಸ್ತಾರವಾಗಿ ಹೇಳಿದ ವಿಷಯಗಳನ್ನು ಸಂಕ್ಷೇಪವಾಗಿಯೂ ಮತ್ತೊಮ್ಮೆ ಹೇಳಿ ಮನವರಿಕೆ ಮಾಡಿಕೊಡುವ ಈ ಶೈಲಿಯು **ಮ್ಯಾಥ್ಯೂ ಆರ್ನಾಲ್ಡ್** ಎಂಬ ಆಂಗ್ಲ ವಿದ್ವಾಂಸನ "**ಕಲ್ಚರ್ ಎಂಡ್ ಅನಾರ್ಕಿ**" ಎಂಬ ಗ್ರಂಥದ ರೀತಿಯನ್ನು ನೆನಪಿಗೆ ತರುತ್ತದೆ. ತಾನು ಹೇಳಿರುವ ವಿಷಯಗಳು ಅತ್ಯಮೂಲ್ಯವಾಗಿರುವುದರಿಂದ ಅವುಗಳನ್ನು ಮತ್ತೆ ಮತ್ತೆ ಹೇಳಿ ಮನವರಿಕೆ ಮಾಡಿಕೊಟ್ಟಿರುವುದು ಭೂಷಣವೇ ಹೊರತು, ದೂಷಣವಲ್ಲ ಎಂದು ಆತನು ಸಮರ್ಥಿಸಿಕೊಂಡಿರುವುದನ್ನು ಇಲ್ಲಿಯೂ ಸ್ಮರಿಸಬಹುದು. ಒಂದು ಗಹನವಾದ ಮಂತ್ರದ ಅರ್ಥವನ್ನು ಮ ನಸ್ಸಿಗೆ ತೆಗೆದುಕೊಂಡಾಗಿದ್ದರೂ ಅದನ್ನು ಕಾಲಾಂತರದಲ್ಲಿ ಮರೆಯುವ ಸ್ವಭಾವವಿರುವುದರಿಂದ ಅದನ್ನು ಜ್ಞಾಪಿಸಿಕೊಟ್ಟು ಮುಂದಿನ ಪಾಠವನ್ನು ಗ್ರಹಿಸಲು ಅನುವು ಮಾಡಿಕೊಡುವುದು ಸಮರ್ಥರಾದ ಉಪಾಧ್ಯಾಯರ, ಉಪದೇಶಕರ, ಮಾರ್ಗವೇ ಆಗಿದೆ. **"Repeat and revise and recapitulate and revis"** (ಬೋಧಿಸಿದ ಪಾಠವನ್ನೇ ಪುನರಾವೃತ್ತಿಮಾಡಿ ನೆನಪಿಗೆ ತಂದು ಮತ್ತೊಮ್ಮೆ ಅದರ ಸಾರಾಂಶವನ್ನು ಹೇಳಿ ಮನವರಿಕೆ ಮಾಡಿಕೊಡು) ಎಂಬುದು ಉತ್ತಮ ಉಪಾಧ್ಯಾಯರು ಅನುಸರಿಸಬೇಕಾಗದ ನೀತಿಯೇ ಆಗಿದೆ. ಶ್ರೀಶ್ರೀಗಳು ಪೂರ್ವಾಶ್ರಮದಲ್ಲಿ ಉತ್ತಮ ಉಪಾಧ್ಯಾಯರೇ ಆಗಿದ್ದರಿಂದ ಆ ಕಲೆಯನ್ನು ಈ ಉಪದೇಶ ಗ್ರಂಥದಲ್ಲೂ ಅನುಸರಿಸಿರುವುದು ಸಹಜವೇ ಆಗಿದೆ. ವಿಸ್ತಾರವಾಗಿ ಉಪದೇಶಿಸಿದ ವಿಷಯವನ್ನು ಸಂಕ್ಷೇಪಿಸಿ ಹೇಳುವ ಕಲೆಯಲ್ಲೂ ಲೇಖಕರು ಸಿದ್ಧಹಸ್ತರಾಗಿದ್ದರೆಂಬುದನ್ನು ಇಲ್ಲಿ ಅಭಿನಂದಿಸಿ ಹೇಳುತ್ತೇವೆ. ಉದಾಹರಣೆಗೆ ಇಡೀ ಪುರಷಸೂಕ್ತದ ಅಭಿಪ್ರಾಯವನ್ನು ಮೂರು, ನಾಲ್ಕು–ಪ್ಯಾರಾಗಳಲ್ಲಿ ಸಾರಗರ್ಭಿತವಾಗಿ ಈ ಬರಹದಲ್ಲಿ ತಂದಿರುವುದನ್ನೂ ಗಮನಿಸಬಹುದು : **ಋಗ್ವೇದದಲ್ಲಿರುವಂತೆ ಪುರಷಸೂಕ್ತದ ಹದಿನಾರು ಋಕ್ಕುಗಳ ಅಭಿಪ್ರಾಯವನ್ನು ಈವರೆಗೆ ಹತ್ತು ಲೇಖನಗಳಿಂದ ವಿವರಿಸುತ್ತಾ ಬಂದಿರುತ್ತೇನೆ. ಈ ಸೂಕ್ತದಿಂದ ನಮಗೆ ತಿಳಿದುಬರುವ ಒಟ್ಟು ಅರ್ಥವು ಇಷ್ಟು:** ಪರಮಾತ್ಮನು ನಾಮರೂಪಗಳನ್ನು ಮೀರಿ ತನ್ನ ಸ್ವರೂಪದಲ್ಲಿಯೇ ತಾನು ಇರುತ್ತಿದ್ದರೂ ನಾಮರೂಪಪ್ರಪಂಚವನ್ನು ಮಾತ್ರ ಕಾಣಬಲ್ಲ ಇಂದ್ರಿಯ ಪ್ರಧಾನರಾದ ಜನರಿಗೆ ವಿಶ್ವಾಕಾರವಾಗಿಯೂ ತೋರಿಕೊಳ್ಳುತ್ತಿರುತ್ತಾನೆ. ಆತನು ಈ ವಿಶ್ವವನ್ನು ಎಲ್ಲೆಲ್ಲಿಯೂ ತುಂಬಿಕೊಂಡಿರು ವುದರಿಂದ ಪುರುಷನೆನಿಸಿ ಕೊಂಡಿರುತ್ತಾನೆ. ಬ್ರಹ್ಮನಿಂದ ಹಿಡಿದು ಸ್ತಂಬದವರೆಗಿನ ಪ್ರಾಣಿಗಳಲ್ಲೆಲ್ಲಾ ಆತನೇ ಆತ್ಮನಾಗಿ ಇದ್ದುಕೊಂಡಿರುತ್ತಾನೆ. ಆತನೇ ಈ ಜಗತ್ತೆಂಬ ಸ್ಥೂಲೋಪಾಧಿಯಿಂದಲೂ ನಮ್ಮೆಲ್ಲರ ಅಂತರ್ಬಹಿಃಕರಣ ರೂಪವಾದ ಸೂಕ್ಷ್ಮೋಪಾಧಿಯಿಂದಲೂ ಸಾಕಾರನಾಗಿ ಕಾಣಿಸಿಕೊಳ್ಳುತ್ತಿರುತ್ತಾನೆ. ಆದ್ದರಿಂದ ನಾವು ಹೊರಗೆ ಕಾಣುವ ಎಲ್ಲಾ ಪ್ರಾಣಿಗಳನ್ನೂ ಎಲ್ಲಾ ಮಾನವರನ್ನೂ ಎಲ್ಲಾ ಅತಿಮಾನವರಾದ ದೇವರ್ಷಿಗಳನ್ನೂ ಪರಮಾತ್ಮಭಾವನೆಯಿಂದಲೇ ಕಂಡು ನಡೆದುಕೊಳ್ಳುವ ಉತ್ತಮ ಭಾವನೆಯನ್ನು ಕಲಿಯಬೇಕು.

ಇಡಿಯ ದೃಶ್ಯಪ್ರಪಂಚವೆಲ್ಲವೂ ಆತನ ಮಹಿಮೆಯೇ ಆಗಿದೆ. ಆತನ ಮಹಾವಿಭೂತಿಯ ತತ್ತ್ವವನ್ನು ಮನಗಂಡು ಪೂಜ್ಯಬುದ್ಧಿಯಿಂದ ಆರಾಧಿಸು ವುದನ್ನು ನಾವು ಅಭ್ಯಾಸಮಾಡಬೇಕು. ನಿಜವಾಗಿ ನೋಡಿದರೆ ಪರಮಾತ್ಮನು ಪ್ರಪಂಚವನ್ನು ಮೀರಿದ ತನ್ನ ಸ್ವಭಾವದಲ್ಲಿಯೇ ಯಾವಾಗಲೂ ಇರುತ್ತಿರುವನು. ಆದರೂ ಆತನು ತನ್ನ ಮಾಯಾಶಕ್ತಿಯಬಲದಿಂದ ಈ ಪ್ರಪಂಚರೂಪವಾಗಿಯೂ ಕಾಣಿಸಿಕೊಳ್ಳುತ್ತಿರುವನು. ಈ ಪ್ರಪಂಚವು ನಮ್ಮ ಭೋಗಕ್ಕೆ ಅನುಕೂಲಿಸುವ ವಸ್ತುಗಳನ್ನು ಒದಗಿಸುವ ಸ್ಥಾನವೆಂದು ತಿಳಿಯುವುದು ಕುಸಂಸ್ಕೃತಿಯ ಫಲವು. ಈ ಪ್ರಪಂಚವೆಲ್ಲಾ ಒಂದು ಮಹಾಯಜ್ಞಶಾಲೆಯು. ಇಲ್ಲಿ ಪರಮೇಶ್ವರನ ಆರಾಧನಾರೂಪವಾದ ಯಜ್ಞಕ್ಕೆ ಬೇಕದ ಸಾಮಗ್ರಿಗಳೆಲ್ಲವೂ ಕಾಣಬರುತ್ತಿವೆ. ನಾವು ನಮ್ಮ ತನು–ಮನ–ಧನಗಳೆಲ್ಲವನ್ನೂ ಈ ಆರಾಧನೆಗೆ ಉಪಯೋಗಿಸಿ ಕೊಂಡು ಒಬ್ಬರಿಗೊಬ್ಬರು ಸಹಕಾರವನ್ನು ಮಾಡುತ್ತಾ ಬಾಳಬೇಕು.

ವಿಶ್ವದಲ್ಲಿರುವ ಸ್ಥಾವರಜಂಗಮ ಪ್ರಾಣಿಗಳೆಲ್ಲವೂ ಆ ಪರಮಾತ್ಮನ ಚೈತನ್ಯದಿಂದಲೇ ವ್ಯಾಪ್ತವಾಗಿರುವವು. ಇವೆಲ್ಲವೂ ಆ ಪರಮಾತ್ಮನಲ್ಲಿ ಒಂದಾಗಿರುವವು. ಇವುಗಳಲ್ಲಿ ಉತ್ತಮವಾಗಿರುವ ದೇವತೆಗಳೆಂಬುವರು ಪರಮಾತ್ಮನ ಶಕ್ತಿವಿಶೇಷಗಳೇ ಆಗಿರುತ್ತಾರೆ. ದೇವತೆಗಳ ಆರಾಧನೆಯೆಂದರೆ ಆ ಪರಮೇಶ್ವರನ ಆರಾಧನೆಯೇ ಆಗುತ್ತದೆ. ಮನುಷ್ಯನು ಯಜ್ಞದಾನತಪಸ್ಸುಗಳಿಂದ ಪರಮೇಶ್ವರನ ಆರಾಧನೆಯನ್ನು ಮಾಡುತ್ತಿರಬೇಕು. ಎಲ್ಲಾ ಪ್ರಾಣಿಗಳಲ್ಲಿಯೂ ಎಲ್ಲಾ ಮನುಷ್ಯರಲ್ಲಿಯೂ ಎಲ್ಲೆಲ್ಲಿಯೂ ಕೊನೆಗೆ ತನ್ನಲ್ಲಿಯೂ ಆ ಪರಮಾತ್ಮನ ಇರವನ್ನೇ ಕಂಡುಕೊಂಡು ನಲಿಯುವ ಸುಯೋಗವನ್ನು ಸಂಪಾದಿಸಿಕೊಳ್ಳಬೇಕು. ಪರಮಾತ್ಮನು ಬಾಹ್ಯಪ್ರಪಂಚದಲ್ಲೆಲ್ಲಾ ತುಂಬಿಕೊಂಡಿದ್ದು ಆ ಪ್ರಪಂಚರೂಪದಿಂದಲೇ ನಮಗೆ ಕರ್ಮೋಪಾಸನೆಗಳ ಫಲಗಳನ್ನು ಕೊಡುತ್ತಿರುತ್ತಾನೆ. ಈ ಮಾಯಿಕ ಪ್ರಪಂಚವನ್ನೆಲ್ಲಾ ಮೀರಿದ ತನ್ನ ಪರಮೋತ್ತಮವಾದ ಸ್ವರೂಪದಿಂದಲೂ ಇದ್ದುಕೊಂಡಿರುತ್ತಾನೆ. ಆಂತರಿಕವಾದ ಸ್ವಾನುಭವದಿಂದ ಆತನ ಪ್ರಪಂಚಾತೀತ ತತ್ತ್ವವನ್ನು ನೇರವಾಗಿ ಕಂಡುಕೊಂಡು ನಿತ್ಯಾನಂದದಲ್ಲಿ ನೆಲೆನಿಲ್ಲುವುದೇ ಮಾನವ ಸಂಸ್ಕೃತಿಪರ್ವತದ ಪರಮೋಚ್ಚ ಶಿಖರವು".

ಸಂಕುಚಿತ ದೃಷ್ಟಿಯುಳ್ಳ ಪರಮತೀಯರು ವೈದಿಕಧರ್ಮವನ್ನು Pantheism (ಬಹುದೇವತಾವಾದ) Idolatry (ವಿಗ್ರಹಪೂಜೆ) ಎಂದು ಟೀಕೆ ಮಾಡಿರುವವರನ್ನು "ಪುರಷ ಏವೇದಗ್ಂ ಸರ್ವಂ" ಎಂಬ ಒಂದು ವಾಕ್ಯದ ವ್ಯಾಖ್ಯಾನದಿಂದ ಶ್ರೀಶ್ರೀಗಳವರು ಪ್ರಾಮಾಣಿಕವಾಗಿ ಅವರ ಮನಸ್ಸಿಗೆ ನೋವಾಗದಂತೆ ವಿವೇಕಪೂರ್ವಕವಾಗಿ ಖಂಡಿಸಿ ಸತ್ಯಾರ್ಥವನ್ನು ಮನವರಿಕೆ ಮಾಡಿಕೊಟ್ಟಿರುವುದೂ ಗಮನಿಸಬೇಕಾದ ವಿಷಯ. ಈ ಪುರುಷಸೂಕ್ತದಲ್ಲಿ ಪ್ರತಿಪಾದಿಸಿರುವ ವಿಷಯಗಳನ್ನೇ ಉಪನಿಷತ್ತುಗಳೂ ಇತಿಹಾಸ ಪುರಾಣಗಳೂ ಸಂಕ್ಷೇಪವಾಗಿಯೂ ವಿಸ್ತಾರವಾಗಿಯೂ ನಿರೂಪಿಸುತ್ತವೆ ಎಂಬುದನ್ನು

ಉದ್ಧರಣಗಳಿಂದಲೂ ಉಪಪತ್ತಿಗಳಿಂದಲೂ ಶ್ರೀಶ್ರೀಗಳವರು ಪ್ರತಿಪಾದಿಸಿದ್ದಾರೆ. ಪರಮಾತ್ಮನು ಸರ್ವಾತೀತನಾಗಿದ್ದಾನೆ, ಸರ್ವಾಂತರ್ಯಾಮಿಯೂ ಆಗಿದ್ದಾನೆ. ಸರ್ವವೂ ಆಗಿದ್ದಾನೆ ಎಂಬ ಅಭಿಪ್ರಾಯಗಳೂ ಉಪನಿಷತ್ತುಗಳಲ್ಲಿ ಬೇರೆಬೇರೆ ಕಡೆಗಳಲ್ಲಿ ಮಂಡಿಸಲ್ಪಟ್ಟಿವೆ. ಆದರೆ ಅವೆಲ್ಲವೂ ಪುರುಷಸೂಕ್ತವೊಂದರಲ್ಲೇ ಅಡಕವಾಗಿವೆ ಮತ್ತು ಪರಸ್ಪರ ಪೂರಕಗಳಾಗಿವೆ ಎಂಬುದೂ ಗಮನಾರ್ಹ.

"ಸಹಸ್ರಶೀರ್ಷಾ ಪುರುಷಃ...." "ಅತ್ಯತಿಷ್ಠದ್ದಶಾಂಗುಲಂ..." "ಪುರುಷ ಏವೇದಂ ಸರ್ವಂ" ಎಂಬ ಪುರುಷಸೂಕ್ತದ ವಾಕ್ಯಗಳ ಅಭಿಪ್ರಾಯದ ವಿವರಣೆಯನ್ನೂ ಇಲ್ಲಿ ಅನುಸಂಧಾನ ಮಾಡಬಹುದು. ಭಿನ್ನಭಿನ್ನವಾಗಿ ತೋರುತ್ತಿರುವ ಈ ಇಡೀ ವಿಶ್ವವೂ ಪರಮಾತ್ಮನೇ ಆಗಿದೆ. "ಪುರುಷ ಏವೇದಂ ಸರ್ವಂ" ಎಂದು ಪುರುಷಸೂಕ್ತವು ಘಂಟಾ ಘೋಷವಾಗಿ ಪ್ರತಿಜ್ಞೆ ಮಾಡುತ್ತಿದೆ. ಜಗತ್ತಿನಲ್ಲಿ ಇರುವ ನಾನಾ ವಸ್ತುಗಳ ರೂಪಗಳು ನಾನಾ ಪ್ರಕಾರವಾಗಿವೆ. ಗುಣಗಳೂ ಪ್ರಯೋಜನಗಳೂ ಬೇರೆಬೇರೆಯಾಗಿವೆ. ಇವೆಲ್ಲವೂ ಸತ್ಯಜ್ಞಾನಾನಂದಸ್ವರೂಪವಾದ ಒಂದೇ ಬ್ರಹ್ಮವೇ ಆಗಿದೆ– ಎಂಬ ಅಭಿಪ್ರಾಯವು ಸಾಮಾನ್ಯ ದೃಷ್ಟಿಗೆ ಅಸತ್ಯವೆಂದು ತೋರಬಹುದು. ಆಧುನಿಕ ವಿಜ್ಞಾನದ ವಿದ್ಯಾರ್ಥಿಗಳಿಗೆ ಇದನ್ನು ಸತ್ಯ ಎಂಬುದನ್ನು ಸುಲಭವಾಗಿ ಮನವರಿಕೆ ಮಾಡಿಕೊಡಬಹುದು.

"ಒಂದು ಸೀಮೆಸುಣ್ಣ, ಒಂದು ಇದ್ದಲಿನ ಚೂರು, ಒಂದು ಕಲ್ಲುಸಕ್ಕರೆಯ ಚೂರು, ಒಂದು ವಜ್ರ ಇವುಗಳ ರೂಪಗಳು ಬೇರೆ, ಗುಣಗಳು ಬೇರೆ, ಪ್ರಯೋಜನಗಳೂ ಬೇರೆ. ಆದರೆ ಇವೆಲ್ಲವೂ ಮೂಲತಃ ಕಾರ್ಬನ್ ಒಂದೇ (ಸರ್ವಂ ಕಾರ್ಬನ್ ಮಯಂ ಜಗತ್)– ಎಂಬ ವಿಷಯವು ಹೈಸ್ಕೂಲಿನ ವಿದ್ಯಾರ್ಥಿಗಳಿಗೂ ಒಪ್ಪಿಗೆಯಾಗುತ್ತದೆ. ಆದರೆ ಆ ಕಾರ್ಬನ್ ಎಂಬದೂ ಮೂಲ ದ್ರವ್ಯವಲ್ಲ. ಅದೂ ಕೂಡ ಮೂಲತಃ ಆಟಂ (ಅಣು) ಆಗಿದೆ ಎಂದು ಕಾಲೇಜಿನಲ್ಲಿ ಬೋಧಿಸಲಾಗುತ್ತದೆ. "ಸರ್ವಂ ಆಟಂ ಮಯಂ ಜಗತ್". ಆದರೆ ಇನ್ನೂ ಮುಂದಿನ ಅಧ್ಯಯನದಲ್ಲಿ ಆ ಆಟಂ (ಅಣು) ಎಂಬುದೂ ಮೂಲವಸ್ತುವಲ್ಲ. ಅದಕ್ಕೂ ಮೂಲ ಎಲೆಕ್ಟ್ರಾನ್, ಪ್ರೋಟಾನ್ ಆಗಿವೆ. ಸರ್ವಂ ಎಲೆಕ್ಟ್ರಾನ್, ಪ್ರೋಟಾನ್ ಮಯಂ ಜಗತ್" ಎಂದು ಉನ್ನತ ವಿದ್ಯಾವ್ಯಾಸಂಗದಲ್ಲಿ ಮನವರಿಕೆಯಾಗುತ್ತದೆ. ಹೀಗೆಯೇ ವಿಚಾರದ ಸರ್ವಮೂಲದಲ್ಲಿ ಗಮನಿಸಿದಾಗ "ಎಲ್ಲವೂ ಬ್ರಹ್ಮವೇ ಆಗಿದೆ" "ಸರ್ವಂ ಬ್ರಹ್ಮಮಯಂ ಜಗತ್" "ಪುರುಷ ಏವೇದಂ ಸರ್ವಂ". ಇದು ಉದಾಹರಣೆಗಳಿಂದ ಬಂದ ಚಮತ್ಕಾರದ ಹೇಳಿಕೆಯಲ್ಲ. "ವೇದಾಹಮೇತಂ ಪುರುಷಂ ಮಹಾನ್ತಂ" ಈ ಸರ್ವಮೂಲವಾಗಿ ಸರ್ವವೂ ಆಗಿರುವ ಪುರುಷನನ್ನು ನಾನು ಅರಿತಿದ್ದೇನೆ– ಎಂಬ ಜ್ಞಾನಿಗಳ ಅನುಭವ ರಸಾಯನವಾದ ಪುರುಷಸೂಕ್ತದ ಸೂಕ್ತಿಯನ್ನೂ ನಾವು ಅಭಿನಂದಿಸುತ್ತೇವೆ– ಎಂಬ ಶ್ರೀರಂಗ

ಮಹಾಗುರುಗಳ ಉಪದೇಶವಾಣಿಯನ್ನು ನಾವು ಇಲ್ಲಿ ಗಮನಿಸುತ್ತೇವೆ. ಬ್ರಹ್ಮವು (ಪುರುಷನು) ಜಗತ್ತಿಗೆ ಕಾರಣ ಎಂದಮೇಲೆ ಅದು ಉಪಾದಾನಕಾರಣವೋ ನಿಮಿತ್ತಕಾರಣವೋ ಅಥವಾ ಎರಡೂ ಕಾರಣಗಳೂ ಆಗಿದೆಯೋ ಎಂಬ ಜಟಿಲವಾದ ಪ್ರಶ್ನೆ ಉದ್ಭವಿಸುತ್ತದೆ. ಇದನ್ನು ವೇದಾನ್ತವೇ ಮುಂತಾದ ದರ್ಶನಶಾಸ್ತ್ರಗಳಲ್ಲಿ ವಿಸ್ತಾರವಾಗಿ ವಿಚಾರಮಾಡಿ ಬೇರೆಬೇರೆ ಅಭಿಪ್ರಾಯಗಳನ್ನು ಸಿದ್ಧಾಂತಗಳನ್ನಾಗಿ ಹೇಳಿದೆ. ಆದರೆ (ಅದ್ವೈತ ಮತ್ತು ವಿಶಿಷ್ಟಾದ್ವೈತ) ವೇದಾನ್ತ ಸಿದ್ಧಾಂತಗಳಂತೆ ಬ್ರಹ್ಮವು ಜಗತ್ತಿಗೆ ಉಪಾದಾನಕಾರಣ ಮತ್ತು ನಿಮಿತ್ತಕಾರಣ ಎರಡೂ ಆಗಿದೆ. ಶ್ರೀಶ್ರೀಗಳವರು ಈ ಲೇಖನದಲ್ಲಿ ಅದನ್ನೂ ವಿಮರ್ಶಿಸಿ ಸಿದ್ಧಾಂತವನ್ನು ಮಂಡಿಸಿದ್ದಾರೆ. ಈ ಉಪದಾನನಿಮಿತ್ತಕಾರಣ ವಿಮರ್ಶೆ ಮತ್ತು ಸಿದ್ಧಾಂತಗಳನ್ನು ಹೀಗೆ ಸಂಕ್ಷೇಪಿಸಬಹುದು: ಯಾವದೇ ಕಾರ್ಯವಾಗಬೇಕಾಗಿದ್ದರೂ ಅದಕ್ಕೆ ಎರಡು ಕಾರಣಗಳು ಬೇಕು. ಒಂದು ಅದನ್ನು ಮಾಡುವವನು (ಅದರ ಕರ್ತೃ) ಮತ್ತು ಇನ್ನೊಂದು ಅದನ್ನು ಮಾಡುವುದಕ್ಕೆ ಬೇಕಾದ ಪದಾರ್ಥ ಉಪಾದಾನ ದ್ರವ್ಯ (Material). ಉದಾಹರಣೆಗೆ, ಮಡಕೆ ಎಂಬ ಒಂದು ಪದಾರ್ಥ ಸಿದ್ಧವಾಗುವ ಕಾರ್ಯಕ್ಕೆ ಅದನ್ನು ಮಾಡುವ ಕುಂಬಾರ ಬೇಕು. ಇವನು ಅದಕ್ಕೆ ನಿಮಿತ್ತ ಕಾರಣ. ಆ ಮಡಕೆಯನ್ನು ಮಾಡಲು ಬೇಕಾದ ಉಪಾದಾನ ದ್ರವ್ಯ ಜೇಡಿಮಣ್ಣು. ಇದು ಮಡಕೆಗೆ ಉಪಾದಾನ ಕಾರಣವಾಗುತ್ತದೆ. ಬಟ್ಟೆಯೆಂಬುದು ಆಗಬೇಕಾಗಿದ್ದರೆ ಅದನ್ನು ಮಾಡುವ ಕರ್ತೃ ನೇಯ್ಗೆಯವನು ಬೇಕು. ಇವನು ಅದಕ್ಕೆ ನಿಮಿತ್ತಕಾರಣನು. ಅದನ್ನು ಮಾಡಲು ಬೇಕಾದ ಉಪಾದಾನ ದ್ರವ್ಯ (Material) ಹತ್ತಿ, ಅದು ಬಟ್ಟೆಗೆ ಉಪಾದಾನ ಕಾರಣವಾಗುತ್ತದೆ. ಪುರುಷರು ಜಗತ್ತಿಗೆ ಕಾರಣ ಎಂದಾಗ ಅವನು ಅದರ ಕರ್ತೃವಾದ ನಿಮಿತ್ತಕಾರಣ ಮಾತ್ರವೇ ಆಗಿದ್ದು ಅದರ ನಿರ್ಮಾಣ ಸಾಮಗ್ರಿ ಬೇರೆ ಯಾವುದಾದರೂ ಇದೆಯೋ ಎಂದರೆ ಎರಡೂ ಕಾರಣಗಳು ಬ್ರಹ್ಮವೇ ಆಗಿದೆ ಎಂದು ವೇದಾನ್ತವು ಹೇಳುತ್ತದೆ. (ಸಾಮಾನ್ಯವಾಗಿ) ನಿಮಿತ್ತಕಾರಣವಾದ ಕರ್ತೃವೂ ಮತ್ತು ಉಪಾದಾನಕಾರಣವಾದ ಪದಾರ್ಥವೂ ಬೇರೆ ಬೇರೆ ಆಗಿರಬೇಕಲ್ಲವೆ? – ವಸ್ತ್ರದ ರಚನೆಯಲ್ಲಿ ನಿಮಿತ್ತಕಾರಣವಾದ ನೇಯ್ಗೆಯವನೂ ನಿರ್ಮಾಣದ (ಉಪಾದಾನ) ಸಾಮಗ್ರಿಯಾಗಿರುವ ಹತ್ತಿಯೂ ಬೇರೆಬೇರೆಯಲ್ಲವೆ? ಇಲ್ಲಿ ನಿಮಿತ್ತಕಾರಣವಾದ ನೇಯ್ಗೆಯವನು ಚೇತನ, ಉಪಾದಾನಕಾರಣವಾದ ಹತ್ತಿಯು ಜಡದ್ರವ್ಯ. ಹಾಗೆಯೇ ಜಗತ್ತು ಎಂಬ ಕಾರ್ಯಕ್ಕೆ ನಿಮಿತ್ತಕಾರಣ ಪರಮಾತ್ಮ, ಪುರುಷ, ಬ್ರಹ್ಮ, ಆದರೆ ಉಪಾದಾನ ಕಾರಣ ಜಡವಾದ, ವಿಕಾರಿ ದ್ರವ್ಯವಾದ, "ಪ್ರಕೃತಿ" ಆಗಿರಬೇಕು ಎಂದರೆ, ಈ ಎರಡೂ ಕಾರಣಗಳೂ ಎಲ್ಲ ಪದಾರ್ಥಗಳ ನಿರ್ಮಾಣದಲ್ಲೂ ಬೇರೆಬೇರೆ ಆಗಿರಲೇಬೇಕೆಂಬ ನಿಯಮವೇನೂ ಇಲ್ಲ. ಜೇಡರ ಹುಳುವಿನ ಬಲೆಯು

ಉದಾಹರಣೆಯನ್ನು ನೋಡಿರಿ. ಅದನ್ನು ನಿರ್ಮಾಣ ಮಾಡಿದ ಜೇಡರ ಹುಳುವು ಅದಕ್ಕೆ ನಿಮಿತ್ತಕಾರಣವೆಂಬುದು ಸರಿ. ಆದರೆ ಆ ಬಲೆಯೆಂಬ ಕಾರ್ಯದಲ್ಲಿ ಸಾಧನಸಾಮಗ್ರಿಯಾದ ವಸ್ತುವೂ (Material) ಉಪಾದಾನ ದ್ರವ್ಯವೂ, ಆ ಹುಳುವಿನ ಶರೀರದಿಂದಲೇ ಒದಗಿಬರುವುದ ರಿಂದ ಆ ಹುಳುವು ಬಲೆಯೆಂಬ ಕಾರ್ಯದಲ್ಲಿ ಉಪಾದಾನಕಾರಣವೂ ಆಗುತ್ತದೆ.

ಪ್ರಾಣಿಗಳ ದೇಹ ಬೆಳೆಯುವಾಗಲೂ ಹಾಗೆಯೇ ಆಗುತ್ತದೆ. ಜೇಡರ ಹುಳುವು ದಾರವನ್ನು ಸೃಷ್ಟಿಸುವಂತೆ, ಭೂಮಿಯಿಂದ ಮರಗಳು ಹುಟ್ಟುವಂತೆ, ಜೀವಿಸುತ್ತಿರುವ ಮನುಷ್ಯನಿಂದ ಕೂದಲು ಹುಟ್ಟುವಂತೆ, ಅಕ್ಷರ ಪರಬ್ರಹ್ಮದಿಂದ ವಿಶ್ವವೆಲ್ಲವೂ ಹುಟ್ಟುತ್ತದೆ ಎಂದು ಮುಂಡಕೋಪನಿಷತ್ತು 1–1–1 ಸಾರುತ್ತದೆ. ಈ ಪುರುಷಸೂಕ್ತದಲ್ಲಿಯೂ ಪುರುಷನೇ ಈ ಭೂತಭವ್ಯಗಳೆಲ್ಲವೂ ಆಗಿದ್ದಾನೆ. "ಪುರುಷ ಏವೇದಂ ಸರ್ವಂ". ಅವನನ್ನು ಬಿಟ್ಟು ಬೇರೆ ಯಾವ ಕಾರಣವೂ ಇಲ್ಲ. ಅಂದ ಬಳಿಕ ಎಲ್ಲಕ್ಕೂ ನಿಮಿತ್ತವೂ ಆತನೇ. ಉಪಾದಾನವೂ ಅವನೇ ಆಗುತ್ತಾನೆ. ತನ್ನ ಶಕ್ತಿಯಿಂದ ನಿಮಿತ್ತಕಾರಣವಾದರೆ ತನ್ನ ಶರೀರದ (ಉಪಾಧಿಯ) ದೃಷ್ಟಿಯಿಂದ ಉಪಾದಾನಕಾರಣವೂ ಆಗುತ್ತದೆ ಎಂಬ ಸಿದ್ಧಾಂತವು ಧೃಡವಾಗುತ್ತದೆ. ಈ ಸಿದ್ಧಾಂತವೇ ಶ್ರೀಶ್ರೀಗಳ ಬರಹದಲ್ಲೂ ಪ್ರತಿಪಾದಿತವಾಗಿದೆ.

ಭಾರತೀಯ ಸಂಸ್ಕೃತಿಗೆ ಅಧ್ಯಾತ್ಮವಿದ್ಯೆಯೇ ತಳಹದಿ. "ಅಧ್ಯಾತ್ಮವಿದ್ಯಾ ವಿದ್ಯಾನಾಂ" ಎಂದು ಇದನ್ನೇ "ಗೀತಾಶಾಸ್ತ್ರವೂ" ಸಾರಿರುವುದು. ಈ ಅಧ್ಯಾತ್ಮವಿದ್ಯೆಯ ತಳಹದಿಯ ಮೇಲೆಯೇ ನಮ್ಮ ನಾಗರೀಕತೆಯ ಭವ್ಯಭವನವು ಕಟ್ಟಲ್ಪಟ್ಟಿದೆ. ಪರಮಾರ್ಥನಿಷ್ಠೆಯೇ ಈ ಸಂಸ್ಕೃತಿಯ ಮತ್ತು ಧರ್ಮದ ಗುರಿ. ಈ ಧರ್ಮಸಂಸ್ಕೃತಿಗಳು ಎಲ್ಲ ಕಾಲಗಳ ಎಲ್ಲ ಸಂಸ್ಕೃತಿಗಳನ್ನೂ ಮತ್ತು ಧರ್ಮಗಳನ್ನೂ ತನ್ನಲ್ಲಿ ಹೀರಿಕೊಂಡಿದೆ. ಅಡಕಮಾಡಿಕೊಂಡಿದೆ. ಭಾರತೀಯ ಸಂಸ್ಕೃತಿಯೆಂದರೂ ಒಂದೇ, ವಿಶ್ವಸಂಸ್ಕೃತಿಯೆಂದರೂ ಒಂದೇ ಎಂಬ ಸಿದ್ಧಾಂತವನ್ನು ಉದ್ಘೋಷಣೆ ಮಾಡುತ್ತದೆ ಈ ಶ್ರೀಗ್ರಂಥ.

"ಬ್ರಾಹ್ಮಣೋಽಸ್ಯ ಮುಖಮಾಸೀತ್" ಎಂದು ಪ್ರಾರಂಭವಾಗುವ ಋಕ್ಕಿಗೆ ಶ್ರೀಶ್ರೀಗಳವರು ಮಾಡಿರುವ ವ್ಯಾಖ್ಯಾನ ಸಾಧುವಾಗಿದೆ. ಸುಂದರವಾಗಿದೆ. ವೈದಿಕ ವರ್ಣಪದ್ಧತಿಯು ಕೇವಲ ಹುಟ್ಟಿನ ಆಧಾರದಿಂದ ಕಲ್ಪಿತವಾಗಿಲ್ಲ. ಅದು ಗುಣಕರ್ಮಗಳ ಯೋಗ್ಯತೆಯನ್ನೂ ಆಧರಿಸಿದೆ. ಈಗ ಈ ಋಕ್ಕು ಅಪಾರ್ಥದಲ್ಲಿ ಗ್ರಹಿಸಲ್ಪಟ್ಟು ಪರಸ್ಪರ ಅಸೂಯೆ ರಾಗ–ದ್ವೇಷಗಳಿಗೆ ಕಾರಣವಾಗಿದೆ. ಇದರ ಪರಮಾರ್ಥವನ್ನು ಅರಿತು ಅನುಷ್ಠಾನಮಾಡಿದರೆ ಅದರಿಂದ ಜನತೆಗೆ ಹಿತವಾಗುತ್ತದೆ. ಶ್ರೀಶ್ರೀಗಳವರು ಈ ಋಕ್ಕಿಗೆ ಹೇಳಿರುವ ಪ್ರಾಮಾಣಿಕವಾದ ಅರ್ಥವನ್ನು ಗ್ರಹಿಸಿ ಎಲ್ಲರೂ ಪರಸ್ಪರ ಹಿತೈಷಿಗಳಾಗಿ, ಮನೀಷಿಗಳಾಗಿ, ಮನಸಸ್ಪತಿಯನ್ನು ಸಂತೋಷಪಡಿಸುತ್ತಾ ಸಂತೋಷವಾಗಿ ಬಾಳಬೇಕು.

ಈ ಬಗ್ಗೆ ಶ್ರೀಗಳು ಮಹಾಭಾರತದಿಂದ "ಬ್ರಾಹ್ಮಣರು ಯಾರು?" ಎಂಬ ವಿಷಯವನ್ನು ಕುರಿತು ಉದ್ಧರಿಸಿರುವ ಶ್ಲೋಕಗಳು ಅತ್ಯಂತ ಜ್ಞಾನಪ್ರದವಾಗಿವೆ. ಈ ನಾಲ್ಕು ವರ್ಣಗಳೂ ಪರಸ್ಪರ ಪೂರಕಗಳಾಗಿ ರಕ್ಷಕರಾಗಿ ಬಾಳಬೇಕು ಎಂಬುದನ್ನು ಮಹಾಭಾರತದ ಒಂದು ಸತ್ಯಶಿವಸುಂದರವಾದ ಶ್ಲೋಕವು ಸಾರುತ್ತದೆ. "ವರ್ಣಗಳಲ್ಲಿ ಯಾರೂ ಹೆಚ್ಚಿಲ್ಲ ಯಾರೂ ಕಡಿಮೆಯಿಲ್ಲ. ಎಲ್ಲರೂ ತಮ್ಮ ತಮ್ಮ ವೃತ್ತಿಗಳಲ್ಲಿ ಶ್ರೇಷ್ಠರು. ಎಲ್ಲರೂ ಪರಸ್ಪರ ರಕ್ಷಕರಾಗಿರಬೇಕು. ಉದಾಹರಣೆಗೆ ಕಾಲಿಗೆ ಮುಳ್ಳು ಚುಚ್ಚುವ ಸ್ಥಿತಿ ಬಂದಾಗ ಕಣ್ಣುಗಳು ಅದನ್ನು ತೋರಿಸಬೇಕು. ಮನಸ್ಸು ಮತ್ತು ಬುದ್ಧಿಗಳು ಅದನ್ನು ಗ್ರಹಿಸಿ ಸಂದೇಶ ನೀಡಬೇಕು. ಹಸ್ತವು ಆ ಮುಳ್ಳನ್ನು ಕಿತ್ತುಹಾಕಬೇಕು. ಇದರಿಂದ ಎಲ್ಲ ಅಂಗಗಳೂ ಮತ್ತು ಅಂಗಿಯಾದ ಜೀವವೂ ಸುಖಪಡಬೇಕು".

"ಸರ್ವೇ ಸ್ವವಿಷಯೇ ಶ್ರೇಷ್ಠಾಃ ಸರ್ವೇ ಚ ಅನ್ಯೋನ್ಯರಕ್ಷಕಾಃ". ಪುರುಷ ಸೂಕ್ತದಲ್ಲಿ ಹೇಳಿರುವ ಒಳ-ಹೊರ ಯಜ್ಞಗಳ ವಿವರಣೆಯೂ ಬೋಧಪ್ರದವಾಗಿದೆ. ಪರಮಾತ್ಮ ಸೂರ್ಯನು ತಾನೇತಾನಾಗಿ ಸತ್ಯಜ್ಯೋತಿಯಾಗಿ ಬೆಳಗುತ್ತಿದ್ದಾನೆ. ಪುರುಷಸೂಕ್ತದಲ್ಲಿ ಹೇಳಿರುವ ಆತನ ವರ್ಣನೆಯು ಕೇವಲ ಮಾತಿನ ಮಂಡಿಗೆಯಲ್ಲ. ಅನುಭವರಸಾಯನ ಎಂಬ ವಿಷಯವನ್ನು ನಾರಾಯಣಾನುವಾಕ ವಾಕ್ಯಗಳು ಬೋಧಿಸುತ್ತವೆ. ಆತನ ಮಹಿಮೆಯನ್ನೂ ಮತ್ತು ಆತನನ್ನು ಪಡೆಯುವ ಸಾಧನಾಮಾರ್ಗವನ್ನೂ ಮತ್ತು ಸಿದ್ಧಿಯನ್ನೂ ನಾರಾಯಣಾನುವಾಕ ಬೋಧಿಸುತ್ತದೆ.

ಕಟ್ಟಕಡೆಯಲ್ಲಿ ಆತನು "ಸರ್ವಮೂಲವಾಗಿ ಸರ್ವಾಂತರ್ಯಾಮಿಯಾಗಿ ಸರ್ವಾತೀತನಾಗಿ ಸರ್ವವೂ ಆಗಿರುವನು. "ಯಸ್ಮಿನ್ ಸರ್ವಂ ಯತಸ್ಸರ್ವಂ ಯಸ್ಸರ್ವಂ ಸರ್ವತಶ್ಚಯಃ, ಯಶ್ಚಸರ್ವಮಯೋ ದೇವಃ ತಸ್ಮೈ ಸರ್ವಾತ್ಮನೇ ನಮಃ॥" ಎಂದು ಪರಮಾತ್ಮನನ್ನು ನಿರೂಪಿಸುತ್ತದೆ. ಪರಬ್ರಹ್ಮ ಪರಮಾತ್ಮ, ಪರಮೇಶ್ವರನ ತ್ರಿಕರಣ ಪೂರ್ವಕವಾದ ಆರಾಧನೆಯನ್ನು ಬೋಧಿಸುತ್ತದೆ.

"ವಾಚಕ ವೃಂದ! ನಿಮಗೆ ಆ ವಿಶ್ವಾಕಾರನಾದ ಪರಮೇಶ್ವರನಲ್ಲಿ ಆದಷ್ಟು ಬೇಗನೆ ಅನನ್ಯ ಭಕ್ತಿ ಉಂಟಾಗಲೆಂದು ಪ್ರಾರ್ಥಿಸಿರಿ. ಇಡಿಯ ವಿಶ್ವವೇ ಆತನ ಬಾಹ್ಯರೂಪವೆಂಬ ಭಾವನೆಯು ನಿಮ್ಮ ಹೃದಯದಲ್ಲಿ ಮೂಡಲಿ. ಇಲ್ಲಿರುವ ಎಲ್ಲ ಜೀವರುಗಳ ಹೃದಯದಲ್ಲೂ ಅಂತರ್ಯಾಮಿಯಾಗಿರುವ ಆ ಪರಮೇಶ್ವರನ ಕಡೆಗೆ ನಿಮ್ಮ ಮನಸ್ಸು ಒಲಿಯಲಿ. ಕ್ರಮಕ್ರಮವಾಗಿ ಆತನ ಪರಮಾರ್ಥಸ್ವರೂಪದಲ್ಲೇ ನೆಲೆನಿಲ್ಲುವ ಪರಮಾನಂದವು ನಿಮಗೆ ಸೂರೆಯಾಗುವುದು" ಎಂದು ಸರ್ವಭೂತಹಿತವಾದ ಆಶಂಸನೆ, ಆದೇಶ ಸಂದೇಶಗಳನ್ನು ನೀಡಿರುವ ಸರ್ವಾಂಗಸುಂದರವಾದ ಈ ಶ್ರೀ ಗ್ರಂಥಕ್ಕೂ ಅದರ ಪ್ರಕಾಶಕರಾದ ಸಜ್ಜನರಿಗೂ ನಾರಾಯಣ ಸ್ಮರಣೆಗಳು, ಭೂರಿಭೂರಿ ಮಂಗಳಾಶಾಸನಗಳು.

**- ಶ್ರೀ ಶ್ರೀ ರಂಗಪ್ರಿಯ ಶ್ರೀ ಶ್ರೀಃ**

# ಪ್ರಕಾಶಕರ ಬಿನ್ನಹ

## (ಎರಡನೆಯ ಮುದ್ರಣ)

ಅಧ್ಯಾತ್ಮ ಚಿಂತನೆ, ಅದರ ಸಾಧನೆಯಲ್ಲಿ ಆದರವನ್ನುಂಟುಮಾಡುವದರ ಮೂಲಕ ಭಾರತೀಯಸಂಸ್ಕೃತಿಗೆ ನೆರವಾಗುವಂತೆ ಪ್ರೇರೇಪಿಸಲು ಶ್ರೀಶ್ರೀಗಳವರ ಅಧ್ಯಾತ್ಮಪ್ರಕಾಶಕಾರ್ಯಾಲಯ ಮತ್ತು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯನ್ನು ಆರಂಭಿಸಿದರು. ಭಾರತೀಯಸಂಸ್ಕೃತಿಯ ಅಸಾಧಾರಣ ಸ್ವರೂಪವನ್ನು ತಿಳಿಯಲು ವೇದಗಳೇ ಮುಖ್ಯ ಆಕರವೆಂದು ಅವನ್ನೇ ಸರಳವಾಗಿ ಸಾಮಾನ್ಯರಿಗೂ ಎಟಕುವಂತೆ ಕನ್ನಡಭಾಷೆಯಲ್ಲಿ ಅನುವಾದಿಸಿ ಪ್ರಚುರಪಡಿಸಿದರು. ಭಾರತೀಯಸಂಸ್ಕೃತಿಯ ಮೂಲವನ್ನು ತಿಳಿಯಲು **'ಪುರುಷಸೂಕ್ತ'**ವು ಉತ್ತಮ ಸಾಧನವೆಂದು ಪ್ರಾಚೀನವಾದ **'ಋಗ್ವೇದೀಯ ಪುರುಷಸೂಕ್ತ ಮಂತ್ರಾರ್ಥವಿವೇಚನೆ'**ಯನ್ನು 'ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ 24ನೆಯ ಸಂಪುಟ (ಸೆಪ್ಟೆಂಬರ್ 1954 ರಿಂದ ಆಗಸ್ಟ್ 1955)ದಲ್ಲಿ 12 ಲೇಖನಗಳಲ್ಲಿ ವಿಸ್ತಾರವಾಗಿ ಮಾಡಿರುತ್ತಾರೆ. ಅವು ಜಿಜ್ಞಾಸುಗಳ ಮನನಕ್ಕೆ ಅನುಕೂಲವಾಗಲೆಂದು 2009ರಲ್ಲಿ ಆ ಲೇಖನಗಳನ್ನು ಸಂಗ್ರಹಿಸಿ ಪುಸ್ತಕರೂಪದಲ್ಲಿ ಪ್ರಕಟಿಸಲಾಯಿತು. ಶ್ರೀ ಶ್ರೀ ರಂಗಪ್ರಿಯ ಸ್ವಾಮಿಗಳು ವಿಸ್ತಾರವಾದ ಮುನ್ನುಡಿಯನ್ನು ಇತ್ತಿದ್ದರು. ಈಗ ಯಾವ ವಿಶೇಷ ಬದಲಾವಣೆಯೂ ಇಲ್ಲದೆ 2ನೇ ಬಾರಿಗೆ ಮುದ್ರಿಸಿ ಹೊರತರಲಾಗಿದೆ.

ಈ ಗ್ರಂಥಪ್ರಕಟಣೆಗೆ – 1. ಶ್ರೀ ಕೆ.ಹೆಚ್. ಜಯರಾಮಪ್ಪ, ತುಮಕೂರು; 2.ಶ್ರೀ ಸಿ.ಹೆಚ್. ಚಂದ್ರಶೇಖರ್, ಬೆಂ.; 3. ಶ್ರೀಮತಿ ಲೀಲಾಶಂಕರಾನಂದ, ಬೆಂ.; 4.ಶ್ರೀ ಎಸ್.ವಿ. ಗಿರೀಶ್, ಬೆಂ.; 5.ಶ್ರೀ ಜಿ. ಶ್ರೀನಿವಾಸ ಜೋಡಿಗುಬ್ಬಿ; 6.ಶ್ರೀ ಕೆ. ಚಿದಾನಂದ, ಬಳ್ಳಾರಿ; 7. ಶ್ರೀ ಟಿ.ಎನ್. ಪ್ರಕಾಶ್ ಮತ್ತು ಪಾರಿಜಾತ ಪ್ರಕಾಶ್, ಬೆಂ.; 8. ಶ್ರೀ ಹೆಚ್.ಜಿ. ಗಡ್ಡಬಸಪ್ಪ, ಶಿವಮೊಗ್ಗ; 9. ದಿ॥ ಶ್ರೀ ಕೆ.ಎಸ್. ಕೃಷ್ಣಮೂರ್ತಿ ಮತ್ತು ದಿ॥ ಶ್ರೀಮತಿ ಕೆ. ಅನ್ನಪೂರ್ಣ ಇವರ ಹೆಸರಿನಲ್ಲಿ ಶ್ರೀ ಫಣಿರಾಜಕುಂಬ್ಳೆ, ಬೆಂ. – ಈ ಮಹನೀಯರುಗಳು ಉದಾರವಾಗಿ ಸಹಾಯ ಮಾಡಿರುತ್ತಾರೆ. ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಜಿಜ್ಞಾಸುಗಳು ಎಂದಿನಂತೆ ಈ ಗ್ರಂಥವನ್ನು ಬರಮಾಡಿಕೊಂಡು ಅಧ್ಯಾತ್ಮ ಪ್ರಸಾರ ಕಾರ್ಯದಲ್ಲಿ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಶ್ರೀ ಶ್ರೀಗಳವರ 139ನೇ ಜಯಂತಿ – **ಪ್ರಕಾಶಕರು**

31–12–2018

# ವಿಷಯಾನುಕ್ರಮಣಿಕೆ


| | | |
|---|---|---|
| 1. | ಪೀಠಿಕೆ | 1–3 |
| 2. | ಸಕಲಚರಾಚರ ವಿಶ್ವಾಧಾರ : ಪರಮಾತ್ಮನ ಸ್ವರೂಪ | 4–11 |
| 3. | ಕಾಲಾಕಾಶಾತೀತನು, ಅಮೃತದೊಡೆಯನು | 12–25 |
| 4. | ಪರಮಾತ್ಮನ ಮಹಿಮೆ : ಎರಡುದೃಷ್ಟಿಯ ವಿಚಾರಧಾರೆ | 26–33 |
| 5. | ಪ್ರಪಂಚದೊಳಗೆಲ್ಲಾ ವ್ಯಾಪಿಸಿರುವ ಪರಮಾತ್ಮತತ್ತ್ವ | 33–43 |
| 6. | ಎಲ್ಲವೂ ಚಿನ್ಮಾತ್ರ ಬ್ರಹ್ಮ | 43–51 |
| 7. | ಪರಮಾತ್ಮನ ಸೃಷ್ಟಿ | 52–53 |
| 8. | ಮಾನಸಯಜ್ಞ ಪರಮಾತ್ಮಪ್ರಾಪ್ತಿಗೆ ಯಜ್ಞಸಾಧನಗಳು | 54–57 |
| 9. | ಯಜ್ಞಸಹಾಯಕರು–ಬ್ರಾಹ್ಮಣಾದಿ ವಿಭಾಗ | 58–66 |
| 10. | ಯಜ್ಞದ ಉತ್ಪನ್ನಗಳು–ದೇವತೆಗಳು, ಲೋಕಗಳು | 67–75 |
| 11. | ಆಧ್ಯಾತ್ಮಿಕ ಯಜ್ಞಗಳು–ಜ್ಞಾನಯಜ್ಞ | 76–83 |
| 12. | ಉಪಸಂಹಾರ: ಪರಮಾತ್ಮಭಾವನೆ ಚಿತ್ಸ್ವರೂಪವಾದ ಬೆಳಕು | 84–100 |

| | | |
|---|---|---|
| 1. | ಪುರುಷಸೂಕ್ತಮ್ | 101 |
| 2. | ಉತ್ತರ ನಾರಾಯಣ | 106 |


* * * * *

# ಪುರುಷಸೂಕ್ತಮ್

**ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।**

**ಸ ಭೂಮಿಂ ವಿಶ್ವತೋ ವೃತ್ವಾಽತ್ಯತಿಷ್ಠದ್ದಶಾಂಗುಲಮ್ ॥1॥**

ವಿರಾಟ್ ಪುರುಷನು, ಸಾವಿರಾರು ತಲೆಗಳುಳ್ಳವನು, ಸಾವಿರಾರು ಕಣ್ಣುಗಳುಳ್ಳವನು, ಸಾವಿರಾರು ಕಾಲುಗಳುಳ್ಳವನು. ಆತನು, ಬ್ರಹ್ಮಾಂಡ ಗೋಳಕರೂಪವಾದ ಈ ಭೂಮಂಡಲವನ್ನು ಎಲ್ಲಾ ಕಡೆಗೂ ಆವರಿಸಿ, ಹತ್ತು ಅಂಗುಲದಷ್ಟು ಮಿಕ್ಕಿದ್ದನು.

**ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್ ।**

**ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥2॥**

ವರ್ತಮಾನಕಾಲದಲ್ಲಿ ನಮ್ಮ ಕಣ್ಣಿಗೆ ಕಾಣಬರುತ್ತಿರುವ ಎಲ್ಲವೂ ವಿರಾಟ್ ಪುರುಷನೇ. ಯಾವುದು ಹಿಂದೆ ಕಳೆದುಹೋಯಿತೋ, ಯಾವುದು ಮುಂದೆ ಭವಿಷ್ಯತ್ಕಾಲದಲ್ಲಿ ಆಗುವುದೋ ಅದೂ ಕೂಡ ಪುರುಷ ಶಬ್ದವಾಚ್ಯನಾದ ಪರಮೇಶ್ವರನೇ ಸರಿ. ಮತ್ತು ದೇವತ್ವಕ್ಕೂ ಪ್ರಭು. ಏತಕ್ಕೆಂದರೆ, ಭೋಗಸಾಧನ ಸಾಮಗ್ರಿಯಿಂದ ಎಲ್ಲವನ್ನೂ ಮೀರಿರುತ್ತಾನೆ.

**ಏತಾವಾನಸ್ಯ ಮಹಿಮಾಽತೋ ಜ್ಯಾಯಾಂಶ್ಚ ಪೂರುಷಃ ।**

**ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥3॥**

ಈತನ ಹಿರಿಮೆಯು ಇಷ್ಟರಮಟ್ಟದ್ದು. ಈ ಕಾರಣದಿಂದ, ವಿರಾಟ್ ಪುರುಷನು ಎಲ್ಲರಿಗಿಂತ ಅತಿಶಯವಾಗಿ ಹಿರಿಯನು. ಸಮಸ್ತವಾದ ಕಾಲತ್ರಯದ ಪ್ರಾಣಿಸಮುದಾಯವೂ ಈತನ ನಾಲ್ಕನೆಯ ಭಾಗ. ಈತನ ಮಿಕ್ಕ ಮೂರು ಭಾಗಗಳೂ ನಾಶರಹಿತವೆನಿಸಿ, ದ್ಯೋತನಾತ್ಮಕವಾದ ಸ್ವಪ್ರಕಾಶ ಸ್ವರೂಪದಲ್ಲಿ ಇರುತ್ತದೆ.

**ತ್ರಿಪಾದೂರ್ಧ್ವ ಉದೈತ್ಪುರುಷಃ ಪಾದೋಽಸ್ಯೇಹಾಭವತ್ಪುನಃ ।**

**ತತೋ ವಿಷ್ವಙ್ವ್ಯಕ್ರಾಮತ್ಸಾಶನಾನಶನೇ ಅಭಿ ॥4॥**

ಪಾದತ್ರಯ ವಿಶಿಷ್ಟನಾದ ವಿರಾಟ್ ಪುರುಷನು ಸಂಸಾರ ಪಾಶಕ್ಕೆ ಸಿಲುಕದೆ ಉತ್ಕರ್ಷಸ್ಥಿತಿಯಲ್ಲಿರುತ್ತಾನೆ. ಈತನ ನಾಲ್ಕನೆಯ ಭಾಗವು ಮರಳಿ ಮರಳಿ ಸೃಷ್ಟಿಸ್ಥಿತಿಲಯಗಳಿಗೆ ಒಳಪಟ್ಟ ಈ ಪ್ರಪಂಚದಲ್ಲಿ ಮೇಲಿಂದ ಮೇಲೆ ಸೃಷ್ಟ್ಯಾದಿಗಳಿಗೆ ಈಡಾಯಿತು. ಆ ರೀತಿ ಪ್ರಪಂಚಾಕಾರವನ್ನು ತಳೆದ ಬಳಿಕ ಸ್ಥಾವರ ಜಂಗಮಾತ್ಮಕವಾದ ದೇವತಿರ್ಯಙ್ಮನುಷ್ಯಾದಿ ರೂಪವಾಗಿ ಎಲ್ಲೆಲ್ಲಿಯೂ ವ್ಯಾಪಿಸಿದನು.

**ತಸ್ಮಾದ್ವಿರಾಳಜಾಯತ ವಿರಾಜೋ ಅಧಿ ಪೂರುಷಃ ।**
**ಸ ಜಾತೋ ಅತ್ಯರಿಚ್ಯತ ಪಶ್ಚಾದ್ಭೂಮಿಮಥೋ ಪುರಃ ॥5॥**

ಪರಿಪೂರ್ಣನಾದ ಪರಮಾತ್ಮನ ಮೂಲಕ ವಿರಾಟ್ ಪುರುಷನು ಬ್ರಹ್ಮಾಂಡದೇಹವು ಹುಟ್ಟಿದನು. ವಿರಾಡ್ದೇಹವನ್ನು ಆಧಾರವಾಗಿಟ್ಟುಕೊಂಡು ಬ್ರಹ್ಮಾಂಡ ದೇಹಾಭಿಮಾನಿಯಾದ ಒಬ್ಬ ಪುರುಷನು ಹುಟ್ಟಿದನು ಆ ಪುರುಷನು ಹುಟ್ಟಿದ ಕೂಡಲೇ ದೇವ ತಿರಙ್ಮನುಷ್ಯಾದಿ ನಾನಾರೂಪವನ್ನು ಧರಿಸಿದನು. ಆ ಬಳಿಕ ಭೂಮಿಯನ್ನು ಸೃಜಿಸಿದನು. ಆ ತರುವಾಯ, ಸಪ್ತಧಾತುಭರಿತಗಳಾದ ದೇಹಗಳನ್ನು ನಿರ್ಮಿಸಿದನು.

**ಯತ್ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ ।**
**ವಸಂತೋ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ ॥6॥**

ಯಾವ ಕಾಲದಲ್ಲಿ, ದೇವತೆಗಳು, ಪುರುಷನೆಂಬ, ಹೋಮದ್ರವ್ಯದಿಂದ, ಮಾನಸ ಯಜ್ಞವನ್ನು ಮಾಡತೊಡಗಿದರೊ, ಆ ಸಮಯದಲ್ಲಿ ಈ ಮಾನಸಯಜ್ಞಕ್ಕೆ, ವಸಂತ ಋತವು, ತುಪ್ಪವೂ, ಗ್ರೀಷ್ಮಋತುವು, ಸಮಿತ್ತುಗಳೂ, ಶರದೃತುವು, ಹೋಮದ್ರವ್ಯವೂ, ಆಯಿತು.

**ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ಪುರುಷಂ ಜಾತಮಗ್ರತಃ ।**
**ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚಯೇ ॥7॥**

ಸೃಷ್ಟಿಗಿಂತ ಮೊದಲು ಆವಿರ್ಭವಿಸಿದ ಯಜ್ಞಸ್ವರೂಪನಾದ ಹಿಂದೆ ಹೇಳಿದ ಪುರುಷನನ್ನು ಮಾನಸಯಜ್ಞದಲ್ಲಿ ಪ್ರೋಕ್ಷಿಸಿದರು. ಪುರುಷರೂಪವಾದ ಪಶುವಿನಿಂದ ಯಾವ ದೇವತೆಗಳೋ, ಸಾಧ್ಯರೋ, ಋಷಿಗಳೋ ಅವರೆಲ್ಲರೂ, ಮಾನಸಯಜ್ಞವನ್ನು

ನೆರವೇರಿಸಿದರು. ಮುಂದಣ ಸೃಷ್ಟಿ ಸಾಧನೆಗೆ ಯೋಗ್ಯರಾದ ಪ್ರಜಾಪತಿ ಮುಂತಾದವರು, ಸಾಧ್ಯರು ಸೃಷ್ಟಿ ಸಾಧನೆಗೆ ಅನುಕೂಲರಾದ ಮಂತ್ರದ್ರಷ್ಟರು ಋಷಿಗಳು, ಇವರೆಲ್ಲರೂ ಸೇರಿ ಮಾನಸಯಜ್ಞವನ್ನು ನಿರ್ವಹಿಸಿದರೆಂದು ಭಾವ.

**ತಸ್ಮಾದ್ಯಜ್ಞಾತ್ಸರ್ವಹುತಃ ಸಂಭೃತಂ ಪೃಷದಾಜ್ಯಮ್ ।**

**ಪಶೂನ್ತಾಂಶ್ಚಕ್ರೇ ವಾಯವ್ಯಾನಾರಣ್ಯಾನ್ಗ್ರಾಮ್ಯಾಶ್ಚಯೇ ॥8॥**

ಸರ್ವಾತ್ಮಕನಾದ ಪುರುಷನನ್ನೇ ಹೋಮದ್ರವ್ಯವಾಗಿ ಕಲ್ಪಿಸಿ, ನೆರವೇರಿಸಿದ ಕಾರಣ ಎಂಬುದಾಗಿ ಪ್ರಸಿದ್ಧಪಡೆದ, ಹಿಂದೆ ಹೇಳಿದ ಮಾನಸಯಜ್ಞದ ಮೂಲಕ ಮೊಸರಿನಿಂದ ಕೂಡಿದ ತುಪ್ಪವು ಸಂಪಾದಿತವಾಯಿತು. ವಾಯುದೇವತಾತ್ಮಕ ಗಳೆನಿಸಿದ ಪ್ರಸಿದ್ಧಗಳಾದ ಪಶುಗಳನ್ನೂ, ಅರಣ್ಯದಲ್ಲಿ ವಾಸಮಾಡುವ ಜಿಂಕೆ ಮೊದಲಾದವುಗಳನ್ನೂ ಯಾವ ಗ್ರಾಮಗಳಲ್ಲಿರುವ ಆಕಳು ಮೊದಲಾದುವುಂಟೋ ಅಂತಹ ಪಶುಗಳನ್ನೂ ಮಾಡಿತು.

**ತಸ್ಮಾದ್ಯಜ್ಞಾತ್ಸರ್ವಹುತ ಋಚಃ ಸಾಮಾನಿ ಜಜ್ಞಿರೇ ।**

**ಛಂದಾಸಿ ಜಜ್ಞಿರೇ ತಸ್ಮಾದ್ಯಜುಸ್ತಸ್ಮಾದಜಾಯತ ॥9॥**

ಸರ್ವಹುತವೆಂಬ ಹಿಂದೆ ಹೇಳಿದ, ಯಜ್ಞದ ಮೂಲಕ ಋಗ್ವೇದವೂ, ಸಾಮವೇದವೂ ಹೊರಬಂದುವು. ಆ ಯಜ್ಞದಿಂದಲೇ ಗಾಯತ್ರಿ ಮೊದಲಾದ ಛಂದಸ್ಸುಗಳೂ ಹುಟ್ಟಿದವು. ಅದೇ ಯಜ್ಞದಿಂದಲೇ ಯಜುರ್ವೇದವೂ ಹುಟ್ಟಿತು.

**ತಸ್ಮಾದಶ್ವಾ ಅಜಾಯಂತ ಯೇ ಕೇ ಚೋಭಯಾದತಃ ।**

**ಗಾವೋ ಹ ಜಜ್ಞಿರೇ ತಸ್ಮಾತ್ತಸ್ಮಾಜ್ಜಾತಾ ಅಜಾವಯಃ ॥10॥**

ಆ ಯಜ್ಞದಿಂದ ಕುದುರೆಗಳೂ, ಊರ್ಧ್ವಾಧೋಭಾಗಗಳೆರಡರಲ್ಲಿಯೂ ಹಲ್ಲುಗಳುಳ್ಳ ಹೇಸರಕತ್ತೆ ಮೊದಲಾದ ಪ್ರಾಣಿಗಳೂ ಹುಟ್ಟಿದವು. ಆ ಯಜ್ಞದಿಂದ ಗೋವುಗಳೂ ಹುಟ್ಟಿದುವು, ಆ ಯಜ್ಞದಿಂದ ಆಡು ಕುರಿಗಳೂ ಜನಿಸಿದವು.

**ಯತ್ಪುರುಷಂ ವ್ಯದಧುಃ ಕತಿಧಾ ವ್ಯಕಲ್ಪಯನ್ ।**

**ಮುಖಂ ಕಿಮಸ್ಯ ಕೌ ಬಾಹೂ ಕಾ ಊರೂ ಪಾದಾ ಉಚ್ಯೇತೇ ॥11॥**

ಪ್ರಜಾಪತಿಯ ಪ್ರಾಣರೂಪರಾದ ದೇವತೆಗಳು ಯಾವ ಕಾಲದಲ್ಲಿ ವಿರಾಡ್ರೂಪಿಯಾದ ಪುರುಷನನ್ನು ಸಂಕಲ್ಪದಿಂದ ಸೃಷ್ಟಿಮಾಡಿದರೋ ಆಗ ಎಷ್ಟು ಪ್ರಕಾರವಾಗಿ ಏರ್ಪಡಿಸಿದರು? ಈ ಪುರುಷನಿಗೆ ಮೋರೆಯು ಯಾವುದು? ತೋಳುಗಳು ಯಾವುವು? ತೊಡೆಗಳು ಯಾವುವು? ಕಾಲುಗಳು ಯಾವುದೆಂದು ಹೇಳಲ್ಪಡುತ್ತವೆ?

**ಬ್ರಾಹ್ಮಣೋಽಸ್ಯ ಮುಖಮಾಸೀದ್ಬಾಹೂ ರಾಜನ್ಯಃ ಕೃತಃ ।**

**ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥12॥**

ಈ ಮಂತ್ರವು ಮೇಲಣ ಪ್ರಶ್ನೆಗೆ ಉತ್ತರ ರೂಪವಾಗಿದೆ. ಈ ವಿರಾಟ್ ಪುರುಷನಿಗೆ ಬ್ರಾಹ್ಮಣಜಾತಿ ವಿಶಿಷ್ಟನಾದ ಪುರುಷನು ಮುಖವಾದನು, ಕ್ಷತ್ರಿಯನು ತೋಳುಗಳಾಗಿ ಮಾಡಲ್ಪಟ್ಟನು. ಯಾವುವು ತೊಡೆಗಳೋ ಅದು ವೈಶ್ಯಜಾತಿ ವಿಶಿಷ್ಟಪುರುಷನು. ಶೂದ್ರಜಾತಿ ವಿಶಿಷ್ಟಪುರುಷನು ಈತನ ಕಾಲುಗಳಿಂದ ಹುಟ್ಟಿದನು.

**ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ ।**

**ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ ॥13॥**

ಚಂದ್ರನು ಮನಸ್ಸಿನಿಂದ ಹುಟ್ಟಿದನು. ಸೂರ್ಯನು ಕಣ್ಣಿನಿಂದ ಹುಟ್ಟಿದನು. ಇಂದ್ರನೂ, ಅಗ್ನಿಯೂ ಮುಖದಿಂದ ಹುಟ್ಟಿದರು. ವಾಯುವು ಪ್ರಾಣದ ಮೂಲಕ ಜನಿಸಿದನು.

**ನಾಭ್ಯಾ ಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ ।**

**ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ತಥಾ ಲೋಕಾ ಅಕಲ್ಪಯನ್ ॥14॥**

ಪ್ರಜಾಪತಿಯ ಹೊಕ್ಕುಳಿಯಿಂದ ಆಕಾಶವು ಉಂಟಾಯಿತು. ದ್ಯುಲೋಕವು ಶಿರಸ್ಸಿನ ಮೂಲಕ ಹುಟ್ಟಿತು. ಭೂಮಿಯು ಕಾಲುಗಳಿಂದ ಹುಟ್ಟಿತು. ದಿಕ್ಕುಗಳು ಕಿವಿಯಿಂದ ಹುಟ್ಟಿದುವು. ಆ ರೀತಿಯಾಗಿ ಲೋಕಗಳನ್ನು ಕಲ್ಪಿಸಿದರು.

**ಸಪ್ತಾಸ್ಯಾಸನ್ಪರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ ।**

**ದೇವಾ ಯದ್ಯಜ್ಞಂ ತನ್ವಾನಾ ಅಬಧ್ನನ್ಪುರುಷಂ ಪಶುಮ್ ॥15॥**

ಈ ಯಜ್ಞಕ್ಕೆ ಗಾಯಿತ್ರಿ ಮೊದಲಾದ ಏಳುಛಂದಸ್ಸುಗಳು ರಾಕ್ಷಸರನ್ನು ದೂರಮಾಡುವ ಸರಹದ್ದಿನ ಸಮಿತ್ತುಗಳಾಗಿ ಆದುವು. ಸಮಿತ್ತುಗಳು ಇಪ್ಪತ್ತೊಂದಾಗಿ ಮಾಡಲ್ಪಟ್ಟುವು. ದೇವತೆಗಳು ಯಾವ ಮಾನಸಯಜ್ಞವನ್ನು ಮಾಡತಕ್ಕವರಾಗಿ ವಿರಾಟ್ ಪುರುಷನನ್ನು ಯಜ್ಞೀಯ ಪಶುಸ್ಥಾನದಲ್ಲಿ ಸಂಕಲ್ಪಿಸಿದರು.

**ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।**
**ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥16॥**

ಪ್ರಜಾಪತಿಯ ಪ್ರಾಣರೂಪರಾದ ದೇವತೆಗಳು ಹಿಂದೆ ಹೇಳಿದ ಮಾನಸಿಕ ಯಜ್ಞದಿಂದ ಯಜ್ಞರೂಪನಾದ ಪ್ರಜಾಪತಿಯನ್ನು ಪೂಜಿಸಿದರು. ಈ ವಿಧವಾದ ಪೂಜೆಯಿಂದ ಪ್ರಸಿದ್ಧಗಳಾದ ಜಗದಾಕಾರ ವಿಕಾರಗಳನ್ನು ಧರಿಸಿದವುಗಳೂ, ಮುಖ್ಯವಾದುವುಗಳೂ ಆದುವು. ಇಲ್ಲಿಯವರೆಗೆ ಸೃಷ್ಟಿಕ್ರಮವನ್ನು ಬೋಧಿಸುವ ಅನುವಾಕಾರ್ಥವು ಸಂಗ್ರಹವಾಗಿ ವರ್ಣಿತವಾಯಿತು. ಈ ಮುಂದೆ ಉಪಾಸನೆ ಮತ್ತು ಅದರ ಫಲವನ್ನು ತಿಳಿಸುವ ಅನುವಾಕ ಭಾಗಾರ್ಥವು ಸಂಕ್ಷೇಪವಾಗಿ ನಿರೂಪಿತವಾಗುತ್ತದೆ. ಯಾವ ವಿರಾಟ್ಪುರುಷನ ಪ್ರಾಪ್ತಿರೂಪವಾದ ಸ್ವರ್ಲೋಕದಲ್ಲಿ ಪುರಾತನರಾದ ವಿರಾಟ್‌ಪುರುಷನ ಉಪಾಸನೆಯನ್ನು ಸಾಧಿಸುವ ದೇವತೆಗಳು ಇರುತ್ತಾರೆಯೋ, ಅಂತಹ ವಿರಾಟ್ ಪ್ರಾಪ್ತಿರೂಪವಾದ ಸ್ವರ್ಗವನ್ನು ಮಹಾಮಹಿಮರಾದ ಉಪಾಸಕರು ಹೊಂದುತ್ತಾರೆ.

**ಯಜುರ್ವೇದದಲ್ಲಿ ಕಂಡುಬರುವ ಹೆಚ್ಚಿನ ಎರಡು ಋಕ್ಕುಗಳು :**

**ವೇದಾಹ ಮೇತಂ ಪುರುಷಂ ಮಹಾಂತಂ । ಆದಿತ್ಯವರ್ಣಂ ತಮಸಸ್ತು ಪಾರೇ । ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ । ನಾಮಾನಿ ಕೃತ್ವಾಭಿವದನ್ ಯದಾಸ್ತೇ ॥17॥**

ಯಾವ ಸರ್ವಜ್ಞನಾದ ವಿರಾಟ್ ಪುರುಷನು, ದೇವಮನುಷ್ಯ ಪಕ್ಷ್ಯಾದಿ ಎಲ್ಲಾ ರೂಪಗಳನ್ನೂ ನಾನಾ ಪ್ರಕಾರವಾಗಿ ನಿರ್ಮಾಣಮಾಡಿ, ಆ ಪ್ರಾಣಿಗಳಿಗೆ ಪ್ರತ್ಯೇಕವಾದ ಹೆಸರುಗಳನ್ನೂ ಮಾಡಿ, ಆ ಹೆಸರುಗಳಿಂದ ವ್ಯವಹರಿಸುತ್ತಾ ಇರುತ್ತಾನೆಯೋ ಇಂತಹ ವಿರಾಟ್‌ಪುರುಷನನ್ನು ಮಹಾಮಹಿಮನೆಂತನೂ,

ಅಜ್ಞಾನಕ್ಕಿಂತ ಹೊರವಳಯದಲ್ಲಿ ಸೂರ್ಯನಂತೆ ಬೆಳಗತಕ್ಕವನೆಂದೂ ನಾನು ತಿಳಿಯುತ್ತೇನೆ.

**ಧಾತಾ ಪುರಸ್ತಾದ್ಯಮುದಾ ಜಹಾರ । ಶಕ್ರಃಪ್ರವಿದ್ವಾನ್ ಪ್ರದಿಶಶ್ಚತಸ್ರಃ ।**

**ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪಂಥಾ ಅಯನಾಯ ವಿದ್ಯತೇ ॥18॥**

ಚತುರ್ಮುಖನು ಮೊದಲನೆಯಬಾರಿ ಯಾವ ಪರಮಾತ್ಮನ ವಾಸ್ತವವಿಷಯವನ್ನು ವಿವರಿಸಿದನೋ ಅದನ್ನು ಚೆನ್ನಾಗಿ ಅರಿತುಕೊಂಡ ಇಂದ್ರನು, ನಾಲ್ಕು ದಿಕ್ಕುಗಳಿಗೂ ತಿಳಿಹೇಳಿದನು. ಆತನನ್ನು ಈ ರೀತಿಯಾಗಿ ವಿವೇಕದಿಂದ ಅರಿತ ಉಪಾಸಕನು ಈ ಜನ್ಮದಲ್ಲಿಯೇ ಮರಣರಹಿತನು ಆಗುತ್ತಾನೆ. ಮೋಕ್ಷಸಾಧನೆಗೆ ಮತ್ತೊಂದು ಮಾರ್ಗವು ಇಲ್ಲ.

## ಉತ್ತರನಾರಾಯಣ

**ಅದ್ಭ್ಯಸ್ಸಂಭೂತಃ ಪೃಥಿವ್ಯೈರಸಾಚ್ಚ । ವಿಶ್ವಕರ್ಮಣಃ ಸಮವರ್ತತಾಧಿ ।**

**ತಸ್ಯ ತ್ವಷ್ಟಾ ವಿದಧದ್ ರೂಪಮೇತಿ । ತತ್ಪುರುಷಸ್ಯ ವಿಶ್ವಮಾಜಾನಮಗ್ರೇ ॥1॥**

ವಿರಾಟ್‌ಪರುಷನು ಉದಕದಿಂದಲೂ, ಭೂಸಂಬಂಧವಾದ ಸಾರ ದಿಂದಲೂ ಹುಟ್ಟಿದನು. ಆ ತರುವಾಯ ಜಗತ್ಕರ್ತನಾದ ಪರಮೇಶ್ವರನ ಮೂಲಕ ಹೆಚ್ಚಾಗಿ ಬೆಳೆಯಿತು. ಆ ವಿರಾಟ್‌ಪುರುಷನ ಹದಿನಾಲ್ಕು ಲೋಕರೂಪವಾದ ಅವಯವ ಸನ್ನಿವೇಶವನ್ನು ನಾನಾರೂಪವಾಗಿ ರಚಿಸುವ ವಿಶ್ವಕರ್ಮನಾದ ಪರಮೇಶ್ವರನು ಸೃಷ್ಟ್ಯಾದಿ ಕಾರ್ಯದಲ್ಲಿ ತೊಡಗುತ್ತಾನೆ. ವಿರಾಟ್‌ಪರುಷ ಸಂಬಂಧವಾದ ದೇವ ಮನುಷ್ಯಾದಿರೂಪವಾದ ಜಗತ್ತೆಲ್ಲ ಸೃಷ್ಟ್ಯಾದಿಯಲ್ಲಿ ಎಲ್ಲೆಲ್ಲಿಯೂ ಉತ್ಪನ್ನವಾಯಿತು.

**ವೇದಾಹಮೇತಂ ಪುರುಷಂ ಮಹಾನ್ತಮ್ ಆದಿತ್ಯವರ್ಣಂ ತಮಸಃ ಪರಸ್ತಾತ್।**

**ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪಂಥಾ ವಿದ್ಯತೇಽಯನಾಯ।2॥**

ನಾನು ಈ ಪುರುಷನನ್ನು ಮಹಾಮಹಿಮನೆಂತಲೂ, ಸೂರ್ಯನಂತೆ ಬೆಳಗುವ ಪ್ರಕಾಶಭರಿತ – ನೆಂತಲೂ, ಅವಿವೇಕ, ಅಥವಾ ಅಜ್ಞಾನವೆಂಬ ಅಂಧಕಾರಕ್ಕೆ

ಹೊರಗಾದವನೆಂತಲೂ ತಿಳಿಯುತ್ತೇನೆ. ಆತನನ್ನು ಈ ಪ್ರಕಾರವಾಗಿ ಅರಿತವನು ಈ ಜನ್ಮದಲ್ಲಿಯೇ ಮರಣರಹಿತನು ಆಗುತ್ತಾನೆ. ಮೋಕ್ಷಕ್ಕೆ ಮತ್ತೊಂದು ಮಾರ್ಗವು ಇರುವುದಿಲ್ಲ.

**ಪ್ರಜಾಪತಿಶ್ಚರತಿ ಗರ್ಭೇ ಅಂತಃ । ಅಜಾಯಮಾನೋ ಬಹುಧಾ ವಿಜಾಯತೇ ।**

**ತಸ್ಯ ಧೀರಾಃ ಪರಿಜಾನಂತಿ ಯೋನಿಮ್ । ಮರೀಚೀನಾಂ ಪದಮಿಚ್ಛಂತಿ ವೇಧಸಃ ॥3॥**

ಬ್ರಹ್ಮನು ಬ್ರಹ್ಮಾಂಡಾತ್ಮಕವಾದ ಗರ್ಭದಲ್ಲಿ ನಡುವೆ ಸಂಚರಿಸುತ್ತಾನೆ. ಈತನು ಜನ್ಮರಹಿತನಾಗಿದ್ದರೂ ನಾನಾ ಪ್ರಕಾರವಾಗಿ ಜನ್ಮವನ್ನು ತಳೆಯುತ್ತಾನೆ. ವಿವೇಕಿಗಳು ಆತನ ಜಗತ್ಕಾರಣ ಸ್ವರೂಪವನ್ನು ಚೆನ್ನಾಗಿ ಅರಿತಿರುವರು ಚತುರ್ಮುಖನ ಸೃಷ್ಟಿಗೆ ಒತ್ತಾಸೆ ಮಾಡುವ ಮರೀಚಿ ಮುಂತಾದ ಪ್ರಜಾಪತಿಗಳೆನಿಸಿದವರು. ತಮಗಿಂತ ಮೊದಲು ಸೃಷ್ಟಿಕಾರ್ಯವನ್ನು ನಿರ್ವಹಿಸಿದ ನವ ಬ್ರಹ್ಮರ ಸ್ಥಾನವನ್ನು ಬಯಸುತ್ತಾರೆ.

**ಯೋ ದೇವೇಭ್ಯ ಆತಪತಿ । ಯೋ ದೇವಾನಾಂ ಪುರೋಹಿತಃ ।**

**ಪೂರ್ವೋ ಯೋ ದೇವೇಭ್ಯೋ ಜಾತಃ । ನಮೋ ರುಚಾಯ ಬ್ರಾಹ್ಮಯೇ ॥4॥**

ಯಾವ ಪರಮೇಶ್ವರನು ದೇವತೆಗಳಿಗಾಗಿ ಎಲ್ಲೆಲ್ಲಿಯೂ ಬೆಳಗುತ್ತಿರುವನೋ, ಯಾವಾತನು ದೇವತೆಗಳಿಗೆ ಬೃಹಸ್ಪತಿರೂಪದಿಂದ ಸಕಲಕರ್ಮ ನಿರ್ವಾಹಕನಾಗಿರುವನೋ, ಯಾವಾತನು ದೇವತೆಗಳಿಗಿಂತಲೂ ಮೊದಲಿಗನಾಗಿ ಕಾಣಿಸಿಕೊಂಡನೋ ಅಂತಹ ಸ್ವಯಂಪ್ರಕಾಶ-ಭರಿತವಾದ ವೇದಪ್ರತಿಪಾದ್ಯವಾದ ಪರಬ್ರಹ್ಮ ಸ್ವರೂಪಕ್ಕೆ ನಮಸ್ಕಾರ.

**ರುಚಂ ಬ್ರಾಹ್ಮಂ ಜನಯಂತಃ । ದೇವಾ ಅಗ್ರೇ ತದಬ್ರುವನ್ ।**

**ಯಸ್ತ್ವೈವಂ ಬ್ರಾಹ್ಮಣೋ ವಿದ್ಯಾತ್ । ತಸ್ಯ ದೇವಾ ಅಸನ್ ವಶೇ ॥5॥**

ದೇವತೆಗಳು ಸೃಷ್ಟಿಯ ಆದಿಯಲ್ಲಿ ಬ್ರಹ್ಮವಿದ್ಯಾಸಂಪ್ರದಾಯ ಪ್ರವರ್ತನಕಾಲದಲ್ಲಿ ಪರಬ್ರಹ್ಮಸಂಬಂಧವಾದ ಚೈತನ್ಯವನ್ನು ವಿದ್ಯೆಯ ಮೂಲಕ ಪ್ರಾದುರ್ಭಾವಗೊಳಿಸತಕ್ಕವರಾಗಿ ಆ ಬ್ರಹ್ಮತತ್ತ್ವವನ್ನು ಸಂಬೋಧಿಸಿ, ಈ ಮುಂದಣವಾಕ್ಯವನ್ನು ಹೇಳಿದರು. "ಎಲೆ ಪರಮಾತ್ಮನೆ,

ವಾಸ್ತವಸ್ವರೂಪವನ್ನು ತಿಳಿಯುತ್ತಾನೆಯೋ ಅಂತಹ ಬ್ರಹ್ಮವೇತ್ತನಿಗೆ ಸಕಲ ದೇವತೆಗಳೂ ಅಧೀನರಾಗುತ್ತಾರೆ.

**ಹ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ । ಅಹೋರಾತ್ರೇ ಪಾರ್ಶ್ವೇ । ನಕ್ಷತ್ರಾಣಿ ರೂಪಮ್ । ಅಶ್ವಿನೌ ವ್ಯಾತ್ತಮ್ । ಇಷ್ಟಂ ಮನಿಷಾಣ । ಅಮುಂ ಮನಿಷಾಣ । ಸರ್ವಂ ಮನಿಷಾಣ. ॥16॥**

ಎಲೈ ಪರಮಾತ್ಮ ! ಲಜ್ಜಾಭಿಮಾನಿ ದೇವತೆಯೂ, ಸಂಪದಭಿಮಾನಿ ದೇವತೆಯಾದ ಲಕ್ಷ್ಮಿಯೂ ನಿನ್ನ ಪತ್ನೀ ಸ್ಥಾನದಲ್ಲಿರತಕ್ಕವರು. ಹಗಲು ರಾತ್ರಿಗಳು ಪಕ್ಕಗಳಾಗಿವೆ. ಆಕಾಶದಲ್ಲಿ ಹೊಳೆಯುವ ತಾರೆಗಳು ರೂಪವಾಗಿವೆ. ದೇವವೈದ್ಯರೆನಿಸಿದ ಅಶ್ವಿನಿಗಳೆಂಬ ಅವಳಿ ದೇವತೆಗಳು ತೆರೆದ ಬಾಯಿ. ನಮ್ಮ ಬಯಕೆಗಳನ್ನು ದಯೆಪಾಲಿಸು. ಲೋಕದಲ್ಲಿ ಭೋಗಸಾಧನಗಳಾಗಿ ಕಂಡುಬರುವ ಆಕಳು, ಕುದುರೆ ಮುಂತಾದವುಗಳನ್ನೆಲ್ಲ ಅನುಗ್ರಹಿಸು. ಐಹಿಕಾಮುಷ್ಮಿಕ ಸುಖಸಾಧನಸಂಪತ್ತುಗಳನ್ನೆಲ್ಲ ಈಡೇರಿಸು.

*****

# ಋಗ್ವೇದೀಯ
# ಪುರುಷಸೂಕ್ತ ಮಂತ್ರಾರ್ಥವಿವೇಚನೆ

## 1. ಪೀಠಿಕೆ

ಅಧ್ಯಾತ್ಮಪ್ರಕಾಶದ ಗ್ರಾಹಕರುಗಳಿಗೆಲ್ಲ ನಾರಾಯಣಸ್ಮರಣಗಳು. ಅಧ್ಯಾತ್ಮವಿದ್ಯೆಯ ಚಿಂತನೆಯಲ್ಲಿಯೂ ಸಾಧನದಲ್ಲಿಯೂ ಜನರಿಗೆ ಹೆಚ್ಚಿನ ಆದರವನ್ನುಂಟುಮಾಡುವದರ ಮೂಲಕ **ಭಾರತಸಂಸ್ಕೃತಿಯ ಪ್ರಚಾರಕ್ಕೆ** ನೆರವಾಗುವದೇ ತಮ್ಮ ಸಂಸ್ಥೆಯ ಮುಖ್ಯೋದ್ದೇಶವೆಂದು ಈ ಕಾರ್ಯಾಲಯದವರು ಹೇಳಿಕೊಳ್ಳುತ್ತಿದಾರಷ್ಟೆ? ಕಾರ್ಯಾಲಯದ ಅಂಗವಾಗಿ ಹೊರಡುವ ಈ ಮಾಸಪತ್ರಿಕೆಗೆ ಅದೇ ಗುರಿಯಿರುವದು ಸ್ವಾಭಾವಿಕವಾಗಿರುತ್ತದೆ. ಆದ್ದರಿಂದ ಭಾರತಸಂಸ್ಕೃತಿಯ ಹೆಗ್ಗುರುತೇನು? – ಎಂಬುದನ್ನು ಚರ್ಚಿಸುವದೂ ಪತ್ರಿಕೆಯ ಕ್ಷೇತ್ರದೊಳಗೇ ಸೇರಿದ್ದಾಗಿರುತ್ತದೆ.

ಯಾವ ಕಾರಣದಿಂದಲೋ, ಈಗ ಎಲ್ಲರ ಬಾಯಿಯಲ್ಲೂ 'ಸಂಸ್ಕೃತಿ' ಎಂಬ ಶಬ್ದವು ಮತ್ತೆಮತ್ತೆ ಬರುತ್ತಿದೆ. ಆದರೆ ಸಂಸ್ಕೃತಿಶಬ್ದದ ಅರ್ಥವೇನೆಂಬುದನ್ನು ವಿವರಿಸುವಾಗ ಹಲವರು ಹಲವು ಬಗೆಯಾಗಿ ಅಭಿಪ್ರಾಯಪಡುತ್ತಿರುವರು. ನನ್ನ ಸ್ವಂತ ಅಭಿಪ್ರಾಯವೇನೆಂದರೆ, **ಮಾನವನ ಅಂತಃಕರಣವು ತನ್ನಲ್ಲಿರುವ ದೋಷಗಳನ್ನು ಪರಿಹರಿಸಿಕೊಂಡು ಗುಣಾಧಾನಮಾಡಿಕೊಳ್ಳುತ್ತಾ ಉನ್ನತಿಗೇರುವದಕ್ಕಾಗಿ ಹೊರತೋರಿಕೊಳ್ಳುವ ಬಗೆಯೇ ಸಂಸ್ಕೃತಿ** ಎಂಬುದು. ಬೇರೆಬೇರೆಯ ಜನಾಂಗದವರು ತಮ್ಮತಮ್ಮ ಸಂಸ್ಕೃತಿಯನ್ನು ಬೇರೆಬೇರೆಯ ಅಡಿಗಲ್ಲುಗಳ ಮೇಲೆ ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಅವರ ಸಂಸ್ಕೃತಿವಿಶೇಷಗಳು ಬೇರೆಬೇರೆಯ ಬಗೆಯಲ್ಲಿ ರೂಪಗೊಂಡಿವೆ. ಈ ಕಾರಣದಿಂದ ಬೇರೆಬೇರೆಯ ಜನಾಂಗಗಳ ಸಾಹಿತ್ಯ, ಶಾಸ್ತ್ರಾಭ್ಯಾಸ, ಸಮಾಜರಚನೆ, ಕಲೆಗಳು, ಆರ್ಥಿಕಸ್ಥಿತಿ, ಉದ್ಯೋಗಗಳು, ರಾಜಕೀಯವಿಚಾರ ಮುಂತಾದವುಗಳೆಲ್ಲ ಬೇರೆಬೇರೆಯ ದಿಕ್ಕಿನಲ್ಲಿ ಮುಂದುವರಿಯುತ್ತಿವೆ. ಹೀಗಿರುವದರಿಂದ **ಭಾರತಸಂಸ್ಕೃತಿ ಅಸಾಧಾರಣರೂಪವು ಯಾವುದು**? – ಎಂಬ ಪ್ರಶ್ನೆಗೆ ಇಲ್ಲಿಯ ಜನರು ಯಾವ ಅಡಿಗಲ್ಲಿನ ಮೇಲೆ ತಮ್ಮ **ಸಂಸ್ಕೃತಿಯ ಭವನವನ್ನು ಕಟ್ಟುತ್ತಿದಾರೆ**? – ಎಂದೇ ಅಭಿಪ್ರಾಯ.

ಭಾರತಸಂಸ್ಕೃತಿ ಎಂಬ ಶಬ್ದಕ್ಕೆ ಈಗಿನ ಸ್ಥಿತಿಯಲ್ಲಿ ಭಾರತದಲ್ಲಿ ಸೇರಿರುವ ಜನರ ಸಂಸ್ಕೃತಿ ಎಂದು ಅರ್ಥವಾದರೆ ಅದನ್ನು ಬಗೆಬಗೆಯ ದೃಷ್ಟಿಕೋಣಗಳಿಂದ ನೋಡಿ ಅಭ್ಯಾಸಮಾಡಬೇಕಾಗುವುದು. ಇಲ್ಲಿ ಬಹುಪುರಾತನಕಾಲದಿಂದಲೂ ಇರುವ ಹಿಂದೂಜನರಲ್ಲದೆ ಇನ್ನೂ ಅನೇಕ ಜನಾಂಗಗಳ ಕವಲುಗಳು ಬಂದು ಸೇರಿಕೊಂಡಿರುತ್ತವೆ. ಇವರೆಲ್ಲರ ಸಂಸ್ಕೃತಿವಿಶೇಷಗಳೂ ಸೇರಿ ಈಗ ಒಂದು ಹೊಸ ಸಂಸ್ಕೃತಿಯ ಅವತಾರವು ಆಗುತ್ತಿದೆ. ಅದು ಯಾವ ರೂಪವನ್ನು ತೆಗೆದುಕೊಳ್ಳುವದೋ ಈಗಲೇ ಹೇಳುವದಕ್ಕೆ ಬರುವಂತಿಲ್ಲ; ಅದಿನ್ನೂ ಭವಿಷ್ಯದ್ದೇವಿಯ ಗರ್ಭದಲ್ಲಿರುತ್ತದೆ. ಆ ಹೊಸ ಸಂಸ್ಕೃತಿಯು ಯಾವ ರೂಪವನ್ನೇ ಹೊಂದಲಿ, ನಾವುನಾವು ಈಗಿನಿಂದಲೂ ಉತ್ತಮ ಸಂಸ್ಕೃತಿಯನ್ನೇ ಗುರಿಯಾಗಿಟ್ಟು ಕೊಂಡಿರಬೇಕು; ನಮನಮಗೆ ಮೆಚ್ಚಾಗಿ ನಮನಮಗೆ ಹೊಂದುಗಡೆಯಾಗಿರುವ ಸಂಸ್ಕೃತಿವಿಶೇಷವನ್ನೇ ಅವಲಂಬಿಸಿ ಮುಂದುವರಿಯುವದಕ್ಕೆ ಹೃತ್ಪೂರ್ವಕವಾಗಿ ಪ್ರಯತ್ನಿಸುತ್ತಿರಬೇಕು–ಎಂಬುದು ನಿರ್ವಿವಾದವಾಗಿದೆ ಈ ಕಾರಣದಿಂದ ನಾವು ಸನಾತನಾರ್ಯಸಂಸ್ಕೃತಿಯನ್ನೇ ಭಾರತಸಂಸ್ಕೃತಿಯಮುಖ್ಯಾಂಗವೆಂದು ಭಾವಿಸಿ, ಅದರ ಅಭ್ಯಾಸ, ಅದರ ಅನುವರ್ತನೆ – ಇವುಗಳಿಗೇ ನಮ್ಮ ಚಿತ್ತವನ್ನು ಧಾರೆಯೆರೆದಿರುವೆವು.

ಒಳ್ಳೆಯದು, ಈ ಅರ್ಥದಲ್ಲಿ **ಭಾರತಸಂಸ್ಕೃತಿಯ ಅಸಾಧಾರಣಸ್ವರೂಪವು** ಯಾವದು? – ಎಂಬ ಪ್ರಶ್ನೆಯು ಈಗ ಎದ್ದುಕೊಳ್ಳುತ್ತದೆಯಷ್ಟೆ? ಅದಕ್ಕೆ ನನ್ನ ಉತ್ತರವನ್ನು ಇಲ್ಲಿ ಕೊಡುವೆನು. **ಭಾರತಸಂಸ್ಕೃತಿಗೆ ಮುಖ್ಯವಾಗಿ ಅಧ್ಯಾತ್ಮವಿದ್ಯೆಯೇ ತಳಹದಿಯು**. ನಮ್ಮ ಪೂರ್ವಜರು ಈ ಅಧ್ಯಾತ್ಮವಿದ್ಯೆ ಎಂಬ ತಳಗಟ್ಟಿನ ಮೇಲೆಯೇ ತಮ್ಮ ನಾಗರಿಕತೆಯ ಭವ್ಯಭವನವನ್ನು ಕಟ್ಟಿದ್ದರು. ಆ ಭವನದಲ್ಲಿ ವಿವಿಧವಾದ ಕೋಣೆಗಳಿದ್ದವು; ಈ ಲೋಕದ ಮತ್ತು ಪರಲೋಕದ ಆಕಾಂಕ್ಷೆಗಳನ್ನೆಲ್ಲ ಪರಿಪೂರ್ತಿಗೊಳಿಸಬಲ್ಲ ಸಲಕರಣೆಗಳು ಅದರಲ್ಲಿ ಸಂಗ್ರಹವಾಗಿದ್ದವು. ಆ ಸಂಸ್ಕೃತಿಯ ಅಸಾಧಾರಣಸ್ವರೂಪವು ದ್ವಿಮುಖವಾಗಿತ್ತು. ಮೊದಲನೆಯದಾಗಿ ಅದಕ್ಕೆ **ಪರಮಾರ್ಥನಿಷ್ಠೆಯೇ ಗುರಿಯಾಗಿತ್ತು;** ಆದ್ದರಿಂದ ಅದರ ವ್ಯಾಪ್ತಿಯು ಯಾವ ಪರಿಚ್ಛೇದಕ್ಕೂ ಕಟ್ಟುಬೀಳುವಂತಿರಲಿಲ್ಲ. ಎರಡನೆಯದಾಗಿ ಅದು ಇಡಿಯ ಭೂಮಂಡಲದ ಸಂಸ್ಕೃತಿಯ ವಿಶೇಷಗಳನ್ನೆಲ್ಲ ತನ್ನ ತೋಳ ತೆಕ್ಕೆಯಲ್ಲಿ ಸಹಾನುಭೂತಿಯಿಂದ ಆಲಂಗಿಸಿಕೊಳ್ಳುವದಕ್ಕೂ ಅವುಗಳಲ್ಲಿ ಕಾಣುವ

ವಿಶೇಷಧರ್ಮಗಳನ್ನೆಲ್ಲ ಹೀರಿಕೊಂಡು ತನ್ನೊಳಗೇ ಅಡಕಮಾಡಿಕೊಂಡು ಸಾತ್ಮ್ಯವಾಗಿ ಮಾಡಿಕೊಳ್ಳುವದಕ್ಕೂ ತಕ್ಕದ್ದಾಗಿತ್ತು. ಹೀಗೆ ನೋಡಿದರೆ ಭಾರತಸಂಸ್ಕೃತಿಯೆಂದರೂ ಒಂದೇ, ಸಂಸ್ಕೃತಿಸಾಮಾನ್ಯವೆಂದರೂ ಒಂದೇ. ಭಾರತಸಂಸ್ಕೃತಿಯ ಪ್ರಸಾರ ಎಂದರೆ ಸಂಸ್ಕೃತಿಸಾಮಾನ್ಯದ ಪ್ರಸಾರವೆಂದೇ ಅರ್ಥ. ಈ ದೃಷ್ಟಿಯಲ್ಲಿ ಬೇರೆಬೇರೆಯ ಸಂಸ್ಕೃತಿಗಳನ್ನು ಒಂದುಗೂಡಿಸುವ ಸಮಸ್ಯೆಯೇ ಇಲ್ಲ; ಮರದ ಕೊಂಬೆಗಳನ್ನೆಲ್ಲ ಬೇರಿನಲ್ಲಿಯೇ ಒಂದಾಗಿ ಕಾಣುವಂತೆ, **ಸಂಸ್ಕೃತಿವಿಶೇಷಗಳನ್ನೆಲ್ಲ ತಾಯಬೇರಾದ ಅಧ್ಯಾತ್ಮಪ್ರಧಾನವಾದ ಸಂಸ್ಕೃತಿಯಲ್ಲಿ ಒಂದೆಂದು ಕಂಡುಕೊಳ್ಳುವ ಪ್ರಯತ್ನವೇ ಸಂಸ್ಕೃತಿಗಳ ಸಂಮಿಲನವು.** ಈ ಕಾರಣದಿಂದಲೇ ಅಧ್ಯಾತ್ಮಪ್ರಕಾಶಕಾರ್ಯಾಲಯವು ಅಧ್ಯಾತ್ಮವಿದ್ಯೆಯ ಚಿಂತನೆಯಲ್ಲಿಯೂ ಸಾಧನದಲ್ಲಿಯೂ ಜನರಿಗೆ ಹೆಚ್ಚುಹೆಚ್ಚಿನ ಆದರವನ್ನುಂಟು ಮಾಡುವ ಪ್ರಯತ್ನವನ್ನು ತನ್ನ ಮುಖ್ಯೋದ್ದೇಶವಾಗಿಟ್ಟುಕೊಂಡಿರುತ್ತದೆ.

ಭಾರತಸಂಸ್ಕೃತಿಗಂಗೆಯ ಮೂಲವೆಂದರೆ ಜಗತ್ತಿನ ಧಾರ್ಮಿಕ ವಾಙ್ಮಯದಲ್ಲೆಲ್ಲ ಅತ್ಯಂತ ಪ್ರಾಚೀನವೆಂದು ಐತಿಹಾಸಕರೂ ಅಂಗೀಕರಿಸಿರುವ ವೇದಗಳು. ವೈದಿಕಮಂತ್ರದ್ರಷ್ಟೃಗಳಾದ ಮಹರ್ಷಿಗಳು ಪರಮಾತ್ಮನೆಂದೂ ನಾರಾಯಣನೆಂದೂ ಕರೆಯುತ್ತಿದ್ದ ಪರಮಾರ್ಥದ ಕಲ್ಪನೆಯು ಎಷ್ಟು ವಿಶಾಲವಾಗಿತ್ತೆಂಬುದನ್ನು ಮನಗಾಣುವದಕ್ಕೆ **ಪುರುಷಸೂಕ್ತ**ವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಮಂತ್ರಗಳ ಅಭಿಪ್ರಾಯವನ್ನು ಚಿಂತನಮಾಡುವದೊಂದು ಉತ್ತಮ ಸಾಧನವಾಗಿರುತ್ತದೆ. ಈ ಸೂಕ್ತವು ನಾಲ್ಕು ವೇದಗಳಲ್ಲಿಯೂ ಕಾಣಬರುತ್ತದೆಯಾದರೂ ಅತ್ಯಂತಪ್ರಾಚೀನವೆಂದು ಇತಿಹಾಸಶೋಧಕರೂ ಒಪ್ಪಿರುವ ಋಗ್ವೇದದ ಪಾಠದ ಅನುಕ್ರಮವನ್ನೇ ನಾನು ಇಲ್ಲಿ ಅನುಸರಿಸುವೆನು. ಆಪಸ್ತಂಬ, ಭರದ್ವಾಜ–ಮೊದಲಾದ ಮಹರ್ಷಿಗಳು ಈ ಸೂಕ್ತವನ್ನು ಯಜ್ಞಾದಿಕರ್ಮಗಳಿಗೂ ವಿನಿಯೋಗಮಾಡಿರುತ್ತಾರೆ. ಈಗಲೂ ದ್ವಿಜರು ಇದನ್ನು ದೇವಪೂಜಾಭಿಷೇಕಾದಿಗಳಲ್ಲಿ ವಿನಿಯೋಗಿಸುತ್ತಿರುವದು ಎಲ್ಲರಿಗೂ ಗೊತ್ತಿರುತ್ತದೆ. ಆದರೆ ಸೂಕ್ತವು ಜಗತ್ಕಾರಣನಾದ ನಾರಾಯಣನನ್ನು ಪ್ರತಿಪಾದಿಸುತ್ತಿರುವದರಿಂದ ಅದರ ಅಭಿಪ್ರಾಯವನ್ನು ಚಿಂತನೆಮಾಡುವದೇ ಒಂದು ಬಗೆಯ ಅಧ್ಯಾತ್ಮಯೋಗವಾಗಿರುವದೆಂಬುದರಲ್ಲಿ ಯಾವ ಸಂಶಯವೂ ಇರುವದಿಲ್ಲ.

## 2. ಸಕಲಚರಾಚರ ವಿಶ್ವಾಧಾರ ಪರಮಾತ್ಮನ ಸ್ವರೂಪ

ಮೊಟ್ಟಮೊದಲನೆಯ ಋಕ್ಕಿನ ಅಕ್ಷರಾರ್ಥವು ಹೀಗಿರುವದು :

**ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।**
**ಸ ಭೂಮಿಂ ವಿಶ್ವತೋ ವೃತ್ವಾಽತ್ಯತಿಷ್ಠದ್ದಶಾಂಗುಲಮ್ ॥1॥**

**ಪುರುಷನು ಸಾವಿರ ತಲೆಗಳುಳ್ಳವನು, ಸಾವಿರ ಕಣ್ಣುಗಳುಳ್ಳವನು, ಸಾವಿರ ಕಾಲುಗಳುಳ್ಳವನು. ಅವನು ಭೂಮಿಯನ್ನು ಎಲ್ಲಾ ಕಡೆಯಿಂದಲೂ ಆವರಿಸಿಕೊಂಡು ಅದನ್ನು ಹತ್ತು ಅಂಗುಲದಷ್ಟು ದಾಟಿರುತ್ತಾನೆ.**

ಇಲ್ಲಿ ಪರಮಾತ್ಮನ ವರ್ಣನೆಯನ್ನು ಮಾಡಿರುವದರಲ್ಲಿ ಒಂದು ವಿಶೇಷವಿದೆ. ಪರಮಾತ್ಮನ ಆಕಾರವು ಹೇಗಿರುವದು? – ಎಂಬ ಬಗ್ಗೆ ಮತಗಳಲ್ಲಿ ಅನೇಕ ವಾದವಿವಾದಗಳು ಆಗಿಹೋಗಿವೆ, ಆಗುತ್ತಲೂ ಇವೆ. ಈಶ್ವರನಿಗೆ ಆಕಾರವೇ ಇಲ್ಲ ಎಂದು ಕೆಲವರು; ಇಂಥದೊಂದು ನಿಯತವಾದ ಆಕಾರವಿದೆ ಎಂದು ಕೆಲವರು; ಯಾವ ಆಕಾರವನ್ನಾದರೂ ಅವನು ತನ್ನ ಇಚ್ಛಾಮಾತ್ರದಿಂದ ಧರಿಸಬಲ್ಲನು–ಎಂದು ಕೆಲವರು. ಈ ಅಭಿಪ್ರಾಯಗಳಲ್ಲೆಲ್ಲ ನಿಜದ ಅಂಶವು ಇರುತ್ತದೆ; ಆದರೆ ಅವುಗಳನ್ನು ಹೇಗೆ ಹೊಂದುಗಡೆಮಾಡಿಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳುವದು ಎಲ್ಲರಿಗೂ ಸಾಧ್ಯವಿರಲಾರದು. ಪ್ರಕೃತ ಸೂತ್ರದಲ್ಲಿ ಹೇಳಿರುವದು ಆ ಹೊಂದುಗಡೆಗೆ ಸಹಾಯಕವಾಗಿದೆ– ಎಂದು ನನಗೆ ತೋರುತ್ತದೆ.

ಈ ಋಕ್ಕಿನಲ್ಲಿ ಹೇಳಿರುವದೇನೆಂದರೆ, ಪರಮಾತ್ಮನು ಸ್ವತಃ ಯಾವ ಆಕಾರದವನೂ ಅಲ್ಲ; ಅವನಿಗೆ ಯಾವ ಗುಣವಾಗಲಿ, ಯಾವ ಕ್ರಿಯೆಯಾಗಲಿ ಸ್ವರೂಪಕ್ಕೆ ಅಂಟಿಕೊಂಡಿರುವದೇ ಇಲ್ಲ. ಆದ್ದರಿಂದ ಅವನನ್ನು ಇರುವವನೆಂದಾಗಲಿ, ಇಲ್ಲದವನೆಂದಾಗಲಿ, ಹೇಳುವದಕ್ಕೆ ಬರುವಂತೆಯೇ ಇಲ್ಲ. ಲೋಕದಲ್ಲಿ ಯಾವ ವಸ್ತುವಿಗೆ ಜಾತಿ, ಗುಣ, ಕ್ರಿಯೆ, ಸಂಬಂಧ – ಮುಂತಾದವುಗಳಿರುವವೋ ಆ ವಸ್ತುವನ್ನು ಆಯಾ ಜಾತಿಗುಣಾದಿಗಳನ್ನು ಹೇಳುವ ಶಬ್ದಗಳಿಂದ ತಿಳಿಸುವದಕ್ಕೆ ಆಗುತ್ತದೆ. ಆದರೆ ಪರಮಾತ್ಮನ ಪರಮಾರ್ಥಸ್ವರೂಪವು ಯಾವ ಜಾತ್ಯಾದಿಗಳೂ ಇಲ್ಲದ್ದು; ಆದ್ದರಿಂದ ಅದನ್ನು ಸತ್ತೆಂದಾಗಲಿ ಅಸತ್ತೆಂದಾಗಲಿ, ಸಗುಣವೆಂದಾಗಲಿ, ನಿರ್ಗುಣವೆಂದಾಗಲಿ, ಸಕ್ರಿಯವೆಂದಾಗಲಿ ನಿಷ್ಕ್ರಿಯವೆಂದಾಗಲಿ,

ಹೇಳುವದಕ್ಕೆ ಆಗುವಂತೆಯೇ ಇಲ್ಲ. ಆದರೂ ಆ ಪರಮಾತ್ಮನು ಇಲ್ಲವೇ ಇಲ್ಲ ಎನ್ನುವದಕ್ಕೆ ಬರುವಂತಿಲ್ಲ; ಏಕೆಂದರೆ ಪ್ರಪಂಚದಲ್ಲಿರುವ ಸರ್ವಪ್ರಾಣಿಗಳ ದೇಹೇಂದ್ರಿಯಗಳ ಮೂಲಕ ಆತನನ್ನು ಅರಿಯಬಹುದಾಗಿರುತ್ತದೆ.

**ಆ ಪರಮಾತ್ಮನಿಗೆ ಸಾವಿರತಲೆಗಳು ;** ಎಂದರೆ ಅನಂತಸಂಖ್ಯೆಯ ತಲೆಗಳಿರುತ್ತವೆ, ಇಲ್ಲಿ ತಲೆ ಎಂಬ ಮಾತನ್ನು ಶರೀರಕ್ಕೆ ಉಪಲಕ್ಷಣವಾಗಿ ತೆಗೆದುಕೊಳ್ಳಬೇಕು. ಅತ್ಯಂತ ಉತ್ತಮಜೀವರುಗಳಾದ ದೇವಾದಿಗಳ ಶರೀರಗಳು, ಮಧ್ಯಮ ಜೀವರುಗಳಾದ ಮನುಷ್ಯರ ಶರೀರಗಳು, ಅಧಮಜೀವರುಗಳಾದ ತಿರ್ಯಗ್ಜಂತುಗಳು, ಪಶುಪಕ್ಷಿಕ್ರಿಮಿಕೀಟಾದಿಗಳು – ಈ ಅನಂತ ಜೀವರುಗಳ ದೇಹಗಳಲ್ಲಿಯೂ ಅದೇ ಪರಮಾತ್ಮನೇ ಇರುತ್ತಾನೆ. ಸಕಲ ಜೀವರುಗಳ ದೇಹಗಳೂ ಆ ದೇವದೇವನಿಗೆ ದೇವಾಲಯಗಳು. ಆದ್ದರಿಂದ ಎಲ್ಲೆಲ್ಲಿ ಯಾವಯಾವ ಶರೀರವನ್ನು ಕಂಡರೂ ಅಲ್ಲಲ್ಲಿ ಅದರೊಳಗೆ ಆ ಪರಮಾತ್ಮನು ಇರುತ್ತಾನೆಂದು ತಿಳಿಯಬೇಕು.

ಇದರಂತೆ **'ಆ ಪರಮಾತ್ಮನು ಸಾವಿರ ಕಣ್ಣುಗಳುಳ್ಳವನು, ಸಾವಿರ ಕಾಲುಗಳುಳ್ಳವನು.'** ಇಲ್ಲಿಯೂ ಸಾವಿರವೆಂದರೆ ಅನಂತವೆಂದೇ ಅರ್ಥ. **ಕಣ್ಣನ್ನು ಜ್ಞಾನೇಂದ್ರಿಯಗಳಿಗೂ ಕಾಲನ್ನು ಕರ್ಮೇಂದ್ರಿಯಗಳಿಗೂ ಉಪಲಕ್ಷಣವಾಗಿ ಹೇಳಿರುತ್ತದೆ ;** ಮನಸ್ಸು ಉಭಯೇಂದ್ರಿಯವಾಗಿರುವದರಿಂದ ಅದನ್ನು ಈ ಶಬ್ದಗಳಿಂದಲೇ ಗ್ರಹಿಸಬೇಕು. ಅನಂತಜೀವರುಗಳ ಅನಂತವಾದ ಜ್ಞಾನೇಂದ್ರಿಯಗಳೂ ಅನಂತಕರ್ಮೇಂದ್ರಿಯಗಳೂ ಅನಂತಮನಸ್ಸುಗಳೂ ಆತನ ಸರ್ವಜ್ಞವೂ ಸರ್ವಶಕ್ತವೂ ಆದ ಸ್ವರೂಪವು ಹೊರಸೂಸುವ ದ್ವಾರಗಳಾಗಿರುತ್ತವೆ ಎಂದರ್ಥ.

ಪರಮಾತ್ಮನು ಬ್ರಹ್ಮಾದಿಸ್ತಂಬಪರ್ಯಂತವಾಗಿರುವ ಜೀವರುಗಳಲ್ಲೆಲ್ಲ ಇದ್ದುಕೊಂಡು ಅವರ ದೇಹೇಂದ್ರಿಯಗಳನ್ನು ನಿಯಮದಲ್ಲಿಟ್ಟುಕೊಂಡಿರುವ ಅಂತರ್ಯಾಮಿಯೆಂದೂ ಆತನ ಅನುಗ್ರಹದಿಂದಲೇ ನಮ್ಮೆಲ್ಲರ ಕಾರ್ಯಕರಣಗಳ ಸಂಘಾತಗಳೂ ತಮ್ಮತಮ್ಮ ಕೆಲಸವನ್ನು ಮಾಡುತ್ತಿರುವವೆಂದೂ ಹೇಳುವ ಈ ಋಕ್ಕಿನ ಅಭಿಪ್ರಾಯವನ್ನು ಮನಸ್ಸಿನಲ್ಲಿ ಹೊರಳಾಡಿಸಿದವರಿಗೆ ವ್ಯವಹಾರಕ್ಕೆ ಉಪಯೋಗವಾಗುವ ಹಲವು ಸೂಚನೆಗಳು ಹೊರಹೊಮ್ಮುತ್ತವೆ.

ಮೊಟ್ಟ ಮೊದಲನೆಯದಾಗಿ ನಮ್ಮೆಲ್ಲರ ದೇಹೇಂದ್ರಿಯಗಳಿಗೂ ಆಧಾರನಾಗಿರುವವನು ಒಬ್ಬನೇ ಪರಮಾತ್ಮನೇ. ಆ ಪರಮಾತ್ಮನು ಚೈತನ್ಯಸ್ವರೂಪನಾಗಿರುತ್ತಾನೆ. ಆತನ ಚೈತನ್ಯವು ನಮ್ಮೆಲ್ಲರ ದೇಹೇಂದ್ರಿಯಗಳ ಮೂಲಕವೂ ಹೊರಸೂಸುತ್ತಿದೆ. ಮಾನವನ ಸಂಸ್ಕೃತಿಗೆ – ಅವನ ನೈತಿಕವಾದ, ಧಾರ್ಮಿಕವಾದ, ತತ್ತ್ವವಿಚಾರರೂಪವಾದ ಮನಸ್ಸಿನ ಭೂಮಿಕೆಗೂ ಸಾಹಿತ್ಯಕಲಾದಿಗಳ ರೂಪದಲ್ಲಿ ಹೊರತೋರಿಕೊಳ್ಳುತ್ತಿರುವ ಅದರ ವಿಭೂತಿಗಳಿಗೂ– ಅನಂತವಾದ **ಚಿತ್ಸಾಗರವೊಂದು** ಹಿನ್ನೆಲೆಯಾಗಿರುತ್ತದೆ. ಎಲ್ಲಾ **ಸಂಸ್ಕೃತಿವಿಶೇಷಗಳೂ ಆ ಸಚ್ಚಿತ್ಸಮುದ್ರದ** ಅಲೆಗಳಾಗಿರುತ್ತವೆ. ಮಾನವನು ಏರ್ಪಡಿಸಿಕೊಂಡಿರುವ ಭೌತಿಕಶಾಸ್ತ್ರ, ಪ್ರಾಣಿಶಾಸ್ತ್ರ, ಮನಃಶಾಸ್ತ್ರ, ನೀತಿಶಾಸ್ತ್ರ, ಜ್ಯೋತಿಃಶಾಸ್ತ್ರ – ಮುಂತಾದ ಸಕಲಶಾಸ್ತ್ರಗಳಿಗೂ ಜ್ಞಾನವೇ ಆಧಾರ. ಈ ಜ್ಞಾನವೆಂಬುದು ಮಾನವರ ಕಾರ್ಯಕರಣಸಂಘಾತಗಳ ಮೂಲಕವೇ ಹೊರತೋರಿಕೊಳ್ಳುತ್ತವೆ. ತನ್ನ ಕಾರ್ಯಕರಣಸಂಘಾತದ ದ್ವಾರದಿಂದ ಹೊರಟ ಜ್ಞಾನಪ್ರಕಾಶದಿಂದಲೇ ಮಾನವನು ಹೊರಗಿನ ಕಾರ್ಯಕರಣಸಂಘಾತಗಳನ್ನೂ ವಸ್ತುವಿಶೇಷಗಳನ್ನೂ ದೃಶ್ಯವಿಶೇಷಗಳನ್ನೂ ಪರಿಶೀಲಿಸುತ್ತಿರುತ್ತಾನೆ, ಈ ಪ್ರಕಾಶದ ಮೂಲವು ಪ್ರತಿಯೊಬ್ಬ ಮಾನವನ ಒಳಗೂ ಇದ್ದುಕೊಂಡಿರುವದರಿಂದಲೂ, ಅದರ ಸ್ವತಃಸಿದ್ಧಿಯನ್ನು ಆಧಾರವಾಗಿಟ್ಟುಕೊಂಡೇ ಪ್ರತಿಯೊಬ್ಬನೂ ವ್ಯವಹಾರವನ್ನು ಮಾಡಬೇಕಾಗಿರುವದರಿಂದಲೂ ಮಾನವನ ಸಂಸ್ಕೃತಿಯೂ ಅದರ ವಿಭೂತಿಗಳಾದ ಶಾಸ್ತ್ರಗಳೂ ಕಲೆಗಳೂ ಎಲ್ಲವೂ ಆ ಚಿತ್ಸಾಗರದ ಅಲೇಗಳೇ ಆಗಿರುತ್ತವೆ. ಆದ್ದರಿಂದ ಯಾವನೊಬ್ಬ ವ್ಯಕ್ತಿಯಾಗಲಿ, ಯಾವದಾದರೊಂದು ಜನಾಂಗವಾಗಲಿ, ಈ 'ಸಂಸ್ಕೃತಿಯು ನನ್ನದು, ಇದನ್ನು ನಾನೇ ಸ್ವಪ್ರಯತ್ನದಿಂದ ಸಂಪಾದಿಸಿಕೊಂಡಿದ್ದೇನೆ, ಇದರಲ್ಲಿ ಮತ್ತೊಬ್ಬರಿಗೆ ಪಾಲು ಇಲ್ಲ' – ಎಂದು ಕೊಚ್ಚಿಕೊಳ್ಳುವದಕ್ಕೆ ಬರುವಂತೆಯೇ ಇಲ್ಲ.

ಎರಡನೆಯದಾಗಿ ಮಾನವನ ಅಂತಃಕರಣದಲ್ಲಿ ಬೆಳಗಿ ಅವನ ದೇಹೇಂದ್ರಿಯಗಳ ಮೂಲಕವಾಗಿ ಶಾಸ್ತ್ರಗಳ ರೂಪದಲ್ಲಿಯೂ ಕ್ರಿಯಾಕಲಾಪದ ರೂಪದಲ್ಲಿಯೂ ಬಗೆಬಗೆಯ ವೇಷಗಳನ್ನು ಧರಿಸುತ್ತಿರುವದು ಎಲ್ಲರೊಳಗೂ ಆಧಾರವಾಗಿರುವ ಈ ಸ್ವಯಂಪ್ರಕಾಶವಾದ ಚಿಜ್ಜ್ಯೋತಿಯೇ ಆಗಿರುತ್ತದೆ. ಅದನ್ನು 'ನನ್ನಲ್ಲಿದೆ, ನಿನ್ನಲ್ಲಿಲ್ಲ; ಇಲ್ಲಿದೆ, ಅಲ್ಲಿಲ್ಲ' ಎನ್ನುವದಕ್ಕೆ ಬರುವದಿಲ್ಲ. ಏಕೆಂದರೆ **ಸ್ವಯಂಸಿದ್ಧವಾದ ಆ ಚೈತನ್ಯದ ಸಂಬಂಧವಿಲ್ಲದ ವಸ್ತುವೇ ಇಲ್ಲ.** ನಮ್ಮೊಳಗೆ

ನಮ್ಮ ಹೊರಗೆ, ನಮ್ಮ ಮೇಲೆ ನಮ್ಮ ಕೆಳಗೆ, ನಮ್ಮ ಎಡಕ್ಕೆ ನಮ್ಮ ಬಲಕ್ಕೆ, ಸುತ್ತಲೂ ಇರುವದೆಲ್ಲವೂ ಈ ಚಿಜ್ಜ್ಯೋತಿಯ ವಿಲಾಸವೇ. ಮಾನವನ ಸಂಸ್ಕೃತಿವಿಶೇಷಗಳೆಲ್ಲ ಈ ಚಿದ್ರೂಪವಾದ ಪರಮಾರ್ಥವನ್ನು ಅರಿತುಕೊಳ್ಳುವ ಮತ್ತು ಹೊರಮೂಡಿಸುವ ಪ್ರಯತ್ನಗಳೇ. ಆದ್ದರಿಂದ ಎಲ್ಲಾ ಜನಾಂಗಗಳ ಸಂಸ್ಕೃತಿಗಳ ಕ್ಷೇತ್ರಗಳಿಗೆ ಯಾತ್ರಿಕರಾಗಿ ಹೋಗಿ ಅಲ್ಲಲ್ಲಿರುವ ತೀರ್ಥಗಳಲ್ಲಿ ಮಿಂದು ಆ ನಾರಾಯಣನ ವಿಶ್ವರೂಪಗಳನ್ನು ಸಂದರ್ಶನಮಾಡುವದು ಮಾನವನಿಗೆ ಪರಮಧರ್ಮವಾಗಿರುತ್ತದೆ. ಇಂದು ಜೀವಂತವಾಗಿರುವ ಬಗೆಬಗೆಯ ಮತಗಳ ಮೂಲಗ್ರಂಥಗಳನ್ನೂ ಸಿದ್ಧಾಂತಗಳನ್ನೂ ಸಾಧನಕ್ರಮಗಳನ್ನೂ ಸಹಾನುಭೂತಿಯಿಂದಲೂ ಪೂಜ್ಯಬುದ್ಧಿಯಿಂದಲೂ ಪರಿಶೀಲಿಸುವದೂ ಈ ಎಲ್ಲಾ ಮತಗಳಲ್ಲಿರುವ ಸಾಧಕರ ಹೃದಯವನ್ನು ಪ್ರೇಮದಿಂದ ಮುಟ್ಟುವದಕ್ಕೆ ಪ್ರಯತ್ನಿಸುವದೂ ಸಹಸ್ರಶೀರ್ಷನೂ ಸಹಸ್ರಾಕ್ಷನೂ ಸಹಸ್ರಪಾದನೂ ಆದ ಶ್ರೀಮನ್ನಾರಾಯಣನ ಸೇವೆಯೇ ಸರಿ.

ಮೂರನೆಯದಾಗಿ ಇಲ್ಲಿ ಹೇಳಿರುವ ದೇಹೇಂದ್ರಿಯಗಳು ಬರಿಯ ಮಾನವ ದೇಹೇಂದ್ರಿಯಗಳಲ್ಲ; ಅವು ಸಾಮಾನ್ಯಮಾನವನಿಗಿಂತ ಮೇಲಿನ ಅಂತಸ್ತಿನಲ್ಲಿರುವ ಋಷಿಗಳು, ದೇವತೆಗಳು–ಮುಂತಾದ ಉತ್ತಮಜೀವರುಗಳ ದೇಹೇಂದ್ರಿಯಗಳೂ ಆಗಿರುತ್ತವೆ; ಮಾನವನಿಗಿಂತ ಕಡಿಮೆಯ ಅಂತಸ್ತಿನಲ್ಲಿರುವ ಪಶುಪಕ್ಷಿಮೃಗಾದಿಗಳ ದೇಹೇಂದ್ರಿಯಗಳೂ ಆಗಿರುತ್ತವೆ. ಆದ್ದರಿಂದ ಮಾನವನ ಸಂಸ್ಕೃತಿಯು ಪೂರ್ಣವಾಗುವದಕ್ಕೆ ಮನುಷ್ಯವರ್ಗದಲ್ಲಿ ಸಹಾನುಭೂತಿಯನ್ನು ಸಂಪಾದಿಸುವದೂ ಮನುಷ್ಯರೊಳಗೆಲ್ಲ ಆ ಪರಮಾತ್ಮನು ಇರುವನೆಂಬುದನ್ನು ಮನವರಿಕೆ ಮಾಡಿಕೊಳ್ಳುವದೂ ಸಾಲದು. ಮಾನವನಿಗಿಂತ ಮೇಲುಮಟ್ಟದಲ್ಲಿರುವ ದೇವಾದಿಗಳ ದೇಹೇಂದ್ರಿಯ ಸಂಘಾತಗಳನ್ನು ಶ್ರದ್ಧಾಭಕ್ತಿಗಳಿಂದ ಕಾಣುವದಕ್ಕೆ ಪ್ರಯತ್ನಿಸುವದೂ ಮಾನವನಿಗಿಂತ ಕೆಳಮಟ್ಟದಲ್ಲಿರುವ ಪ್ರಾಣಿಗಳ ದೇಹೇಂದ್ರಿಯಸಂಘಾತಗಳಲ್ಲಿ ಅದೇ ನಾರಾಯಣನ ವಾಸಸ್ಥಾನಗಳನ್ನು ಕಾಣುವದಕ್ಕೆ ಪ್ರಯತ್ನಿಸುವದೂ ಅವಶ್ಯವಾಗುತ್ತದೆ.

**ಹೆಚ್ಚೇಕೆ? ಪರಮಾತ್ಮನು ಪುರುಷನಾಗಿರುತ್ತಾನೆ, ಎಂದರೆ ಪೂರ್ಣನಾಗಿರುತ್ತಾನೆ, ಎಲ್ಲೆಲ್ಲಿಯೂ ತುಂಬಿಕೊಂಡಿರುತ್ತಾನೆ.** ಅವನು ತಲೆ, ಕಣ್ಣು, ಕಾಲು – ಮುಂತಾದ ದೇಹೇಂದ್ರಿಯಗಳಿರುವ ಜಂಗಮಪ್ರಾಣಿಗಳಲ್ಲಿ ಮಾತ್ರವೇ ಅಲ್ಲ, ಬರಿಯ ವೇದನಾಮಾತ್ರವುಳ್ಳ ಸ್ಥಾವರಪ್ರಾಣಿಗಳಲ್ಲಿಯೂ ಇರುತ್ತಾನೆ. ಇಷ್ಟೆ ಅಲ್ಲ,

**ಪ್ರಾಣರಹಿತವಾದ ಕಲ್ಲು, ಮಣ್ಣು, ಕಬ್ಬಿಣ–ಮುಂತಾದ ಅಚೇತನವಸ್ತುಗಳಲ್ಲಿಯೂ ತುಂಬಿರುತ್ತಾನೆ.** ಆ ಪರಮಪುರುಷನು ತುಂಬಿಕೊಳ್ಳದೆ ಇರುವ ವಸ್ತುವೆಂಬುದೇ ಇಲ್ಲ; ಎಲ್ಲೆಲ್ಲಿಯೂ ಅವನೇ. ಆದ್ದರಿಂದ ಚೇತನಾಚೇತನಗಳೆಂದು ವಿಂಗಡಿಸಿ ಕೊಂಡು ಕಾಣುತ್ತಿರುವ ಸಮಸ್ತ ಪದಾರ್ಥಗಳೂ ನಿತ್ಯಚೈತನ್ಯಸ್ವರೂಪನಾದ ಆ ಪುರುಷನನ್ನೇ ಅವಲಂಬಿಸಿಕೊಂಡಿವೆ. ಈಗಿನ ವೈಜ್ಞಾನಿಕರು ಹೊರಗಿನ ಅಚೇತನವಸ್ತುಗಳನ್ನೇ ಪರೀಕ್ಷೆಗೆ ವಿಷಯವಾಗಿಟ್ಟುಕೊಂಡು, ಅವುಗಳ ಸ್ವರೂಪವನ್ನು ನಿರ್ಧರಿಸುವದಕ್ಕೆ ಹೊರಟವರಾದರೂ ಅವರಿಗೆ ಈ ಜಗತ್ತೆಲ್ಲವೂ ಪದಾರ್ಥಮ ಯವೆನ್ನುವದಕ್ಕಿಂತ ಶಕ್ತಿಮಯವೆಂದು ತಿಳಿಯುವದೇ ಒಪ್ಪಾಗಿಬಿಟ್ಟಿದೆ! ಆದರೆ ಆ ಶಕ್ತಿಯೂ ಪರಮಾತ್ಮನ ಸ್ವರೂಪವೇ ಆಗಿರುವ ಈ ಚಿಚ್ಛಕ್ತಿಯಿಂದ ವ್ಯಾಪ್ತವೇ ಆಗಿರುತ್ತದೆ ಎಂಬುದನ್ನು ಮನದಂದುಕೊಂಡ ಮಾಹಾತ್ಮರಿಗೆ ಇದೆಲ್ಲವೂ ಆ ಪುರುಷನ ವಿಭೂತಿಮಾತ್ರವೇ ಎಂಬ ನಿಶ್ಚಯವು ಉಂಟಾಗುವದು.

ಪರಮಾತ್ಮನು ಸಕಲ ಚರಾಚರಪ್ರಾಣಿಗಳಲ್ಲಿಯೂ ಸಕಲ ಅಚಿದ್ವಸ್ತು ಗಳಲ್ಲಿಯೂ ವ್ಯಾಪ್ತನಾಗಿರುತ್ತಾನೆ ಎಂಬುದಿಷ್ಟೇ ಅಲ್ಲ. **ಅವನು ಭೂಮಿಯನ್ನು ಎಲ್ಲಾ ಕಡೆಯಿಂದಲೂ ಆವರಿಸಿಕೊಂಡಿರುತ್ತಾನೆ.** ಭೂಮಿ ಎಂದರೆ ನೆಲ, ಭೂಮಂಡಲ – ಎಂಬ ಅರ್ಥವೇ ನಮಗೆ ಆಗುವದು ಬಹಳ. ಆದರೆ ಪುರುಷಸೂಕ್ತದಲ್ಲಿ ಹೇಳಿರುವ ಈ 'ಭೂಮಿ'ಶಬ್ದವು ಇಡಿಯ ಬ್ರಹ್ಮಾಂಡವನ್ನೇ ಹೇಳುತ್ತದೆ. ಭೂಲೋಕವೇ ಅಲ್ಲದೆ ಅದರ ಮೇಲಿರುವ ಉತ್ತಮ ಲೋಕಗಳೂ ಅದರ ಕೆಳಗೆ ಇರುವ ನಿಕೃಷ್ಟಲೋಕಗಳೂ ಈ 'ಭೂಮಿ'ಯಲ್ಲಿಯೇ ಅಡಕವಾಗಿರುತ್ತವೆ. ಯಾವಯಾವದು ಆಗಿದೆಯೋ ಅದೆಲ್ಲವೂ ಭೂಮಿ. ಪರಮಾತ್ಮನಿಂದಲೇ ಈ ಜಗತ್ತೆಲ್ಲವೂ ಆಗಿರುತ್ತದೆ; ಆದ್ದರಿಂದ ಈ ಅರ್ಥದಲ್ಲಿ ಜಗತ್ತೆಲ್ಲವೂ ಭೂಮಿಯೇ. ಪರಮಾತ್ಮನೆಂದರೆ ಜಗತ್ತೆಲ್ಲವನ್ನೂ ತುಂಬಿಕೊಂಡಿರುವ ಪುರುಷನೇ. ಹೀಗಿರುವದರಿಂದ ನಾವು ಈ ಜಗತ್ತೇ ಆತನ ವಿಭೂತಿಯು ಎಂದು ಗೌರವಿಸಬೇಕಾಗಿದೆ. ಹೀಗಿರುವಲ್ಲಿ ಭೂಲೋಕದ ಮೇಲಿರುವ ಮನುಷ್ಯರನ್ನೂ ಪ್ರಾಣಿಗಳನ್ನೂ ಮಾತ್ರ ಸಹಾನುಭೂತಿಯಿಂದಲೂ ಪ್ರೇಮದಿಂದಲೂ ಕಾಣುವದಕ್ಕೆ ಯತ್ನಿಸಬೇಕೆಂದು ಹೇಳುವದು ಈ ದೃಷ್ಟಿಯಿಂದ ಎಷ್ಟು ಅಲ್ಪದ ಮಾತಾಯಿತು!

ಪರಮಾತ್ಮತತ್ತ್ವದ ಪ್ರತಿಪಾದನೆಯನ್ನು ಈ ಋಕ್ಕಿನಲ್ಲಿ ಇನ್ನೂ ಮುಂದಕ್ಕೆ ಒಯ್ದಿರುತ್ತದೆ. ಆ ಪರಮಾತ್ಮನು ಮಾನವರೆಲ್ಲರ ಹೃದಯದೊಳಗೆ ಇದ್ದುಕೊಂಡು,

ಅವರ ಕಾರ್ಯಕರಣಗಳ ಮೂಲಕ ಜ್ಞಾನಶಕ್ತಿ ಕ್ರಿಯಾಶಕ್ತಿಗಳ ವಿಕಾಸವಾಗುವದಕ್ಕೆ ಹಿನ್ನೆಲೆಯಾಗಿರುತ್ತಾನೆ. ಸ್ಥಾವರಜಂಗಮಪ್ರಾಣಿಗಳಲ್ಲಿ ಕಾಣಬರುವ ಚಟುವಟಿಕೆಗಳೂ ವೇದನೆಗಳೂ ವ್ಯವಸ್ಥೆಯಿಂದ ಆಗುತ್ತಿರುವಂತೆ ಅವಕ್ಕೂ ಆಧಾರನಾಗಿರುತ್ತಾನೆ. ಅಚೇತನವಸ್ತುಗಳಲ್ಲಿ ಕಾಣಬರುವ ಶಕ್ತಿಯೂ ಆತನ ಶಕ್ತಿಯ ವಿಲಾಸವೇ ಆಗಿರುತ್ತದೆ. ಭೂಲೋಕವೇ ಅಲ್ಲದೆ ಮಿಕ್ಕ ಲೋಕಗಳಲ್ಲಿಯೂ ಆತನ ಸಾಂನಿಧ್ಯದಿಂದಲೇ ಜ್ಞಾನಕ್ರಿಯೆಗಳ ವಿಲಾಸವು ಕಾಣಿಸಿಕೊಳ್ಳುತ್ತಿದೆ. ಆದರೆ ಇಷ್ಟೇ ಆತನ ತತ್ತ್ವದ ಗಡಿ ಎಂದು ತಿಳಿಯಬಾರದು. ಆತನು ಈ ಎಲ್ಲಾ ಬ್ರಹ್ಮಾಂಡವನ್ನೂ **ಒಳಗೂ ಹೊರಗೂ ವ್ಯಾಪಿಸಿಕೊಂಡು ತನ್ನ ಲೀಲೆಯನ್ನು ಪ್ರಕಟಿಸುತ್ತಿರುವದಲ್ಲದೆ, ಈ ಬ್ರಹ್ಮಾಂಡವನ್ನೂ ಮೀರಿ ಹತ್ತಂಗುಲವಿರುತ್ತಾನೆ!** ಇಲ್ಲಿ ಹತ್ತಂಗುಲವೆಂಬುದು ಗಣಿತದ ಅಳತೆಯಲ್ಲ; ಏಕೆಂದರೆ ದೂರದ ಅಳತೆಯೆಂಬುದೂ ಬ್ರಹ್ಮಾಂಡದೊಳಗೇ ಇರತಕ್ಕದ್ದು. ಆದ್ದರಿಂದ ಆತನು ಬ್ರಹ್ಮಾಂಡದಲ್ಲಿ ಮಾತ್ರ ತನ್ನ ಸರ್ವಜ್ಞಸ್ವಭಾವವನ್ನೂ ಸರ್ವಶಕ್ತಿಯ ಪ್ರಸಾರವನ್ನೂ ಮಾಡುತ್ತಿರುವದಲ್ಲದೆ, **ಇಂಥದ್ದೆಂದು ಹೇಳುವದಕ್ಕಾಗದ ಸ್ವರೂಪದಿಂದ ವ್ಯಾವಹಾರಿಕಪ್ರಪಂಚವನ್ನೆಲ್ಲ ಮೀರಿ ತನ್ನ ಮಹಿಮೆಯಲ್ಲಿ ತಾನು ಇದ್ದುಕೊಂಡಿರುತ್ತಾನೆ. ಅಂಥ ನಿರುಪಾಖ್ಯವಾದ ಸ್ವರೂಪವೇ ಆ ಪರಮಾತ್ಮನ ತತ್ತ್ವವು.** ಅದನ್ನು ಆಂತರಿಕವಾದ ಸ್ವಾನುಭವದಿಂದ ಕಂಡುಕೊಳ್ಳುವದೇ ಮಾನವ ಸಂಸ್ಕೃತಿಯ ತುಟ್ಟತುದಿ.

★ ಪರಮಾತ್ಮನೆಂಬ ತತ್ತ್ವವೊಂದುಂಟು. ಅದೇ ನಮ್ಮೆಲ್ಲರ ಹೃದಯ ದೊಳಗೆ ಇದ್ದುಕೊಂಡು ನಾನು, ನಾನು– ಎಂದು ನಾವುಗಳು ಕರೆದು ಕೊಳ್ಳುತ್ತಿರುವದರ ತಿರುಳಾಗಿರುತ್ತದೆ. ಅದು ಸಕಲಚರಾಚರಪ್ರಾಣಿಗಳಲ್ಲಿಯೂ ಇದ್ದುಕೊಂಡು ಅವರಲ್ಲಿ ಬಗೆಬಗೆಯ ಜ್ಞಾನಶಕ್ತಿಕ್ರಿಯಾಶಕ್ತಿಗಳು ವಿಕಾಸವಾಗುವದಕ್ಕೆ ಆಧಾರವಾಗಿರುವ ಮೂಲವಾಗಿರುತ್ತದೆ. ಚೇತನಾಚೇತನರೂಪವಾಗಿ ತೋರಿಕೊಳ್ಳುತ್ತಿರುವ ವಸ್ತುಗಳಲ್ಲಿ ತೋರಿಬರುವ ಚಟುವಟಿಕೆಗಳೆಲ್ಲ ಆ ತತ್ತ್ವದ ಶಕ್ತಿಯ ವಿಭೂತಿಗಳೇ ಆಗಿರುತ್ತವೆ. ಆ ತತ್ತ್ವವು ಇಡಿಯ ಬ್ರಹ್ಮಾಂಡವನ್ನು ಒಳಗೂ ಹೊರಗೂ ವ್ಯಾಪಿಸಿಕೊಂಡೂ ಇದೆ; ಇದನ್ನು ಮೀರಿ ತನ್ನ ನಿರುಪಾಖ್ಯಸ್ವರೂಪದಲ್ಲಿಯೂ ಇರುತ್ತದೆ. ಅದನ್ನು ಸ್ವಾನುಭವದಿಂದ ಅರಿತುಕೊಳ್ಳುವದೇ ಮಾನವಸಂಸ್ಕೃತಿಯ ಗುರಿ. ಇದನ್ನು ನಾವು ಮೊದಲು ಮನದಟ್ಟುಮಾಡಿಕೊಳ್ಳಬೇಕು.

★ ಅಕ್ಟೋಬರ್ 1954, ಸಂಪುಟ 24, ಪುಟ 25–32

ಈ ವಿಷಯವನ್ನು ನಾವು ಅನುಭವದಿಂದ ಮನಗಂಡರೆ, ಅಥವಾ ಅದಾಗದಿದ್ದರೂ ಈ ಭಾವನೆಯಿಂದ ನಮ್ಮ ಅಂತಃಕರಣವನ್ನು ಊಡಿಸಿಕೊಂಡರೆ, ನಮ್ಮೊಳಗೆ, ನಮ್ಮ ಹೊರಗೆ; ನಮ್ಮ ಮೇಲೆ, ನಮ್ಮ ಕೆಳಗೆ; ನಮ್ಮ ಎಡಕ್ಕೆ, ನಮ್ಮ ಬಲಕ್ಕೆ; ನಮ್ಮ ಮುಂದಕ್ಕೆ, ನಮ್ಮ ಹಿಂದಕ್ಕೆ; – ಕಾಣಿಸುತ್ತಿರುವದೆಲ್ಲವೂ ಕೇಳಿಸುತ್ತಿರುವದೆಲ್ಲವೂ ಮನಸ್ಸಿಗೆ ತಾಕುತ್ತಿರುವದೆಲ್ಲವೂ ಆ ಪರಮಾತ್ಮನ ಮಹಿಮೆಯ ವಿಸ್ತಾರವೇ ಎಂಬುದು ಸ್ಫುಟವಾಗುವದು. ಯಾವ ಮಾನವರೂ ಯಾವ ಪ್ರಾಣಿಗಳೂ ನಮಗೆ ಹೊರಬ್ಬಾಗಿ, ನಮ್ಮ ಪ್ರತಿಕೂಲರಾಗಿಲ್ಲ ಎಂಬುದು ಮನದಲ್ಲಿ ಮಿಂಚುವದು. ನಮಗೆ ಅರಿಯದಂತೆ ಇರಬಹುದಾದ ಅದೃಶ್ಯದೇವತೆಗಳೇ ಮುಂತಾದ ಶಕ್ತಿವಿಶೇಷಗಳು ಅದೇ ಪರಮಾತ್ಮನ ವಿಭೂತಿಗಳಾಗಿರುವದರಿಂದ ಇಡಿಯ ಜಗತ್ತೇ ನಮಗೆ ಹೊಂದಿಕೊಂಡಿರುವ ಏಕರಸವಾದ ತೋರಿಕೆ ಎಂಬ ನಂಬಿಕೆಯು ಗಟ್ಟಿಯಾಗುವದು.

ಇಡಿಯ ಬ್ರಹ್ಮಾಂಡವೆಲ್ಲವನ್ನೂ ಒಂದೇ ಆಕಾಶವು ತುಂಬಿಕೊಂಡಿರುವದು. ಆ ಆಕಾಶವು ಖಂಡವಾಗಿರುವದಿಲ್ಲ; ನನಗೊಂದು ತುಂಡು, ನಿನಗೊಂದು ತುಂಡು, ಅವನಿಗೊಂದು ತುಂಡು ಹೀಗೆ ಆಕಾಶವು ತುಂಡುತುಂಡಾಗಿ ವಿಭಾಗಿಸಿ ಕೊಂಡಿರುವದಿಲ್ಲ. ಅದು ನಿರಂತರವಾಗಿರುತ್ತದೆ. ವ್ಯಕ್ತಿಗಳಾಗಿ ತೋರುವ ಪದಾರ್ಥಗಳನ್ನೂ ಪ್ರಾಣಿಗಳನ್ನೂ ಮನುಷ್ಯರನ್ನೂ ಮತ್ತೆಲ್ಲವನ್ನೂ ಕೂಡಿಸಿಯೇ ಇದ್ದುಕೊಂಡಿದೆ. ಇವೆಲ್ಲವೂ ಆ ಪರಮಾತ್ಮನ ತೋರಿಕೊಳ್ಳುವ ಪ್ರಕಾರವೇ ಆಗಿರುತ್ತವೆ.

ಇಷ್ಟನ್ನು ನಾವು ಮನಗಂಡರೆ ಸಾಕು, ಆಗ ಸ್ಥಲಸಂಕೋಚದಿಂದ ಆಗಿರುವ ಅಂಜಿಕೆ, ಸ್ಥಲವಿಸ್ತಾರಕ್ಕಾಗಿ ಉಂಟಾಗುವ ರಾಗದ್ವೇಷಗಳು– ಎಲ್ಲವೂ ಮಾಯವಾಗುವವು. ಈಗಿನ ಕಾಲಕ್ಕೆ ಜನರಿಗೆ ಭೂಗೋಳಶಾಸ್ತ್ರವು ಒಂದು ತಪ್ಪು ಕಲ್ಪನೆಯನ್ನು ಮಾಡಿಕೊಡುತ್ತಿದೆ. ನಮ್ಮ ಭೂಮಿಯು ಆಕಾಶದಲ್ಲಿ ಒಂದು ಕಡೆ ಇದ್ದುಕೊಂಡಿದೆ; ಅದಕ್ಕೆ ಹತ್ತಿರವಾಗಿ ಅಥವಾ ದೂರವಾಗಿ ಅನೇಕ ಗ್ರಹಗಳು ಇರುತ್ತಿರುವವು. ಈ ಭೂಮಿಯು ಬಗೆಬಗೆಯ ನದಿಗಳಿಂದ, ಬೆಟ್ಟಗಳಿಂದ ಅಥವಾ ಸಾಗರಗಳಿಂದ ಖಂಡಖಂಡವಾಗಿ ಒಡೆದುಕೊಂಡಿರುವದು. ಒಂದೊಂದು ಖಂಡವೂ ಹಲವು ದೇಶಗಳಾಗಿ ಪ್ರವಿಭಕ್ತವಾಗಿರುತ್ತದೆ. ಈ ದೇಶಗಳಲ್ಲಿರುವ ಜನರು ಬೇರೆಬೇರೆಯ ಕುಲದವರು, ಬೇರೆಬೇರೆಯ ಬಣ್ಣದವರು, ಬೇರೆಬೇರೆಯ ಜಾತಿಯವರು, ಬೇರೆಬೇರೆ ಲಿಂಗದವರು, ಬೇರೆಬೇರೆಯ ಜನಾಂಗಗಳಿಗೆ

ಸೇರಿದವರು; ಬೇರೆಬೇರೆಯ ಭಾಷೆಯನ್ನಾಡುತ್ತಾ, ಬೇರೆಬೇರೆಯ ಆಹಾರವನ್ನು ಸವಿಯುತ್ತಾ, ಬೇರೆಬೇರೆಯ ಆಚಾರಗಳನ್ನು ಅನುಸರಿಸುತ್ತಾ, ಬೇರೆಬೇರೆಯ ಸಾಮಾಜಿಕ, ರಾಜಕೀಯ ಕಟ್ಟುಪಾಡುಗಳಿಗೆ ಸಿಕ್ಕಿರುವವರು, ಬೇರೆಬೇರೆಯ ಮತದವರಾಗಿರುತ್ತಾರೆ. ಈ ದೇಶವು ನಮ್ಮದು, ಆ ದೇಶವು ಪರಕೀಯರದು; ಪರದೇಶದವರು ನಮ್ಮ ದೇಶಕ್ಕೆ ಬಂದು ತಳವೂರಿರುತ್ತಾರೆ, ನಮ್ಮ ದೇಶದವರಿಗೆ ಸ್ಥಲವು ಸಾಲದಿದ್ದರೂ ಆ ದೇಶದಲ್ಲಿ ಅವಕಾಶವನ್ನು ಕೊಡದೆ ಇರುತ್ತಾರೆ. ನಮಗೆ ಅನ್ನವು ಸಾಲದು, ಅವರು ಕಳುಹಿಸರು; ಅವರಿಗೆ ಬಟ್ಟೆಯು ಸಾಲದೆ ಇದೆ, ನಾವೇಕೆ ಕಳುಹಿಸಬೇಕು? ಇಂಥ ಕ್ಷುದ್ರಭಾವನೆಗಳಿಗೆಲ್ಲ ಮೂಲವಾಗಿರುವ ತಪ್ಪುತಿಳಿವಳಿಕೆ ಯಾವದು? ಆಕಾಶವು ತುಂಡುತುಂಡಾಗಿದೆ. ಆ ತುಂಡುಗಳು ವ್ಯಕ್ತಿಯಗಳಿಗೂ, ಜನಾಂಗಗಳಿಗೂ, ಮನುಷ್ಯರಿಗೂ ಪ್ರಾಣಿಗಳಿಗೂ ದೇವಾದಿಗಳಿಗೂ ಬೇರೆಬೇರೆಯಾಗಿವೆ- ಎಂಬ ಭಾವನೆಯಲ್ಲವೆ? ಈ ಅವಿದ್ಯೆಯನ್ನು ಹೊಡೆದೋಡಿಸುವ ವಿದ್ಯೆ ಯಾವದು? ಎಲ್ಲೆಲ್ಲಿಯೂ ಪರಮಾತ್ಮನೊಬ್ಬನೇ ವ್ಯಾಪಿಸಿಕೊಂಡಿರುತ್ತಾನೆ. ಆ ಪರಮಾತ್ಮನಿಗೆ ಯಾವದೊಂದೂ ಹೊರಚ್ಚಾಗಿಲ್ಲ ಎಂಬ ತಿಳಿವಳಿಕೆಯೇ ಅಲ್ಲವೆ?

ಇಷ್ಟೇ ಅಲ್ಲ, ಆ ಪರಮಾತ್ಮನು ಬರಿ ಆಕಾಶದ ಆಧಾರದಿಂದಲೇ ಇರುವದಿಲ್ಲ. ಆಕಾಶವೆಂಬುದೇ ಆತನ ಆಧಾರದಿಂದ ತೋರಿಕೊಳ್ಳುತ್ತಿದೆ. ಆಕಾಶಕ್ಕೂ ಹಿನ್ನೆಲೆಯಾಗಿ ಎಲ್ಲವನ್ನೂ ವ್ಯಾಪಿಸಿಕೊಂಡಿರುವವನು, ಅವನು. ಅವನೇ ನಮ್ಮೆಲ್ಲರ ಆತ್ಮನು. ಹೀಗಿರುವಲ್ಲಿ ಒಬ್ಬರನ್ನೊಬ್ಬರು ಬೇರೆಯೆಂದು ಎಣಿಸುವದಕ್ಕೆ ಎಡೆಯೆಲ್ಲಿದೆ?

ಇದಿಷ್ಟೂ ದೇಶವಿಭಾಗವನ್ನು ಅಳಿಸುವ ತಿಳಿವಳಿಕೆಯಾಯಿತು. ಪುರುಷಸೂಕ್ತದ ಒಂದನೆಯ ಮಂತ್ರದಲ್ಲಿ ಈ ತಿಳಿವಳಿಕೆಯು ಅಡಕವಾಗಿರುತ್ತದೆ.

* * * * *

## 3. ಕಾಲಾಕಾಶಾತೀತನು, ಅಮೃತದೊಡೆಯನು

ಇನ್ನು ಮುಂದಿನ ಮಂತ್ರದ ಅರ್ಥವನ್ನು ಮನಸ್ಸಿನಲ್ಲಿ ಹೊರಳಾಡಿಸೋಣ.

**ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್ ।**

**ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥2॥**

**ಇದೆಲ್ಲವೂ ಪುರುಷನೇ; ಯಾವದು ಭೂತವೋ ಯಾವದು ಭವಿಷ್ಯತ್ತೋ ಅದೆಲ್ಲವೂ ಪುರುಷನೇ. ಮತ್ತು ಅವನು ಅಮೃತತ್ವಕ್ಕೂ ಕಾರಣನಾಗಿರುತ್ತಾನೆ; ಏಕೆಂದರೆ ಪ್ರಾಣಿಗಳ ಅನ್ನನಿಮಿತ್ತದಿಂದ ಮರೆಯಾಗದೆ ಕಾಣಿಸಿಕೊಳ್ಳುತ್ತಿದ್ದಾನೆ.**

ಆ ಪರಮಾತ್ಮನು, **ಪುರುಷನು,** ಎಲ್ಲವನ್ನೂ ತುಂಬಿಕೊಂಡಿರುವನು. ಇದೆಲ್ಲವೂ ಪುರುಷನೇ, ಇದೆಲ್ಲವನ್ನೂ ಆತನೇ ತುಂಬಿಕೊಂಡಿರುತ್ತಾನೆ. ಇದೆಲ್ಲವೂ ಎಂದರೆ ಯಾವಯಾವದನ್ನು ಗ್ರಹಿಸಬೇಕೆಂಬುದನ್ನು ಆಗಲೇ ಹೇಳಿದ್ದಾಗಿದೆ. ನಮ್ಮ ಒಳಗೂ ಸುತ್ತಮುತ್ತಲೂ ಎಲ್ಲೆಲ್ಲಿಯೂ ಇರುವದೆಲ್ಲವೂ ಇದು ಎನ್ನುವದಕ್ಕೆ ಅರ್ಹವಾಗಿರುತ್ತದೆ; ಪರಮಾತ್ಮನು ಇದೆಲ್ಲವನ್ನೂ ತುಂಬಿಕೊಂಡಿರುವದರಿಂದ ಪುರುಷನೆನಿಸಿ ಕೊಂಡಿರುತ್ತಾನೆ. ಆದರೆ ಇದು ಎಂಬ ಮಾತು ನಮ್ಮೆದುರಿಗೆ ಈಗ ಇರುವದು ಎಂಬರ್ಥವನ್ನು ತಿಳಿಯಿಸುವದರಿಂದ ಪರಮಾತ್ಮನು ವರ್ತಮಾನದಲ್ಲಿರುವದೆಲ್ಲವನ್ನೂ ತುಂಬಿಕೊಂಡಿರುವನೆಂದು ಯಾರಾದರೂ ಆತನ ಮಹಿಮೆಗೆ ಸಂಕುಚಿತಸ್ವಭಾವವನ್ನು ಕಲ್ಪಿಸಿಯಾರೆಂದು ಈ ಮಂತ್ರದಲ್ಲಿ **ಭೂತ, ಭವಿಷ್ಯತ್, ವರ್ತಮಾನ–ಯಾವ ಕಾಲವೇ ಆಗಲಿ, ಅದೆಲ್ಲವನ್ನೂ ಮತ್ತು ಆ ಕಾಲದಲ್ಲಿ ತೋರಿಕೊಳ್ಳುವದೆಲ್ಲವನ್ನೂ ಈ ಪುರುಷನು ತುಂಬಿಕೊಂಡಿರುತ್ತಾನೆ** ಎಂದು ಬಾಯಿಬಿಟ್ಟು ಹೇಳಿರುತ್ತದೆ.

ಆಕಾಶವು ಹೇಗೆ ಇರುವದೆಲ್ಲವನ್ನೂ ತುಂಬಿಕೊಂಡಿರುವದೋ ಹಾಗೆ ಕಾಲವೂ ಜಗತ್ತಿನಲ್ಲಿ ತೋರುವದಕ್ಕೆಲ್ಲಕ್ಕೂ ಆಧಾರವಾಗಿರುತ್ತದೆ. ಜಗತ್ತಿನಲ್ಲಿ ಯಾವದು ತೋರಿಕೊಂಡರೂ ಅದು ಒಂದು ಕಾಲದಲ್ಲಿ ತೋರಿಕೊಳ್ಳುತ್ತದೆ; ಸ್ವಲ್ಪಕಾಲದವರೆಗೆ ಇದ್ದು ಬಳಿಕ ಮೈಗರೆಯುತ್ತದೆ. ಆದರೆ ಕಾಲವು ಮಾತ್ರ ಎಲ್ಲಕ್ಕೂ ಆಧಾರವಾಗಿ ಇದ್ದುಕೊಂಡೇ ಇರುತ್ತದೆ. ಇದರಲ್ಲಿ ಭೂತ, ಭವಿಷ್ಯ, ವರ್ತಮಾನ– ಎಂಬ ಭಾಗಗಳಿರುವಂತೆ ಕಾಣಿಸುತ್ತಿರುತ್ತದೆ. ಆದರೆ ಸರಿಯಾಗಿ ನೋಡಿದರೆ ಕಾಲವೂ ಆಕಾಶದಂತೆ ಅಖಂಡವಾಗಿಯೇ ಇರುತ್ತದೆ. ನನಗೊಂದು ಕಾಲ, ನಿನಗೊಂದು ಕಾಲ, ಅವನಿಗೊಂದು ಕಾಲ– ಎಂದು ಅದು

ತುಂಡಾಗಿರುವದಿಲ್ಲ. ಅದು ನಿಜವಾಗಿ ನಿರಂತರವಾಗಿಯೇ ಇರುತ್ತದೆ. ಅದು ಈಗ ಎಂದು ತೋರುವ, ಆಗ ಎಂದು ತೋರುವ, ಮುಂದೆ ಎಂದು ತೋರುವ ಪದಾರ್ಥಗಳು ಪ್ರಾಣಿಗಳು, ಮನುಷ್ಯರು–ಮುಂತಾದದ್ದೆಲ್ಲಕ್ಕೂ ಒಂದೇ ಆಗಿದ್ದು ಎಲ್ಲವನ್ನೂ ಕೂಡಿಸಿಕೊಂಡೇ ಇರುತ್ತದೆ.

ಇಷ್ಟನ್ನು ನಾವು ಮನದಂದುಕೊಂಡರೆ ಕಾಲಸಂಕೋಚದಿಂದ ಆಗಿರುವ ಸಂಕುಚಿತಭಾವನೆಗಳು ಮಾಯವಾಗುವವು. ಆಗ ಹಾಗಿತ್ತು, ಈಗ ಹೀಗಿದೆ, ಮುಂದೆ ಹಾಗಾಗುವದು– ಎಂಬ ಭ್ರಾಂತಿಯು ಹರಿದು ಹೋಗುವದು. ನಮಗೆ ಇತಿಹಾಸವು ಒಂದು ತಪ್ಪುಕಲ್ಪನೆಯನ್ನು ಮಾಡಿಕೊಡುತ್ತದೆ; ಈಗಿನ ನಮ್ಮ ಭೂಮಿಯು ಒಂದಾನೊಂದು ಕಾಲದಲ್ಲಿದ್ದುಕೊಂಡಿದೆ; ಅದರಲ್ಲಿರುವ ನಾವೂ ಒಂದು ಕಾಲಕ್ಕೆ ಕಟ್ಟುಬಿದ್ದಿರುತ್ತೇವೆ. ಈ ಭೂಮಿಯ ಮೇಲಿರುವ ಪ್ರಾಣಿಗಳೂ ಮನುಷ್ಯರೂ ಒಂದಾನೊಂದು ಕಾಲದಲ್ಲಿ ಕಾಣಿಸಿಕೊಂಡರು; ಅವರು ಹಿಂದೆ ಹಾಗಿರಲಿಲ್ಲ. ಮಾನವನು ಕಾಲದ ನಿಯಮಗಳಿಗೆ ಕಟ್ಟುಬಿದ್ದು ಬೆಳವಣಿಗೆಯನ್ನು ಹೊಂದಿ ಅನೇಕ ಅನುಭವಗಳನ್ನು ಪಡೆದುಕೊಂಡು ಇದ್ದುಕೊಂಡಿರುವದಕ್ಕೆ ಹೆಣಗಾಡುತ್ತಾ ಯೋಗ್ಯರಾದವರೇ ಉಳಿದುಕೊಳ್ಳುವರೆಂಬ ನಿಯಮಕ್ಕನುಗುಣವಾಗಿ ಈಗಿನ ಸ್ಥಿತಿಯಲ್ಲಿ ಉಳಿದುಕೊಂಡಿರುತ್ತಾನೆ. ಮಾನವಕುಲದವರ ಬಗೆಬಗೆಯ ಇತಿಹಾಸವು ಬಗೆಬಗೆಯಾಗಿರುತ್ತದೆ; ಆದ್ದರಿಂದ ನಮ್ಮೆಲ್ಲರ ಸಂಸ್ಕೃತಿಯೂ ಒಂದೇ ಮಟ್ಟದಲ್ಲಿರಲಾರದು, ಇವುಗಳಿಗೆಲ್ಲ ಒಂದೇ ಸಮಾನಾಶ್ರಯವು ಇರಲಾರದು. ಕಾಲಪ್ರವಾಹಕ್ಕೆ ಸಿಕ್ಕಿಬಿದ್ದು ಕೊಚ್ಚಿಕೊಂಡು ಹೋಗುತ್ತಿರುವ ನಾವು ಮುಂದುಮುಂದಕ್ಕೆ ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ತಕ್ಕಂತೆ ಹೊಡೆದಾಡಿ ಉಳಿಯಬೇಕಾಗಿದೆ, ಮನುಷ್ಯನ ನಾಗರಿಕತೆಯು ಎಷ್ಟೋ ಕಾಲದಿಂದ ರೂಪಿಸಿಕೊಂಡು ಬಂದಿದೆ. ವಿಜ್ಞಾನಶಾಸ್ತ್ರದ ಬಲದಿಂದ ಪ್ರಕೃತಿಯನ್ನು ಜಯಿಸಿ ಮನುಷ್ಯನು ಆಳುತ್ತಿದ್ದಾನೆ. ಮುಂದೆ ಅಭಿವೃದ್ಧಿಯಾಗಬೇಕಾದರೆ ಕೆಲವು ಯೋಜನೆಗಳನ್ನು ಮಾಡಿಕೊಳ್ಳುವದು ಅವಶ್ಯವು. ಮಾನವರು ಬೇರೆಬೇರೆಯ ಕಾಲಮಾನದಲ್ಲಿ ಏರ್ಪಡಿಸಿಕೊಂಡಿರುವ ನಾಗರಿಕತೆಗಳು ಬೇರೆಬೇರೆಯ ಮಟ್ಟದಲ್ಲಿರುವದರಿಂದ ಒಬ್ಬರನ್ನೊಬ್ಬರು ಹತ್ತಬಡಿದೇ ಉಳಿಯಬೇಕಾಗಿದೆ. ಮಾನವನ ಇತಿಹಾಸವೆಂಬುದು ಸಾಮಾಜಿಕ ಮತ್ತು ರಾಜಕೀಯದ ಸುಧಾರಣೆಗಳ ಕಥೆಯೇ ಆಗಿರುತ್ತದೆ. ಜಗತ್ತಿನಲ್ಲಿ ಮಾನವರು ತಮ್ಮತಮ್ಮ ನಾಗರಿಕತೆಗೂ ಬಾಳುವೆಯ ಗುರಿಗೂ ಹೊಂದುವ ಗುಂಪಿನವರೊಡನೆ ಸಂಧಿಯನ್ನು

ಮಾಡಿಕೊಂಡು ಪ್ರತಿಕೂಲರಾದವರನ್ನು ಯಾವದಾದರೊಂದುಪಾಯದಿಂದ ಸದೆಬಡಿದೇ ಬಾಳಬೇಕಾಗಿದೆ. ಅನ್ನ, ಬಟ್ಟೆ, ಸುಖಸಾಮಗ್ರಿಗಳು, ವಿನೋದೋಪಾಯಗಳು–ಇವುಗಳು ಜನಸಂಖ್ಯೆಯ ಪ್ರಮಾಣಕ್ಕೆ ತಕ್ಕಷ್ಟು ಹೆಚ್ಚದೆ ಇದ್ದರೆ ಮನುಷ್ಯನಿಗೆ ಉಳಿಬಾಳಿಲ್ಲ. ಆದ್ದರಿಂದ ಇಂಥ ಸಾಮಗ್ರಿಗಳನ್ನು ಯಂತ್ರಾದ್ಯುಪಕರಣಗಳಿಂದ ಆದಷ್ಟು ಹೆಚ್ಚಾಗಿ ಬೆಳದುಕೊಂಡು ಅವುಗಳನ್ನು ಮತ್ತೊಬ್ಬರಿಗೂ ಮಾರಿ ಹಣವನ್ನು ಗಳಿಸಿ ಸುಖಜೀವನವನ್ನು ಸಂಪಾದಿಸುವದೇ ಗುರಿ. ಇದಕ್ಕಾಗಿ ಜನಾಂಗಜನಾಂಗಗಳಿಗೆ ದ್ವೇಷವು ಪ್ರಕಾಶವಾಗಿಯೋ ಅಥವಾ ಅಪ್ರಕಾಶವಾಗಿಯೋ ಇದ್ದುಕೊಂಡಿರುವದೇ ಸ್ವಭಾವವು. ಇದನ್ನು ದೇಶಭಕ್ತಿಯ ಸಲುವಾಗಿ ಬೆಳೆಯಿಸಿಕೊಳ್ಳುವದು ತಪ್ಪಲ್ಲ; ರಾಷ್ಟ್ರಕ್ಕಾಗಿ ಶತ್ರುಗಳನ್ನು ಸದೆಬಡಿದಾದರೂ ನಮ್ಮ ಜೀವನವನ್ನು ನೆಮ್ಮದಿಯಾಗಿರಿಸಿಕೊಳ್ಳವದು ಕರ್ತವ್ಯವಾಗಿದೆ. ಇಂಥ ಭಾವನೆಗಳಿಗೆಲ್ಲ ತವರುಮನೆ ಯಾವದು? ಕಾಲವನ್ನು ಖಂಡಖಂಡವಾಗಿ ಒಡೆದು, ಆಗ, ಈಗ, ಮುಂದೆ– ಎಂಬ ಭಾಗಗಳನ್ನು ಶಕೆ, ಸಂವತ್ಸರ, ಮಾಸ, ಪಕ್ಷ, ತಿಥಿ, ಘಳಿಗೆ– ಎಂಬ ಪ್ರವಿಭಾಗಗಳನ್ನು ಮಾಡಿಕೊಂಡಿರುವ ತಿಳಿವಳಿಕೆಯೇ ಆಗಿರುತ್ತದೆ. ಅಲ್ಲವೇ?

ಆದರೆ ನಿಜವೇನು? ಎಲ್ಲಾ ಕಾಲದಲ್ಲಿಯೂ ಇರುವ ಎಲ್ಲಾ ಪ್ರಾಣಿಗಳಲ್ಲಿಯೂ ಎಲ್ಲಾ ಮನುಷ್ಯರಲ್ಲಿಯೂ ಒಬ್ಬ ಪರಮಾತ್ಮನೇ ವ್ಯಾಪಿಸಿಕೊಂಡಿರುತ್ತಾನೆ. ಭೂತಭವಿಷ್ಯದ್ವರ್ತಮಾನಗಳೆಂಬ ಯಾವ ಕಾಲಭಾಗವೂ ಆ ಪರಮಾತ್ಮನಿಗೆ ಹೊರಚ್ಚಾಗಿಲ್ಲ. ಇಷ್ಟೇ ಅಲ್ಲ, ಆ ಪರಮಾತ್ಮನು ಬರಿಯ ಕಾಲದ ಆಧಾರದಿಂದಲೇ ಇರುವದಿಲ್ಲ. ಪರಮಾತ್ಮನು ಕಾಲದಲ್ಲಿರುತ್ತಾನೆ ಎಂಬ ಕಲ್ಪನೆಯೇ ವಿಪರೀತಕಲ್ಪನೆ; ಕಾಲವೆಂಬುದೇ ಆತನ ಆಧಾರದಿಂದ ತೋರಿಕೊಳ್ಳು ತ್ತಿರುತ್ತದೆ. ಕಾಲಕ್ಕೂ ಹಿನ್ನೆಲೆಯಾಗಿ ಎಲ್ಲವನ್ನೂ ವ್ಯಾಪಿಸಿಕೊಂಡಿರುವನು, ಆತನು. ಅವನೇ ನಮ್ಮೆಲ್ಲರ ಆತ್ಮನು.

ಹೀಗಿರುವಲ್ಲಿ ನಾವು ಒಬ್ಬರಿಂದೊಬ್ಬರು ಕಾಲದೃಷ್ಟಿಯಿಂದ ಬೇರೆಯಾದವರು ಎಂದು ಎಣಿಸುವದಕ್ಕೆ ಕಾರಣವೆಲ್ಲಿದೆ? ಆ ಜನರು ಹಳೆಯ ಕಾಲದವರು, ಆದ್ದರಿಂದ ಅವರು ನಾಗರಿಕತೆಯಲ್ಲಿ ಮೇಲಿನ ಮಟ್ಟಕ್ಕೆ ಏರಿರಲಿಲ್ಲ; ನಾವು ಈಗಿನವರು, ಆದ್ದರಿಂದ ನಾಗರಿಕತೆಯಲ್ಲಿ ಮೇಲಿನ ಭೂಮಿಕೆಯಲ್ಲಿದೇವೆ– ಎನ್ನುವ ಒಣಹೆಮ್ಮೆಗಾದರೂ ಅವಕಾಶವೆಲ್ಲಿದೆ? ಕಾಲದಿಂದ ನಾವು ಈಚಿನವರಾದ್ದರಿಂದ ನಾವು ಮುಂದುವರಿದಿರುತ್ತೇವೆ ಎನ್ನುವದಾದರೆ ನಮ್ಮ ಮುಂದಿನ ಪೀಳಿಗೆಯವರು ನಮಗಿಂತಲೂ ಇನ್ನೂ ಮುಂದುವರೆಯುವರೆಂದು

ನಂಬಬೇಕಾಗುವದಷ್ಟೆ? ಅದು ನಿಜವೆ? ಮಾನವನ ಇತಿಹಾಸವನ್ನು ನೋಡಿದರೆ ಅವನು ಎಲ್ಲಾ ಬಗೆಯಿಂದಲೂ ಮುಂದುವರಿಯುತ್ತಲೇ ಬಂದಿರುವನೆಂದು ಇತಿಹಾಸವಾದರೂ ಹೇಳುತ್ತದೆಯೆ?

ಈ ಪ್ರಶ್ನೆಗೆ ನಿಜ, ಹೇಳುತ್ತದೆ– ಎನ್ನುವವರು ಇದಾರೆಂಬುದೂ ನನ್ನ ಅರಿವಿನಲ್ಲಿದೆ. ಮಾನವನಿಗೆ ಮೊದಲು ಅನ್ನ, ಬಟ್ಟೆ ಮುಂತಾದವುಗಳನ್ನು ಒದಗಿಸಿಕೊಳ್ಳುವ ತಿಳಿವಳಿಕೆಯುಕೂಡ ಸಾಕಾದಷ್ಟಿರಲ್ಲಿಲ್ಲ. ಅವನಿಗೆ ಬೆಂಕಿಯ ಅರಿವೇ ಇರಲಿಲ್ಲ. ಭಾಷೆಯು ವ್ಯವಸ್ಥಿತವಾಗಿರಲಿಲ್ಲ. ಸಮಾಜವನ್ನು ವ್ಯವಸ್ಥೆಗೊಳಿಸುವ ಪರಿಯೂ ಅವನಿಗೆ ತಿಳಿಯದು. ಊರು, ಕೇರಿ, ಪಟ್ಟಣ, ರಾಜ್ಯ, ಭಾಷೆ, ಲಿಪಿ, ಮುದ್ರಣ, ಉಗಿಯ ಉಪಯೋಗ, ಯಂತ್ರೋಪಕರಣಗಳು, ಕಷ್ಟವನ್ನು ಕಡಿಮೆಮಾಡುವ ಉಪಾಯಗಳು, ವಿನೋದಕ್ಕೆ ಬೇಕಾದ ಸೌಕರ್ಯಗಳು, ಸಾಹಿತ್ಯಸಂಗೀತಾದಿಕಲೆಗಳು, ಯುದ್ಧಚಾತುರ್ಯ–ಮುಂತಾದವು ಕ್ರಮಕ್ರಮವಾಗಿ ಬೆಳೆಯುತ್ತಾ ಬಂದಿರುವವೆಂಬುದೇ ಮನುಷ್ಯನ ಇತಿಹಾಸವು. ಆದ್ದರಿಂದ ಮಾನವನು ಇನ್ನುಮುಂದೆ ಎಲ್ಲಾ ಬಗೆಯಿಂದಲೂ ಅಭಿವೃದ್ಧಿಯನ್ನು ಹೊಂದಿ ಮುಂದುವರಿಯುವನೆಂದೇ ಹೇಳಬೇಕಾಗಿದೆ. ಜಗತ್ತು ಅವ್ಯಕ್ತಸ್ಥಿತಿಯಿಂದ ವ್ಯಕ್ತವಾಗುತ್ತಲೂ ಬೇರೆಬೇರೆಯ ವಿಕಾಸಭೂಮಿಕೆಗಳನ್ನು ತಾಳುತ್ತಲೂ ಇರುವದು ನಮ್ಮ ಕಣ್ಣ ಮುಂದೆಯೇ ಕಾಣುತ್ತಿದೆ. ಅದು ಇನ್ನೂ ಅಭಿವೃದ್ಧಿಯಾಗಿ ಉತ್ತಮಸ್ಥಿತಿಗೆ ಏರುವದೆಂಬುದಕ್ಕೆ ಸಂಶಯವೇನಿದೆ? – ಎಂಬುದು ಈ ಉತ್ತರೋತ್ತರಾಭಿವೃದ್ಧಿ ವಾದಿಗಳ ಮತವಾಗಿರುತ್ತದೆ.

ಆದರೆ ನಿಷ್ಪಕ್ಷಪಾತದೃಷ್ಟಿಯಿಂದ ನೋಡಿದರೆ, ಈ ಆಶೆಗೆ ಸರಿಯಾದ ತಳಹದಿಯಿಲ್ಲವೆಂದು ಒಪ್ಪಬೇಕಾಗುತ್ತದೆ. ಮನುಷ್ಯನು ಭೌತಿಕಶಾರೀರಕವಿಜ್ಞಾನದಲ್ಲಿ ಬಹಳವುಟ್ಟಿಗೆ ಅಭಿವೃದ್ಧಿಹೊಂದಿರುತ್ತಾನೆಂಬುದು ನಿಜ. ಅವನು ಯಂತ್ರೋಪಕರಣಗಳಿಂದ ಭೌತಿಕಶಾರೀರಕದೃಷ್ಟಿಯ ಐಹಿಕಜೀವನಕ್ಕೆ ಬೇಕಾದ ಸಂಪತ್ತನ್ನು ಹೇರಳವಾಗಿ ಗಳಿಸಿಕೊಂಡಿರುತ್ತಾನೆಂಬುದೂ ನಿಜ. ಆದರೆ ಆ ಸಂಪತ್ತು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಿಲ್ಲ; ಆ ಹಂಚಿಕೆಗೆಂದು ಹಿಂಸಾಪ್ರಧಾನವಾದ ಉಪಾಯಗಳನ್ನು ಕೂಡ ಅವನು ಕೈಕೊಳ್ಳುತ್ತಿದಾನೆ. ಈ ಉಪಾಯಗಳಿಂದ ಎಲ್ಲರಿಗೂ ಸಂಪತ್ತಿನಲ್ಲಿ ಸಮಾನವಾದ ಪಾಲು ಬರುತ್ತದೆ ಎಂದು ಇಟ್ಟುಕೊಂಡರೂ ಜನಸಂಖ್ಯೆಯು ಮತ್ತೂ ಅಭಿವೃದ್ಧಿಯಾಗುವದಿಲ್ಲ ವೆಂದಾಗಲಿ, ಆಗ ಹೆಚ್ಚಿನ ಸಂಖ್ಯೆಯ ಜನರಿಗೆ ಬೇಕಾಗುವ ಸುಖಸಂಪತ್ತುಗಳು

ಸಾಕಾದಷ್ಟು ದೊರೆಯುವವೆಂದಾಗಲಿ ಭರವಸೆಕೊಡುವವರು ಯಾರು ಇದಾರೆ? ಒಂದುವೇಳೆ ಅವು ಸಾಕಾದರೂ ಮನುಷ್ಯನ ಅಭಿವೃದ್ಧಿಗೆ ಅಷ್ಟೇ ಸಾಕಾದೀತೆ? ಮನುಷ್ಯನೆಂದರೆ ಬರಿಯ ದೇಹೇಂದ್ರಿಯಗಳ ಗುಂಪಲ್ಲವಷ್ಟೆ? ಅವನಲ್ಲಿ ಬುದ್ಧಿಶಕ್ತಿಯಿದೆ, ವೇದನೆಗಳಿವೆ, ನೈತಿಕದೃಷ್ಟಿಯಿದೆ, ಧರ್ಮದೃಷ್ಟಿಯೂ ಇದೆ. ಇವುಗಳಲ್ಲೆಲ್ಲ ಹಿಂದಿನವರಿಗಿಂತ ಈಗಿನವರು ಮುಂದುವರಿದಿರುವರೆಂದಾಗಲಿ, ಇನ್ನು ಮುಂದೆಯೂ ಈ ಮಾರ್ಗದಲ್ಲಿಯೇ ಮಾನವನ ಅಭಿವೃದ್ಧಿ ಆಗುವದೆಂದಾಗಲಿ, ಹೇಗೆ ಹೇಳುವದು?

ಆದ್ದರಿಂದ ಈ ತಪ್ಪುತಿಳಿವಳಿಕೆಯನ್ನು ಹಾರಿಸುವ ವಿದ್ಯೆಯೆಂದರೆ ಒಂದೇ ಒಂದು. ಅದು ಯಾವದೆಂದರೆ ಕಾಲವೆಂಬುದು ನಿಜವಾಗಿ ವಿಭಕ್ತವಾಗಿಲ್ಲ; ಬೇರೆಬೇರೆಯ ವಸ್ತುಗಳ ತೋರಿಕೆಯಿಂದ ಕಾಲವೇ ಭೂತಭವಿಷ್ಯದ್ವರ್ತಮಾನಗಳೆಂಬ ಭೇದವನ್ನು ತಳೆಯುತ್ತಿರುವದು. ಅಖಂಡವಾದ ಕಾಲದಲ್ಲಿ ಪ್ರಾಣಿಗಳೆಲ್ಲರೂ ಇರುತ್ತಿರುವರು; ಅವರಲ್ಲೆಲ್ಲ ಒಬ್ಬ ಪರಮಾತ್ಮನೇ ಇರುತ್ತಿರುವನು. ಈ ತಿಳಿವಳಿಕೆಯು ಬೆಳೆಯುವದಕ್ಕೆ ಮಾಡಬೇಕಾದ ಪ್ರಯತ್ನವು ಮನುಷ್ಯನ ಉನ್ನತಿಗೂ ಮಾನವರೆಲ್ಲರ ಐಕ್ಯಭಾವನೆಗೂ ಕಾರಣವಾಗಿರುತ್ತದೆ.

ಪರಮಾತ್ಮನೇ ಜಗತ್ತಿಗೆಲ್ಲ ತಿರುಳಾಗಿರುವನೆಂದೂ ಅವನು ಕಾಲದೇಶಗಳಲ್ಲೆಲ್ಲ ತುಂಬಿದ್ದರೂ ಅವೆರಡನ್ನೂ ಮೀರಿರುವನೆಂದೂ ತಿಳಿಯುವದರಿಂದ ಮತ್ತೊಂದು ಶುಭಸಂದೇಶವು ನಮಗೆ ದೊರಕುವದು. ಅದೇನೆಂದರೆ ನಮ್ಮಗಳ ಆತ್ಮನು ದೇಶಕಾಲಗಳ ಪರಿಚ್ಛೇದ ವಿಲ್ಲದವನು; ಆದ್ದರಿಂದ ಅವನು **ಅಮೃತತ್ವಕ್ಕೆ ಒಡೆಯನು**. ಯಾವಯಾವದು ದೇಶಕಾಲಗಳಲ್ಲಿರುವದೋ ಅದಕ್ಕೆ ಅಳತೆಯ ಜೀವಿತವಿರುತ್ತದೆ. ಅದು ಅಲ್ಪವು, ಮರ್ತ್ಯವು. ನಾವು ಈ ದೇಶದವರು, ಈ ಕಾಲದವರು– ಎಂದು ತಿಳಿಯುವದರಿಂದಲೇ ನಾವು ಮರ್ತ್ಯರೆಂಬ ಭಾವನೆಯು ನಮಗೆ ಗಂಟುಬಿದ್ದಿರುತ್ತದೆ. ನಾವು ಹಿಂದೆ ಇರಲಿಲ್ಲ, ಒಂದು ಕಾಲದಲ್ಲಿ ಹುಟ್ಟಿದೆವು; ಈಗ ಇರುವೆವು, ಕೆಲವು ವರ್ಷಗಳತರುವಾಯ ಸಾಯುವೆವು– ಇದೇ ನಮ್ಮಗಳ ತಿಳಿವಳಿಕೆ. ಈ ತಿಳಿವಳಿಕೆಯಿರುವಲ್ಲಿ ನಮಗೆ ಸೌಂದರ್ಯೋಪಾಸನೆ, ನೀತಿ, ಧರ್ಮ, ತತ್ತ್ವಜ್ಞಾನ– ಮುಂತಾದವುಗಳಲ್ಲಿ ಹೇಗೆ ಅಭಿರುಚಿ ಹುಟ್ಟಬೇಕು? ನಾವು ಇಂದು ಇದ್ದು ನಾಳೆ ಸಾಯುವವರು; ಆದ್ದರಿಂದ ಇಂದು ಉಂಡದ್ದೇ ನಮ್ಮದು– ಎಂಬ ದುಷ್ಟಕಲ್ಪನೆಯು ಮಾನವರನ್ನು ಬಲುಮಟ್ಟಿಗೆ ಹಿಡಿದುಕೊಂಡು

ಬಿಟ್ಟಿದೆ. ಆದ್ದರಿಂದ ಅವರಿಗೆ ನಿತ್ಯಪುರುಷಾರ್ಥಗಳ ದೃಷ್ಟಿಯೇ ಇಲ್ಲದಂತೆ ಆಗಿಬಿಟ್ಟಿದೆ. ನಾವು ಮರ್ತ್ಯವಾದ ಈ ಶರೀರೇಂದ್ರಿಯಗಳ ಸಂಘಾತಮಾತ್ರವಲ್ಲ; ಇದನ್ನು ಮೀರಿರುವ ಅಮೃತಸ್ವರೂಪನಾದ ಪರಮಾತ್ಮನೊಬ್ಬನಿದಾನೆ, ಅವನೇ ನಮ್ಮ ಆತ್ಮನು– ಎಂಬ ತಿಳಿವಳಿಕೆಯು ಪ್ರತ್ಯಾಶೆಯನ್ನೂ, ಸಂತೋಷವನ್ನು, ಉತ್ಸಾಹವನ್ನೂ ಸತ್ಯಾನ್ವೇಷಣೆಯ ಪ್ರಯತ್ನದಲ್ಲಿ ಆದರವನ್ನೂ ಕೊಡುತ್ತದೆ. ಆದ್ದರಿಂದ ಈ ತಿಳಿವಳಿಕೆಯು ನಮ್ಮ ಪರಮಪುರುಷಾರ್ಥಕ್ಕೆ ಕಾರಣವೆಂದಾಗುತ್ತದೆ.

ಪರಮಾತ್ಮನು ಕಾಲದೇಶಗಳ ಸ್ವರೂಪದಲ್ಲಿದ್ದರೂ ಅವನ್ನು ಮೀರಿಸುವನೆನ್ನು ವದು ವ್ಯಾಹತವಲ್ಲವೆ? ಅನುಭವದಲ್ಲಿ ನಾವೆಲ್ಲರೂ ಕಾಲದೇಶಗಳಲ್ಲಿದೇವೆಂದೇ ತೋರುತ್ತಿದೆಯಲ್ಲ! ಹೀಗಿರುವಲ್ಲಿ ಯಾವದೋ ಒಂದು ಮಂತ್ರವಚನದ ಆಧಾರದಮೇಲೆ ನಾವು ಅಮೃತಸ್ವರೂಪರು ಎಂದುಕೊಂಡು, ಸಧ್ಯದ ಜೀವನದ ಪ್ರಯತ್ನವನ್ನು ಕೈಬಿಡಬಹುದೆ? ಕನ್ನಡಿಯೊಳಗಿನ ಗಂಟಿಗಿಂತಲೂ ಕೈಯೊಳಗಿನ ದಂಟೆ ಲೇಸು ಎಂಬ ಗಾದೆಯನ್ನು ಅನುಸರಿಸುವದೇ ಈ ಸಂದರ್ಭದಲ್ಲಿ ಉತ್ತಮವಾಗಿ ಕಾಣುವದಲ್ಲ! ಎಂದು ಕೆಲವರಿಗೆ ತೋರಬಹುದು. ಆದ್ದರಿಂದ ನಾವು ದೇಶಕಾಲಪರಿಚ್ಛಿನ್ನರೆಂಬುದು ನಿಜವಾಗಿಯೂ ಅನುಭವಸಮ್ಮತವೆ? ದೇಶಕಾಲವನ್ನು ಮೀರಿರುವ ಪರಮಾತ್ಮನು ನಮ್ಮ ಆತ್ಮನೆಂಬುದು ಬರಿಯ ಕನ್ನಡಿಯೊಳಗಿನ ಗಂಟೆ?– ಎಂಬುದನ್ನು ಸ್ವಲ್ಪ ಒಳಹೊಕ್ಕು ನೋಡುವದು ಒಳ್ಳೆಯದು. **ಏಕೆಂದರೆ ಯಾವ ತಿಳಿವಳಿಕೆಯು ಸತ್ಯವಾದದ್ದೋ ಅದನ್ನೇ ಜೀವನಸೂತ್ರವಾಗಿ ಮಾಡಿಕೊಳ್ಳುವದು ಯುಕ್ತವಾಗಿರುತ್ತದೆ.** ಇದು ಇಷ್ಟು ಮುಖ್ಯ ವಾಗಿರುವದರಿಂದ ಈ ವಿಚಾರವನ್ನು ಮುಂದೆ ಸ್ವಲ್ಪ ವಿಚಾರಿಸೋಣ.

★ಪರಮಾತ್ಮನು ಸಕಲಪ್ರಾಣಿಗಳ ಆತ್ಮನೇ ಆಗಿರುತ್ತಾನೆ. ಆತನು ಕಾಲಾಕಾಶಗಳ ನಿತ್ಯಸಂಬಂಧವುಳ್ಳ ಇಡಿಯ ವಿಶ್ವವನ್ನೇ ವ್ಯಾಪಿಸಿಕೊಂಡಿರು ತ್ತಾನೆ; ಈ ಕಾಲದೇಶಾತ್ಮಕವಾದ ವಿಶ್ವವನ್ನೂ ಮೀರಿರುವ ಅಮೃತಸ್ವರೂಪನೂ ಆಗಿರುತ್ತಾನೆ. ಆತನು ನಮ್ಮೆಲ್ಲರ ಆತ್ಮನೇ ಆಗಿರುವದರಿಂದ ಆತನ ಸ್ವರೂಪದಿಂದ ನಾವು ಅಮೃತತ್ವಕ್ಕೆ ಒಡೆಯರು, ನಾವು ಮರ್ತ್ಯತ್ವದ ದಾಸರಲ್ಲ. ಹೀಗೆಂಬುದು ವೇದದ ಡಂಗುರವು. ಈ ಶುಭಸಂದೇಶವನ್ನು ಮನಗಂಡವರಿಗೆ ಮಾನವರು ದೇಶಕಾಲವಿಭಕ್ತವಾಗಿರುವ ಬೇರೆಬೇರೆಯ ಪಂಗಡದವರು ಎಂಬ ತಪ್ಪುತಿಳಿವು

---

★ **ನವೆಂಬರ್ 1954, ಸಂಪುಟ 24, – ಪುಟ 57–63**

ಹಾರಿಹೋಗುವದು. ಅವರೆಲ್ಲರಲ್ಲಿಯೂ ಒಂದೇ ಪರಮಾರ್ಥವನ್ನು ಮುಟ್ಟುವ ಪ್ರಯತ್ನರೂಪವಾದ ಸಂಸ್ಕೃತಿವಿಶೇಷಗಳು ಕಾಣಿಸಿಕೊಳ್ಳುತ್ತಿರುವವು; ಆ ಸಂಸ್ಕೃತಿವಿಶೇಷಗಳೆಲ್ಲ ಅಧ್ಯಾತ್ಮಪ್ರಧಾನವಾದ ಸಂಸ್ಕೃತಿಯ ಒಟ್ಟಾಗಿರುತ್ತದೆ- ಎಂಬ ಘನತತ್ತ್ವವು ಮನಸ್ಸಿಗೆ ಹೊಳೆಯುವದು.

ಆದರೆ ಇದೇ ಪರಮಾರ್ಥವೆಂಬುದನ್ನು ನಾವು ನಂಬುವದಕ್ಕೆ ಒಂದು ದೊಡ್ಡ ಅಡಚಣೆಯು ಕಾಣುತ್ತಿರುವದು. ನಾವುಗಳು ಬೇರೆಬೇರೆಯ ಕಾಲದೇಶಗಳಲ್ಲಿಯೇ ಇರುತ್ತಿರುವೆವೆಂಬುದು ಅಬಾಧಿತವೆಂದೇ ನಮಗೆ ಅನುಭವದಲ್ಲಿ ತೋರುತ್ತಿರುವದು. ದೇಶಕಾಲಾತೀತವಾದ ತತ್ತ್ವವೇ ಎಲ್ಲಕ್ಕೂ ಆತ್ಮನಾಗಿದ್ದರೆ ಅದು ದೇಶಕಾಲಗಳ ಅಳತೆಗೆ ಕಟ್ಟುಬಿದ್ದಿರುವ ನಾನಾದೃಶ್ಯಗಳಾಗಿ ಒಡೆದುಕೊಂಡಿರುವದೇಕೆ? ಜಗತ್ತಿನಲ್ಲಿರುವ ಯಾವದೊಂದು ವಸ್ತುವೂ ದೇಶಕಾಲವಸ್ತುಪರಿಚ್ಛೇದವಿಲ್ಲದೆ ಇರಲೇ ಆರದೆಂಬ ಗಟ್ಟಿಯಾದ ನಂಬಿಕೆಯು ನಮ್ಮೆಲ್ಲರ ಅಂತಃಕರಣದಲ್ಲಿಯೂ ಬೇರೂರಿಕೊಂಡುಬಿಟ್ಟಿರುವದಲ್ಲ!

ಈ ಶಂಕೆಗೆ ವೇದದಲ್ಲಿ ಈ ಪರಿಹಾರವನ್ನು ಹೇಳಿರುತ್ತದೆ. ಈ ಅನುಭವವು ಕರ್ತೃಭೋಕ್ತೃದೃಷ್ಟಿಯದು, ಪರಮಾರ್ಥದೃಷ್ಟಿಯದಲ್ಲ. ಪರಮಾತ್ಮನು ದೇಶ ಕಾಲಾತೀತನಾಗಿದ್ದರೂ ನಾನಾರೂಪನಾಗಿರುವಂತೆ, ಕಾಣುವದೇತಕ್ಕೆಂದರೆ **"ಯದನ್ನೇನಾತಿರೋಹತಿ"** ಕರ್ಮಫಲಭೋಗಕ್ಕಾಗಿ ಹೀಗೆ ಕಾಣಿಸಿಕೊಳ್ಳುತ್ತಿದ್ದಾನೆ. ಅಷ್ಟುಮಾತ್ರದಿಂದ ಆತನಿಗೆ ದೇಶಕಾಲಗಳನ್ನು ಮೀರಿರುವ ಶಕ್ತಿಯೇ ಇಲ್ಲವೆಂದು ಭಾವಿಸಬಾರದು.

ಇಲ್ಲಿ ನಾವು ತಿಳಿದುಕೊಳ್ಳಬೇಕಾದ ಒಂದು ವಿಚಾರನಿಯಮವೇನೆಂದರೆ, ದೃಶ್ಯಪ್ರಪಂಚವನ್ನು ನಾವು ಬೇರೆಬೇರೆಯ ಎರಡು ದೃಷ್ಟಿಕೋಣಗಳಿಂದ ನೋಡಬಹುದಾಗಿರುತ್ತದೆ. ಇವುಗಳಲ್ಲಿ ಒಂದು ವ್ಯಾವಹಾರಿಕದೃಷ್ಟಿ; ಇನ್ನೊಂದು ಪರಮಾರ್ಥದೃಷ್ಟಿ. **ವ್ಯಾವಹಾರಿಕದೃಷ್ಟಿ** ಎಂದರೆ ನಮ್ಮ ವ್ಯವಹಾರಕ್ಕೆ- ಶಬ್ದ ಪ್ರತ್ಯಯಗಳು, ಕರ್ಮ ಎಂಬ ರೂಪದ ನಡೆವಳಿಗೆ – ಅನುಕೂಲವಾಗಿರುವ ದೃಷ್ಟಿ. ಯಾವ ವಸ್ತುವನ್ನು ಕಂಡರೂ ಜನರು ಅದನ್ನು ಮಿಕ್ಕದ್ದರಿಂದ ಬೇರ್ಪಡಿಸಿಕೊಂಡು ಅದರ ವಿಷಯದ ಒಂದಾನೊಂದು ಪ್ರತ್ಯಯವನ್ನು ಮಾಡಿಕೊಳ್ಳುವರು; ಎದುರಿಗೆ ವಸ್ತುವಿರಲಿ ಇಲ್ಲದಿರಲಿ, ಕಲ್ಲು, ಮಣ್ಣು, ಮರ, ಗಿಡ, ಮೃಗ, ಪಶು, ಪಕ್ಷಿ, ಮನುಷ್ಯ- ಎಂದು ಮುಂತಾಗಿ ನಮ್ಮ ಅಂತಃಕರಣದಲ್ಲಿ ಗೊತ್ತಾಗಿ ಆಗುತ್ತಿರುವ ಅರಿವಿನ ಆಕಾರವಿಶೇಷಗಳೇ ಪ್ರತ್ಯಯಗಳು. ಜನರು

ತಮ್ಮ ಮನಸ್ಸಿನಲ್ಲಿರುವ ಈ ಪ್ರತ್ಯಯಗಳನ್ನು ಒಂದಕ್ಕೊಂದು ಜೋಡಿಸಿಕೊಂಡೇ ಅಭಿಪ್ರಾಯಗಳನ್ನು ಏರ್ಪಡಿಸಿಕೊಳ್ಳುತ್ತಿರುವರು, ಈ ಅಭಿಪ್ರಾಯಗಳನ್ನು ಹೊರಪಡಿಸುವದಕ್ಕೆ ಶಬ್ದಗಳನ್ನೂ ವಾಕ್ಯಗಳನ್ನೂ ಏರ್ಪಡಿಸಿಕೊಂಡಿರುವರು. ಆಯಾ ಶಬ್ದಗಳು ಒಬ್ಬರ ಬಾಯಿಂದ ಹೊರಟು ಕಿವಿಗೆ ಬಿದ್ದಾಗ ಇನ್ನೊಬ್ಬರು ಇಂಥಿಂಥಪದಾರ್ಥಗಳನ್ನು ಇವರು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತಿರುವರೆಂಬುದನ್ನು ಅರಿತುಕೊಳ್ಳುವರು. ಅನೇಕಶಬ್ದಗಳನ್ನು ಒಂದಾನೊಂದು ಕ್ರಮದಲ್ಲಿ ಜೋಡಿಸಿ ಹೇಳುವಾಗ ವಾಕ್ಯಗಳಾಗುವವು; ಅವುಗಳಿಂದ ಪದಾರ್ಥಗಳ ಅರಿವೇ ಅಲ್ಲದೆ ಯಾವದಾದರೊಂದು ವಿಷಯದಲ್ಲಿ ಮಾತನಾಡಿದವರ ಅಭಿಪ್ರಾಯವೇನೆಂಬ ಅರಿವೂ ಆಗುವದು. ಅಂತೂ ಶಬ್ದಪ್ರತ್ಯಯಗಳ ಮೂಲಕ ಮನುಷ್ಯರು ಒಬ್ಬರೊಡನೊಬ್ಬರು ವ್ಯವಹಾರಿಸುತ್ತಾರೆ. ಹೀಗೆಯೇ ವಸ್ತುಗಳನ್ನು ಕಂಡಾಗಲೂ ಆಯಾ ಪ್ರತ್ಯಯಗಳು ಆಯಾ ವಸ್ತುವಿನ ಗುಣಗಳೇ ಮುಂತಾದವನ್ನು ನೆನಪಿಗೆ ತಂದು, ಇದು ಇಷ್ಟವಾದದ್ದು ಅಥವಾ ಅನಿಷ್ಟವಾದದ್ದು– ಎಂಬ ತಿಳಿವಳಿಕೆಯನ್ನುಂಟುಮಾಡುತ್ತವೆ. ಈ ತಿಳಿವಳಿಕೆಯಿಂದ ಆಯಾ ವಸ್ತುಗಳನ್ನು ಪಡೆಯುವದಕ್ಕೆ ಅಥವಾ ಪರಿಹರಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾರೆ. ಇದೇ ಕರ್ಮರೂಪವಾದ ವ್ಯವಹಾರ. ಹೀಗೆ ಶಬ್ದಪ್ರತ್ಯಯ ಕರ್ಮರೂಪವಾದ ವ್ಯವಹಾರವು ಸಾಗುವದಕ್ಕೆ "ನಾನು ಕರ್ತೃ, ಕಾರಕಸಾಮಗ್ರಿಗಳ ಸಹಾಯದಿಂದ ಕ್ರಿಯೆಯನ್ನು ಮಾಡಿ ಆಯಾ ಫಲವನ್ನು ಪಡೆದುಕೊಳ್ಳುವವನು" ಎಂಬ ತಿಳಿವಳಿಕೆಯು ಆಧಾರವಾಗಿರುತ್ತದೆ. ಈ ತಿಳುವಳಿಕೆಯು ಯಾರೊಬ್ಬರ ಉಪದೇಶದಿಂದಲೂ ಬರತಕ್ಕದ್ದಾಗಿರುದೆ ಸ್ವಾಭಾವಿಕವಾಗಿಯೇ ಮನುಷ್ಯನಲ್ಲಿದ್ದು ಇಂದ್ರಿಯಗಳ ಮೂಲಕವಾಗಿ ಆಗುತ್ತಿರುವ ಅನುಭವದಿಂದ ಬಲಪಡುತ್ತಲೂ ಆ ಅನುಭವಕ್ಕೆ ಸಹಕಾರಿಯಾಗಿರುತ್ತಲೂ ಇರುವದರಿಂದ ಇಂದ್ರಿಯಗಳ ಮೂಲಕ ಆಗುತ್ತಿರುವ ನಡೆನುಡಿಗಳ ಈ ತಿಳಿವಳಿಕೆಯನ್ನು ವೇದಾಂತಿಗಳು 'ವ್ಯಾವಹಾರಿಕದೃಷ್ಟಿಯ ತಿಳಿವಳಿಕೆ' ಎಂದು ಕರೆಯುತ್ತಿರುವರು.

ಸ್ವಾಭಾವಿಕವಾಗಿರುವ ಈ ತಿಳಿವಳಿಕೆಯು ದೇಹೇಂದ್ರಿಯಗಳನ್ನು ನಾನು, ನನ್ನದು ಎಂದು ಭಾವಿಸಿಕೊಂಡಿರುವವರೆಗೂ ಯುಕ್ತವೆಂದೇ ತೋರುತ್ತಿರುವದು. ನಮ್ಮ ಲೌಕಿಕವೈದಿಕವ್ಯವಹಾರಗಳಿಗೆಲ್ಲ ಇದು ಅಡಿಗಟ್ಟಾಗಿಯೇ ಇರುತ್ತಿರುವದು. ಭೌತಿಕ, ಶಾರೀರಕ, ಮಾನಸ– ವ್ಯವಹಾರಕ್ಕೆಲ್ಲ ಇದು ಆಧಾರಸ್ತಂಭವಾಗಿರುತ್ತದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಮನುಷ್ಯನು ತನ್ನ ಬೆಳೆಯುತ್ತಿರುವ

ಅನುಭವವನ್ನು ಕ್ರಮಪಡಿಸಿ ಮಾಡಿಕೊಂಡಿರುವ ಶಾಸ್ತ್ರಗಳಿಗೂ ಈ ತಿಳಿವಳಿಕೆಯೇ ಅಡಿಗಟ್ಟು. ಆ ಶಾಸ್ತ್ರಗಳ ತಿಳಿವಳಿಕೆಯು ಅಷ್ಟರಮಟ್ಟಿಗೆ ವಿದ್ಯೆಯೇ, ಸರಿಯಾದ ತಿಳವಳಿಕೆಯೇ ಆಗಿದ್ದರೂ ಪರಮಾರ್ಥನಿರ್ಣಯಕ್ಕೆ ಸಾಲದೆ ಇದೆ. ಮನುಷ್ಯನು ಬರಿಯ ಶರೀರೇಂದ್ರಿಯಗಳ ಗುಂಪು ಎಂಬದೊಂದು ನಂಬಿಕೆಯೇ ಹೊರತು ಅದಕ್ಕೆ ಪ್ರಮಾಣವೇನೂ ಇಲ್ಲ; ಈ ಶರೀರೇಂದ್ರಿಯಗಳ ಗುಂಪು ಮಾರ್ಪಡುತ್ತಲೇ ಇರುತ್ತದೆ. ಆದರೂ ನಾನು, ನಾನು– ಎಂದು ನಮ್ಮಲ್ಲಿ ಪ್ರತಿಯೊಬ್ಬನೂ ವ್ಯವಹರಿಸುತ್ತಿದ್ದಾನೆ. ಈ ನಾನು ಯಾವದು? ಇದನ್ನು ತಿಳಿಯಬೇಕು. ನಮ್ಮ ಪರಮಾರ್ಥಸ್ವರೂಪಕ್ಕೂ ಈ ಶರೀರೇಂದ್ರಿಯಸಂಘಾತಕ್ಕೂ ಇರುವ ಸಂಬಂಧವನ್ನು ತಿಳಿದುಕೊಳ್ಳಬೇಕು. ಆಗ ನಮ್ಮ ತಿಳಿವಳಿಕೆಯು ಪೂರ್ಣವಾಗುವದು. ಅದೇ ನಿಜವಾದ ವಿದ್ಯೆ, ಆ ದೃಷ್ಟಿಯಿಂದ ನಮ್ಮ ವ್ಯಾವಹಾರಿಕವಾದ ವಿದ್ಯೆಯೂ ಅವಿದ್ಯೆಯೇ.

ಪರಮಾರ್ಥವು ನಿಜವಾಗಿಯೂ ಕಾಲದೇಶಗಳನ್ನು ಮೀರಿರುವದಾದರೂ ಕಾಲದೇಶಗಳಲ್ಲಿಯೇ, ಅಥವಾ ಕಾಲದೇಶಗಳಿಗೆ ಸಹಸಂಬದ್ಧವಾಗಿಯೇ, ಇರುವದೆಂದು ನಮಗೆ ಅನುಭವದಲ್ಲಿ ತೋರುವದೇಕೆ? – ಎಂಬ ಪ್ರಶ್ನೆಗೆ ವೇದವು ಯಾವ ಉತ್ತರವನ್ನು ಹೇಳಿದೆ ಎಂಬುದನ್ನು ಈಗ ನಾವು ಸ್ವಲ್ಪಮಟ್ಟಿಗೆ ಮನದಂದುಕೊಳ್ಳಬಹುದು. ವೇದವು ಎಂದರೆ ವಿದ್ಯೆಯನ್ನು, ಸರಿಯಾದ ತಿಳಿವಳಿಕೆಯನ್ನು, ಕೊಡುವ ಸಾಧನವು. ನಮ್ಮ ಅವಿದ್ಯೆಯ ತಿಳಿವಿಗೆ ದೇಶಕಾಲಗಳೂ ನಾನಾತ್ವವೂ ಕಂಡಮಾತ್ರಕ್ಕೆ ವಿದ್ಯೆಯ ದೃಷ್ಟಿಯಿಂದ ನೋಡಿದಾಗಲೂ ನಿಜವು ಹಾಗೆಯೇ ಇರಬೇಕೆಂದು ಸಿದ್ಧವಾಗುವದಿಲ್ಲ. ಸನ್ನಿ ಹಿಡಿದಿರುವವರಿಗೆ ಕಾಣುವ ದೃಶ್ಯಗಳು ಕಾಣಿಸುವದಿಲ್ಲವೆಂದು ನಾವು ಯಾರೂ ಹೇಳುವುದಿಲ್ಲ; ಆದಮಾತ್ರಕ್ಕೆ ಅವು ನಿಜವಾಗಿಯೂ ಇವೆ ಎಂದು ಹೇಳುವೆವೇನು? ಇಲ್ಲ. ಇದರಂತೆ ಅವಿದ್ಯೆಯ ಕಣ್ಣಿಗೆ ಕಾಣುವ ಕಾಲದೇಶಾತ್ಮಕವಾದ ಜಗತ್ತು ನಮ್ಮ ವ್ಯವಹಾರಕ್ಕೆ ಹೊಂದುಗೆಯಾಗಿದೆ ಎಂಬುದಕ್ಕೆ ಯಾವ ಸಂಶಯವೂ ಇಲ್ಲ; ಆದ ಮಾತ್ರಕ್ಕೆ ಈ ಜಗತ್ತು ನಿಜವಾಗಿಯೂ ತತ್ತ್ವತಃ ಹಾಗೆಯೇ ಇದೆ ಎಂದು ಹೇಳುವದಕ್ಕಾಗಲಾರದು. ವೇದವು ವಸ್ತುತತ್ತ್ವವನ್ನು ಇದ್ದದ್ದು ಇದ್ದಂತೆ ತಿಳಿಸುತ್ತಿದೆ. ಆದ್ದರಿಂದ ಆ ಪರಮಾರ್ಥದೃಷ್ಟಿಗೂ ನಮ್ಮ ವ್ಯಾವಹಾರಿಕಾನುಭವಕ್ಕೂ ಯಾವ ವಿರೋಧವೂ ಇರುವದಿಲ್ಲ.

ಸರಿ, ಆದರೆ ಈ ವ್ಯಾವಹಾರಿಕಾನುಭವವಲ್ಲದ ಮತ್ತೊಂದು ಅನುಭವವೂ

ಉಂಟೆಂಬುದನ್ನು ನಾವು ಹೇಗೆ ನಂಬುವದು? ಯಾವ ಅನುಭವವಾದರೂ ದೇಶಕಾಲವಸ್ತುಗಳ ಪರಿಚ್ಛೇದವುಳ್ಳ ದೃಶ್ಯಗಳನ್ನಲ್ಲವೆ, ನಮಗೆ ತೋರಿಸಬೇಕು? ಯವದಾದರೊಂದು ಅನುಭವವು ಹೀಗಿಲ್ಲದ ಸ್ಥಿತಿಯನ್ನು ತಿಳಿಸಿಕೊಟ್ಟೀತೆಂದು ಕಲ್ಪನೆಮಾಡುವದಾದರೂ ಹೇಗೆ? – ಎಂದು ಯಾರಾದರೂ ಕೇಳಬಹುದು. ಈ ಪ್ರಶ್ನೆಗೆ ಚಿತ್ತತೃಪ್ತಿಕರವಾದ ಪೂರ್ಣವಾದ ಉತ್ತರವನ್ನು ಕೊಡಬೇಕಾದರೆ ವೇದಾಂತವಿಚಾರವನ್ನೆಲ್ಲ ಇಲ್ಲಿ ಅಳೆದು ಹುಯ್ಯಬೇಕಾದೀತು. ಆದರೆ ಅಂಥದ್ದೊಂದು ಅನುಭವವೂ ಇದೆ ಎಂಬುದರಲ್ಲಿ ಶ್ರದ್ಧೆಯನ್ನುಂಟುಮಾಡುವಷ್ಟು ಮಟ್ಟಿಗೆ ಈಗ ನಮ್ಮೆಲ್ಲರಿಗೂ ಇರುವ ಎರಡು ಅನುಭವಗಳನ್ನು ಇಲ್ಲಿ ದೃಷ್ಟಾಂತವಾಗಿ ಕೊಡಬಹುದಾಗಿದೆ. ಕನಸು, ತನಿನಿದ್ರೆ– ಎಂಬಿವೆರಡೂ ಮನುಷ್ಯಮಾತ್ರಕ್ಕೆ ಆಗುವ ಅನುಭವಗಳು. ಆ ಅನುಭವಗಳೊಳಗೆ ಏನು ಅಡಕವಾಗಿದೆ ಎಂಬುದನ್ನು ಈಗ ನಾವು ಸ್ವಲ್ಪ ಮನದಂದುಕೊಳ್ಳೋಣ. ಕನಸಿನಲ್ಲಿ ಎಚ್ಚರದಂತೆಯೇ ನಮಗೆ ಈಗ ತೋರುತ್ತಿರುವ ಜಗತ್ತಿನ ಪ್ರತಿಕೃತಿಯೊಂದು ತೋರುತ್ತಿರುವದು. ಆ ತೋರಿಕೆಯ ಜಗತ್ತಿನಲ್ಲಿ ನಾನು, ನಾನು ಇರುವ ಪ್ರಪಂಚ– ಎಂಬ ವಿಭಾಗವು ಇಲ್ಲಿಯಂತೆಯೇ ಕಾಣುತ್ತಿರುವದು. ಆ ಪ್ರಪಂಚದ ದೃಶ್ಯಗಳೂ ದೇಶಕಾಲ ವಸ್ತುಪರಿಚ್ಛಿನ್ನವಾಗಿಯೇ ಕಾಣುತ್ತಿರುವದು. ಆದರೂ ಕನಸಿನ ಮಬ್ಬು ತಿಳಿವಳಿಕೆಯನ್ನು ಬಿಟ್ಟು ಈಗಿನ ದೃಷ್ಟಿಯಿಂದ ವಿಚಾರಿಸಿದರೆ, ಅಲ್ಲಿ ಯಾವ ಪ್ರಪಂಚವೂ ಇರಲಿಲ್ಲವೆಂದೇ ಹೇಳಬೇಕಾಗುತ್ತದೆ. ಅಲ್ಲಿ ತೊರಿದ ನಾನಾತ್ವ, ದೇಶ, ಕಾಲ, ವಸ್ತು, ಶರೀರ, ಇಂದ್ರಿಯ, ಮನಸ್ಸು – ಮುಂತಾದದ್ದು ಯಾವದೊಂದೂ ನಿಜವಾಗಿರಲಿಲ್ಲವೆಂದೇ ನಮ್ಮ ಈಗಿನ ನಿಶ್ಚಯವಾಗಿರುತ್ತದೆ. ಅಲ್ಲವೆ? ಆದರೂ ಆಗಿನಮಟ್ಟಿಗೆ ನಾವು ಆ ದೇಶಕಾಲವಸ್ತುಗಳ ಕಟ್ಟಿಗೆ ಸಿಕ್ಕಿಬಿದ್ದಂತೆಯೇ ವ್ಯವಹಾರವನ್ನು ಮಾಡಬೇಕಾಗಿತ್ತಷ್ಟೆ? ಈ ದೃಷ್ಟಾಂತವನ್ನು ಸ್ವಲ್ಪ ಮನದಂದುಕೊಂಡ ಮಾತ್ರದಿಂದ ಆಗುವ ನಿಶ್ಚಯವೇನು? ನಾವು ದೇಶಕಾಲವಸ್ತುಗಳಿಗೆ ಕಟ್ಟುಬಿದ್ದವರಂತೆ ಕಂಡಮಾತ್ರದಿಂದ ನಿಜವಾಗಿಯೂ ಹಾಗೆ ಕಟ್ಟುಬಿದ್ದೇ ಇರಬೇಕೆಂದು ನಿಯಮವನ್ನು ಏರ್ಪಡಿಸಿಕೊಳ್ಳುವ ಹಾಗಿಲ್ಲವೆಂದಲ್ಲವೆ, ಹೇಳಬೇಕು?

ಕನಸಿನ ಅನುಭವವು ಮಿಥ್ಯಾಪ್ರತೀತಿಮಾತ್ರವಾಗಿರುವದರಿಂದ ಆ ದೃಷ್ಟಾಂತದಿಂದ ಎಚ್ಚರದಲ್ಲಿಯೂ ನಾವು ನಿಜವಾಗಿ ದೇಶಕಾಲವಸ್ತು ಪರಿಚ್ಛಿನ್ನರಾಗಿಲ್ಲವೆಂದು ನಿರ್ಣಯಿಸುವದು ಸರಿಯಾದ ತರ್ಕವಲ್ಲ ಎಂದು ನಿಮ್ಮಲ್ಲಿ

ಕೆಲವರಿಗೆ ತೋರಬಹುದು; ಈಗಿನ ಅನುಭವದಿಂದ ನೋಡಿದರೆ, ನಿಮಗೆ ಹಾಗೆ ತೋರುವದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ನಮ್ಮ ಮನಸ್ಸಿಗೆ ತನ್ನೆದುರಿಗೆ ಕಂಡುಬರುವದನ್ನು ಸತ್ಯವೆಂದು ಇಟ್ಟುಕೊಳ್ಳದಿದ್ದರೆ ಗತಿಯೇ ಇಲ್ಲ; ಆದ್ದರಿಂದ ಅದಕ್ಕೆ ಕನಸಿನ ಹೋಲಿಕೆಯನ್ನು ತನ್ನ ಕ್ಷೇತ್ರಕ್ಕೂ ಎಳೆತರುವದು ಒಗ್ಗಲಾರದು. ಆದರೆ ಕನಸಿನ ಅನುಭವವು ಬರಿಯ ಮಿಥ್ಯಾಪ್ರತೀತಿಯೆಂಬುದನ್ನು ನಾವೆಲ್ಲರೂ ನಿರ್ವಿವಾದವಾಗಿ ಒಪ್ಪುತ್ತಿರುವದರಿಂದ ಎಚ್ಚರದ ವಿಷಯವಾಗಿ ಚರ್ಚೆಮಾಡುವದು  ಅವಶ್ಯವೇ ಅಲ್ಲ. ಏಕೆಂದರೆ ನನ್ನ ಕನಸಿನಲ್ಲಿಯೂ ನಾನೇ ಇದ್ದೆನೆಂಬುದು ಅನುಭವಸಿದ್ಧ; ಆ ಕನಸಿನಲ್ಲಿ ತೋರಿದ್ದೆಲ್ಲವೂ ಬರಿಯ ತೋರಿಕೆಯೆಂದಾದರೆ ನನ್ನ ಸ್ವರೂಪಕ್ಕೆ ಕಾಲದೇಶವಸ್ತುಪರಿಚ್ಛಿನ್ನವಾದ ಜಗತ್ತು ಬಿಡದೆ ಅಂಟಿಕೊಂಡಿರುವದೆಂಬುದು ಸಲ್ಲದೆಂದೇ ಆಗುತ್ತದೆಯಲ್ಲವೆ? ನಾನು ಕನಸುಕಾಣುವಾಗಲೂ ನನ್ನ ಹೊರಗೆ ದೇಶಕಾಲಪರಿಚ್ಛಿನ್ನವಾದ ಪ್ರಪಂಚವು ಇದ್ದೇ ಇತ್ತು ಎಂದು ವಾದಿಸುವದಕ್ಕೆ ಬರುವದಿಲ್ಲ. ಏಕೆಂದರೆ 'ಕನಸುಕಾಣುವ ನನ್ನ ಹೊರಗೆ' ಎಂಬ ಮಾತಿಗೆ ಅರ್ಥವೇ ಇಲ್ಲ; ಆಗ ಒಳಗೆ, ಹೊರಗೆ– ಎಲ್ಲವೂ ಕನಸಿನಲ್ಲಿಯೇ ಸೇರಿಬಿಟ್ಟಿರುತ್ತದೆ. ಇದಲ್ಲದೆ ಪರಮಾರ್ಥವಾದ ನಮ್ಮ ಆತ್ಮಸ್ವರೂಪವು ಕಾಲಾಕಾಶಗಳನ್ನು ಕನಸಿನಂತೆ ಸುಷುಪ್ತಿಯೂ ನನ್ನ ಅನುಭವವೇ ಆಗಿರುತ್ತದೆ; ಆಗ ಕಾಲ, ಆಕಾಶ ವಸ್ತುಗಳು– ಎಂಬ ಯಾವ ಪ್ರಪಂಚವೂ ಇಲ್ಲದ ಸ್ವರೂಪದಲ್ಲಿಯೇ ನಾನು ಇರುತ್ತೇನೆ. ಆಗಲೂ ನನ್ನ ಹೊರಗೆ ಪ್ರಪಂಚವಿರಬಹುದಲ್ಲ! – ಎಂಬುದು ಒಣತರ್ಕವು; ಏಕೆಂದರೆ ಆ ನನ್ನ ಸ್ವರೂಪವು ಒಳಗುಹೊರಗುಗಳೆಂಬ ಭಾವನೆಗೇ ಅವಕಾಶವನ್ನು ಕೊಡದ ಸ್ವರೂಪದ್ದಾಗಿರುತ್ತದೆ.

ಅಂತೂ ಪರಮಾರ್ಥವಾಗಿ ನಮ್ಮಗಳ ಆತ್ಮನು ಕಾಲಾಕಾಶಗಳನ್ನು ಮೀರಿಯೂ ಇರುತ್ತಾನೆಂಬುದು ಅನುಭವವಿರುದ್ಧವಲ್ಲವೆಂದಾಯಿತು. ಹಾಗೆ ನೋಡಿದರೆ ಆ ಸ್ವರೂಪವೇ ನಮ್ಮದೆಂಬುದೇ ಪೂರ್ಣಾನುಭವಕ್ಕೆ ಹೊಂದಿಕೆಯಾಗಿರುತ್ತದೆಯೆನ್ನಬೇಕು. ಏಕೆಂದರೆ ನಾವು ದೇಶಕಾಲವಸ್ತುಗಳಿಂದೊಡಗೂಡಿದ ಪ್ರಪಂಚದೊಳಗೆ ಇರುತ್ತೇವೆಂಬುದು ಎಚ್ಚರದ ಅನುಭವಕ್ಕೆ ಮಾತ್ರ ಹೊಂದಿಕೆಯಾದದ್ದು. ಇಂದ್ರಿಯಜ್ಞಾನಕ್ಕೆ ಮಾತ್ರ ಸಮ್ಮತವಾದದ್ದು; ನಾವು ನಿಷ್ಪ್ರಪಂಚಸ್ವರೂಪರೆಂಬುದೇ ನಮ್ಮ ಮೂರು ಅವಸ್ಥೆಗಳಿಗೂ ಹೊಂದಿಕೆಯಾದದ್ದು,

ಇಂದ್ರಿಯಗಳಿಗಿಂತಲೂ ಒಳಗಿನ ನಮ್ಮ ನೇರಾದ ಅನುಭವಕ್ಕೆ ಸಮ್ಮತವಾದದ್ದು. ಆದ್ದರಿಂದ ನಮ್ಮಗಳ ಆತ್ಮನಾಗಿರುವ ಪರಮಾತ್ಮನು ನಮ್ಮ ಮುಂದೆ ಕಾಣುತ್ತಿರುವ ವಿಶ್ವದ ಎಲ್ಲಾ ಪ್ರಾಣಿಗಳಲ್ಲಿಯೂ ಇದ್ದುಕೊಂಡಿರುವದಲ್ಲದೆ, ಆಕಾಶಸಹಿತ ಬ್ರಹ್ಮಾಂಡವನ್ನು ಮೀರಿರುವ ಸ್ವಭಾವದವನು ಎಂದೂ ಭೂತ, ಭವಿಷ್ಯತ್ತು, ವರ್ತಮಾನ– ಎಂಬ ಕಾಲತ್ರಯದಲ್ಲಿಯೂ ಇರುವದೆಲ್ಲವೂ ಆಗಿದ್ದು ಕಾಲತ್ರಯಾತೀತವಾಗಿರುವ ಅಮೃತಸ್ವರೂಪನು ಎಂದೂ ಹೇಳಿದ ವೇದೋಕ್ತಿಯು ಸರ್ವಾನುಭವ ಸಮ್ಮತವಾಗಿರುವದನ್ನೇ ನೆನಪಿಗೆ ತರುತ್ತಿದೆ ಎಂದು ಒಪ್ಪಬೇಕಾಯಿತು.

ಇದುವರೆಗೆ ಲೋಕವ್ಯವಹಾರವನ್ನು ಅನುಸರಿಸಿ ಕಾಲ, ಆಕಾಶ,–ಇವುಗಳಲ್ಲಿ ತೋರುವ ಚೇತನಾಚೇತನವಸ್ತುಗಳೂ ಇವುಗಳ ರೂಪದಲ್ಲಿ ಕಾಣುತ್ತಿರುವ ಎಚ್ಚರದ ಪ್ರಪಂಚವೂ ನಿಜವಾಗಿ ಹಾಗೆಯೇ ಇವೆಯೆಂದು ಇಟ್ಟುಕೊಂಡೇ ನಾವು ಮಾತನಾಡುತ್ತಾ ಬಂದಿರುತ್ತೇವೆ. ಆದರೆ ಎಚ್ಚರದದೃಷ್ಟಿಯಿಂದಲೇ ನಿರೂಪಣಮಾಡಿದರೂ ಎಚ್ಚರದಲ್ಲಿಕೂಡ ಎಲ್ಲರಿಗೂ ಸಮಾನವಾದ ಕಾಲಾವಕಾಶಗಳೆಂಬಿವು ಇವೆಯೆಂಬುದು ಅಬಾಧಿತವಾಗಿ ಸಿದ್ಧವಾಗುದಿಲ್ಲ ಎಂಬುದಕ್ಕೆ ಈಗಿನ ಭೌತಿಕವಿಜ್ಞಾನಶಾಸ್ತ್ರದ ನೆರವೂ ಸಿಕ್ಕುತ್ತದೆ. ಏಕೆಂದರೆ ಇತ್ತೀಚಿನ **"ಸಾಪೇಕ್ಷವಾದ"** (Theory of Relativity) ಎಂಬ ವಿಜ್ಞಾನಶಾಸ್ತ್ರದ ವಾದದಂತೆ ನೋಡುವಾಗ ಬೇರೆಬೇರೆಯ ದೂರದಲ್ಲಿರುವ ಇಬ್ಬರಿಗೆ ಯಾವದೊಂದು ಘಟನೆಯೂ ಸಮಾನಕಾಲದಲ್ಲಿ ಆಗುವದಿಲ್ಲವೆಂದು ಗೊತ್ತಾಗಿದೆ; ಸರ್ವಸಮಾನವಾದ ಆಕಾಶವೆಂಬುದಾಗಲಿ ಸರ್ವಸಮಾನ ಕಾಲವೆಂಬುದಾಗಲಿ ಸರ್ವಸಮಾನಕಾಲವೆಂಬುದಾಗಲಿ ಇಲ್ಲವೇ ಇಲ್ಲ ಎಂದು ಹೇಳುವಷ್ಟುಮಟ್ಟಿಗೆ ಭೌತಿಕವಿಜ್ಞಾನಶಾಸ್ತ್ರವು ಮುಂದುವರಿದಿರುತ್ತದೆ. ಮತ್ತು ವಸ್ತುಗಳೆಂದರೆ ಘಟನೆಗಳು ಮಾತ್ರವೆಂದೂ ಆ ಘಟನೆಗಳು ಜ್ಞಾತೃವಿನಲ್ಲಿಯೇ ಆಗುತ್ತಿರುವವೆಂದೂ ಅನೇಕರು ಈ ವಾದಕ್ಕೆ ಪರಿಷ್ಕಾರವನ್ನು ಮಾಡಿರುತ್ತಾರೆ. ಹೀಗೆ ನೋಡಿದರೆ ಎಚ್ಚರದಲ್ಲಿ ತೋರುವ ಅಖಂಡಕಾಲವಾಗಲಿ ಅಖಂಡಾಕಾಶವಾಗಲಿ ಪರಮಾರ್ಥವಾಗಿಲ್ಲವೇ ಇಲ್ಲ ಎಂಬ ವೇದಾಂತಕ್ಕೇ ವಿಜ್ಞಾನಶಾಸ್ತ್ರವೂ ಬೆಂಬಲವನ್ನು ಕೊಡುತ್ತಿದೆ ಎನ್ನಬೇಕಾಗುವದು. ಆಗಲಂತೂ ಆತ್ಮನು ಕಾಲಾತೀತನಾಗಿರುತ್ತಾನೆಂದೇ ಹೇಳಬೇಕಾಗುತ್ತದೆ; ಕಾಲದೇಶ ಪರಿಚ್ಛಿನ್ನರಾಗಿ ಚೇತನಾಚೇತನ ವಸ್ತುಗಳಿರುವವೆಂಬುದು ಸ್ಥೂಲದೃಷ್ಟಿಯ ವ್ಯವಹಾರಮಾತ್ರವೆಂದೇ ಸಿದ್ಧವಾಗುತ್ತದೆ.

ಆದ್ದರಿಂದ ಈವರೆಗಿನ ವಿಚಾರದಲ್ಲಿ ನಾವು ಯಾವ ತೀರ್ಮಾನಕ್ಕೆ ಬಂದು ಮುಟ್ಟಿದಂತೆ ಆಯಿತು? ಪ್ರಪಂಚವೆಂಬುದೆಲ್ಲವೂ ಪರಮಾತ್ಮನೇ; ಈ ಪ್ರಪಂಚರೂಪದಲ್ಲಿ ಆತನು ಕಾಣಿಸಿಕೊಳ್ಳುತ್ತಿರುವದು ಪ್ರಾಣಿಗಳು ಕರ್ಮಫಲಕ್ಕೆ ಭೋಕ್ತೃಗಳಾಗಿರುವದರಿಂದ. ನಿಜವಾಗಿ ನೋಡಿದರೆ ಆ ಪರಮಾತ್ಮನು ಕಾಲಾಕಾಶಗಳನ್ನು ಮೀರಿಯೇ ಇರುತ್ತಾನೆ; ಆದ್ದರಿಂದ ಅಮೃತಸ್ವಭಾವ ನಾಗಿರುತ್ತಾನೆ. ಆತನೇ ನಮ್ಮಗಳೆಲ್ಲರ ಆತ್ಮನಾಗಿರುತ್ತಾನೆ.

ಇದನ್ನರಿತವರ ಸಂವ್ಯವಹಾರವು ಹೇಗಿರುವದು? – ಎಂದರೆ ಎಲ್ಲಾ ಚರಾಚರಪ್ರಾಣಿಗಳ ಆತ್ಮನೂ ತಮ್ಮ ಆತ್ಮನೆಂದೇ ಅವರು ಕಾಣುತ್ತಾರೆ. ವ್ಯವಹಾರದೃಷ್ಟಿಯಿಂದ ಮಾತನಾಡಿದರೆ ಆ ಜ್ಞಾನಿಗಳ ನಡೆನುಡಿಗಳು ಸರ್ವಭೂತಗಳ ಹಿತಕ್ಕೇ ಆಗಿರುತ್ತವೆ. ಅವರಿಗೆ ತಮ್ಮದೇ ಆಗಿರುವ ಕ್ರಿಯಾಕಾರಕಫಲಗಳು ಇಲ್ಲ; ಇಂಥದ್ದನ್ನು ನನಗಾಗಿ ಮಾಡಿಕೊಂಡು ಇಂಥದ್ದೊಂದು ಫಲವನ್ನು ನಾನೇ ಅನುಭವಿಸಬೇಕು– ಎಂಬ ಪೈಪೋಟಿಯ ಬುದ್ಧಿಯು ಅವರಿಗೆ ಇರುವದಕ್ಕೆ ಎಡೆಯೇ ಇರುವದಿಲ್ಲ. ಅವರ ಚಟುವಟಿಕೆಯು ಇಡಿಯ ಲೋಕಕ್ಕೇ ಕಲ್ಯಾಣವನ್ನುಂಟುಮಾಡುವದಕ್ಕಾಗಿರುತ್ತದೆ. "ಉದಾರಚರಿತಾನಾಂ ತು ವಸುಧೈವ ಕುಟುಮ್ಬಕಮ್" – ಉದಾರಚರಿತ್ರರಿಗೆ ಇಡಿಯ ಭೂಮಂಡಲವೇ ಸ್ವಕುಟುಂಬವು– ಎಂಬ ಸುಭಾಷಿತವು ಅವರಲ್ಲಿಯೇ ಸಾರ್ಥಕವಾಗಿರುತ್ತದೆ.

ಈ ದೃಷ್ಟಿಯನ್ನು ಸಂಪಾದಿಸುವದಕ್ಕೆಂದು ಪ್ರಯತ್ನಿಸುವದೆಂಬುದೇ ಮಾನವನ ಸಂಸ್ಕೃತಿಯ ಅರ್ಥವು. ಎಲ್ಲಾ ಜನರೂ ಅರಿತೋ ಅರಿಯದೆಯೋ ವ್ಯವಹಾರವನ್ನು ಮಾಡುತ್ತಿದಾರೆ, ಅಪರಿಮಿತವಾದ ಚಟುವಟಿಕೆಯನ್ನು ಪ್ರಕಟಗೊಳಿಸುತ್ತಿದಾರೆ. ಇವರಲ್ಲಿ ಕೆಲವರು ಮಾತ್ರ ತಮ್ಮ ವ್ಯವಹಾರದ ಗುರಿಯನ್ನು ಬಲ್ಲವರಾಗಿರುತ್ತಾರೆ; ಎಲ್ಲದರಲ್ಲಿಯೂ ಒಬ್ಬನೇ ಪರಮಾತ್ಮನನ್ನು ಕಂಡುಕೊಳ್ಳುವದೇ ಅವರ ಗುರಿಯಾಗಿರುತ್ತದೆ. ಆದ್ದರಿಂದ ಅವರು ಎಲ್ಲಾ ಕ್ಷೇತ್ರಗಳಲ್ಲಿಯೂ ಅದಕ್ಕಾಗಿಯೇ ದುಡಿಯುತ್ತಿರುತ್ತಾರೆ. ಅಂಥವರ ಕಾವ್ಯ, ಶಾಸ್ತ್ರ, ಕಲೆ– ಎಲ್ಲವೂ ವಿಶ್ವೈಕ್ಯವನ್ನು ಕಂಡುಕೊಳ್ಳುವ ಧ್ಯೇಯವನ್ನೇ ಸೂಚಿಸುತ್ತಿರುತ್ತವೆ. ಆದರೆ ಸ್ಥೂಲದೃಷ್ಟಿಯ ಜನರು ಈ ಗುಟ್ಟನ್ನು ಅರಿಯರು. ಅವರಿಗೆ ಇಂದ್ರಿಯಭೋಗವೇ ಪ್ರಧಾನವಾಗಿರುತ್ತದೆ; ಅವರು ಆಶೆಯಿಂದಲೋ ಅಂಜಿಕೆಯಿಂದಲೋ ಅಥವಾ ಮತ್ತೆ ಯಾವದಾದರೊಂದು ಹೇತುವಿನಿಂದಲೋ ಪ್ರೇರಿತರಾಗಿ ಈ ಭೋಗಕ್ಕೋಸ್ಕರ ಕಷ್ಟಪಡುತ್ತಾರೆ; ಒಬ್ಬರಮೇಲೊಬ್ಬರು ಪೈಪೋಟಿಯಿಂದ ನುಗ್ಗುತ್ತಾರೆ; ತಮಗೆ

ಆಶಾಭಂಗವಾದಾಗ ಸಿಟ್ಟಾಗುತ್ತಾರೆ. ಮತ್ತೊಬ್ಬರಿಗೆ ಹಿಂಸೆಯಾಗುವದನ್ನೂ ಲೆಕ್ಕಿಸದೆ ತಮ್ಮ ಗುರಿಯನ್ನು ಸಾಧಿಸುವದಕ್ಕಾಗಿ ಹೆಣಗುತ್ತಾರೆ; ಕೊನೆಗೂ ದುಃಖವನ್ನೇ ಕಾಣುತ್ತಾರೆ.

ಕಾಲಾಕಾಶಾತೀತನಾಗಿರುವ ಪರಮೇಶ್ವರನು ನಿತ್ಯವಾದ ಅಮೃತತ್ವಕ್ಕೆ ಒಡೆಯನಾಗಿರುತ್ತಾನೆ. ನಮ್ಮಗಳೆಲ್ಲರಿಗೂ ಕ್ಷೇಮವಾಗಲೆಂಬುದೇ ಅವನ ಸಂಕಲ್ಪವು. ನಾವು ಮಾಡುವ ಪ್ರಯತ್ನಗಳಿಗೆ ತಕ್ಕ ಫಲದ ಭೋಗವು ನಮಗೆ ದಕ್ಕುವಂತೆ ಆತನು ಈ ಪ್ರಪಂಚರೂಪದಿಂದ ನಮಗೆ ಕಾಣಿಸಿಕೊಂಡಿರುತ್ತಾನೆ. ಸರಿಯಾಗಿ ವ್ಯವಹಾರವನ್ನು ಮಾಡಿದರೆ ನಾವೆಲ್ಲರೂ ಇಂದಲ್ಲ ನಾಳೆ, ಆತನ ಸ್ವರೂಪವನ್ನೇ ಕಂಡುಕೊಂಡು ಆತನಲ್ಲಿಯೇ ಒಂದಾಗಿ ನಲಿಯಬಹುದು. ಈ ಉತ್ತಮ ವ್ಯವಹಾರಕ್ಕೆ ಅಡ್ಡಿಯಾಗಿರುವ ಇಂದ್ರಿಯಭೋಗಲಾಲಸೆಯನ್ನು ತ್ಯಜಿಸಿ ನಾವು ಆತನ ಕಡೆಗೇ ಮುಂದುವರಿಯುವದಕ್ಕೆ ಪ್ರಯತ್ನಿಸೋಣ.

★ಪ್ರಪಂಚದಲ್ಲೆಲ್ಲ ಪರಮಾತ್ಮನು ತುಂಬಿತುಳುಕುತ್ತಿದ್ದಾನೆ. ಗೊತ್ತಾದ ದೇಶಕಾಲನಿಮಿತ್ತಗಳನ್ನು ಅನುಸರಿಸಿ ತಕ್ಕ ಸಾಧನಗಳನ್ನು ಉಪಯೋಗಿಸಿಕೊಂಡು ನಾವು ಮಾಡುವ ಕ್ರಿಯೆಗಳಿಗೆ ಅನುಗುಣವಾದ ಫಲಗಳು ನಮಗೆ ದೊರಕುವಂತೆ ಏರ್ಪಡಿಸಿ ಆತನೇ ಈ ಪ್ರಪಂಚದಲ್ಲೆಲ್ಲ ತೋರಿಕೊಳ್ಳುತಿದಾನೇ– ಹೀಗೆಂಬುದು ವೇದದ ಸಂದೇಶವು.

**ಆ ಪರಮಾತ್ಮನು ಪುರುಷನು, ಚರಾಚರಪ್ರಾಣಿಗಳಲ್ಲೆಲ್ಲ ತುಂಬಿಕೊಂಡಿರುವವನು; ಅವನು ಇಲ್ಲದ ಕಡೆಯೇ ಇಲ್ಲ.** ಭೂತ ಭವಿಷ್ಯದ್ವರ್ತಮಾನಗಳೆಂಬ ಕಾಲತ್ರಯದಲ್ಲಿ ಯಾವಯಾವದು ಕಾಣುತ್ತಿರುವದೋ ಅಲ್ಲೆಲ್ಲ ಈ ಪುರುಷನು ತುಂಬಿರುತ್ತಾನೆ. ಇಷ್ಟೇ ಅಲ್ಲ, ಈ ಬ್ರಹ್ಮಾಂಡದೊಳಗೆಲ್ಲ ತುಂಬಿರುವದಲ್ಲದೆ ಅವನು ಇದನ್ನು ಮೀರಿಯೂ ಇರುತ್ತಾನೆ; ಕಾಲತ್ರಯದಲ್ಲೆಲ್ಲ ಅವನು ತೋರಿಕೊಳ್ಳುವದಲ್ಲದೆ, ಕಾಲವನ್ನೇ ಮೀರಿದ ಅಮೃತಸ್ವರೂಪನೂ ಆಗಿರುತ್ತಾನೆ. ಈ ಪ್ರಪಂಚದಲ್ಲಿ ಆತನು ತನ್ನ ವೈಭವಗಳನ್ನು ತೋರಿಸಿಕೋಳ್ಳುತ್ತಿರುವದು ಪ್ರಾಣಿಗಳ ಅನ್ನಕ್ಕಾಗಿ, ಅವರು ಮಾಡುವ ಕರ್ಮಫಲಪ್ರಾಪ್ತಿಗಾಗಿ, ಎಂದು ಪುರುಷಸೂಕ್ತದ ಎರಡು ಮಂತ್ರಗಳ ಆಧಾರದಿಂದ ತಿಳಿಸಿಕೊಟ್ಟಿರುತ್ತೇನೆ.

* * * * *

---

★ ಡಿಸೆಂಬರ್ 1954, ಸಂಪುಟ 24, ಪುಟ 89–96

# 4. ಪರಮಾತ್ಮನ ಮಹಿಮೆ; ಎರಡುದೃಷ್ಟಿಯ ವಿಚಾರಧಾರೆ

ಈಗ ಇನ್ನೊಂದು ಮಂತ್ರದ ಅರ್ಥವನ್ನು ಈ ಕೆಳಗೆ ಉದಾಹರಿಸುತ್ತೇನೆ:

**ಏತಾವಾನಸ್ಯ ಮಹಿಮಾಽತೋ ಜ್ಯಾಯಾಂಶ್ಚ ಪೂರುಷಃ ।**
**ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥3॥**

**ಇದಿಷ್ಟೂ ಆತನ ಮಹಿಮೆಯು; (ಆ) ಪುರುಷನು ಇದಕ್ಕಿಂತಲೂ ಹೆಚ್ಚಿನವನೂ ಆಗಿರುತ್ತಾನೆ. ಸಮಸ್ತಭೂತಗಳೂ ಇವನ ಪಾದವು; ಇವನ ಮೂರು ಪಾದಗಳ ಅಮೃತವು ದಿವದಲ್ಲಿರುತ್ತದೆ.**

ಈ ಪ್ರಪಂಚವೆಲ್ಲವೂ ಆ ಪರಮಾತ್ಮನ ಮಹಿಮೆಯೇ. ಎಲ್ಲೆಲ್ಲಿಯೂ ಆತನ ವ್ಯಾಪ್ತಿಯೇ ಇರುತ್ತದೆ. ವಿವೇಕಿಗಳಾದವರಿಗೆ ಎಲ್ಲೆಲ್ಲಿಯೂ ಆತನ ಸರ್ವಜ್ಞತೆಯು ಮನದಟ್ಟಾಗುತ್ತಿದೆ; ಎಲ್ಲೆಲ್ಲಿಯೂ ಆತನ ಸರ್ವಶಕ್ತಿತ್ವದ ಕುರುಹುಗಳು ಕಾಣಿಸುತ್ತಿರುತ್ತವೆ. ದ್ಯಾವಾಪೃಥಿವಿಗಳು ತಮ್ಮ ತಮ್ಮ ಸ್ಥಾನದಲ್ಲಿ ವಿಭಕ್ತವಾಗಿದ್ದುಕೊಂಡಿರುವದು ಆತನ ಮಹಿಮೆಯೇ; ಸೂರ್ಯಚಂದ್ರರುಗಳು ಒಂದೇಸಮನೆ ಲೋಕಗಳನ್ನೆಲ್ಲ ಬೆಳಗುತ್ತಾ ನಿಯತಗತಿಯನ್ನು ತೋರಿಸುತ್ತಿರುವದೂ ಆತನ ಮಹಿಮೆಯಿಂದಲೇ; ಸ್ಥಾವರಜಂಗಮಪ್ರಾಣಿಗಳು ಗೊತ್ತಾದ ರೀತಿಯಿಂದ ವರ್ತಿಸುತ್ತಿರುವದೂ ಆತನ ಮಹಿಮೆಯಿಂದಲೇ; ನದೀಸಮುದ್ರಗಳು ತಮ್ಮ ತಮ್ಮ ಸ್ವಭಾವದಿಂದಿರುತ್ತಿರುವದು ಆತನ ಮಹಿಮೆಯಿಂದ; ದಿನ, ಪಕ್ಷ, ಮಾಸ, ಋತು, ಅಯನ, ಸಂವತ್ಸರ– ಇವುಗಳ ವ್ಯವಸ್ಥೆಯೂ ಆತನ ಮಹಿಮೆಯಿಂದಲೇ. ಜೀವರುಗಳ ಕರ್ತೃಕರ್ಮಫಲಗಳು ನಿಯತವಾಗಿ ದೇಶಕಾಲನಿಮಿತ್ತಗಳಿಂದ ಸಂಬದ್ಧವಾಗಿರುವದೂ ಆತನ ಮಹಿಮೆಯಿಂದಲೇ. ಯಾವದಾದರೊಂದು ರಾಷ್ಟ್ರವು ಸುವ್ಯವಸ್ಥಿತವಾಗಿದ್ದರೆ ಅದಕ್ಕೆ ಸರಕಾರದ ಶಾಸನಕ್ರಮವೇ ಹೇಗೆ ಕಾರಣವೆನ್ನವೆವೋ ಹಾಗೆಯೇ ಈ ಅಖಿಲಜಗತ್ತೂ ಒಂದಿಷ್ಟೂ ಹೆಚ್ಚು ಕಡಿಮೆಯಿಲ್ಲದೆ ಇದ್ದುಕೊಂಡಿರುವದು ಅಪ್ರತಿಹತಶಾಸನನಾದ ಆ ಪರಮಾತ್ಮನ ನಿರತಿಶಯವಾದ ಜ್ಞಾನಶಕ್ತಿಗಳ ವಶದಿಂದಲೇ ಆಗಿರುತ್ತದೆ.

ಈ ಜಗತ್ತನ್ನು ನಾವು ಬೇರೆಬೇರೆಯ ಎರಡು ದೃಷ್ಟಿಗಳಿಂದ ನೋಡುವದಕ್ಕೆ ಬರುತ್ತದೆ. ಇಂದ್ರಿಯಗಳ ಮೂಲಕವಾಗಿ ಸಂಪಾದಿಸಿಕೊಳ್ಳುತ್ತಿರುವ ಜ್ಞಾನವನ್ನು ಬೆಳೆಯಿಸಿಕೊಂಡಂತೆಲ್ಲ ನಾವು ಬಾಹ್ಯಪ್ರಕೃತಿಯ ನಿಯಮಗಳನ್ನು ಹೆಚ್ಚುಹೆಚ್ಚಾಗಿ

ಮನವರಿಕೆಮಾಡಿಕೊಳ್ಳಬಹುದು. ಆ ಪ್ರಕೃತಿಜ್ಞಾನದಿಂದ ನಾವು ಈಗಿರುವ ಸ್ಥಿತಿಯಿಂದ ಮೇಲಿನ ಸ್ಥಿತಿಗೆ ಏರಬಹದುದು, ಜೀವನದ ಮಟ್ಟವನ್ನು ಏರಿಸಿಕೊಳ್ಳಬಹುದು, ರೋಗರುಜಿನಗಳ ಬಾಧೆಯನ್ನು ತಪ್ಪಿಸಿಕೊಳ್ಳಬಹುದು, ಮನಸ್ಸನ್ನು ವಿಕಾಸಗೋಳಿಸಿಕೊಳ್ಳಬಹುದು, ವಾಙ್ಮಯವನ್ನೂ ಪ್ರಕೃತಿಶಾಸ್ತ್ರವನ್ನು ಪರಿಚಯಮಾಡಿಕೊಂಡು ನಲಿಯಬಹುದು; ಇಷ್ಟೇ ಅಲ್ಲ, ಈ ಪ್ರಕೃತಿಜ್ಞಾನದಿಂದ ನಮ್ಮ ಸ್ವರೂಪ, ಸ್ಥಿತಿ, ಪ್ರಪಂಚದಲ್ಲಿರುವ ಇತರ ವಸ್ತುಗಳಿಗೂ ಪ್ರಾಣಿಗಳಿಗೂ ನಮಗೂ ಇರುವ ಸಂಬಂಧ; ಮಾನವಸಮಾಜದ ಸ್ಥಿತಿ, ಏಳಿಗೆ ಮತ್ತು ಆಶೋತ್ತರಗಳು– ಇವುಗಳನ್ನೆಲ್ಲ ತಿಳಿದುಕೊಂಡು ನಮ್ಮ ಸುತ್ತಮುತ್ತಲಿನವರನ್ನೂ ಮುಂದುವರಿಯುವಂತೆ ಮಾಡಬಹುದು. ಇದೇ ಮಾನವನ ಮುಖ್ಯ ಕರ್ತವ್ಯ. ಇದು ಒಂದು ದೃಷ್ಟಿಯ ಫಲವಾದ ವಿಚಾರಧಾರೆ.

ಇದಕ್ಕಿಂತ ಬೇರೆಯಾದ ಮತ್ತೊಂದು ದೃಷ್ಟಿಯೂ ಇದೆ. ಅದೇ ವೇದದ ದೃಷ್ಟಿ. ಬಾಹ್ಯಪ್ರಕೃತಿಯು ನಮಗೆ ಅತ್ಯಂತ ಆವಶ್ಯಕವಾದ ತಿಳಿವಳಿಕೆಗೆ ಸಾಧನವಾಗಿದೆ ಎಂಬುದು ನಿಜ. ಇದರ ನಿಯಮಗಳನ್ನು ನಾವು ಅರಿತುಕೊಂಡಂತೆಲ್ಲ ನಮ್ಮ ಅಭ್ಯುದಯವಾಗುವದೆಂಬುದೂ ನಮ್ಮ ಶರೀರ, ಇಂದ್ರಿಯ, ಮನಸ್ಸು, ಬುದ್ಧಿ– ಇವುಗಳು ಎಲ್ಲಾ ಬಗೆಯ ಆತಂಕಗಳನ್ನೂ ಆದಷ್ಟುಮಟ್ಟಿಗೂ ನಿವಾರಿಸಿಕೊಂಡು ನಮ್ಮ ಜೀವನವನ್ನು ಸ್ವರ್ಗಕ್ಕೆ ಹತ್ತಿರವಾಗಿಸುವವೆಂಬುದೂ ನಿಜ. ಮಾನವಸಮಾಜದ ಒಳಪಂಗಡಗಳೂ ವ್ಯಕ್ತಿಗಳೂ ಸಹಕರಿಸಿಕೊಂಡು ನಡೆದರೆ ಈ ಭೂಲೋಕವೇ ಸ್ವರ್ಗವಾಗಬಹುದೆಂಬ ನಿರೀಕ್ಷಣೆಯು ನಮ್ಮ ಮುಂದೆ ನಲಿದಾಡುತ್ತಿರುವದೂ ನಿಜ. ಆದರೆ ಬರಿಯ ಐಂದ್ರಿಯಕಜ್ಞಾನದಿಂದ ಈ ಕನಸು ನೆನಸಾಗಲಾರದು. ಎಳೆಯ ವಯಸ್ಸಿನಲ್ಲಿ ಶರೀರೇಂದ್ರಿಯಗಳು ಗಟ್ಟಿಯಾಗಿರುವಾಗ ಹುಡುಗರು 'ನಾನು ದೊಡ್ಡವನಾದಮೇಲೆ ಹೀಗೆ ಮಾಡುವೆನು, ಹಾಗೆ ಆಗುವೆನು' ಎಂದು ಹಗಲುಗನವರಿಕೆಗಳನ್ನು ಕಾಣುತ್ತಿರುವಂತೆ ಭೌತಿಕವಿಜ್ಞಾನವು ನಮಗೆ ಈವರೆಗೆ ತಂದುಕೊಟ್ಟಿರುವ ಹಲಕೆಲವು ಸೌಕರ್ಯಗಳನ್ನು ಮನದಂದುಕೊಂಡು ಇನ್ನುಮುಂದೆ ನಾವು ಹೀಗೆಯೇ ಭೌತಿಕವಿಜ್ಞಾನವನ್ನು ಬೆಳೆಯಿಸಿಕೊಳ್ಳುತ್ತಾಹೋದರೆ, ಭೂಲೋಕವೆಲ್ಲ ಮಾನವನ ಕ್ರೀಡಾಭೂಮಿಯಾಗಬಹುದು; ವಿಜ್ಞಾನಶಾಸ್ತ್ರದ ಬಲದಿಂದ ನಾವು ಅಂಗಾರಕಚಂದ್ರಾದಿಗ್ರಹಗಳನ್ನೂ ಸಶರೀರವಾಗಿ ಮುಟ್ಟಿ ನಲಿಯಬಹುದು; ಇಷ್ಟೇಕೆ, ಕಾಲಾನುಕಾಲಕ್ಕೆ ಮಾನವನು ಮರಣವನ್ನೇ ಜಯಿಸಿ ಮಾರ್ಕಂಡೇಯನಾದರೂ

ಆಗುವ ಸಂಭವವಿದೆ– ಎಂದು ಮನಸ್ಸಿನ ಮಂಡಿಗೆಯನ್ನು ತಿನ್ನುವದಕ್ಕೆ ಹೋಗುತ್ತಿರುವವರು, ಹೊರಗಿನ ಪ್ರಪಂಚವನ್ನು– ಅದರಲ್ಲೊಂದು ಭಾಗವಾದ ಮನುಷ್ಯಲೋಕವನ್ನು ಮಾತ್ರ– ಕಣ್ಣುತೆರೆದು ನೋಡಿದರೆ ಸಾಕು, ಇದೆಲ್ಲ ಕನಸುಮಾತ್ರವೇ ಎಂಬುದು ತಟ್ಟನೆ ಮನಸ್ಸಿಗೆ ತಾಕಿಬಿಡುವದು. ಇಂದ್ರಿಯಗಳ ಜ್ಞಾನವನ್ನು ನಾವು ಬಗೆಬಗೆಯ ಯಂತ್ರೋಪಕರಣಗಳಿಂದ ಹೆಚ್ಚಿಸಿಕೊಂಡಂತೆಲ್ಲ, ವಿಜ್ಞಾನಶಾಸ್ತ್ರದಿಂದ ಈ ಸಂಸಾರಸಮುದ್ರದ ತಳವನ್ನೇ ಕಂಡುಕೊಳ್ಳಬಹುದೆಂಬ ಆಶೋತ್ತರವು ನಮಗೆ ಬೆಳೆದಂತೆಲ್ಲ, ದೀಪವನ್ನು ಮುಂದಕ್ಕೊಯ್ದಂತೆಲ್ಲ ಕತ್ತಲೆಯು ಹಿಂಬಾಲಿಸಿಕೊಂಡೇ ಬರುವಂತೆ, ಈ ವಿಜ್ಞಾನದ ಜೊತೆಗೇ ಮನಸ್ಸಿನಲ್ಲಿ ಕಾಮಕ್ರೋಧಗಳೂ ರಾಗದ್ವೇಷಗಳೂ ಅದ್ಭುತಾಕಾರವನ್ನು ತಾಳಿ ನಮ್ಮನ್ನು ಬೆನ್ನಟ್ಟುತ್ತಿರುವವು. ಈ ಕೇವಲ ಭೌತಿಕ ವಿಜ್ಞಾನವು ನಮಗೆ ಭೋಗಸೌಲಭ್ಯದ ಮಾರ್ಗವನ್ನು ತೋರಿಸಿ ಪ್ರಲೋಭನ ಮಾಡುತ್ತಾ ಮಾಡುತ್ತಾ ನಮ್ಮನ್ನು ಅಜ್ಞಾನದ ಕೊರಕಲುಗಳಿಗೆ ಎಳೆಯುತ್ತಿರುವದು. ಇದು ಮಾನವಸಮಾದಜಲ್ಲಿ–ಬೇರೆಬೇರೆಯ ತಂಡಗಳಲ್ಲಿಯೂ ವ್ಯಕ್ತಿಗಳಲ್ಲಿಯೂ–ಪೈಪೋಟಿಯನ್ನು ಸೃಷ್ಟಿಸಿ ಸಂಪತ್ತಿನ ಅಂತಸ್ತುಗಳನ್ನು ಕಟ್ಟಿ ರಾಗದ್ವೇಷಗಳನ್ನೂ ಈರ್ಷ್ಯಾಸೂಯೆಗಳನ್ನೂ ಹೆಚ್ಚಿಸಿ ಅಖಿಲ ಭೂಮಂಡಲ ಯುದ್ಧಗಳು ಎರಡನ್ನು ತಂದೊಡ್ಡಿ ಮೂರನೆಯ ಯುದ್ಧಕ್ಕೆ ಹೆಜ್ಜೆಯ ನ್ನಿಡುಸುತ್ತಿರುವದು!

ಹಾಗಾದರೇನು, "ಈ ಪ್ರಪಂಚವೆಲ್ಲವೂ ಕನಸೇ, ಮಾಯೆಯೇ" – ಎಂದು ಜರೆದು ಐಹಿಕಜೀವನಕ್ಕೆ ತಿಲಾಂಜಲಿಯನ್ನಿತ್ತು ಇದರಕಡೆಗೆ ಬೆನ್ನು ತಿರುಗಿಸುವದೇ ವೈದಿಕದೃಷ್ಟಿಯೇನು? "ಲೋಕದಲ್ಲಿ ಜನರು ಏನೇ ಕಷ್ಟಪಡುತ್ತಿರಲಿ, ನಾನು ಈ ಪ್ರಪಂಚವನ್ನು ತ್ಯಾಗಮಾಡಿ ಪರಮಪುರುಷಾರ್ಥವನ್ನು ಪಡೆದುಕೊಳ್ಳವೆನು" – ಎನ್ನುವದೇ ತತ್ತ್ವಜಿಜ್ಞಾಸೆಯ ಹೆಗ್ಗುರುತೇನು? – ಎಂದು ನೀವು ಕೇಳಬಹುದು. ಹಾಗೇನೂ ಇಲ್ಲ. **ಈ ಜಗತ್ತನ್ನು ಹೊರಗಣ್ಣಿನಿಂದ ನೋಡಿ ಇದು ನನ್ನ ಐಹಿಕ ಜೀವನಕ್ಕೆ ಬೇಕಾದ ಭೋಗಸಾಮಗ್ರಿಗಳನ್ನು ಒದಗಿಸುವ ಖನಿ ಎಂದು ಬಗೆಯುವದು ಕೇವಲೇಂದ್ರಿಯದೃಷ್ಟಿ. ಆದರೆ "ಜಗತ್ತೆಲ್ಲವೂ ಪರಮಾತ್ಮನ ಮಹಿಮೆ" ಎಂದು ಶಾಸ್ತ್ರದ ಕಣ್ಣಿನಿಂದ ನೋಡಿ, ಇದು ನನ್ನ ಇಹಪರಗಳೆರಡಕ್ಕೂ ಬೇಕಾದ ಸಾಧನಗಳ ರಾಶಿಯನ್ನು ಒದಗಿಸುವ ಪರಮಾತ್ಮನ ವಿಭೂತಿ ಎಂದು ಗೌರವಿಸುವದು ವೈದಿಕದೃಷ್ಟಿ.** ಈ ದೃಷ್ಟಿಯ ಸಂಪರ್ಕವಿಲ್ಲದ ಕೇವಲೇಂದ್ರಿಯದೃಷ್ಟಿಯೇ ಮಾನವನನ್ನು ಪಶುವಾಗಿ ಮಾಡುವದು; ಈ ದೃಷ್ಟಿಯ

ಸಂಪರ್ಕದಿಂದ ಸಕಲೇಂದ್ರಿಯಗಳನ್ನೂ ಉಪಯೋಗಿಸಿ ವ್ಯವಹಾರವನ್ನು ಕೈಕೊಂಡರೆ ಮಾನವ ಪಶುವು ಮಾನವನಾಗುವನು, ಮಾನವನು ಕ್ರಮಕ್ರಮವಾಗಿ ಮಹಾದೇವನೂ ಆಗುವನು.

ಹಾಗಾದರೆ ವೈದಿಕಸಿದ್ಧಾಂತದಲ್ಲಿ ಈ ಜಗತ್ತೆಲ್ಲ ಕನಸೇ, ಇದೆಲ್ಲ ಮಾಯೆಯೇ– ಎಂದು ಹೇಳಿಲ್ಲವೇನು? ಹೇಳಿದೆಯಾದರೆ, ಕನಸಿನ ಪ್ರಪಂಚದಲ್ಲಿ ಅಥವಾ ಮಾಯೆಯ ಪ್ರಪಂಚದಲ್ಲಿ ಮಾಡುವ ಯಾವ ವ್ಯವಹಾರವು ಹೇಗೆತಾನೆ ಪರಮಾರ್ಥವಾದ ಪುರುಷಾರ್ಥವನ್ನು ಕೊಟ್ಟೀತು? ಈ ವಿರೋಧಕ್ಕೆ ಪರಿಹಾರವು ಹೇಗೆ? ಎರಡು ವಾದಗಳೂ ಸರಿ ಎನ್ನುವದಾದರೆ "ನಂಟರೂ ಬರಲಿ, ಅಕ್ಕಿಯೂ ವೆಚ್ಚವಾಗದಿರಲಿ!" ಎಂದಂತೆ ಆಗುವದಿಲ್ಲವೆ?– ಎಂಬ ಶಂಕೆಯೊಂದು ನಮ್ಮ ಮುಂದೆ ಬಂದು ನಿಲ್ಲುಬಹುದು. ಅದಕ್ಕೆ ಉತ್ತರವನ್ನು ಕೊಡುವ ಸಮಯವು ಇದಲ್ಲ. ಈ ವಿಷಯವನ್ನು ಮುಂದೊಂದು ಲೇಖನದಲ್ಲಿ ವಿಸ್ತಾರವಾಗಿ ವಿಚಾರ ಮಾಡುವದಕ್ಕೆ ಇಟ್ಟುಕೊಳ್ಳೋಣ. ಆದರೆ ಸದ್ಯಕ್ಕೆ ಇಷ್ಟನ್ನು ನೆನಪಿಟ್ಟರೆ ಸಾಕಾಗಿದೆ. ಕನಸುಕೂಡ ತಾನು ತೋರುವಷ್ಟು ಕಾಲ ಎಚ್ಚರವೆಂದೇ ತೋರುತ್ತಿರುತ್ತದೆ. ಅಲ್ಲಿಯೂ ಎಚ್ಚರದಂತೆಯೇ ನಮಗೆ ಜ್ಞಾನ, ವೇದನೆಗಳು, ಸಂಕಲ್ಪಗಳು, ಕ್ರಿಯೆಗಳು, ಕಾರಕಗಳು, ಫಲಗಳು–ಇವುಗಳ ಸಂಬಂಧವಿರುತ್ತದೆ. "ಛೇ! ಇದೆಲ್ಲ ಕನಸು!" ಎಂದು ನಾವು ಯಾರೂ ಅಲ್ಲಿಯ ವ್ಯವಹಾರವನ್ನು ಆಗ ಅಸಡ್ಡೆಮಾಡುವದಿಲ್ಲ. ಅದರಂತೆ ಇದು ವೇದಾಂತದ ಉಪದೇಶದಂತೆ ಕನಸಾಗಿದ್ದರೇನು? ನಮಗೇನೋ ಎಚ್ಚರವಾಗಿಯೇ ಇರುತ್ತದೆ. ಎಚ್ಚರದ ಪ್ರಪಂಚದಲ್ಲಿ ಯಾವ ಫಲವನ್ನು ಪಡೆಯುವದಕ್ಕೆ ಯಾವ ಸಾಧನವನ್ನು ತೆಗೆದುಕೊಳ್ಳಬೇಕೋ ಅದೇ ಸಾಧನವನ್ನೇ ಸ್ವೀಕರಿಸಿ ವ್ಯವಹಾರಿಸಬೇಕಾಗಿರುತ್ತದೆ. ವೇದದ ಉಪದೇಶವೇನೆಂದರೆ, "ನೀವು ಹೇಗೂ ವ್ಯವಹಾರವನ್ನು ಮಾಡುತ್ತಲೇ ಇರುವಿರಷ್ಟೆ; ನೀವು ಹೇಗೂ ಇಲ್ಲಿಯವರೆಗೆ ಇದನ್ನು ತಪ್ಪಿಸಿಕೊಳ್ಳಲಾರಿರಷ್ಟೆ? ಈ ವ್ಯವಹಾರವನ್ನು ಹೇಗೆ ಮಾಡಿದರೆ ನಿಮಗೆ ಜೀವನವು ಸುಪಥವಾಗುವದೋ, ಹೇಗೆ ಮಾಡಿದರೆ ಈ ವ್ಯವಹಾರದ ಮೂಲಕವೇ ನೀವು ಪರಮಪುರುಷಾರ್ಥವನ್ನೂ ಪಡೆದುಕೊಳ್ಳಬಹುದೋ, ಅದನ್ನು ತಿಳಿದುಕೊಳ್ಳಿರಿ. ಬರಿಯ ಇಂದ್ರಿಯವಿಷಯಗಳ ಸಂಬಂಧದಿಂದ ಆಗುವ ಮಾನಸಪ್ರತಿಕ್ರಿಯೆಯನ್ನು ನೀವು ಅರಿತೇ ಇರುತ್ತೀರಿ. ಇದರಿಂದ ಜ್ಞಾನವು ಹೆಚ್ಚಿದರೂ ಅಜ್ಞಾನವೂ ಹೆಚ್ಚುತ್ತಿದೆ; ಸುಖಸಾಮಗ್ರಿಗಳು ಹೆಚ್ಚಿದರೂ ದುಃಖವೂ ಹೆಚ್ಚುತ್ತಿದೆ; ಅಭಯಕ್ಕೆ ಉಪಾಯಗಳು ಹೊಳೆಯುತ್ತಿದ್ದರೂ ಅವುಗಳೊಡನೆ ಭಯವೂ

ಹೆಚ್ಚುತ್ತಿದೆ. ಅಲ್ಲವೇ? ಈಗ ಇನ್ನೊಂದು ದೃಷ್ಟಿಯಿಂದ ಈ ಪ್ರಪಂಚವನ್ನು ನೋಡಿರಿ. ಈ ಪ್ರಪಂಚವು ತನಗೆತಾನೇ ಇರುವದಿಲ್ಲ, ಇದರಲ್ಲಿ ಕಾಣಬರುತ್ತಿರುವ ಚಿತ್ರವಿಚಿತ್ರ ಅನುಭವಹೇತುಗಳು ತಮ್ಮಿಂದ ತಾವೇ ಆಗಿರುವದಿಲ್ಲ. **ಇದೆಲ್ಲವೂ ಪರಮತ್ಮನ ಮಹಿಮೆ,** ಪರಮಾತ್ಮನ ವಿಭೂತಿ; ಈ ಪ್ರಪಂಚದೊಳಗೆಲ್ಲ, ದ್ರಾಕ್ಷಿಯ ಹಣ್ಣಿನಲ್ಲೆಲ್ಲ ರಸವು ತುಂಬಿರುವಂತೆ, ಪರಮಾತ್ಮನ ಆನಂದರಸವು ತುಂಬಿರುತ್ತದೆ; ನೀವು ಈ ಪ್ರಪಂಚಕ್ಕೆ ಹೊರಚ್ಚಾಗಿಲ್ಲ; ನೀವೂ ಈ ಪ್ರಪಂಚಕ್ಕೆ ಸೇರಿದವರು. ಆದ್ದರಿಂದ ನಿಮ್ಮೊಳಗೂ ಆ ಪರಮಾತ್ಮನ ಆನಂದರಸವು ತುಂಬಿರುತ್ತದೆ. ಆದ್ದರಿಂದ "ನನಗಾಗಿ ಈ ಪ್ರಪಂಚವು ಎಂಬ ಹೆಮ್ಮೆಯ ಬುದ್ಧಿಯನ್ನು ಬಿಡಿರಿ. ಪರಮಾತ್ಮನಿಗಾಗಿ, ಪರಮಾತ್ಮನ ಲೀಲೆಯನ್ನು ಹೊರಹೊಮ್ಮಿಸುತ್ತಾ, ಈ ಪ್ರಪಂಚವು ಇರುವುದು. 'ನಾನು ನೀನು, ಅವನು, ಎಲ್ಲರೂ–ಆ ಪರಮಾತ್ಮನಲ್ಲಿಯೇ ಇರುವೆವು. ಈ ಒಟ್ಟುಪ್ರಪಂಚವೇ ಪರಮಾತ್ಮನ ಮಹಿಮೆ' ಎಂಬುದನ್ನು ನೆನಪಿಗೆ ತಂದುಕೊಳ್ಳಿರಿ. ಈ ದೃಷ್ಟಿಯಿಂದ ವ್ಯವಹಾರ ಮಾಡಿರಿ, ನಿಮಗೆ ಎಲ್ಲೆಲ್ಲಿಯೂ ಆನಂದವೇ ಕಾಣಬರುವದು."

ನಾನು ಈ ಬರೆವಣಿಗೆಯಲ್ಲಿ ಪರಾಮರ್ಶಿಸಿರುವ ಎರಡು ದೃಷ್ಟಿಗಳ ವಿಶೇಷವನ್ನು ವಾಚಕರು ಮನಸ್ಸಿಗೆ ತಂದುಕೊಳ್ಳಬೇಕು. ಮೊದಲನೆಯದು **ವ್ಯಷ್ಟಿದೃಷ್ಟಿ. "ನಾನು"** ಎಂಬ ವ್ಯಷ್ಟಿಮನುಷ್ಯನನ್ನು ಹೊರಗಿನ ಪ್ರಪಂಚದಿಂದ ಬೇರ್ಪಡಿಸಿಕೊಂಡು ನೋಡುವ ದೃಷ್ಟಿಯು ಮೊದಲನೆಯ ದೃಷ್ಟಿ. ಈ ದೃಷ್ಟಿಯಲ್ಲಿ "ನಾನು" ಎಂಬ ಪದಾರ್ಥಕ್ಕೆ ಬಹಳ ಬೆಲೆ. ಅದನ್ನು ದೊಡ್ಡಪೀಠದ ಮೇಲೆ ಕುಳ್ಳಿರಿಸಿ ಅಭಿಷೇಕಮಾಡಿರುತ್ತೇವೆ; ಈ "ನಾನು" ಎಂಬ ರಾಜನಿಗಾಗಿ ಮಿಕ್ಕದ್ದೆಲ್ಲವೂ ಬೇಕಾಗಿದೆ. ನಾನು, ನನ್ನ ಶರೀರ, ನನ್ನ ಇಂದ್ರಿಯ, ನನ್ನ ಪ್ರಾಣ– ಇವುಗಳನ್ನು ಆರಾಧಿಸುವದು ಮುಖ್ಯವಾದ ಗುರಿ. ಇದಕ್ಕೆ ಮಿಕ್ಕದ್ದೆಲ್ಲ ಅಡಿಯಾಳಾಗಿರಬೇಕು. ಯಾವದೇ ಆಗಲಿ "ನನ್ನದಾಗಿ" ನನಗೆ ಅನುಕೂಲವಾಗಿರುವ ಭೋಗಗಳನ್ನು ಒದಗಿಸುವದಕ್ಕಾಗಿರಬೇಕು; ಅದಕ್ಕಾಗಿಯೇ ಅದು ನಮಗೆ ಪ್ರಿಯವಾಗಿರುತ್ತದೆ. ಯಾವದು "ನನ್ನದು" ಎಂದು ಕರೆಯಿಸಿಕೊಳ್ಳುವದಕ್ಕೆ ಅರ್ಹವಲ್ಲವೋ, ಯಾವದು ನನ್ನ ಆರಾಧನೆಗೆ ಸಾಮಗ್ರಿಗಳನ್ನೊದಗಿಸದೋ ಅದೆಲ್ಲವೂ ನನಗೆ ಪರವಸ್ತು, ನನಗೆ ಹೊಂದಿಕೊಂಡಿರುವ ಮನೆ, ಹೊಲ, ಹಣ, ಹೆಂಡತಿ, ಮಕ್ಕಳು, ನಂಟರು, ಊರು, ಕೇರಿ, ವಿದ್ಯೆ, ಬುದ್ಧಿ, ಜನ, ರಾಷ್ಟ್ರ–ಯಾರೂ, ಯಾವದೊಂದೂ, ನನ್ನ ಲೆಕ್ಕದಲ್ಲಿರುವದಿಲ್ಲ. ಇವುಗಳಲ್ಲಿ ಯಾವದು ನನಗೆ ಪ್ರತಿಕೂಲವಾಗಿರುವದೋ,

ನನ್ನ ಸುಖಕ್ಕೆ ಅಡ್ಡಿಯನ್ನು ತರಬಹುದೆಂದು ನನಗೆನಿಸುವದೋ, ಅದೆಲ್ಲ ನನಗೆ ಭಯ ಹೇತು, ನನ್ನ ಶತ್ರು, ನನಗೆ ದ್ವೇಷ್ಯ! ಇದು ಕೇವಲೇಂದ್ರಿಯದೃಷ್ಟಿಯ ಭಾವನೆ.

ಇನ್ನು ಎರಡನೆಯದಾದ **ಸಮಷ್ಟಿದೃಷ್ಟಿ**ಯನ್ನವಲಂಬಿಸಿ ನೋಡೋಣ. ಇದೆಲ್ಲವೂ– ನಾನು, ನೀನು, ಅವನು, ಮನೆ, ಹೊಲ, ಹಣ, ನಾಗರಿಕತೆ, ರಾಷ್ಟ್ರ, ಊರು, ಕಾಡು, ನದಿ, ಬೆಟ್ಟ, ಸಮುದ್ರ, ಆಕಾಶ, ಭೂಮಿ, ಸೂರ್ಯ, ಚಂದ್ರ, ನಕ್ಷತ್ರಗಳು, ನಮಗೆ ಕಾಣುತ್ತಿರುವ ಸಸ್ಯಗಳು, ಪ್ರಾಣಿಗಳು, ಮನುಷ್ಯರು– ಎಲ್ಲರೂ ಪರಮಾತ್ಮನ ಆನಂದಾಮೃತರಸವು ಹೊರಚಿಮ್ಮುವ ಚಿಲುಮೆಗಳು. ಆಕಾಶದಲ್ಲಿ ಅಲ್ಲಿ, ಇಲ್ಲಿ, ಎಲ್ಲೆಲ್ಲಿಯೂ ಇದ್ದು ಆಕಾಶವನ್ನೂ ಮೀರಿರುವ ತನಗೆ ಯಾವದೊಂದು ಆಧಾರವನ್ನೂ ಬಯಸದೆಯೇ ತನ್ನಲ್ಲಿ ತಾನು ಇದ್ದುಕೊಂಡಿರುವ ಆನಂದಾಮೃತಸಾಗರವೇ ಆ ಪರಮಾತ್ಮನ ಸ್ವರೂಪವು. ಆಗ, ಈಗ, ಮುಂದೆ– ಮೂರು ಕಾಲದಲ್ಲಿಯೂ ಬತ್ತದೆ ಇದ್ದು ಕಾಲದ ಎಲ್ಲೆಕಟ್ಟನ್ನೂ ಮೀರಿರುವ ಆನಂದಾಮೃತಸಾಗರವೇ ಆ ಪರಮಾತ್ಮನ ಸ್ವರೂಪವು. ಇದೇ ವಿಶಾಲವಾದ ಮತ್ತೊಂದು ದೃಷ್ಟಿ. ಈ ದೃಷ್ಟಿಯಲ್ಲಿ ಪರಮಾತ್ಮನಿಗೇ ಬಹಳ ಬೆಲೆ, ಆ ಪರಮಾತ್ಮನನ್ನು ಮೊದಲು ನಮ್ಮ ಹೃದಯಪೀಠದಲ್ಲಿ ಕುಳ್ಳಿರಿಸಿ ನಾನು ಎಂಬುದನ್ನು ಸ್ವಲ್ಪ ಇತ್ತ ಸರಿಯಿಸಬೇಕು. ಆಗ ಈ ನಾನು ಎಂಬುದು ಸಾತ್ತ್ವಿಕವಾಗುವದು, ಆ ಪರಮಾತ್ಮನ ಆನಂದದಲ್ಲಿ ಅದ್ದಿದ ಕಣ್ಣಿನಿಂದ ನೋಡಿದಾಗ ನನಗೆ ನಾನು ಎಷ್ಟು ಪ್ರಿಯನೋ ಮಿಕ್ಕವರೂ ಅಷ್ಟೇ ಪ್ರಿಯರಾಗುವರು. ಈ ದೃಷ್ಟಿಯುಳ್ಳವರೆಲ್ಲರೂ ಆ ಪರಮಾತ್ಮನ ಸಂಬಂಧದಿಂದ ಒಬ್ಬರಿಗೊಬ್ಬರು ನಿತ್ಯಬಂಧುಗಳಾಗಿರುವರು. ಇಂಥವರು ಹೆಚ್ಚಿದ ಸಮಾಜವೂ ತನ್ನ ತಿಳಿವಳಿಕೆಯನ್ನು ಮಾನವವರ್ಗದ ಅಭ್ಯುದಯಕ್ಕೇ ಉಪಯೋಗಿಸುವದು, ಆ ಸಮಾಜದ ವ್ಯವಹಾರವು ಸುಖಸಮೃದ್ಧವಾದ ಫಲವನ್ನೇ ಕೊಡುತ್ತಿರುವದು.

ಈ ದೃಷ್ಟಿಯಲ್ಲಿ ಭೌತಿಕವಿಜ್ಞಾನಕ್ಕೆ ಯಾವ ಬೆಲೆಯೂ ಇಲ್ಲವೆಂದಾಗಲಿ, ಈ ದೃಷ್ಟಿಯವರೆಲ್ಲರೂ ಇಹಸುಖವನ್ನು ದ್ವೇಷಿಸುತ್ತಿರುವ ಬೈರಾಗಿಗಳಾಗುವ ರೆಂದಾಗಲಿ ಭಾವಿಸಬಾರದು. ಅವರಿಗೆ ಈ ಲೋಕದಲ್ಲಿ ಸಿಕ್ಕಬಹುದಾದ ಸುಖವೆಲ್ಲವೂ ಬೇಕು. ತಾರುಣ್ಯ, ನೀತಿ, ವಿದ್ಯೆ, ಮುಂದುವರಿಯುವ ಆಶೆ, ಗಟ್ಟಿಮುಟ್ಟಾದ ಮೈಕಟ್ಟು, ಆರೋಗ್ಯ, ಬಲ, ಧನಸಂಪತ್ತು– ಎಲ್ಲವೂ ಹೆಚ್ಚುತ್ತಿರಬೇಕು. ಆದರೆ ಇವುಗಳಲ್ಲಿ ಯಾವದೊಂದು ತನಗಾಗಿ ತಾನು ಬೇಕಿರುವದಿಲ್ಲ. ಅದು

ಅಖಂಡಾನಂದಸ್ವರೂಪನಾದ ಪರಮಾತ್ಮನಲ್ಲಿ ಒಂದುಗೂಡಿರುವದಕ್ಕಾಗಿ ಬೇಕು. ಆದ್ದರಿಂದ ಯಾವದಾದರೂ ಕಾರಣದಿಂದ ಈ ಸಾಮಗ್ರಿಗಳಲ್ಲಿ ಯಾವದಾದರೊಂದು ಆ ಆನಂದವನ್ನು ಕಡೆಗಣಿಸಿಯೇ ಸಿಕ್ಕಬೇಕೆಂದಾದರೆ, ಆಗ ಯಾವ ಚಿತ್ತಸಂಕೋಚವೂ ಇಲ್ಲದೆ ಅದನ್ನು ಅಲಕ್ಷಿಸಿ ಪರಮಾತ್ಮನ ಕಡೆಗೇ ನಾವು ಮುಂದಕ್ಕೆ ಸಾಗಬೇಕಗುತ್ತದೆ. ಏಕೆಂದರೆ ಈ ದೃಷ್ಟಿಗೆ ಮಿಕ್ಕ ಭೋಗರಾಶಿಯೆಲ್ಲ ಒಕ್ಕಡೆ ಸೇರಿದರೂ ಆ ಪರಮಾತ್ಮನಿಂದ ದೊರೆಯುವ ಆನಂದದ ಅಂಶಮಾತ್ರವಾಗಿರುತ್ತದೆ.

ಇನ್ನೊಂದು ವಿಷಯ. ಈ ಲೋಕವು ನಮ್ಮ ಈಗಿನ ಬಾಳುವೆಯ ಕ್ಷೇತ್ರವಾಗಿರುತ್ತದೆ. ಇಲ್ಲಿ ನಮಗೆ ಸಿಕ್ಕಬೇಕಾದ ಅನುಕೂಲ್ಯಗಳ ವಿಚಾರವನ್ನೂ ಈ ಜೀವನವನ್ನು ಉತ್ತಮಗೊಳಿಸಿಕೊಳ್ಳುವ ರೀತಿಯನ್ನೂ ಮನಸ್ಸಿಗೆ ಹತ್ತಿಸಿಕೊಳ್ಳುವದು ನಮ್ಮ ಆದ್ಯಕರ್ತವ್ಯವೇ ಸರಿ. ಇಲ್ಲಿ ನಮಗೆ ಕಾಣಬರುವ ಶಿವಸುಂದರದೃಶ್ಯಗಳನ್ನು ನೋಡಿ ನಲಿಯುವದಕ್ಕೆ ನಮ್ಮ ಕಣ್ಮನಗಳನ್ನು ಉಪಯೋಗಿಸದೆ ಹುಟ್ಟಿದವರು ಹುಟ್ಟಿದಂತೆ ಇರುವವರು ಮನಷ್ಯಜನ್ಮವನ್ನು ಪಡೆದದ್ದು ಸಾರ್ಥಕವಾಯಿತೆಂದು ಯಾರೂ ಭಾವಿಸುವಹಾಗಿಲ್ಲ. ಇದೆಲ್ಲವೂ ಆ ಪರಮಾತ್ಮನ ವಿಭೂತಿ ಎಂದು ತಿಳಿದವರಿಗಂತೂ ಈ ಭೂಮಂಡಲ ವೆಂಬುದೊಂದು ಆ ವಿಶ್ವನಾಥನ ಪವಿತ್ರದೇವಾಲಯವಾಗಿರುವದರಿಂದ ಇದನ್ನು ಸರ್ವಪ್ರಕಾರದಿಂದಲೂ ಪೂಜ್ಯಬುದ್ಧಿಯಿಂದ ನೋಡಿ ಧನ್ಯರಾಗುವದು ಕರ್ತವ್ಯವೇ ಆಗಿರುತ್ತದೆ. ಆದರೆ ಈ ವಿಭೂತಿಯನ್ನು ಇಷ್ಟು ಹೊಗಳಿದಮೇಲೂ ಒಂದು ಮುಖ್ಯವಿಷಯವನ್ನು ನಮ್ಮ ಧ್ಯೇಯವಾಗಿಟ್ಟಿಕೊಳ್ಳದೆ ಇರುವಹಾಗಿಲ್ಲ. ಅದೇನೆಂದರೆ ಕಾಲಾಕಾಶಾಗಳಿಂದೊಡಗೂಡಿ ತೋರುತ್ತಿರುವ **ಈ ಇಡಿಯ ಜಗತ್ತೂ ಇದರಲ್ಲಿರುವ ಬ್ರಹ್ಮಾದಿಸ್ತಂಬಪರ್ಯಂತವಾಗಿರುವ ಭೂತಗಳೂ ಆ ಪರಮಾತ್ಮನ ಒಂದು ಪಾದವು ಮಾತ್ರ; ಇನ್ನು ಮೂರು ಪಾದಗಳಿಂದಾಗಿರುವ ಆತನ ಅಮೃತಾನಂದಸ್ವರೂಪವು ಇದನ್ನು ಮೀರಿ, ಇದರ ಹಂಗಿಲ್ಲದೆಯೇ ಇದ್ದುಕೊಂಡಿರುತ್ತದೆ.**

ಪರಮಾತ್ಮನು ಸಚ್ಚಿದಾನಂದಸ್ವರೂಪನಾಗಿರುವದರಿಂದ ನಿರವಯ ವನಾಗಿರುತ್ತಾನೆ. ಆದ್ದರಿಂದ ಅವನನ್ನು ಒಡೆದು ಕಾಲುಪಾಲು ಜಗತ್ತಿನ ರೂಪದ ವಿಭೂತಿಯಾಗಿ ತೋರಿಕೊಳ್ಳುತ್ತಿರುವದೆಂದೂ ಮುಕ್ಕಾಲುಪಾಲು ಇದನ್ನು ಮೀರಿ ಸ್ವತಂತ್ರವಾಗಿರುವದೆಂದೂ ಹೇಳುವದು ಗಣಿತಶಾಸ್ತ್ರದ ದೃಷ್ಟಿಯಿಂದಲ್ಲವೆಂಬುದು

ಸ್ಪಷ್ಟವಾಗಿಯೇ ಇದೆ. ಆದರೂ ವೇದದಲ್ಲಿ ಹೀಗೆಂದು ಹೇಳಿರುವದಕ್ಕೆ ಒಂದು ಉದ್ದೇಶವಿರುತ್ತದೆ. ಈ ಭೂಮಿಯಾಗಲಿ ಅಥವಾ ಇದಕ್ಕಿಂತ ಬೇರೆಯಾದ ಲೋಕಗಳಾಗಲಿ ಮಹಾವಿಭವಯುಕ್ತವಾಗಿರಬಹುದು. ಅವುಗಳಲ್ಲಿ ಶರೀರಗ್ರಹಣವನ್ನು ಮಾಡುವದೂ ಅಲ್ಲಿಯ ಭೋಗಗಳ ಸೂರೆಯಲ್ಲಿ ಪಾಲವನ್ನು ಪಡೆದು ಸುಖಿಸುವದೂ ಬಾಯಿನೀರುಕರೆಯಿಸುವ ಗುರಿಗಳೇ ಸರಿ. ಆದರೂ ಈ ಎಲ್ಲಾ ಲೋಕಗಳ ಜೀವನವನ್ನೂ ಇಲ್ಲಿ ಸಿಕ್ಕುವ ಸುಖವನ್ನೂ ನಾವು ತೂಕಹಾಕಿನೋಡಿದರೆ ಕಾಣಬರುವದೇನೆಂದರೆ, ಇವುಗಳೆರಡಕ್ಕೂ ಆಧಾರನಾಗಿ ಇವಕ್ಕೆಲ್ಲ ಜೀವಕಳೆಯನ್ನು ಕೊಟ್ಟಿರುವ ಪರಮಾತ್ಮನ ಆನಂದಕ್ಕೆ ಹೋಲಿಸಿದರೆ ಈ ಸುಖವು ಮಹಾಸಮುದ್ರದಲ್ಲಿ ಒಂದು ಹನಿಯಷ್ಟೂ ಆಗಲಾರದು. ಮನುಷ್ಯನು, ಅದರಲ್ಲಿಯೂ ವಿವೇಕಿಯೂ ವಿಚಾರಪರನೂ ಆದ ಮನುಷ್ಯನು, ಆ ಪರಮತ್ಮನ ಸ್ವರೂಪವನ್ನು ಅರಿತುಕೊಳ್ಳುವದಕ್ಕೆ ಪ್ರಯತ್ನಿಸಬೇಕು. ಆ ಪರಮಾತ್ಮನ ಆನಂದದಲ್ಲಿ ಒಮದಲ್ಲ ಒಂದು ದಿನ ನಾವೆಲ್ಲರೂ ಸೇರತಕ್ಕವರೆಂದೂ ಪರಮಾರ್ಥದೃಷ್ಟಿಯಿಂದ ನೋಡಿದರೆ ಈಗಲೇ ಇಲ್ಲಿಯೇ ನಾವುಗಳು ಆ ಆನಂದಸಾಗರದಲ್ಲಿಯೇ ಇದ್ದುಕೊಂಡಿರುವೆವೆಂದೂ ತಿಳಿದುಕೊಳ್ಳುವ ವಿದ್ಯೆಗೆ ನಮ್ಮ ಎಲ್ಲಾ ವಿದ್ಯಾಬುದ್ಧಿಗಳನ್ನೂ ಸಾಧನಮಾಡಿಕೊಳ್ಳಬೇಕು. ಅದೇ ಮಾನವಜನ್ಮದ ಸಾಫಲ್ಯ.

# 5. ಪ್ರಪಂಚದೊಳಗೆಲ್ಲಾ ವ್ಯಾಪಿಸಿರುವ ಪರಮಾತ್ಮತತ್ತ್ವ

★ಈ ಪ್ರಪಂಚವು ಪರಮಾತ್ಮನ ಮಹಿಮೆಯು. ಆದರೆ ಇದು ಪರಮಾತ್ಮನ ಪಾದಮಾತ್ರವಾಗಿದೆ. ಇದಕ್ಕಿಂತಲೂ ಹೆಚ್ಚಿನದಾದ ಆತನ ಅಮೃತಸ್ವರೂಪವು ತನ್ನ ಸ್ವಸ್ವರೂಪದಲ್ಲಿಯೇ ಇದ್ದುಕೊಂಡಿರುತ್ತದೆ. ಆ ಪರಮಾರ್ಥಸ್ವರೂಪವನ್ನು ಕಂಡುಕೊಂಡು ಅದರಲ್ಲಿ ಒಂದಾಗಿ ನೆಲನಿಲ್ಲುವದೇ ಮಾನವನ ಅಂತಿಮಧ್ಯೇಯವು ಎಂಬ ವೇದದ ದಿವ್ಯಸಂದೇಶವನ್ನು ಸ್ವಲ್ಪಮಟ್ಟಿಗೆ ತಿಳಿಸಿಕೊಟ್ಟದ್ದಾಗಿದೆ. ಈಗ ಪರಮಾತ್ಮನಿಗೂ ಆತನ ಪ್ರಪಂಚರೂಪವಾದ ಮಹಿಮೆಗೂ ಇರುವ ಸಂಬಂಧವನ್ನು ಕುರಿತು ವಿಚಾರ ಮಾಡತಕ್ಕದ್ದು ಉಳಿದಿದೆ. ಇದನ್ನು ಪುರಷಸೂಕ್ತದಲ್ಲಿ ಹೀಗೆ ವರ್ಣಿಸಲಾಗಿದೆ :

---

★ ಜನವರಿ 1955, ಸಂಪುಟ 24, ಪುಟ 121–129

**ತ್ರಿಪಾದೂರ್ಧ್ವ ಉದೈತ್ಪುರುಷಃ ಪಾದೋऽಸ್ಯೇಹಾಭವತ್ಪುನಃ ।**

**ತತೋ ವಿಷ್ವಙ್ವ್ಯಕ್ರಾಮತ್ಸಾಶನಾನಶನೇ ಅಭಿ ॥4॥**

**ಮೂರು ಪಾದಗಳ ಪುರುಷನು ಊರ್ಧ್ವನಾಗಿ ಮೇಲಕ್ಕೆ ಏರಿದ್ದನು. ಅವನ ಈ ಪಾದವು ಇಲ್ಲಿ ಮತ್ತೆ ಬಂದಿತು. ಆ ಬಳಿಕ ಆತನು ಸಾಶನ, ಅನಶನ– ಇವೆರಡನ್ನೂ ಅಭಿಲಕ್ಷಿಸಿ ಎಲ್ಲೆಲ್ಲಿಯೂ ವಿಕ್ರಮಿಸಿದನು.**

ವೇದದಲ್ಲಿ ಪರಮಾರ್ಥವನ್ನು ಎರಡು ರೂಪಗಳಿಂದ ವರ್ಣಿಸಿರುವುದು ಕಂಡು ಬರುತ್ತದೆ. ಒಂದು ಕಾಲದೇಶಗಳ ನಿಯಮಕ್ಕೆ ಕಟ್ಟುಬಿದ್ದಿರುವ ಪ್ರಪಂಚರೂಪವು, ಇದನ್ನು ಪರಮಾತ್ಮನ **ಮಹಿಮೆ**ಯೆಂದು ವೇದವು ಕರೆದಿರುತ್ತದೆ. ಮತ್ತೊಂದು ಕಾಲದೇಶಗಳನ್ನು ಮೀರಿರುವ ಈ ಪ್ರಪಂಚಕ್ಕಿಂತಲೂ ಉತ್ತಮವಾದ ಸ್ವರೂಪವು. ಇದನ್ನು ವೇದದಲ್ಲಿ **ಅಮೃತಸ್ವರೂಪ**ವೆಂದು ಕರೆದಿರುತ್ತದೆ, ಪ್ರಪಂಚಾತೀತವಾದ ಸ್ವರೂಪವು ಕಾಲದೇಶಾತೀತವಾಗಿರುವದೆಂದೂ ಅಮೃತವಾಗಿರುವದೆಂದೂ ಹೇಳಿರುವದನ್ನು ಮನದಂದರೆ ಕಾಲಾಕಾಶ ಗಳಲ್ಲಿರುವಂತೆ ತೋರುವ ಈ ಪ್ರಪಂಚವು **ಮರ್ತ್ಯ**ರೂಪವೆಂದು ತಿಳಿಸುವದೂ ವೇದದ ಉದ್ದೇಶವೆಂಬ ಉಪಸಿದ್ಧಾಂತವೊಂದು ಹೊರಡುತ್ತದೆ.

ಅಮೃತವಾಗಿರುವ ಪರಮಾತ್ಮಸ್ವರೂಪಕ್ಕೂ ಮರ್ತ್ಯವಾಗಿರುವ ಸ್ವರೂಪಕ್ಕೂ ಸಂಬಂಧವೇನು? ಅಮೃತದಿಂದ ಮರ್ತ್ಯವು ಹೇಗೆ ಉಂಟಾಯಿತು? ಒಬ್ಬನೇ ಪರಮಾತ್ಮನು ಅಮೃತನಾಗಿಯೂ ಮರ್ತ್ಯನಾಗಿಯೂ ಇರುವನೆಂಬುದು ತನಗೆತಾನೆ ವಿರುದ್ಧವಲ್ಲವೆ? ಈ ಒಗಟನ್ನು ಬಿಚ್ಚುವದು ಹೇಗೆ? ಈ ಪ್ರಶ್ನೆಯು ತತ್ತ್ವವಿಚಾರಕರೆಲ್ಲರನ್ನೂ ತಲೆಕೆರೆದುಕೊಳ್ಳುವಂತೆ ಮಾಡಿರುತ್ತದೆ. ಮರ್ತ್ಯವಾದ ಪ್ರಪಂಚವು ಅನೇಕಾತ್ಮಕವಾಗಿರುತ್ತದೆ. ಇದರಲ್ಲಿರುವ ವಸ್ತುಗಳು ಚೇತನಾ ಚೇತನಾತ್ಮಕವಾಗಿರುತ್ತವೆ, ಪರಿಚ್ಛಿನ್ನವಾಗಿರುತ್ತವೆ, ಹಲವು ಪರಸ್ಪರವಿರುದ್ಧವಾಗಿಯೂ ಇರುವಂತೆ ಕಾಣಿಸುತ್ತವೆ. ಪ್ರಪಂಚಾತೀತವಾಗಿರುವ ಸ್ವರೂಪವು ಏಕಾತ್ಮಕವಾಗಿರುತ್ತದೆ. ಅದರಲ್ಲಿ ಯಾವ ವಿಶೇಷಗಳೂ ಇರುವದಿಲ್ಲ; ಅದು ಅನಂತವಾಗಿರುತ್ತದೆ. ಹೀಗೆ ಒಂದೇ ತತ್ತ್ವ ಈ ಎರಡು ವಿರುದ್ಧವಾದ ರೂಪಗಳಲ್ಲಿರುವದೆಂಬುದಾಗಲಿ, ಇವುಗಳಲ್ಲಿ ಒಂದರಿಂದ ಮತ್ತೊಂದು ಉಂಟಾಯಿತೆಂಬುದಾಗಲಿ ಸಾಮಾನ್ಯ

ಮನಸ್ಸಿಗೆ ಒಗ್ಗದ ಮಾತಾಗಿರುತ್ತದೆ. ಆದರೂ ವೇದದಲ್ಲಿ ಅದೇ ಅಮೃತಸ್ವರೂಪವೇ ಈ ಪ್ರಪಂಚದಲ್ಲಿ ತೋರಿಕೊಳ್ಳುತ್ತಿರುವದೆಂದು ಹೇಳುತ್ತಿದೆಯಲ್ಲ!

ವೇದಪ್ರಮಾಣವನ್ನು ಹಿಡಿಯುವ ತತ್ತ್ವವಿಚಾರಕರನ್ನೆಲ್ಲ ಎರಡು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು. ಅತೀಂದ್ರಿಯವಾದ ಪ್ರಪಂಚಾತೀತವಾದ ಪರಮಾರ್ಥವೊಂದು ಇದೆ ಎಂಬುದು ಶುದ್ಧಮೂಢವಿಶ್ವಾಸವೆಂದು ಹೇಳಿ ಐಂದ್ರಿಯಕಪ್ರಪಂಚವನ್ನೇ ಪರಮಾರ್ಥವೆಂದು ಹಿಡಿದು ಅದರಲ್ಲಿ ಭೌತಿಕ ವಿಜ್ಞಾನವನ್ನನುಸರಿಸಿ ವ್ಯವಹಾರವನ್ನು ಮಾಡುವದೂ ಆ ವಿಜ್ಞಾನಕ್ಕೆ ಅನುಗುಣವಾದ ತತ್ತ್ವಶಾಸ್ತ್ರವೊಂದನ್ನು ಏರ್ಪಡಿಸಿಕೊಳ್ಳುವದೂ ವಿಚಾರಕರ ಗುರಿಯಾಗಿರಬೇಕೆನ್ನುವವರು ಒಂದು ತಂಡ. ಪ್ರಪಂಚದಲ್ಲಿರುವ ದೃಶ್ಯಗಳು ಒಂದಕ್ಕೊಂದು ವಿರುದ್ಧವಾಗಿರುವ ಸ್ವಭಾವವಾಗಿ ತೋರಿದರೂ ಅವುಗಳೆಲ್ಲವೂ ಹೇಗೋ ಪ್ರಪಂಚಾತೀತವಾದ ಪರಮಾರ್ಥದಲ್ಲಿ ಒಂದಾಗಿ ಸೇರಿಕೊಂಡಿರುವ ವೆಂದು ತರ್ಕಿಸುತ್ತಿರುವವರು ಇನ್ನೊಂದು ತಂಡ.

ಅತೀಂದ್ರಿಯವಾದ ಪರಮಾರ್ಥದಿಂದ ಈ ನಮ್ಮ ಪ್ರಪಂಚವು ಹೇಗೆ ಉಂಟಾಯಿತೆಂಬುದನ್ನು ವಿವರಿಸುವದಕ್ಕೆ ಹೊರಟಿರುವವರು ಕಟ್ಟಕಡೆಗೆ ಈ ಪ್ರಪಂಚದ ಮರ್ತ್ಯತ್ವಕ್ಕೆ ಕಾರಣವಾಗಿರುವ ದೇಶಕಾಲಗಳೂ ಇವುಗಳಲ್ಲಿ ಪರಿಚ್ಛಿನ್ನವಾಗಿರುವ ದೃಶ್ಯಗಳೂ ಹೀಗೆಯೇ ಒಂದಾನೊಂದುರೂಪದಲ್ಲಿ ಮೂಲಪರಮಾರ್ಥದಲ್ಲಿಯೂ ಇದ್ದಿರಬೇಕೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ದೇಶಕಾಲಾತೀತವಾದ ಅಪರಿಚ್ಛಿನ್ನವಾದ ಅದ್ವಿತೀಯವಾದ ಪರಮಾರ್ಥದಲ್ಲಿ ಹೇಗೋ ಒಂದು ರೀತಿಯಿಂದ ದೇಶಕಾಲಗಳೂ ಈ ಜಗತ್ತಿನ ದೃಶ್ಯಗಳೂ ಇದ್ದಿರಬೇಕೆಂದು ಕಲ್ಪಿಸಿದರೆ, ಅದು ಅಪರಿಚ್ಛಿನ್ನವೆಂತ ಹೇಗಾದೀತೆಂಬುದು ಈ ವಿಚಾರಕರ ಮನಸ್ಸಿಗೆ ಅದೇಕೋ, ಹೊಳೆದಿರುವದಿಲ್ಲ. ನಮ್ಮ ದೇಶದಲ್ಲಿ ವೇದಾಂತಿಗಳೆನಿಸಿಕೊಂಡಿರುವ ಭೇದಾಭೇದವಾದಿಗಳಿಗೆ ಇದರಲ್ಲಿ ಯಾವ ತೊಡಕೂ ಇರುವದಿಲ್ಲ. ಏಕೆಂದರೆ ಸಮುದ್ರ, ವೃಕ್ಷ– ಮುಂತಾದವುಗಳಂತೆ ಸ್ವಗತಭೇದವಿರುವದೇ ಪರಮಾರ್ಥದ ಸ್ವರೂಪವೆಂಬದೇ ಅವರ ನಿಲುಮೆಯಾಗಿರುತ್ತದೆ. ಒಂದರಿಂದ ಅನೇಕಾತ್ಮಕವಾದ ಪ್ರಪಂಚದ ಉತ್ಪತ್ತಿಯು ಹೇಗಾಯಿತು? – ಎಂಬ ಪ್ರಶ್ನೆಗೆ ಉತ್ತರಕೊಡುವದು ಅವರಿಗೆ ಬಹಳ ಸುಲಭವಾಗಿರುತ್ತದೆ. ಏಕೆಂದರೆ ಅವರು ಹೇಳುವ ಪರಮಾರ್ಥದರಿವು ನಿಜವಾಗಿ

ಒಂದಲ್ಲವೇ ಅಲ್ಲ. ಹಾವಾಡಿಗನು ಬುಟ್ಟಿಯಲ್ಲಿ ವಿವಿಧವಾಗಿ ಸಾಮಾನುಗಳನ್ನು ಕಟ್ಟಿಟ್ಟುಕೊಂಡಿದ್ದು ಅವುಗಳನ್ನು ಹೊಸದಾಗಿ ಸೃಷ್ಟಿಸಿದವನಂತೆ ತನ್ನ ಕೈಚಳಕದಿಂದ ಒಂದೊಂದಾಗಿ ಹೊರಗೆ ಹಾಕುವನಲ್ಲವೆ? ಒಂದರಿಂದ ಅನೇಕವನ್ನು ಹೊರಕ್ಕೆ ತೆಗೆಯುವ ಈ ವಾದಿಗಳ ಕೌಶಲವೂ ಅದೇ ಮಾದರಿಯದಾಗಿರುತ್ತದೆ.

ಆದರೆ ಅನೇಕಾತ್ಮಕವಾಗಿ ಸ್ವಗತಭೇದವುಳ್ಳದ್ದು ಆ ಭೇದಗಳ ವಿಶ್ಲೇಷಣದಿಂದ, ಅವುಗಳು ಒಂದನ್ನೊಂದು ಅಗಲುವದರಿಂದ, ಸ್ವರೂಪಚ್ಯುತಿಯನ್ನು ಹೊಂದುವದೆಂಬುದು ಸ್ವತಃಸಿದ್ಧವಾಗಿರುತ್ತದೆ. ಸಮುದ್ರಾದಿವಸ್ತುಗಳು ಸಾವಯವವಾಗಿರುವದರಿಂದ ಅವುಗಳು ದ್ವೈತಾದ್ವೈತರೂಪವಾಗಿರುವವೆಂಬುದು ವಿರುದ್ಧವಲ್ಲ; ಆದರೆ ನಿತ್ಯನಿರವಯವನಾದ ಚಿನ್ಮಾತ್ರನಾದ ಪರಮಾತ್ಮನು ದ್ವೈತಾದ್ವೈತಾತ್ಮಕನಾಗಿರುವನೆಂಬುದನ್ನು ಮನಸ್ಸಿನಲ್ಲಿ ಕಲ್ಪಿಸುವದೂ ಸಾಧ್ಯವಿಲ್ಲ.

ಇನ್ನೊಂದು ವಿಚಾರ. ಅತೀಂದ್ರಿಯವಾದ ಪರಮಾರ್ಥದಿಂದ ಪ್ರಮಾಣಗೋಚವಾಗಿರುವ ಈ ಜಗತ್ತು ಬಂದಿದೆ, ಕಾಲಾಕಾಶಗಳನ್ನು ಮೀರಿರುವ ಪರಮಾರ್ಥದಿಂದ ಕಾಲಾಕಾಶಪರಿಚ್ಛಿನ್ನವಾದ ಜಗತ್ತು ಉಂಟಾಗಿದೆ– ಎನ್ನುವಾಗ ಅತೀಂದ್ರಿಯವೂ ದೇಶಕಾಲಾತೀತವೂ ಆಗಿರುವ ಪರಮಾರ್ಥವನ್ನು ಕಾರಣ–ವಾಗಿಯೂ ಪ್ರಪಂಚವನ್ನು ಕಾರ್ಯವನ್ನಾಗಿಯೂ ಕಲ್ಪಿಸಬೇಕಾಗುವದು. ಆಗ ಪರಮಾರ್ಥವು, ಬೀಜವು ಮರವಾಗಿ ಪರಿಣಮಿಸುವಂತೆ, ಪರಿಣಮಿಸುವದೆಂದೂ ಕಲ್ಪಿಸಬೇಕಾಗುವದು; ಹಾಗಾದರೆ ಪರಮಾರ್ಥದಲ್ಲಿ ಕಾಲಾಕಾಶಗಳು ಅವ್ಯಕ್ತವಾಗಿವೆ ಎನ್ನುವ ಬದಲು ಪರಮಾರ್ಥವೇ ಕಾಲಾಕಾಶಗಳಲ್ಲಿರುವದೆಂದು ತನಗೆತಾನೇ ವಿರುದ್ಧವಾದ ಕಲ್ಪನೆಯನ್ನು ಮಾಡಿಕೊಳ್ಳಬೇಕಾಗುವದು. ಆ ಕಲ್ಪನೆಯಲ್ಲಿ ಕಾಲವೇ ಸರ್ವಾಧಾರವಾದ ಪರಮಾರ್ಥವಾಗುವದು, ಪರಿಣಮಿಸುವ ಪರಮಾರ್ಥವೆಂಬುದು ಕಾಲದಲ್ಲಿ ಬದಲಾಯಿಸುತ್ತಿರುವದರಿಂದ ಅನಿತ್ಯವೆಂದಾಗುವದು. ಅದು ನಿತ್ಯವೆಂದು ತರ್ಕವಿರುದ್ಧವಾಗಿ ಕಲ್ಪನೆಮಾಡಿದರೂ ಅದರ ನಿತ್ಯತ್ವವು ಕಾಲಕ್ಕೆ ಅಧೀನವೆಂದೇ ಆಗುವದು!

ಇದುವರೆಗೆ ನಾವು ಮಾತನಾಡುತ್ತಿರುವದು ತರ್ಕಪ್ರಧಾನವಾಗಿರುವ ತತ್ತ್ವವಿಚಾರದವರ ದೃಷ್ಟಿಯಿಂದ. ತರ್ಕವು ಕಾರ್ಯಕಾರಣಸಂಬಂಧವನ್ನೂ ಹೇತುಪಕ್ಷಸಾಧ್ಯಗಳ ಸಂಬಂಧವನ್ನೂ ಇಟ್ಟುಕೊಂಡೇ ಮುಂದಕ್ಕೆ ಸಾಗಿರುತ್ತದೆ. ಕಾರಣವು ಕಾರ್ಯಕ್ಕಿಂತ ಮೊದಲೇ ಇರಬೇಕೆಂಬ ನಿಯಮವಿರುತ್ತದೆ; ಆದ್ದರಿಂದ ಜಗತ್ಕಾರಣವು ಜಗತ್ತಿಗಿಂತ ಮೊದಲು ಇದ್ದು ಆ ಬಳಿಕ ಜಗತ್ತಾಗಿ

ಪರಿಣಮಿಸಬೇಕೆಂಬ ನಿಯಮವು ಏರ್ಪಡುತ್ತದೆ. ಎಲ್ಲೆಲ್ಲಿ ಹೊಗೆಯಿರುವದೋ ಅಲ್ಲಲ್ಲಿ ಬೆಂಕಿಯಿರುವದು ಎಂಬಂತೆ ನಿಯತವಾದ ವ್ಯಾಪ್ತಿಯಿರುವಲ್ಲಿಯೇ ಇಂಥ ಹೇತುವಿನಿಂದ (reason) ಇಂಥ ನಿಗಮನವು (conclusion) ಏರ್ಪಡುತ್ತದೆ ಎಂದು ತರ್ಕಿಸುವದಕ್ಕೆ ಬರುತ್ತದೆ. ಮಾನವನ ಬುದ್ಧಿಯು ದೃಷ್ಟವಾದ ಜಗತ್ತಿನಲ್ಲಿರುವ ಏಕರೂಪವಾದ ನಿಯಮವನ್ನು ಕಂಡುಕೊಂಡೇ ತರ್ಕಿಸಬೇಕಾಗಿರುವದರಿಂದಲೂ ದೇಶಕಾಲ, ಕಾರ್ಯಕಾರಣ, ಹೇತುಸಾಧ್ಯ–ಇವುಗಳನ್ನು ದಾಟುವದಕ್ಕೆ ಅದರಿಂದ ಎಂದಿಗೂ ಆಗದೆ ಇರುತ್ತದೆ. ಆದರೆ ದೇಶಕಾಲಾದಿಗಳನ್ನೂ ನಾವು ಪ್ರಪಂಚದಲ್ಲಿಯೇ ಕಂಡಿದ್ದರೂ ಇಡಿಯ ಪ್ರಪಂಚವನ್ನೇ ಕಾರ್ಯವಾಗಿಟ್ಟುಕೊಂಡು ಅದಕ್ಕೂ ಅದರ ಆಚೆಗಿರುವ ಪರಮಾರ್ಥಕ್ಕೂ ಈ ದೇಶಕಾಲಾದಿಗಳ ಸಂಬಂಧವನ್ನು ಕಲ್ಪಿಸುತ್ತಿರುವೆವಲ್ಲ! ತರ್ಕಾವಲಂಬಿಗಳಾಗಿ ಜಗತ್ತಿನ ಮೂಲವನ್ನು ನಿರ್ಣಯಿಸುವದಕ್ಕೆ ಹೊರಟಿರುವಾಗ ನಾವು ಯಾವದೋ ಒಂದು ಮಾಯೆಯ ಕಟ್ಟಿಗೆ ಸಿಕ್ಕಿಬಿದ್ದಿರುವೆವೆಂದು ಇದರಿಂದ ವ್ಯಕ್ತವಾಗುವದಿಲ್ಲವೆ?

ಹಾಗಾದರೆ ವೇದದಲ್ಲಿ ಅಮೃತವಾದ ಪರಮಾರ್ಥವು ಮೊದಲು ಇದ್ದಿತೆಂದೂ ಆ ಬಳಿಕ ಅದರಿಂದ ಈ ಮರ್ತ್ಯವಾದ ಪ್ರಪಂಚವು ಆಯಿತೆಂದೂ ಹೇಳಿರುವದನ್ನಾದರೂ ನಾವು ಹೇಗೆ ಮನಸ್ಸಿಗೆ ತಂದುಕೊಳ್ಳಬೇಕು? ಪರಮಾರ್ಥವು ಮೊದಲಿತ್ತು, ಅದರಿಂದ ದೇಶಕಾಲದಿಪರಿಚ್ಛಿನ್ನವಾದ ಜಗತ್ತು ಉಂಟಾಯಿತು– ಎಂದು ವೇದರ್ಷಿಗಳು ಹೇಳುವಾಗಲೂ ಮನುಷ್ಯರಾದ ನಮ್ಮಗಳ ತಿಳಿವಳಿಕೆಗೆಂದಲ್ಲವೆ, ಅವರು ಹೇಳಿರುತ್ತಾರೆ? ದೇಶಕಾಲಪರಿಚ್ಛಿನ್ನವಾಗಿರುವ ನಮ್ಮ ಮನಸ್ಸು ದೇಶಕಾಲಾತೀತವಾಗಿರುವ ಪರಮಾರ್ಥವನ್ನು ಹೇಗೆತಾನೆ ಗ್ರಹಿಸೀತು? ಆ ದೇಶಕಾಲಾತೀತವಾದ ತತ್ತ್ವವನ್ನು ಋಷಿಗಳು ಕಂಡುಕೊಂಡಿದ್ದ ರೆಂದು ನಂಬುವದು ತಾನೇ ಹೇಗಾದೀತು? – ಎಂದು ಯಾರಾದರೂ ಕೇಳಬಹುದಷ್ಟೆ?

ಅದಕ್ಕೆ ಉತ್ತರವನ್ನು ಎರಡು ಬಗೆಯಿಂದ ನಮ್ಮ ದೇಶದವರು ಹೇಳುತ್ತಿದಾರೆ. ದೇಶಕಾಲಾತೀತವಾದ ಪರಮಾರ್ಥವನ್ನು ಯೋಗಸಾಮರ್ಥ್ಯದಿಂದ ಮಹಾತ್ಮರು ಕಂಡುಕೊಂಡಿರುತ್ತಾರೆ. ಮೊಟ್ಟಮೊದಲು ಅಂತಃಕರಣಕ್ಕೆ ಬೇಕಾದ ಸಂಸ್ಕಾರವನ್ನು ಹೊಂದಿದ ಕೆಲವರು ಈ ಪರಮಾರ್ಥವನ್ನು ಕಂಡುಹಿಡಿದುಕೊಂಡರು. ಅವರೇ ಋಷಿಗಳು. ಅವರು ತಮ್ಮ ಅನುಭವವನ್ನು ವೇದಮಂತ್ರಗಳ ರೂಪದಿಂದ ಹೊರಗೆಡಹಿರುತ್ತಾರೆ. ಆ ಮಂತ್ರಗಳನ್ನು ಶ್ರದ್ಧಾಭಕ್ತಿಗಳಿಂದ ಪಠಿಸಿ,

ಮನನಮಾಡಿಕೊಂಡು, ಅವುಗಳಲ್ಲಿ ಹೇಳಿರುವ ತತ್ತ್ವವನ್ನು ನಾವು ಈಗಲೂ ಯೋಗಮಾರ್ಗದಿಂದ ಕಂಡುಕೊಳ್ಳಬಹುದಾಗಿದೆ. ಆದ್ದರಿಂದ ಪರಿಚ್ಛಿನ್ನವಾದ ತರ್ಕವನ್ನು ಬಿಟ್ಟು ಈ ಯೋಗಸಾಧನವನ್ನು ಕೈಗೊಂಡು ಅನುಭವದಿಂದಲೇ ಪರಮಾರ್ಥವನ್ನು ಸಾಕ್ಷಾತ್ಕಾರಮಾಡಿಕೊಳ್ಳಬೇಕು. ಆ ಅನುಭವವುಂಟಾದವರು ಅದಕ್ಕೆ ಅನುಗುಣವಾದ ತರ್ಕವನ್ನೂ ನಮ್ಮಂಥವರಿಗಾಗಿ ತಿಳಿಸಿರುತ್ತಾರೆ. ನಾವೂ ಆ ತರ್ಕವನ್ನನುಸರಿಸಿ ಪರಮಾರ್ಥದ ಅಸ್ತಿತ್ವವನ್ನು ನಂಬಬಹುದು; ಮುಂದಕ್ಕೆ ಅನುಭವದಿಂದ ನೇರಾಗಿಯೂ ತಿಳಿದುಕೊಳ್ಳಬಹುದು. ಇದು ಒಂದು ಸಂಪ್ರದಾಯ ದವರ ಉತ್ತರ.

ಆದರೆ ಹೀಗೆ ಯೋಗಮಾರ್ಗದಿಂದ ಸಂಪಾದಿಸಿದ ವೈಯಕ್ತಿಕವಾದ ಅನುಭವವೇ ಪರಮಾರ್ಥನಿರ್ಣಯಕ್ಕೆ ಕಟ್ಟಕಡೆಯ ತೀರ್ಮಾನವೆಂದು ವೇದದಲ್ಲಿ ಹೇಳಿರುವದೆಂದು ಕಾಣಿಸುವದಿಲ್ಲ. ಒಂದು ವೇಳೆ ವೇದದಲ್ಲಿ ಹಾಗೆಂದು ಹೇಳಿದ್ದರೂ ನಾವು ಅನುಭವಿಗಳು ಎಂದು ಹೇಳಿಕೊಳ್ಳುವ ಅನೇಕರು ಒಬ್ಬರಿಗೊಬ್ಬರು ವಿರುದ್ಧವಾಗಿ ವಾದಿಸುವಾಗ ಯಾರ ಅಭಿಪ್ರಾಯವು ಸರಿ ಎಂಬುದನ್ನು ನಿರ್ಣಯಿಸುವದಕ್ಕೆ ನಮಗೆ ಯಾವದೊಂದು ಮಾನದಂಡವೂ ಸಿಕ್ಕುವಂತಿಲ್ಲವಾದ್ದರಿಂದ, ಈ ಅನುಭವಿಗಳಲ್ಲಿ ಯಾರದು ನಿಜವಾದ ವಾದವು?– ಎಂಬುದು ವಿವಾದಾಸ್ಪದವಾಗಿಯೇ ಉಳಿದುಕೊಳ್ಳುತ್ತಿತ್ತು. ಆದರೆ ನಮ್ಮೆಲ್ಲರ ಸೌಭಾಗ್ಯದಿಂದ ಇಂಥ ವಿವಾದಕ್ಕೆ ಆಸ್ಪದವೇ ಇಲ್ಲದಂತೆ ಉಪನಿಷತ್ತುಗಳಲ್ಲಿ ಒಂದು ಅನರ್ಘವಾದ ಉಪದೇಶವನ್ನು ಮಾಡಿರುತ್ತದೆ. ಕಾಲದೇಶಗಳನ್ನು ಮೀರಿರುವ ತತ್ತ್ವದ ಅನುಭವವು ಮಾನವರೆಲ್ಲರಿಗೂ ಸ್ವಭಾವದಿಂದಲೇ ಇದ್ದುಕೊಂಡಿದೆ; ಕಾಲದೇಶಗಳನ್ನು ಒಳಗೊಂಡಿರುವ ಪ್ರಪಂಚವು ಅದರ ಮಹಿಮೆಯು, ವಿಸ್ತಾರವು, ಎಂಬ ಅನುಭವವೂ ಮಾನವರೆಲ್ಲರಗೂ ಇದೆ. ಈ ಅನುಭವದಕಡೆಗೆ ಜಿಜ್ಞಾಸುಗಳ ಲಕ್ಷ್ಯವನ್ನು ಸೆಳೆದಿರುವದೇ ವೇದದ ಹೆಚ್ಚುಗಾರಿಕೆಯು.

ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರವಸ್ಥೆಗಳು ಮನುಷ್ಯಮಾತ್ರಕ್ಕೆ ಸಮಾನವಾಗಿರುತ್ತದೆ. ಮನುಷ್ಯರಲ್ಲಿ ದೇಶ, ಭಾಷೆ, ಕುಲ, ಜಾತಿ, ವಯಸ್ಸು, ಲಿಂಗ– ಇವುಗಳಲ್ಲಿ ಯಾವದೊಂದನ್ನೂ ವಿಶೇಷವಾಗಿಟ್ಟುಕೊಳ್ಳದೆ, ಎಲ್ಲೆಲ್ಲಿಯೂ ಎಲ್ಲರಿಗೂ ಎಚ್ಚರಕನಸುತನಿನಿದ್ರೆಗಳೆಂಬ ಅವಸ್ಥೆಗಳು ಆಗುತ್ತಿರುತ್ತವೆಯಷ್ಟೆ? ಈ

ಮೂರು ಅವಸ್ಥೆಗಳೊಳಗೇ ಮಿಕ್ಕ ನಮ್ಮ ಎಲ್ಲಾ ಅನುಭವಗಳೂ ಆಗುತ್ತಿರುವದರಿಂದ ಈ ಅವಸ್ಥೆಗಳ ಪರೀಕ್ಷೆಯಿಂದ ಆಗುವ ತೀರ್ಮಾನವು ಪೂರ್ಣಜ್ಞಾನವೆಂದು ಎಲ್ಲರೂ ಒಪ್ಪಬೇಕಾಗುತ್ತದೆ. ಪ್ರಕೃತವಿಚಾರದ ವಿಷಯಕ್ಕೆ ಈ ಅವಸ್ಥಾತ್ರಯಪರೀಕ್ಷೆಯು ಬಹಳ ಬೆಲೆಯುಳ್ಳ ಒಂದು ಸೂಚನೆಯನ್ನು ಕೊಡುತ್ತದೆ. ಅದೇನೆಂದರೆ ಜಾಗ್ರತ್ಸ್ವಪ್ನಗಳಲ್ಲಿ ಮಾತ್ರವೇ ನಮಗೆ ವಿಧವಿಧವಾದ ದ್ವೈತಪ್ರಪಂಚವು ಕಾಣಿಸಿಕೊಳ್ಳುತ್ತಿರುತ್ತದೆ; ಆದರೆ ತನಿನಿದ್ರೆಯಲ್ಲಿ ಯಾವ ಪ್ರಪಂಚವೂ ಇಲ್ಲದೆ ಈ ಪ್ರಪಂಚಕ್ಕೆಲ್ಲ ಸಾಕ್ಷಿಯಾಗಿರುವ ಚೈತನ್ಯವೊಂದೇ ತನ್ನ ಸ್ವರೂಪದಲ್ಲಿ ಇದ್ದುಕೊಂಡಿರುತ್ತದೆ. ಈ ಸಾಕ್ಷಿಚೈತನ್ಯವು ಇಲ್ಲವೆಂದು ಕಲ್ಪಿಸುವದು ಯಾರಿಂದಲೂ ಆಗುವಂತಿಲ್ಲವಾದ್ದರಿಂದ ಅದು ಪರಮಾರ್ಥಸತ್ಯವೆಂದು ಅಂಗೀಕರಿಸಬೇಕಾಗಿರುತ್ತದೆ. ಆ ಶುದ್ಧಚೈತನ್ಯವು ಯಾವ ಕಾಲದೇಶಗಳಿಂದಲೂ ಕಟ್ಟುವಡೆದಿರುವದಿಲ್ಲವೆಂದು ಸುಷುಪ್ತಿಯ ಅನುಭವದಿಂದ ನಮ್ಮೆಲ್ಲರಿಗೂ ಗೊತ್ತಾಗಿರುವದರಿಂದ ಸಮಾಧಿಯಲ್ಲಿಯೂ ಆ ಅದ್ವಿತೀಯಚೈತನ್ಯವೇ ಇರುವದೆಂದು ಹೇಳುವ ಯೋಗಿಗಳ ಮತವನ್ನೂ ನಾವು ಅಂಗೀಕರಿಸುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

ಹೀಗೆ ಅನುಭವಾನುಸಾರವಾಗಿ ನೋಡುವಾಗ ಸುಷುಪ್ತಿಯಲ್ಲಿರುವ ಶುದ್ಧ ಚೈತನ್ಯವೇ ಅವಸ್ಥಾತ್ರಯದಲ್ಲಿರುವ ಪ್ರಪಂಚದ ತೋರಿಕೆಗೆ ಆಧಾರವೆಂದು ಹೇಳಬೇಕಾಗುತ್ತದೆ. ಆದ್ದರಿಂದ ಸುಷುಪ್ತಿಯಲ್ಲಿ ಶುದ್ಧಚೈತನ್ಯವು ಮಾತ್ರವೇ ಇದ್ದಿತು. ಈಗ ಎಚ್ಚರದಲ್ಲಿ ದೇಶಕಾಲನಿಮಿತ್ತಗಳಿಂದೊಡಗೂಡಿರುವ ಈ ಪ್ರಪಂಚವೂ ಅದರಲ್ಲಿ ತೋರುತ್ತಿದೆ–ಎಂದು ಅನುಭವಾನುಸಾರವಾಗಿ ಹೇಳುವದರಲ್ಲಿ ಯಾವ ತೊಡಕೂ ಇಲ್ಲವಷ್ಟೆ? ದೇಶಕಾಲಾತೀತವಾದ ಶುದ್ಧಚೈತನ್ಯವೂ ಸುಷುಪ್ತ್ಯಾದಿಗಳಲ್ಲಿ ನಮ್ಮೆಗಳ ಅನುಭವದಲ್ಲಿದೆ; ಅದರ ಆಧಾರದಿಂದಲೇ ದೇಶಕಾಲಪ್ರತಿಬದ್ಧವಾಗಿರುವ ಪ್ರಪಂಚವು ತೋರುತ್ತಿದೆ ಎಂಬುದೂ ಜಾಗ್ರತ್ಸ್ವಪ್ನಗಳ ಅನುಭವದಲ್ಲಿದೆ. ಹೀಗಿರುವದರಿಂದ ದೇಶಕಾಲಾತೀತವಾದ ಪರಮಾರ್ಥದಿಂದ ದೇಶಕಾಲಗಳನ್ನು ಬಿಟ್ಟಿರಲಾರದ ಜಗತ್ತು ಉಂಟಾಯಿತು ಎಂಬುದು ತರ್ಕಕ್ಕೆ ವಿರುದ್ಧವಾಗಿ ಕಾಣಬಹುದಾದರೂ ಆ ತರ್ಕವು ಪೂರ್ಣಾನುಭವವನ್ನು ಹೊಡೆದುಹಾಕಲಾರದು; ಆ ತರ್ಕವನ್ನೇ ನಾವು ಅನುಭವಕ್ಕೆ ಹೊಂದುವಂತೆ ಸರಿಪಡಿಸಿಕೊಳ್ಳಬೇಕು ಎಂದಾಗುತ್ತದೆ. ಆದ್ದರಿಂದ ವೇದದಲ್ಲಿ ಪ್ರಪಂಚವೆಲ್ಲವೂ ಪರಮೇಶ್ವರನ ಮಹಿಮೆಯೆಂದೂ ಆ ಪರಮೇಶ್ವರನು ಇದನ್ನು ಮೀರಿ ತನ್ನ ಸ್ವರೂಪದಲ್ಲಿಯೇ ತಾನಿದ್ದು ಕೊಂಡಿರುವನೆಂದೂ ಹೇಳಿರುವದು ಅಸಂಭಾವನೀಯವಾದ ಮಾತಲ್ಲ;

ದೇಶಕಾಲಾತೀತನಾದ ಆ ಪರಮಾತ್ಮನೇ ಈ ಪ್ರಪಂಚದ ರೂಪದಿಂದ ತೋರಿಕೊಳ್ಳುತ್ತಿರುವನೇ ಹೊರತು, ಆತನಿಗಿಂತ ವ್ಯತಿರಿಕ್ತವಾದ ಪ್ರಪಂಚವೆಂಬುದೇ ಇಲ್ಲ – ಎಂಬ ಉಪದೇಶವೂ ಅಸಂಭಾವನೀಯವಲ್ಲ– ಎಂದಾಯಿತು.

ನಾನು ಈ ಸಂದೇಶದ ಆದಿಯಲ್ಲಿ ಉದಾಹರಿಸಿರುವ ಮಂತ್ರದ ಅಭಿಪ್ರಾಯವನ್ನು ಈಗ ಇನ್ನಷ್ಟು ಕಡೆದು ನೋಡಬಹುದಾಗಿದೆ. ಅತೀಂದ್ರಿಯನಾದ, ದೇಶಕಾಲಾತೀತನಾದ **"ಪುರಷನು ಮೇಲಕ್ಕೇರಿದ್ದನು"** ಎಂಬ ವಾಕ್ಯಕ್ಕೆ ಅರ್ಥವೇನು? ಇಲ್ಲಿರುವ ಭೂತಕಾಲವಚನವಾದ "ಏರಿದ್ದನು" ಎಂಬುದರಲ್ಲಿರುವ ತೊಡಕನ್ನು ಮೊದಲು ಬಿಚ್ಚಿಕೊಳ್ಳುವದು ಅವಶ್ಯ. ಏಕೆಂದರೆ ಪರಮಾತ್ಮನು ಕಾಲಾತೀತನೆಂದು ಹೇಳಿ, "ಅವನು ಆಗ ಹೀಗೆ ಇದ್ದನು" ಎಂದು ಹೇಳುವದು ಅತ್ಯಂತವಿರುದ್ಧ ವಚನವೆಂದು ತಟ್ಟನೆ ಯಾರಿಗಾದರೂ ತೋರಬಹುದಾಗಿದೆ. ಈ ವಿರೋಧವು ಬರಿಯ ತೋರಿಕೆಯದೆಂಬುದನ್ನು ಮನಗಾಣಿಸುವದಕ್ಕೆ ನಾನು ಆಗಲೆ ಪರಾಮರ್ಶಿಸಿರುವ ಅವಸ್ಥಾತ್ರಯದ ನೆರವನ್ನು ತೆಗೆದುಕೊಳ್ಳಬೇಕು. ಹೇಗೆಂದರೆ "ನಾನು ಈವರೆಗೆ ನಿದ್ರಿಸುತ್ತಿದ್ದೆನು" ಎಂಬ ವ್ಯವಹಾರವು ನಮಗೆಲ್ಲ ಪರಿಚಿತವಾಗಿರುತ್ತದೆ. ಇಲ್ಲಿ "ನಿದ್ರಿಸುತ್ತಿದ್ದೆನು? ಎಂಬ ಭೂತಕಾಲವಚನಕ್ಕೇನರ್ಥ? "ನಾನು ಊಟಮಾಡುತ್ತಿದ್ದೆನು" ಎಂಬಲ್ಲಿ ಊಟವು ಭೂತಕಾಲದಲ್ಲಿ ಆಯಿತೆನ್ನುವಂತೆ ನಿದ್ರೆ ಎಂಬುದು ಯಾವದೋ ಒಂದು ಹಿಂದಿನ ಕಾಲದಲ್ಲಿ ನಡೆಯಿತೆಂದು ನಾವು ಯಾರೂ ಭಾವಿಸುವದಕ್ಕಿಲ್ಲ. ಏಕೆಂದರೆ ನಿದ್ರೆಯಲ್ಲಿ ಕಾಲವೇ ಅಳಿಸಿಹೋಗಿರುತ್ತದೆ. ಆದರೂ ಎಚ್ಚರದ ದೃಷ್ಟಿಯಿಂದ ನೋಡಿದಾಗ ಸುಷುಪ್ತಿಯು ಹಿಂದೆ ಆಯಿತೆಂದೂ, ಇಂತಿಷ್ಟು ಕಾಲದವರೆಗೆ ಆಯಿತೆಂದೂ ನಮ್ಮೆಲ್ಲರಿಗೂ ತೋರುತ್ತದೆ. ಅಲ್ಲವೆ? ವ್ಯವಹಾರದಲ್ಲಿ ನಾವು ಎಚ್ಚರದೃಷ್ಟಿಯ ಶಬ್ದಗಳನ್ನೇ ಪ್ರಯೋಗಿಸುತ್ತಿರುವದರಿಂದ "ನಿದ್ರಿಸಿದೆನು" ಎಂಬುದು ಭೂತಕಾಲಕ್ಕೆ ಸೇರಿದ್ದು ಆ ದೃಷ್ಟಿಯಿಂದಲೇ ಎಂದಾಯಿತಷ್ಟೆ. ಹೀಗೆಯೇ "ಈ ಪ್ರಪಂಚವು ಮೊದಲು ದೇಶಕಾಲಾತೀತವಾದ ಪರಮಾತ್ಮನೇ ಆಗಿತ್ತು" ಎಂಬ ಭೂತಕಾಲವ್ಯವಹಾರವೂ ವ್ಯಾಹಾರಿಕಭಾಷೆಯಿಂದ ಹೇಳಿದ್ದು. ಸುಷುಪ್ತಿಯಲ್ಲಿದ್ದ ಶುದ್ಧಚೈತನ್ಯವು ಹೇಗೆ ಅಚ್ಚಳಿಯದೆ ಈಗಲೂ ಇದೆಯೋ ಹಾಗೆಯೇ ದೇಶಕಾಲಾತೀತವಾದ ಪರಮಾತ್ಮನು ಈಗಲೂ ಇರುತ್ತಾನೆಂಬುದೇ ಪರಮಾರ್ಥವು; ದೇಶಕಾಲಗಳ ಪ್ರಪಂಚವು ಅವನ ಮಹಿಮೆ, ಎಂದರೆ ವಿಭೂತಿಯು, ಆಭಾಸಮಾತ್ರವಾಗಿರುತ್ತದೆ. ಆ ಪರಮಾತ್ಮನು

ಆಗಲೂ ಈಗಲೂ ಮುಂದೆಯೂ ಎಂದೆಂದಿಗೂ ತನ್ನ "ಮೇಲು" ರೂಪವನ್ನು, ಸರ್ವೋತ್ಕೃಷ್ಟವಾದ ಕಾಲಾತೀತವಾದ ನಿತ್ಯಶುದ್ಧಬುದ್ಧಮುಕ್ತಸ್ವಭಾವವನ್ನು, ಮಾರ್ಪಡಿಸಿಕೊಂಡೇ ಇರುವದಿಲ್ಲ.

'ಅವನ ಈ ಪ್ರಪಂಚರೂಪವಾದ ಪಾದವು ಇಲ್ಲಿ ಮತ್ತೆ ಬಂದಿತು' ಎಂಬ ವಾಕ್ಯಕ್ಕೆ ಈಗ ಅರ್ಥವು ಸ್ವಲ್ಪಮಟ್ಟಿಗೆ ಸುಲಭವಾಗಿ ಹೊಳೆಯಬಹುದು. ಏಕೆಂದರೆ ಇಲ್ಲಿಯೂ ಅವಸ್ಥಾತ್ರಯಪ್ರಕ್ರಿಯೆಯ ಸಹಾಯವನ್ನು ನಾವು ಕೋರಬಹುದಾಗಿರುತ್ತದೆ. ನಮಗೆ ತನಿನಿದ್ರೆಯು ಮತ್ತೆಮತ್ತೆ ಆಗುತ್ತಿರುತ್ತದೆ, ಆದ್ದರಿಂದ ಎಚ್ಚರವೂ ಮತ್ತೆಮತ್ತೆ ಆಗುತ್ತಿರುತ್ತದೆ– ಎಂದು ನಾವೆಲ್ಲರೂ ವ್ಯವಹರಿಸುತ್ತಲೇ ಇರುತ್ತೇವೆ. ಇಲ್ಲಿ ಎಚ್ಚರದೃಷ್ಟಿಯಿಂದಲೇ 'ಮತ್ತೆಮತ್ತೆ' ಎಂಬ ಕಾಲವಾಚಕಶಬ್ದವನ್ನು ಉಪಯೋಗಿಸುತ್ತಿದೇವೆಂಬುದು ಸ್ಪಷ್ಟ. ಎಚ್ಚರಕ್ಕೂ ತನಿನಿದ್ರೆಗೂ ಆಧಾರವಾಗಿರುವ ಒಂದೇ ಸಮಾನಕಾಲವು ಇದೆಯೆಂದಾಗಲೀ, ಆ ಕಾಲದಲ್ಲಿ ನಮಗೆ ಎಚ್ಚರ ತನಿನಿದ್ರೆ – ಎಂಬ ಅನುಭವಗಳು ಆಗುತ್ತಿರುವವೆಂದಾಗಲಿ ನಾವು ಯಾರೂ ನಂಬುವದಿಲ್ಲ. ಏಕೆಂದರೆ ಅಂಥ ಸಮಾನಕಾಲವನ್ನು ನಾವು ಯಾರೂ ಕಂಡಿಲ್ಲ. ಕಾಲವೆಂಬುದು ಎಚ್ಚರದಲ್ಲಿ ಮಾತ್ರ ತೋರುತ್ತದೆ; ಕನಸಿನಲ್ಲಿಯೂ ಕಾಲದ ಆಭಾಸವು ತೋರಿದ್ದುಂಟು; ಆದರೆ ಕನಸಿಲ್ಲದ ನಿದ್ರೆಯಲ್ಲಿ ಯಾರೊಬ್ಬರೂ ಕಾಲವನ್ನು ಕಂಡದ್ದಿಲ್ಲ. ಆದ್ದರಿಂದ "ಎಚ್ಚರನಿದ್ರೆಗಳು ಮತ್ತೆಮತ್ತೆ ಆಗುತ್ತಿರುವದು" ಎಂಬುದು ವ್ಯವಹಾರಮಾತ್ರವೇ ಎಂಬುದು ಹೇಗೋ ಹಾಗೆಯೇ 'ಪರಮಾತ್ಮನಿಂದ ಪ್ರಪಂಚವು ಮತ್ತೆಮತ್ತೆ ಆಗುತ್ತಿರುವದು' ಎಂಬುದೂ ವ್ಯವಹಾರಮಾತ್ರವು. ಇಲ್ಲಿ ನಿಜವೇನೆಂದರೆ, ಎಚ್ಚರದಲ್ಲಾಗಲಿ ಕನಸಿನಲ್ಲಾಗಲಿ ನಮಗೆ ಕಾಣುವ ಆಧ್ಯಾತ್ಮಿಕ ಮತ್ತು ಆಧಿಭೌತಿಕಪ್ರಪಂಚವು ಬರಿಯ ತೋರಿಕೆಯೇ; ಅದು ನಮ್ಮ ಆತ್ಮಸ್ವರೂಪದಲ್ಲಿಯೇ ತೊರುತ್ತಿರುತ್ತದೆ, ಅದಕ್ಕಿಂತ ವ್ಯತಿರಿಕ್ತವಾದ ಇರವು ಈ ಪ್ರಪಂಚಕ್ಕೆ ಇಲ್ಲವೇ ಇಲ್ಲ. ಪ್ರಪಂಚವು ಪರಮಾತ್ಮನಿಂದ ಮತ್ತೆಮತ್ತೆ ಬರುತ್ತಿದೆ ಎಂದು ಹೇಳುವ ವೇದವಚನವು ನಮ್ಮ ವ್ಯವಹಾರದ ಭಾಷೆಯನ್ನೇ ಅನುಸರಿಸಿಕೊಂಡು ಹೇಳುತ್ತಿದೆ. ನಿಜವಾಗಿ ಈ ಪ್ರಪಂಚವು ಯಾವಾಗಲೂ ಪರಮಾತ್ಮನಲ್ಲಿದೆ; ಎಂದರೆ ತೋರುವಾಗಲೆಲ್ಲ ಪರಮಾತ್ಮನಲ್ಲಿಯೇ ತೋರುತ್ತದೆ. ಇದರ ಪರಮಾರ್ಥವೆಂದರೆ ಯಾವಾಗಲೂ ಪರಮಾತ್ಮನೇ.

ಹೀಗೆ ಪ್ರಪಂಚವೆಲ್ಲವೂ ಪರಮಾತ್ಮನ ಮಹಿಮೆಯೇ ಆಗಿ ಆತನಲ್ಲಿಯೇ ತೋರಿಕೊಳ್ಳುತ್ತಿದೆ ಎಂಬ ವೇದೋಪದೇಶವನ್ನು ಮನದಂದುಕೊಳ್ಳುವ ಆಸ್ತಿಕರಿಗೆ

ಒಂದು ಪರಮಪ್ರಯೋಜನವೇನೆಂದರೆ, ಇಲ್ಲಿ ನಾವು ಕಾಣುತ್ತಿರುವದೆಲ್ಲವೂ ಆತನ ವಿಭೂತಿಯೇ ಆದ್ದರಿಂದ ನಾವು ಎಲ್ಲಿ ಯಾವ ಜನರನ್ನು ಕಂಡರೂ ಅಲ್ಲೆಲ್ಲ ಪರಮಾತ್ಮನ ವಿಭೂತಿಯೇ ಒಂದೊಂದು ಬಗೆಯಿಂದ ತೋರಿಕೊಳ್ಳುತ್ತಿರುವ ದೆಂಬುದನ್ನು ಮನಸ್ಸಿಗೆ ತಂದುಕೊಳ್ಳುವದಕ್ಕೆ ಪ್ರಯತ್ನಿಸುತ್ತಿರಬೇಕು. ಮೈತ್ರಿ, ಕರುಣಾ– ಮುಂತಾದ ಶುಭವಾಸನೆಗಳನ್ನು ಸಾಧಕರು ಅಳವಡಿಸಿಕೊಳ್ಳಬೇಕೆಂದು ಶಾಸ್ತ್ರದಲ್ಲಿ ಉಪದೇಶಿಸಿರುವದಕ್ಕೆ ಈ ತಿಳಿವಳಿಕೆಯು ಒಂದು ಪ್ರಬಲವಾದ ಉತ್ತೇಜನೆಯನ್ನು ಕೊಡುವದಾಗಿರುತ್ತದೆ. ಈ ಶುಭವಾಸನೆಗಳು ಮನುಷ್ಯರ ವಿಷಯಕ್ಕೆ ಮಾತ್ರ ಅನ್ವಯಿಸುವವಲ್ಲವೆಂಬುದಕ್ಕೂ ಇದೇ ಕಾರಣವಾಗಿರುತ್ತದೆ. ಏಕೆಂದರೆ, "ಈ ಪರಮಾತ್ಮನಿಗೆ ಸರ್ವಭೂತಗಳೂ ಒಂದು ಪಾದವು"– ಎಂದು ವೇದವು ಹೇಳುತ್ತಿದೆ. ಆದ್ದರಿಂದಲೇ ಭಗವಂತನು ಜ್ಞಾನಿಗಳಾದ ಪರಭಕ್ತರು "ಸರ್ವಭೂತಗಳ ಹಿತದಲ್ಲಿ ನಿರತರಾಗಿರುತ್ತಾರೆ" ಎಂದಿರುತ್ತಾನೆ.

ಈಗ ಮಂತ್ರದಲ್ಲಿರುವ ಮತ್ತೊಂದು ವಾಕ್ಯದತ್ತ ದೃಷ್ಟಿಯನ್ನು ಹೊರಳಿಸೋಣ. ಪ್ರಪಂಚದಲ್ಲಿ ಕಾಣುವ ದೃಶ್ಯಗಳನ್ನು ಸಾಶನ, ಅನಶನ–ಎಂದು ಎರಡು ಪಂಗಡಗಳಾಗಿ ವಿಂಗಡಿಸಬಹುದು. ಸಾಶನ ಎಂದರೆ ಅನ್ನವನ್ನು ತಿನ್ನುವ ಪ್ರಾಣಿಗಳು, ಚೇತನಗಳು; ಅನಶನ ಎಂದರೆ ತಾವು ತಿನ್ನದೆ, ತಾವು ಭೋಗಿಸದೆ, ಮತ್ತೊಬ್ಬರಿಗೆ ಭೋಗ್ಯವಾಗಿರುವ ಪದಾರ್ಥಗಳು, ಅಚೇತನಗಳು. ಚೇತನಾಚೇತನಾತ್ಮವಾಗಿರುವ ಈ ಜಗತ್ತೆಲ್ಲವೂ ಆ ಪುರುಷನ ಮಹಿಮೆಯೇ ಆಗಿರುತ್ತದೆ. ಆ ಪುರುಷನು ಚೇತನಾಚೇತನರೂಪವಾಗಿರುವ ಈ ಪ್ರಪಂಚವನ್ನು ಅತಿಕ್ರಮಿಸಿರುವ, ಇವುಗಳನ್ನು ಮೀರಿ ತನ್ನ ರೂಪದಲ್ಲಿಯೇ ಇದ್ದುಕೊಂಡಿರುವ ಅತೀಂದ್ರಿಯರೂಪವೊಂದು, ಚೇತನಾಚೇತನರೂಪವಾಗಿ ತೊರುತ್ತಿರುವ ಪ್ರಪಂಚರೂಪವಾದ ಮಹಿಮೆಯ ರೂಪವೊಂದು– ಹೀಗೆ ಎರಡು ರೂಪದಿಂದಲೂ ಇರುತ್ತಾನೆ– ಎಂದು ಹೇಳಿರುವದರಿಂದ ಆತನೊಬ್ಬನಲ್ಲಿಯೇ ಈ ಎರಡು ಹೋಳುಗಳಾಗಿವೆಯೆಂದಾಗಲಿ, ಮೂಲಸ್ವರೂಪದಿಂದ ಈ ಪ್ರಪಂಚರೂಪವಾದ ಕಾರ್ಯವು ಉಂಟಾಗಿದೆಯೆಂದಾಗಲಿ ತಿಳಿಯಬಾರದೆಂದು ಹೇಳಿದಂತೆಯೇ ಆಗಿದೆಯಷ್ಟೆ. ಆದರೆ ಈ ಮಹಿಮೆಯಲ್ಲಿ ಚೇತನವಾಗಿ ತೋರುವ ಮತ್ತು ಅಚೇತನರೂಪವಾಗಿ ತೋರುವ ಪ್ರತಿಯೊಂದು ರೂಪದಲ್ಲಿಯೂ ಆತನು ವಿಕ್ರಮಿಸಿರುತ್ತಾನೆ, ಎಂದರೆ ಅದರ ಒಳಗೂ ಹೊರಗೂ ನಡುವೆಯೂ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತಾನೆ ಎಂಬುದು ವೇದದ ಮತ್ತೊಂದು ಉಪದೇಶವು.

ಈ ಪ್ರಪಂಚದಲ್ಲಿ ಕಾಣಬರುವ ಯಾವದೊಂದು ದೃಶ್ಯವೂ ಪರಮಾತ್ಮನಿಗಿಂತ ಬೇರೆಯಿಲ್ಲ ಎಂಬುದು ಹೇಗೆ ಪರಮಾರ್ಥವೋ ಹಾಗೆಯೇ ಇಲ್ಲಿ ಪ್ರತಿಯೊಂದು ದೃಶ್ಯವೂ ನಿಜವಾಗಿ ಆ ಪರಮಾತ್ಮನೇ ಆಗಿದೆ ಎಂಬುದೂ ಪರಮಾರ್ಥವೇ ಆಗಿರುತ್ತದೆ. ಪರಮಾತ್ಮನಲ್ಲಿ ಪ್ರಪಂಚವು ಆರೋಪಿತವಾಗಿದೆ ಎಂದರೆ ಪರಮಾತ್ಮನ ಮೇಲೆ ಆ ಪ್ರಪಂಚವಾಗಲಿ ಅದರ ತೋರಿಕೆಯಾಗಲಿ ಹೇರಿಕೊಂಡಿದೆ ಎಂದೇನೂ ಅರ್ಥವಲ್ಲ. ಅದರೊಳಗೆಲ್ಲ ಹಾಸುಹೊಕ್ಕಾಗಿ ಪರಮಾತ್ಮನೇ ವ್ಯಾಪಿಸಿಕೊಂಡು ಬಿಟ್ಟಿರುತ್ತಾನೆ. ಸಮುದ್ರದ ನೀರು ನೊರೆಯಾಗಿ ತೋರುವಾಗ ನೊರೆಯು ನೀರಿಗಿಂತ ಬೇರೆಯಲ್ಲ, ಏಕೆಂದರೆ ನೀರೇ ನೊರೆಯಾಗಿದೆ. ಇಷ್ಟೇ ಅಲ್ಲ, ಅದು ನೊರೆಯಾಗಿ ಕಾಣುತ್ತಿರುವಾಗಲೂ ಪರಮಾರ್ಥವಾಗಿ ನೀರೇ ಆಗಿದೆ. ಅಲ್ಲವೆ? ಹೀಗೆಯೇ ಪ್ರಪಂಚದಲ್ಲಿ ಕಾಣುವದೆಲ್ಲವೂ ನಿಜವಾಗಿ ಪರಮಾತ್ಮನೇ ಆಗಿರುತ್ತಾನೆ. ಈ ಉಪದೇಶವು ನಮ್ಮ ವ್ಯವಹಾರಕ್ಕೆ ಯಾವ ಲಾಭವನ್ನು ತಂದು ಕೊಡುತ್ತದೆಯೆಂಬುದನ್ನು ತಿಳಿಸುವದಕ್ಕೆ ಇನ್ನೊಂದು ಲೇಖನದಲ್ಲಿ ಪ್ರಯತ್ನಿಸುವೆನು.

# 6. ಎಲ್ಲವೂ ಚಿನ್ಮಾತ್ರ ಬ್ರಹ್ಮ

★ ಚೇತನಾಚೇತನರೂಪವಾದ ದೃಶ್ಯಗಳಿಂದೊಡಗೂಡಿರುವ ಈ ಪ್ರಪಂಚವು ಒಂದು ದೃಷ್ಟಿಯಿಂದ ನೋಡಿದರೆ ಪರಮತ್ಮನ ಪಾದಮಾತ್ರವಾಗಿರುತ್ತದೆ; ಇದೆಲ್ಲವೂ ಆತನ ಮಹಿಮೆಯೇ ಆಗಿದೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ ಪರಮಾತ್ಮನಲ್ಲಿ ತ್ರಿಪಾದಮೃತವೆಂದೂ ಏಕಪಾದರೂಪವಾದ ಮಹಿಮೆಯೆಂದೂ ಎರಡು ಭಾಗಗಳನ್ನು ಮಾಡುವದಕ್ಕೆ ಬರುವದೇ ಇಲ್ಲ. ಈ ಪ್ರಪಂಚದಲ್ಲಿರುವ ಯಾವದೊಂದು ದೃಶ್ಯವನ್ನು ನೋಡಿದರೂ ಅದು ನಿಜವಾಗಿ ಆ ಪರಮಾತ್ಮನೇ ಆಗಿರುತ್ತದೆ ಎಂದು ಹಿಂದೆ ಹೇಳಿರುತ್ತೇನೆ. ಈಗ ಎಲ್ಲವೂ ಪರಮಾತ್ಮನೇ ಎಂಬ ವೇದದ ಉಪದೇಶವನ್ನು ಬಿಡಿಸಿ ನೋಡುವದಕ್ಕೆ ಸಮಯವಾಗಿರುತ್ತದೆ.

ದೃಶ್ಯಗಳೆಲ್ಲವೂ ಪರಮಾತ್ಮನೇ ಎಂಬುದು ಮತಾಂತರಗಳಲ್ಲಿ ಕೆಲವರ ಮನಸ್ಸಿಗೆ ಒಗ್ಗುವದಿಲ್ಲ. ಪಶ್ಚಿಮದೇಶದವರು ಈ “ಸರ್ವವೂ ಈಶ್ವರ” ಎಂಬ ವಾದವನ್ನು 'Pantheism' (ಪ್ಯಾನ್ತೀಯಿಝುಮ್) ಎಂಬ ಒಂದು ಹೆಸರಿನ್ನಿಟ್ಟು

★ **ಫೆಬ್ರವರಿ 1955, ಸಂಪುಟ 24, ಪುಟ 153–160**

ತಿರಸ್ಕಾರಬುದ್ಧಿಯಿಂದ ಕಾಣುವದುಂಟು. ಭರತಖಂಡದಲ್ಲಿರುವ ಸನಾತನ ಧರ್ಮಗಳವರು ಕೆಲವರು "ವಿಗ್ರಹಾರಾಧನೆ" (idolatry) ಮಾಡುತ್ತಾರೆ ಎಂದು ಕ್ರಿಸ್ತಿಯನ್ ಜನರೂ ಮುಸಲ್ಮಾನರೂ ಕೆಲವರು ಜರಿಯುತ್ತಾರೆ. ಆದರೂ ಆ ಬೇರೆಬೇರಯ ಮತಗಳಲ್ಲಿಯೂ ಕೆಲಕೆಲವು ಬೇರೆಬೇರೆಯ ನಾಮರೂಪಗಳ ಸಂಕೇತದಿಂದ ಅರ್ಚನೆಮಾಡುವ ಪದ್ಧತಿಯು ಆಚರಣೆಯಲ್ಲಿ ಕಂಡುಬರುತ್ತಿದೆ. ಇದು ಮಾನವಸ್ವಭಾವಕ್ಕೆ ಹತ್ತಿಕೊಂಡೇ ಬಂದಿದೆ ಎಂದು ಹೇಳುವದಕ್ಕೆ ತಕ್ಕಷ್ಟು ಆಧಾರವಿದೆ; ಏಕೆಂದರೆ ಯಾವ ಬಾಹ್ಯಸಂಕೇತಗಳನ್ನೂ ಉಪಯೋಗಿಸದೆ ಇರುವವರೂ ತಮ್ಮತಮ್ಮ ಮನೋಭಾವಕ್ಕೆ ತಕ್ಕಂತೆ ಈಶ್ವರನನ್ನು ಕಲ್ಪಿಸಿಕೊಳ್ಳುವದು ಅನಿವಾರ್ಯವಾಗಿಬಿಟ್ಟಿರುತ್ತದೆ. ಲೋಹ, ದಾರು ಅಥವಾ ಶಿಲೆ– ಇವುಗಳಿಂದ ಕೃತಿಮವಾಗಿ ಮಾಡಿಕೊಂಡ ಆಕೃತಿಗಿಂತ ಮನುಷ್ಯನೇ ಮನಸ್ಸಿನಿಂದ ನಿರ್ಮಿಸಿಕೊಂಡಿರುವ ಸಂಕೇತಕ್ಕೆ ಹೆಚ್ಚಿನ ಪಾವಿತ್ರ್ಯವಿದೆ ಎಂದು ಹೇಳುವದಕ್ಕೆ ಕಾರಣವೇನೂ ಕಾಣಿಸುವದಿಲ್ಲ.

ಪ್ರಕೃತದಲ್ಲಿ ಪರಮೇಶ್ವರನನ್ನು ವಿಗ್ರಹದ ಮೂಲಕವಾಗಿ ಆರಾಧನೆ ಮಾಡುವದು ಯುಕ್ತವೆ, ಅಯುಕ್ತವೆ? – ಎಂಬುದೇನೂ ನಮ್ಮ ವಿಚಾರಕ್ಕೆ ವಿಷಯವಲ್ಲ. ಏನೇನು ಕಾಣುತ್ತಿದೆಯೋ ಅದೆಲ್ಲವೂ ಪರಮೇಶ್ವರನೇ ಎಂಬ ಭಾವನೆಯು ಎಷ್ಟರಮಟ್ಟಿಗೆ ತತ್ತ್ವವಿಚಾರಕ್ರಮಕ್ಕೆ ಹೊಂದುತ್ತದೆ?– ಎಂಬುದನ್ನೇ ನಾವು ಈಗ ವಿಚಾರಕ್ಕೆ ತೆಗೆದುಕೊಂಡಿರುತ್ತೇವೆ. ಕೆಲವರು ತತ್ತ್ವವಿಮರ್ಶಕರು ಎಲ್ಲವನ್ನೂ ದೇವರೆನ್ನುವದಾದರೆ ಅವುಗಳ ತಾರತಮ್ಯದ ಗತಿಯೇನು? ಈಶ್ವರನ ವಿಭೂತಿಯೇ ಆಗಿರುವದರಿಂದ ಯಾವದನ್ನಾದರೂ ಪೂಜಿಸಬಹುದೆಂದು ಸರ್ವೇಶ್ವರವಾದಿಗಳು ಹೇಳಬಹುದು; ಆದರೆ ಆಗ ಕಲ್ಲು, ಮಣ್ಣುಹೆಂಟೆ, ಮರ, ಪ್ರಾಣಿ, ಮನುಷ್ಯ, ನೀಚ, ಮಹಾತ್ಮ– ಎಲ್ಲರೂ ಒಂದೇ ಆಗಿಬಿಡುವದಿಲ್ಲವೆ? ಈ ಸರ್ವಾರ್ಚನೆಯು ಎಂಥೆಂಥ ಅವಿವೇಕಗಳಿಗೂ ಅವಕಾಶವನ್ನು ಕೊಡಬಹುದಾಗಿದೆ" ಎಂದು ಈ ಭಾವನೆಯನ್ನು ಹಳಿಯುವರು. ಆದರೂ ನಮ್ಮ ದೇಶದಲ್ಲಿ ಶ್ರುತಿಸ್ಮೃತಿಪುರಾಣಗಳಲ್ಲಿ ವಿಶ್ವಾಸವನ್ನಿಟ್ಟಿರುವವರಲ್ಲಿ ಈ ಭಾವನೆಯು ಪ್ರಬಲವಾಗಿರುತ್ತದೆ; ಯಾವ ವಸ್ತುವನ್ನಾದರೂ ದೇವರೆಂದು ಭಾವಿಸಿ ಷೋಡಶೋಪಚಾರಗಳಿಂದ ಅರ್ಚನೆಮಾಡುವ ಪದ್ಧತಿಯು ಇಲ್ಲಿ ಎಲ್ಲೆಲ್ಲಿಯೂ ಕಾಣಬರುತ್ತಿದೆ. ಇದು ಅಯುಕ್ತವೆಂದು ನಮ್ಮ ದೇಶದಲ್ಲಿಯೂ ಕೆಲವರು ಆಕ್ಷೇಪಿಸುತ್ತಿದ್ದಾರೆ; ಸನಾತನಧರ್ಮದ ಅನುಯಾಯಿಗಳ ಸಂತತಿಯವರೇ ಆಗಿರುವ

ಕೆಲವರುಕೂಡ ಪರಮತದವರ ಪ್ರಭಾವಕ್ಕೆ ಸಿಕ್ಕಿಬಿದ್ದು ಇದು ತ್ಯಾಜ್ಯವೆಂದೇ ಎಣಿಸುತ್ತಿದಾರೆ. ಆದ್ದರಿಂದ ಈಗ ಈ ಭಾವನೆಯಲ್ಲಡಗಿರುವ ತತ್ತ್ವವನ್ನು ನಿರ್ಧಾರಮಾಡುವದಕ್ಕೆ ವಿಚಾರಮಾಡುವದು ಅವಶ್ಯವಾಗಿರುತ್ತದೆ.

ಈಶ್ವರನು ಸೃಷ್ಟಿಗೆ ಪೂರ್ವದಲ್ಲಿ ತಾನೊಬ್ಬನೇ ಇದ್ದನೆಂದೂ ತನ್ನ ಸಂಕಲ್ಪ ಮಾತ್ರದಿಂದ ಈ ಜಗತ್ತನ್ನು ಸೃಷ್ಟಿಸಿದನೆಂದೂ ಮತಾಂತರದವರೂ ತಮ್ಮತಮ್ಮ ಧಾರ್ಮಿಕಗ್ರಂಥಗಳ ಆಧಾರದಿಂದ ಒಪ್ಪಿರುತ್ತಾರಷ್ಟೆ. ಹೀಗೆ ತಾನೊಬ್ಬನೇ ಇದ್ದು ಜಗತ್ತನ್ನು ಸೃಷ್ಟಿಸಿದ್ದರಿಂದ ಈಶ್ವರನೇ ಈ ಜಗತ್ತಿಗೆ ಉಪಾದಾನಕಾರಣವೆಂದು ಅವರು ಪ್ರಕಾರಾಂತರದಿಂದ ಒಪ್ಪಿದಂತೆ ಆಗುತ್ತದೆ. ಈಶ್ವರನು ಜಗತ್ತನ್ನು ಸೃಷ್ಟಿಸಿಲ್ಲವೆಂದೂ, ಜಗತ್ತು ತಾನು ಇದ್ದಂತೆಯೇ ಇದ್ದುಕೊಂಡಿರುವದೆಂದೂ ಹೇಳುವ ವಾದಿಗಳು ಈ ಜಗತ್ತಿನ ತತ್ತ್ವವೇನೆಂಬುದನ್ನು ನಿರೂಪಿಸುವದಕ್ಕೆ ಹೊರಟರೆ ಹೋದ ತಿಂಗಳ ಸಂದೇಶದಲ್ಲಿ ಮಾಡಿರುವ ಅವಸ್ಥಾತ್ರಯ ವಿಚಾರದ ಕ್ರಮದಿಂದ ಶುದ್ಧಚೈತನ್ಯಸ್ವರೂಪನಾದ ಆತ್ಮನಿಂದಲೇ ಈ ಜಗತ್ತು ಬಂದಿರುತ್ತದೆ; ಅಥವಾ ಆ ಆತ್ಮನ ರೂಪಾಂತರವೇ, ವಿಭೂತಿಯೇ, ಈ ಜಗತ್ತು ಎಂದಾಗುತ್ತದೆ. ಈ ಅವಸ್ಥಾತ್ರಯಪ್ರಕ್ರಿಯೆಯನ್ನು ವಿಸ್ತಾರವಾಗಿ ಪರೀಕ್ಷಿಸುವದಾಗಲಿ ಮತಾಂತರದವರಿಗೆ ಈ ವಿಷಯದಲ್ಲಿ ಮನಸ್ತೃಪ್ತಿಯನ್ನು ಮಾಡಿಕೊಡುವದಾಗಲಿ ನಮ್ಮ ಪ್ರಕೃತೋದ್ದೇಶವಲ್ಲವಾದ್ದರಿಂದ ಅವರನ್ನು ಇಲ್ಲಿ ನಾವು ಲೆಕ್ಕಕ್ಕೆ ಹಿಡಿಯದೆ ಜಗತ್ತು ಪರಮೇಶ್ವರನ ವಿಭೂತಿಯೇ ಆಗಿದೆ ಎಂದು ಒಪ್ಪುವ ತತ್ತ್ವಶಾಸ್ತ್ರಜ್ಞರ ದೃಷ್ಟಿಯನ್ನು ಮಾತ್ರವೇ ಇಟ್ಟುಕೊಂಡು ಮುಂದುವರಿಯೋಣ. ಎಲ್ಲವೂ ಪರಮಾತ್ಮನ ವಿಭೂತಿಯೇ ಆದರೆ ಜಗತ್ತಿನಲ್ಲಿ ಕಾಣುವ ತಾರತಮ್ಯಕ್ಕೆ ಏನು ಗತಿ? ಮತ್ತು ಅತ್ಯಂತನೀಚವಾದ ವಸ್ತುಗಳನ್ನು– ಕೀಳಾಗಿರುವ ಪ್ರಾಣಿಗಳನ್ನೂ ಅಚೇತನ ವಸ್ತುಗಳನ್ನೂ ಕೂಡ– ಈಶ್ವರದೃಷ್ಟಿಯಿಂದ ಪೂಜಿಸುವದು ಹೇಗೆ ಯುಕ್ತ?– ಎಂಬ ಆಕ್ಷೇಪಣೆಯನ್ನು ಎದುರಿಸುವದಕ್ಕೆ ಪ್ರಯತ್ನಿಸೋಣ.

ಎಲ್ಲವನ್ನೂ ದೇವರೆಂದು ಭಾವಿಸಬೇಕೆಂಬುದನ್ನು ನಮ್ಮ ಶಾಸ್ತ್ರದಲ್ಲಿ ಹೇಳಿದೆಯೇ? ಈ ಪ್ರಶ್ನೆಗೆ ಒಂದೇ ಉತ್ತರವಿದೆ. ಉಪನಿಷತ್ತಿನಿಂದ ಹಿಡಿದು ಪುರಾಣಗಳವರೆಗಿನ ಧಾರ್ಮಿಕವಾಙ್ಮಯದಲ್ಲೆಲ್ಲ ಈ ಉಪದೇಶವು ತುಂಬಿತುಳುಕಾಡುತ್ತಿದೆ. **'ಬ್ರಹ್ಮೈವೇದಂ ವಿಶ್ವಮ್'** ಇದೆಲ್ಲವೂ ಬ್ರಹ್ಮವೇ; **'ಆಕಾಶೋ ಬ್ರಹ್ಮೇತಿ'** ಆಕಾಶವನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು; **'ಆದಿತ್ಯೋ**

**ಬ್ರಹ್ಮೇತ್ಯಾದೇಶಃ'** ಆದಿತ್ಯನೇ ಬ್ರಹ್ಮವೆಂದು ಉಪಾಸನೆಮಾಡಬೇಕು. **'ಮನೋ ಬ್ರಹ್ಮೇತ್ಯುಪಾಸೀತ'** ಮನಸ್ಸನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕು – ಇವೇ ಮುಂತಾದ ಉಪನಿಷದ್ವಾಕ್ಯಗಳಲ್ಲಿ ಹೊರಗಿನ ವಸ್ತುಗಳನ್ನೂ ನಮ್ಮೊಳಗಿನ ಮನಸ್ಸು ಮುಂತಾದವುಗಳನ್ನೂ ಹಾಗೆಂದು ಉಪಾಸನೆಮಾಡಬೇಕೆಂಬ ಉಪದೇಶವು ಸ್ಪಷ್ಟವಾಗಿ ಕಂಡುಬರುತ್ತದೆ. ಪುರಾಣವಚನಗಳೂ ಹಾಗೆಂದೇ ಹೇಳುತ್ತಿವೆ : **"ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುರ್ವನಾನಿ ವಿಷ್ಣುರ್ಗಿರಯೋ ದಿಶಶ್ಚ । ನದ್ಯಃ ಸಮುದ್ರಾಶ್ಚ ಸ ಏವ ಸರ್ವಂ ಭಿ ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ"।** ನಕ್ಷತ್ರತಾರಾಗಣಗಳು ವಿಷ್ಣು, ಭುವನಗಳು ವಿಷ್ಣುವೇ, ವನಗಳು ವಿಷ್ಣುವೇ, ಗಿರಿಗಳು, ದಿಕ್ಕುಗಳು, ನದಿಗಳು, ಸಮುದ್ರಗಳು– ಇವೆಲ್ಲ ಆತನೇ. ಯಾವಯಾವದು ಇದೆಯೋ ಯಾವಯಾವದು ಇಲ್ಲವೋ– ಅದೆಲ್ಲವೂ ವಿಷ್ಣುವೇ. ಹೀಗೆ ಈ ಪ್ರಪಂಚದಲ್ಲಿರುವದೆಲ್ಲ ದೇವರೆಂದು ಶಾಸ್ತ್ರಗಳಲ್ಲಿ ಸುಸ್ಪಷ್ಟವಾಗಿ ಹೇಳಿರುತ್ತದೆ. ಈ ವಿಷಯದಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಇನ್ನು ಯಾವ ವಸ್ತುವನ್ನಾದರೂ ಪರಮೇಶ್ವರನೆಂಬ ಬುದ್ಧಿಯಿಂದ ಪೂಜಿಸಬಹುದೇ?– ಎಂಬ ಪ್ರಶ್ನೆಗೆ ಉತ್ತರವನ್ನು ಕೊಡಬೇಕಷ್ಟೆ. ಎಲ್ಲವೂ ಪರಮಾತ್ಮನ ವಿಭೂತಿಯೇ ಆದರೆ ಯಾವದನ್ನಾದರೂ ಆ ದೃಷ್ಟಿಯಿಂದ ಪೂಜೆಮಾಡುವದು ತಪ್ಪೆಂದು ಯಾರೂ ಹೇಳಲಾರರು. ಮೊದಲನೆಯದಾಗಿ ಒಂದು ವಸ್ತುವನ್ನು ಪರಮೇಶ್ವರದೃಷ್ಟಿಯಿಂದ ಉಪಾಸನೆಮಾಡಬೇಕೆನ್ನುವಾಗ ಅಲ್ಲಿ ಆಲಂಬನೆಗಾಗಿ ಇಟ್ಟುಕೊಂಡಿರುವ ವಸ್ತು ಪ್ರಧಾನವಲ್ಲ; ಅದರಲ್ಲಿ ನಾವು ಕಲ್ಪಿಸಿಕೊಂಡಿರುವ ಪರಮೇಶ್ವರನಿಗೇ ಈ ಅರ್ಚನೆಯಲ್ಲಿ ಬೆಲೆ. ಆದ್ದರಿಂದಲೇ ಶಾಲಗ್ರಾಮದಲ್ಲಿ ವಿಷ್ಣುವೆಂಬ ಬುದ್ಧಿಯನ್ನು ಮಾಡುವವರು ವಿಷ್ಣುವಿನ ಹೆಸರಿನಿಂದಲೇ ಅದನ್ನು ಪೂಜಿಸುತ್ತಾರೆ; ಪೂಜೆಯಲ್ಲಿ ಅವರಿಗೆ ವಿಷ್ಣುಭಾವನೆಯಿರುತ್ತದೆಯೇ ಹೊರತು ಇಂಥದ್ದೊಂದು ವಸ್ತುವನ್ನು ಪೂಜಿಸುತ್ತಿದ್ದೇವೆಂದೇನೂ ಅವರು ಭಾವಿಸಿರುವದಿಲ್ಲ. ಇನ್ನು ವಸ್ತುಗಳ ತಾರತಮ್ಯವನ್ನು ಮನದಂದುಕೊಳ್ಳುವದಾದರೆ ಆಗಲೂ **"ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ । ತತ್ತದೇವಾವಗಚ್ಛತ್ವಂ ಮಮ ತೇಜೋಽಂಶಸಂಭವಮ್॥"**– ಎಂದು ಭಗವಂತನು ಹೇಳಿರುವಂತೆ ಯಾವ ಯಾವದರಲ್ಲಿ ಭಗವಂತನ ಮಹಿಮೆಯನ್ನು ನೆನಪಿಗೆ ತರುವ ಉತ್ತಮಗುಣಗಳು ಕಾಣುವವೋ ಅದನ್ನೆಲ್ಲ ಭಗವಂತನ ತೇಜೋಂಶದಿಂದ ಉಂಟಾಗಿದೆಯೆಂದು

ಭಾವಿಸಬೇಕೆಂದಿರುವದರಿಂದ ಭಕ್ತರಾದವರು ಉತ್ತಮವಾದ ವಿಭೂತಿಗಳನ್ನು ಆದರದಿಂದಲೇ ಪೂಜಿಸುವರೆಂಬುದಕ್ಕೆ ಯಾವ ಸಂಶಯವೂ ಇಲ್ಲ.

ಆದರೆ ಇಲ್ಲಿ ಇನ್ನೊಂದು ವಿಷಯವನ್ನು ನಾವು ಮನಸ್ಸಿಗೆ ತಂದುಕೊಳ್ಳುವದು ಅವಶ್ಯವಾಗಿರುತ್ತದೆ. ಯಾವ ವಸ್ತುವೇ ಆಗಲಿ, ಯಾವ ಆಧ್ಯಾತ್ಮಿಕ ದೃಶ್ಯವೇ ಆಗಲಿ, ಅದು ಪರಮಾತ್ಮನ ವಿಭೂತಿಯೇ ಎಂಬ ದೃಢಭಾವನೆಯೊಂದು ಇದ್ದುಬಿಟ್ಟರೆ ಆ ಭಾವನೆ ಯಾವ ವಸ್ತುವಿನಲ್ಲಿ ಇದ್ದರೆತಾನೆ ಏನು ? ಕಲ್ಲೋ, ಮಣ್ಣೊ, ನೀರೋ, ಗಿಡವೊ, ಮರವೊ, ಹಾವೊ, ಗೋವೊ, ಸಾಮಾನ್ಯಮನುಷ್ಯನೊ, ಸಾಧುವೊ– ಎಲ್ಲಿ ಈಶ್ವರಭಾವನೆಮಾಡಿದರೂ ಈಶ್ವರಭಾವನೆಯೇ ಅಲ್ಲವೆ? ಈ ಭಾವನೆಯನ್ನು ನಿತ್ಯಾಚರಣೆಗೆ ತಂದವರಿಗೆ ಈ ಜಗತ್ತೆಲ್ಲವೂ ಈಶ್ವರನ ವಿಭೂತಿಯೇ ಎಂಬ ಭಾವನೆಯು ಅಳವಡುವದು ಸುಲಭವಾದೀತೊ, ಅಥವಾ ಕಷ್ಟವಾದೀತೋ? ಅಭಿಮಾನಗಳನ್ನೆಲ್ಲ ಬದಿಗಿಟ್ಟು ಯಾವದನ್ನು ಕಂಡರೆ ಅದರಲ್ಲಿ ಈಶ್ವರಭಾವವನ್ನು ಮಾಡುವ ಅಭ್ಯಾಸವು ಮನಸ್ಸಿಗೆ ಅಳವಡುವದೊಂದು ಮಹಾಪುಣ್ಯದ ಫಲವೆನ್ನಬೇಕು.

ಸರ್ವವನ್ನೂ ಈಶ್ವರನೆಂದು ಭಾವಿಸುವವರ ಮತದಲ್ಲಿ ಒಂದು ದೋಷವನ್ನು ಕೆಲವರು ಎತ್ತೆಣಿಸುವದುಂಟು. ಎಲ್ಲವೂ ಈಶ್ವರನೇ ಆದರೆ ಪಾಪಾಚರಣೆಯನ್ನು ಮಾಡಿದರೇನು? ಪಾಪಕೃತ್ಯವೂ ಪಾಪವೂ ಈಶ್ವರನೇ ಅಷ್ಟೆ?– ಎಂಬುದು ಈ ದೋಷದೃಷ್ಟಿಯ ಜನರ ಆಕ್ಷೇಪಣೆ. ಆದರೆ ಇಲ್ಲಿ ಎಲ್ಲವೂ ಈಶ್ವರನೆಂಬ ಮೂಲ ತತ್ತ್ವವನ್ನು ಒಪ್ಪಿದರೆ– ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದು ಆಗಬೇಕಷ್ಟೆ?– ದುಷ್ಕರ್ಮದ ಫಲವೂ ಈಶ್ವರನೇ ಎಂದು ಒಪ್ಪಬೇಕಾಗುವದು. ಬೆಂಕಿಯನ್ನು ಮುಟ್ಟಿದರೆ ಅದು ಸುಟ್ಟೇಸುಡುತ್ತದೆ; ಬೆಂಕಿಯನ್ನು ದೇವರೆಂದು ಒಪ್ಪಿದವನು ಆ ಸುಡುವಿಕೆಯನ್ನೂ ದೇವರೆಂದೇ ಕರೆಯಬೇಕಾಗುವದು. ಅಲ್ಲವೆ? ಇದೂ ಅಲ್ಲದೆ ಪಾಪವನ್ನು ಮಾಡುವವನಿಗೆ ಎಲ್ಲವೂ ದೇವರೆಂಬ ಭಾನೆಯಿರುವದಿಲ್ಲ; ಎಲ್ಲವೂ ದೇವರೆಂಬ ಭಾವನೆಯಿರುವವನಿಗೆ ಪಾಪಬುದ್ಧಿ ಇರುವಂತೆ ಇಲ್ಲ. "**ನಾನು ಕರ್ಮವನ್ನು ಮಾಡುತ್ತೇನೆ**" ಎಂಬ ಬುದ್ಧಿಯಿರುವವನು ಆ ಕರ್ಮದ ಫಲವನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವದೇ ಇಲ್ಲ. ಪಾಪಬುದ್ಧಿಗೆ ಭೇದಬುದ್ಧಿಯೇ ಮೂಲ; ನೀತಿಗೆ ಸರ್ವವೂ ಈಶ್ವರನೆಂಬ ಬುದ್ಧಿಯು ಸಹಾಯಕ. ಹೀಗಿರುವಲ್ಲಿ ಸರ್ವವೂ ಈಶ್ವರನೆನ್ನುವವರು ಪಾಪಕರ್ಮವನ್ನು ಮಾಡಬಹುದು ಎಂಬ ಶಂಕೆಯು ಎಷ್ಟು ನಿರಾಧಾರವಾದದ್ದೆನ್ನಬೇಕಾಯಿತು !

ಇದುವರೆಗೂ ಸರ್ವವೂ ಅದು ಕಾಣುವ ರೂಪದಿಂದಲೇ ಈಶ್ವರನ ಪ್ರತೀಕವೇ ಎಂದಿಟ್ಟುಕೊಳ್ಳುವ ಭಾವನೆಯನ್ನು ಕುರಿತು ವಿಚಾರಮಾಡಿದ್ದಾಯಿತು. ಈ ಭಾವನೆಯು ಶ್ರದ್ಧಾಮಾತ್ರದಿಂದ ಉಂಟಾದರೂ ಸಾಕು. ಅದರಿಂದಲೂ ಲೋಕಕ್ಕೆ ಕಲ್ಯಾಣವೇ ಆದೀತು. ಯಾವ ಮಹಾನುಭಾವರು ಕಂಡಕಂಡಲ್ಲಿ ಪರಮಾತ್ಮಭಾವನೆಯನ್ನೇ ಮಾಡುವದಕ್ಕೆ ಸಿದ್ಧರಾಗಿರುವರೋ ಅಂಥವರು ಈ ಭೂಲೋಕದಲ್ಲಿ ಕೆಲವರಿದ್ದರೂ ಸಾಕು; ಅವರ ನಡೆನುಡಿಗಳು ಮಿಕ್ಕವರಿಗೆ ಆದರ್ಶಪ್ರಾಯವಾಗುವವು. ಈ ಲೋಕದ ಜನರಲ್ಲಿ ಕಾಣುವ ರಾಗದ್ವೇಷಗಳು ಅಂಥವರ ದರ್ಶನದಿಂದಲೇ ಕಡಿಮೆಯಾಗುವದು, ಭೂಮಿಯು ಸ್ವರ್ಗವಾಗುವದಕ್ಕೆ ಮೊದಲಾಗುವದು. ಆದರೆ ನಾವು ವೇದದಿಂದ ಆರಿಸಿಕೊಂಡಿರುವ ಪುರುಷ ಸೂಕ್ತದಲ್ಲಿ ಹೇಳಿರುವದು ಇಂಥ ಶ್ರದ್ಧಾಮಾತ್ರದಿಂದ ನಂಬಬೇಕಾದ ವಿಷಯವನ್ನಲ್ಲ; ಎಲ್ಲವನ್ನೂ ಈಶ್ವರನು ಸೃಷ್ಟಿಸಿ ಅದರಲ್ಲಿರುವ ಚೇತನಾಚೇತನವಸ್ತುಗಳಲ್ಲೆಲ್ಲ ಅವನು ವ್ಯಾಪಿಸಿಕೊಂಡಿರುವನೆಂಬ ಘನತತ್ತ್ವವನ್ನು ಇಲ್ಲಿ ಹೇಳಿರುತ್ತದೆ. ಇದನ್ನು ತತ್ತ್ವಜಿಜ್ಞಾಸುಗಳು ಮನನಮಾಡಿ ನಿದಿಧ್ಯಾಸನದಿಂದ ಅನುಭವಕ್ಕೆ ತಂದುಕೊಂಡರೆ ಇಲ್ಲಿಯೇ ಈಗಲೇ ಈ ಜಗತ್ತೆಲ್ಲವೂ ಆ ಪರಮಾತ್ಮನೇ ಎಂಬುದು ಅವರ ಜ್ಞಾನಚಕ್ಷುಸ್ಸಿಗೆ ನಿಸ್ಸಂದಿಗ್ಧವಾಗಿ ಗೋಚರವಾಗುವದು.

ಚೇತನಾಚೇತನಗಳಲ್ಲೆಲ್ಲ ಪರಮಾತ್ಮನು ವ್ಯಾಪಿಸಿಕೊಂಡಿರುತ್ತಾನೆ ಎಂದರೇನು? ಈಗಿನ ಸ್ಕೂಲುಗಳಲ್ಲಿ ಹುಡುಗರು ಆಡುವ ಫುಟ್‌ಬಾಲ್ ಎಂಬ ಕಾಲುಚಂಡಿನಲ್ಲಿ ವಾಯು ತುಂಬಿಕೊಂಡಿರುವಂತೆಯೇ? ಅಲ್ಲ. ಆ ಚಂಡಿನಲ್ಲಿ ಒಳಗೂ ಹೊರಗೂ ವಾಯುವಿರುತ್ತದೆ, ನಿಜ; ಆದರೆ ನಡುವೆ ಒಂದು ರಬ್ಬರಿನ ಚೀಲವಿದೆ; ಅದರ ಮೇಲುಗಡೆ ಒಂದು ದಟ್ಟನೆಯ ತೊಗಲಿನ ಹೊದಿಕೆಯನ್ನು ಬಿಗಿದುಕಟ್ಟಿರುತ್ತದೆ. ಪ್ರಕೃತದಲ್ಲಿ ನಾವು ಹೇಳುತ್ತಿರುವದು ಈ ಜಗತ್ತು ಚೇತನಾಚೇತನರೂಪವಾದ ವಸ್ತುಗಳನ್ನೊಳಗೊಂಡಿರುವದೆಂದೂ ಅದರ ಒಳಗೂ ಹೊರಗೂ ಈ ಪರಮಾತ್ಮನೆಂಬ ಯಾವದೋ ತತ್ತ್ವವು ದೃಷ್ಟಾಂತದ ವಾಯುವಿನಂತೆ ತುಂಬಿಕೊಂಡಿರುವದೆಂದೂ ಅರ್ಥವನ್ನು ಮಾಡಿಕೊಳ್ಳಬಾರದು. ಒಂದು ಮಂಜಿನಗಡ್ಡೆಯ ಮನುಷ್ಯನ ಆಕಾರದಲ್ಲಿದೆ ಎಂದು ಭಾವಿಸಿಕೊಳ್ಳಿರಿ; ಆ ಮಂಜಿನ ಮನುಷ್ಯನು ಒಳಗೂ ಹೊರಗೂ ಸಂಪೂರ್ಣವಾಗಿ ಹೇಗೆ ನೀರೇ ಆಗಿರುತ್ತಾನೋ ಹಾಗೆ ಈ ಜಗತ್ತಿನಲ್ಲಿರುವದೆಲ್ಲವೂ ಬರಿಯ ಚಿನ್ಮಾತ್ರಸ್ವರೂಪನಾದ ಪರಮಾತ್ಮನೇ ಆಗಿರುತ್ತದೆ ಎಂಬುದು ಇಲ್ಲಿ ಮಾಡಿರುವ ಉಪದೇಶವು.

ಈ ದೃಷ್ಟಿಯಿಂದ ನೋಡಿದಾಗ ಅಮೃತವಾದ ಮೂರು ಪಾದವೆಂದೂ ಮರ್ತ್ಯವಾದ ಒಂದು ಪಾದವೆಂದೂ ವಿಂಗಡಿಸಿರುವದು ವ್ಯವಹಾರದೃಷ್ಟಿಯ ಜನರಿಗೆ ತಿಳಿವಳಿಕೆಯ ಸೌಕರ್ಯಕ್ಕಾಗಿಯೇ ಹೊರತು ಅದೇ ಪರಮಾರ್ಥವೆಂದೇನೂ ಅಲ್ಲವೆಂದು ಗೊತ್ತಾಗುವದು. ನಾವು ಮೇಲೆ ಕೊಟ್ಟಿರುವ ಉದಾಹರಣೆಯನ್ನು ಮತ್ತೊಮ್ಮೆ ಚೆನ್ನಾಗಿ ವಿಮರ್ಶಿಸುವದಕ್ಕೆ ಮನುಷ್ಯನ ಆಕಾರದ ಮಂಜುಗಡ್ಡೆಯು ಸಮುದ್ರದ ನೀರಿನ ಮೇಲುಗಡೆಯೇ ಇದ್ದು ತೇಲುತ್ತಿದೆ ಎಂದು ಇಟ್ಟುಕೊಳ್ಳಿರಿ. ಈಗ ಹೆಚ್ಚಿನ ನೀರು ಸಮುದ್ರವೆಂಬ ಹೆಸರಿನಿಂದ ಅದರ ಮೇಲೆ ತೇಲುತ್ತಿದೆಯೆಂದೂ ಹೇಳಬೇಕಾಗುವದು. ಈ ಎರಡು ಬೇರೆಬೇರೆಯ ಹೆಸರುಗಳಿಂದ ಕರೆಯಿಸಿಕೊಳ್ಳುವ ವಸ್ತುವಿನಲ್ಲಿರುವ ತಾರತಮ್ಯವೇನು? ಎಂದರೆ ಒಂದು ದ್ರವರೂಪದಲ್ಲಿದೆ, ಮತ್ತೊಂದು ಘನರೂಪದಲ್ಲಿದೆ; ಒಂದು ಎಲ್ಲೆಲ್ಲಿಯೂ ಹರಡಿಕೊಂಡು ಮೇರೆವರಿಯದೆ ಇದ್ದುಕೊಂಡಿದೆ, ಇನ್ನೊಂದು ಅದರ ಏಕದೇಶದಲ್ಲಿದ್ದುಕೊಂಡು ತೇಲುತ್ತಿದೆ ಎಂದು ಹೇಳಬೇಕಾಗುವದು. ನಾಮ, ರೂಪ, ಕರ್ಮ–ಇವುಗಳ ದೃಷ್ಟಿಯಿಂದ ನೋಡಿದಾಗ ಹೀಗೆ ನಾವು ಈ ಎರಡಕ್ಕೂ ತಾರತಮ್ಯವನ್ನು ಹೇಳಿದರೂ ವಸ್ತುತತ್ತ್ವದ ದೃಷ್ಟಿಯಿಂದ ಇದಕ್ಕೆ ಯಾವ ಭೇದವಿದೆ? ಯಾವ ಭೇದವೂ ಇಲ್ಲವೇ ಇಲ್ಲ. ಸಮುದ್ರವೂ ನೀರೇ, ಮಂಜಿನಗಡ್ಡೆಯೂ ನೀರೇ. ನೀರು ನೀರಿನ ಮೇಲೆ ತೇಲುತ್ತಿದೆ– ಎಂಬುದು ಕಾಲಾಕಾಶಗಳ ದೃಷ್ಟಿಯಿಂದ ಆದ ವ್ಯವಹಾರವಾಗಿರುತ್ತದೆ. ಆ ಉಪಾಧಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಇದ್ದರೆ? ನೀರು ಎಂಬ ಒಂದೇ ಹೆಸರೇ ಸಾಕಾಗಿದೆ; ಅದರಲ್ಲಿ ಯಾವ ಭೇದಕ ನಾಮರೂಪಕರ್ಮಗಳಿಗೂ ಎಡೆಯೇ ಇರುವದಿಲ್ಲ. ಅಲ್ಲವೆ? ಪರಮಾತ್ಮನ ಅಮೃತವಾದ ಮೂರು ಪಾದಕ್ಕೂ ಮರ್ತ್ಯವಾದ ಈ ನಾಮರೂಪಕರ್ಮಗಳ ಪ್ರಪಂಚಕ್ಕೂ ಇದೇ ಬಗೆಯ ಸಂಬಂಧವಿರುತ್ತದೆ. ಆದರೆ, ವ್ಯವಹಾರದೃಷ್ಟಿಯಿಂದ ಪರಮಾತ್ಮನು ಆಧಾರವು. ಪ್ರಪಂಚವು ಆ ಆಧಾರವನ್ನು ಆಶ್ರಯಿಸಿಕೋಡಿರುವದು. ತತ್ತ್ವದೃಷ್ಟಿಯಿಂದಲೊ? – ಎಂದರೆ ಎಲ್ಲವೂ ಪರಮತ್ಮನೇ, ಎಲ್ಲವೂ ಆ ಪರಮಪುರುಷನೇ.

ಹೀಗೆಂದು ಅರಿತ ಜ್ಞಾನಿಗಳ ದೃಷ್ಟಿಯಿಂದ ನೋಡಿದರೆ ಸಾಶನ, ಅನಶನ– ಚೇತನ, ಅಚೇತನ – ಎಂಬ ಭೇದವೇ ಇರುವದಿಲ್ಲ. ಎಲ್ಲವೂ ಆ ಪರಮಾತ್ಮನೇ. ಆದ್ದರಿಂದ ಅಂಥವರ ದೃಷ್ಟಿಯಲ್ಲಿ "ಕಲ್ಲು, ಮಣ್ಣು ಹೆಂಟೆ, ಮರ, ಪ್ರಾಣಿ, ಮನುಷ್ಯ, ನೀಚ, ಮಹಾತ್ಮ– ಎಲ್ಲರೂ ಒಂದೇ ಆಗಿಬಿಡುವದಿಲ್ಲವೆ? ಎಂಬ

ಕುಚೋದ್ಯಕ್ಕೆ ಯಾವ ಅವಕಾಶವೂ ಇರುವದಿಲ್ಲ. ಏಕೆಂದರೆ ಈ ದೃಷ್ಟಿಯಿಂದ ಎಲ್ಲವೂ ಚಿನ್ಮಾತ್ರವಾದ ಬ್ರಹ್ಮವೇ ಆಗಿರುತ್ತದೆ; ಹೀಗೆ ಎಲ್ಲವೂ ಒಂದೇ ಆಗುವದು ಯಾರಿಗೂ ಅನಿಷ್ಟವಲ್ಲ. ಆದ್ದರಿಂದಲೇ ಭಗವಂತನು ಹೀಗೆಂದಿರುತ್ತಾನೆ :

**ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।**
**ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ ॥**

**ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ ।**
**ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ ಬ್ರಹ್ಮಣಿ ತೇ ಸ್ಥಿತಾಃ ॥**

"ವಿದ್ಯಾವಿನಯಗಳಿಂದ ಕೂಡಿರುವ ಬ್ರಾಹ್ಮಣನಲ್ಲಿಯೂ ಗೋವಿನಲ್ಲಿಯೂ ಆನೆಯಲ್ಲಿಯೂ ನಾಯಿಯಲ್ಲಿಯೂ ಚಂಡಾಲನಲ್ಲಿಯೂ ಜ್ಞಾನಿಗಳು ಸಮದರ್ಶಿಗಳಾಗಿರುತ್ತಾರೆ. ಯಾರು ಈ ಸಮತ್ವದಲ್ಲಿ ಬುದ್ಧಿಯನ್ನು ಇಟ್ಟಿರುವರೋ ಅವರು ಬದುಕಿರುವಾಗ ಸಂಸಾರವನ್ನು ಗೆದ್ದುಕೊಂಡಿರುತ್ತಾರೆ. ಬ್ರಹ್ಮವು ಸಮವೂ ನಿರ್ದುಷ್ಟವೂ ಆಗಿರುತ್ತದೆಯಷ್ಟೆ; ಆದ್ದರಿಂದ ಯಾವಾಗಲೂ ಬ್ರಹ್ಮದಲ್ಲಿಯೇ ನಿಷ್ಠರಾಗಿರುತ್ತಾರೆ."

ಇಂಥ ಜ್ಞಾನಿಗಳು ಅಧರ್ಮದ ಫಲವಾದ ಅನಾಚಾರಕ್ಕೆ ತುತ್ತಾದರೆಂದು ನಂಬುವದಂತೂ ಹಾಸ್ಯಾಸ್ಪದವಾಗಿರುತ್ತದೆ. ಏಕೆಂದರೆ ಅಧರ್ಮವನ್ನು ಧರ್ಮದಿಂದ ಮೀರಿದಮೇಲೆಯೇ ಅದನ್ನು ಮೀರುವ ಈ ಸಮತ್ವಬುದ್ಧಿಯ ಜ್ಞಾನವು ಬಂದಿದೆ. ಆದ್ದರಿಂದ ಎಲ್ಲವೂ ಈಶ್ವರನೇ ಎಂಬ ಬುದ್ಧಿಯು ಸರ್ವಥಾ ಯಾರಿಗೂ ಕೆಡುಕನ್ನುಂಟುಮಾಡಲಾರದು; ಅದಕ್ಕೆ ಬದಲು ಎಲ್ಲರಿಗೂ ಅದರಿಂದ ಕಲ್ಯಾಣವೇ ಆಗಿರುತ್ತದೆ ಎಂದು ನಾವು ಧಾರಾಳವಾಗಿ ನಂಬಬಹುದು.

"ಈ ಪ್ರಪಂಚವೆಲ್ಲವೂ ಮಾಯೆ, ಇದೊಂದು ಅನಾದಿನಿದ್ರೆಯಾಗಿರುವ ಕನಸು" ಎಂದು ವೇದಾಂತಿಗಳು ಆಗಾಗ್ಗೆ ಹೇಳುತ್ತಿರುವರಷ್ಟೆ? ಇದರ ಅಭಿಪ್ರಾಯವನ್ನು ತಿಳಿಯದೆ ಜನರು ಐಹಿಕಜೀವನವನ್ನು ಜರೆದು ಸುಮ್ಮನೆ ಕೂರುವ ಸೋಮಾರಿಗಳ ವಾದವಿದು ಎಂದು ಹೀಯಾಳಿಸುವದುಂಟು. ಆದರೆ ಈ ದೂಷಣವು ಪ್ರಕೃತಕ್ಕೆ ಹೊಂದುವದಿಲ್ಲವೆಂಬುದು ಸ್ಪಷ್ಟವಾಗಿದೆ. ಏಕೆಂದರೆ "ಈ ಪ್ರಪಂಚವು ಮಾಯೆ" ಎಂದರೇನು? ಇದು ಪ್ರಪಂಚವಲ್ಲ ಎಂದೇನೂ ಅರ್ಥವಲ್ಲ; ಇಲ್ಲಿ ನಮಗೆ ಪ್ರಪಂಚವು ಕಾಣಿಸುವದಿಲ್ಲ ಎಂದು ಯಾವ ಮೂಢನು

ತಾನೇ ಹೇಳಿಯಾನು? ನಾವು ಯಾವದನ್ನು ಪ್ರಪಂಚವೆಂದು ಕರೆಯುತ್ತಿದೇವೆಯೋ ಅದರ ತತ್ತ್ವವು ನಿಜವಾಗಿ ಆತ್ಮಚೈತನ್ಯವೇ ಎಂದು ಅದಕ್ಕೆ ಅರ್ಥ. ಒಂದು ಪ್ರತಿಮೆಯನ್ನು ಕಂಡು ಇದೆಲ್ಲ ಅಮೃತಶಿಲೆಯೋ ಎಂದರೆ ತಪ್ಪು ತಿಳಿವಳಿಕೆಯಾದೀತೇನು? ಅಥವಾ ಪ್ರತಿಮೆಯ ಆಕಾರವು ಕಾಣುವದಿಲ್ಲವೆಂದು ಈ ಮಾತನಾಡಿದವನ ಅಭಿಪ್ರಾಯವೆಂದಾದರೂ ಆದಿತೇನು? ಎಂದಿಗೂ ಇಲ್ಲ. ಭೌತಿಕವಿಜ್ಞಾನಶಾಸ್ತ್ರಜ್ಞರು "ಮೇಜು, ಕುರ್ಚಿ–ಮುಂತಾದ ಘನವಸ್ತುಗಳು ಜನರಿಗೆ ತೋರುವಂತೆ ನಿಜವಾಗಿ ಹಾಗೆಯೇ ಸಾಂದ್ರವಾಗಿಲ್ಲ; ನಡುನಡುವೆ ಅವಕಾಶವುಳ್ಳ ಎಲೆಕ್ಟ್ರಾನ್, ಪ್ರೋಟಾನ್ – ಎಂಬ ಕಣಗಳಾಗಿವೆ" ಎಂದು ಹೇಳುತ್ತಾರೆ. ಆದಮಾತ್ರಕ್ಕೆ ಅವರಿಗೆ ಕುರ್ಚಿ, ಮೇಜು ಒಂದೂ ಕಾಣಿಸುವದಿಲ್ಲವೆಂದೇನೂ ನಾವು ಅರ್ಥಮಾಡಿಕೊಳ್ಳುವದಿಲ್ಲವಷ್ಟೆ? ಇದರಂತೆ ಮಾಯೆ ಎಂದರೆ ಹಾಗೆ ತೋರುವದು ಎಂದರ್ಥ. ಕಣ್ಣುಕಟ್ಟಿನಿಂದ ಯಾರೋ ನಮ್ಮ ಮುಂದೆ ಇಲ್ಲದ್ದನ್ನು ಹೀಗೆ ತೋರಿಸುತ್ತಿದಾರೆ ಎಂದು ಅರ್ಥವಲ್ಲ. 'ಇದೆಲ್ಲ ಕನಸು' ಎಂದರೂ ಹೀಗೆಯೇ. ಸ್ವಭಾವದಿಂದ ಜನರು ಹೀಗೆ ತಪ್ಪಾಗಿ ತಿಳಿದುಕೊಂಡಿರುತ್ತಾರೆ ಎಂದೇ ಅರ್ಥ. ಹೀಗೆ ಕಾಣಿಸುತ್ತಿಲ್ಲವೆಂದೇನೂ ಅರ್ಥವಲ್ಲ.

ಈ ಪ್ರಪಂಚವೆಲ್ಲವೂ ಮಾಯೆಯಿಂದ ಬಗೆಬಗೆಯ ದೃಶ್ಯಗಳಾಗಿ ತೋರುತ್ತಿದೆ, ಇದರ ಪರಮಾರ್ಥವು ಪರಮಾತ್ಮನೇ – ಎಂಬುವರ ಉಪದೇಶವು ನಮಗೆ ಪರಮಾತ್ಮನನ್ನು ತೀರ ಹತ್ತಿರಕ್ಕೆ ತಂದುಕೊಂಟ್ಟಂತೆ ಆಗುತ್ತದೆ. ಪರಮಾತ್ಮನೆಂದರೆ ಎಲ್ಲಿಯೋ ಲೋಕಾಂತರದಲ್ಲಿದ್ದು ಕಾಲಾಂತರದಲ್ಲಿ ನಾವು ಸತ್ತಮೇಲೆ ಕಾಣತಕ್ಕ ತತ್ತ್ವವಲ್ಲ. ಇಲ್ಲಿಯೇ ಈಗಲೇ ಇರುವ ಇಡಿಯ ಪ್ರಪಂಚದ ಪರಮಾರ್ಥತತ್ತ್ವವು – ಎಂಬ ತಿಳಿವಳಿಕೆಯು ಬಾರದೆ ಆ ಭಾವನೆ ಬಂದರೆ ಸಾಕು, ನಮಗೆ ಆ ಪರಮಾತ್ಮನ ವಿಶ್ವರೂಪದರ್ಶನವಾದಂತೆ ಆಗುವದು. ಅರ್ಜುನನಿಗೆ ಶ್ರೀಕೃಷ್ಣಭಗವಂತನು ಈ ರೂಪದಿಂದ ಕಾಣಿಸಿಕೊಂಡನು. ಇಂಥ ದಿವ್ಯದರ್ಶನವನ್ನು ಕೊಟ್ಟನು– ಎಂದು ಭಗವದ್ಗೀತೆಯಲ್ಲಿ ಬರೆದಿದೆ. ಅಧಿಕಾರಿಗಳಾದವರು ಬಲ್ಲ ಗುರುಗಳನ್ನು ಸೇರಿ ಶಾಸ್ತ್ರಶ್ರವಣವನ್ನು ಮಾಡಿ ತತ್ತ್ವವನ್ನು ಮನಗಂಡು ಧನ್ಯರಾಗಬೇಕು. ಅದಿಲ್ಲದವರು ಆ ಭಾವನೆಯನ್ನು ತಂದು ಈ ಜಗತ್ತಿನಲ್ಲಿ ಕಾಣುವ ಸರ್ವಭೂತಗಳಲ್ಲಿಯೂ ಪರಮೇಶ್ವರನಿದಾನೆಂಬ ಭಾವನೆಯನ್ನಾದರೂ ಅಡಿಗಡಿಗೆ ತಂದುಕೊಳ್ಳುತ್ತಾ ಕೃತಾರ್ಥರಾಗಬೇಕು.

# 7. ಪರಮಾತ್ಮನ ಸೃಷ್ಟಿ

★ ಪರಮಾತ್ಮನು ತನ್ನ ಸರ್ವಾಧಿಕವಾದ ಅಮೃತಸ್ವರೂಪದಲ್ಲಿಯೇ ಇದ್ದುಕೊಂಡು ಈ ಚೇತನಾಚೇತನರೂಪವಾದ ಪ್ರಪಂಚದ ಮಹಿಮೆಯನ್ನೂ ಪ್ರಕಟಿಸುತ್ತಿರುವನು ಎಂಬುದೊಂದು ವೇದವಾದವು. ಆತನು ಪ್ರಪಂಚರೂಪದಿಂದ ತೋರಿಕೊಳ್ಳುವ ಬಗೆಯನ್ನು ಸೃಷ್ಟಿಯೆಂದು ಕರೆದಿರುತ್ತದೆ. ಪರಮಾತ್ಮನು ಪ್ರಪಂಚವನ್ನು ಸೃಷ್ಟಿಮಾಡಿದನೆಂದರೆ ಬಡಗಿಯು ಒಂದು ಮನೆಯನ್ನು ಕಟ್ಟುವಂತೆ ಅಲ್ಲ; ಆ ಪರಮಾತ್ಮನೇ ಪ್ರಪಂಚರೂಪವಾಗಿ ತೋರಿಕೊಂಡನೆಂದು ಅರ್ಥ. ಹೀಗೆ ತಾನು ಇರುವಂತೆಯೇ ಇದ್ದುಕೊಂಡು ಪ್ರಪಂಚರೂಪವಾಗಿಯೂ ತೋರುತ್ತಿರುವದೆಂಬುದು ಪರಮಾತ್ಮನ ಮಾಯೆ ಎಂದು ವರ್ಣಿಸುವದು ರೂಢಿಯಲ್ಲಿದೆ. ಮಾಯಾವಿಯಾದವನು ತಾನೊಬ್ಬನೇ ಇದ್ದಂತೆ ಇದ್ದು ತನಗಿಂತ ಬೇರೆಬೇರೆಯಾಗಿ ಜನರನ್ನೂ ಪ್ರಾಣಿಗಳನ್ನೂ ಪದಾರ್ಥಗಳನ್ನೂ ಚಿತ್ರವಿಚಿತ್ರವಾಗಿ ಮಾಯೆಯಿಂದ ತೋರಿಸುವನಲ್ಲವೆ? ಹಾಗೆಯೇ ಪರಮಾತ್ಮನು ತಾನು ಇರುವಂತೆಯೇ ತನ್ನ ಪೂರ್ಣರೂಪದಿಂದ ಇದ್ದುಕೊಂಡೇ ಈ ಪ್ರಪಂಚ ರೂಪದಿಂದಲೂ ತೋರಿಕೊಳ್ಳುತ್ತಿರುವನೆಂಬುದು ಇಲ್ಲಿ ವಿವಕ್ಷಿತಾಂಶವಾಗಿದೆ.

ಈ ಸೃಷ್ಟಿಯನ್ನು ವೇದದಲ್ಲಿ ಬೇರೆಬೇರೆಯ ಕ್ರಮದಿಂದ ವರ್ಣಿಸಿರುತ್ತದೆ. ಆದರೆ ಸೃಷ್ಟಿಯನ್ನು ಹೇಳಿರುವದು ಸೃಷ್ಟಿಗೋಸ್ಕರವಲ್ಲ, ಪರಮಾತ್ಮನ ಜ್ಞಾನಕ್ಕಾಗಿ. ಎಲ್ಲವೂ ಪರಮಾತ್ಮನಿಂದ ಬಂದಿದೆ, ಎಲ್ಲವೂ ಪರಮಾತ್ಮಜ್ಞಾನಕ್ಕೆ ಉಪಯೋಗವಾಗುವ ಸಾಧನವಾಗಿದೆ– ಎಂಬ ಭಾವವು ಸೃಷ್ಟಿವಾಕ್ಯಗಳಲ್ಲಿ ಬಹಳವಾಗಿ ಸಿಕ್ಕುತ್ತದೆ. ಆದ್ದರಿಂದ ಸೃಷ್ಟಿಯನ್ನು ಸೃಷ್ಟಪ್ರಪಂಚವೆಂಬ ದೃಷ್ಟಿಯಿಂದ ನೋಡುವದಕ್ಕೆ ಹೋಗಬಾರದು. ಅದನ್ನು ಕಂಡಕೂಡಲೆ ಇದೆಲ್ಲವೂ ಪರಮಾತ್ಮನ ಸೃಷ್ಟಿ, ಇದೆಲ್ಲವೂ ಪರಮಾತ್ಮನ ವಿಭೂತಿ, ಇದೆಲ್ಲವೂ ಪರಮಾತ್ಮಪ್ರಾಪ್ತಿಗೆ ಸಾಧನ– ಎಂಬ ಭಾವವು ಬರುವದಕ್ಕೆ ತಕ್ಕ ದೃಷ್ಟಿಯನ್ನು ಸಂಪಾದಿಸಿಕೊಳ್ಳಬೇಕು. ಹೀಗೆಂಬುದು ವೇದೋಪದೇಶವು. ಈ ಅಭಿಪ್ರಾಯವನ್ನು ಪುರುಷಸೂಕ್ತದ ಋಕ್ಕುಗಳಲ್ಲಿ ವಿವರಿಸಿರುವ ಪ್ರಕಾರದಿಂದ ಮನದಂದುಕೋಳ್ಳುವದರಿಂದ ಪ್ರಯೋಜನವುಂಟು.

---

★ **ಮಾರ್ಚ 1955, ಸಂಪುಟ 24, ಪುಟ 185–189**

ಸೃಷ್ಟಿಯನ್ನು ಸಾಮಾನ್ಯವಾಗಿ ಹೇಳುವ ಒಂದು ಋುಕ್ಕಿನ ಅರ್ಥವು ಹೀಗಿದೆ:

**ತಸ್ಮಾದ್ವಿರಾಡಜಾಯತ ವಿರಾಜೋ ಅಧಿ ಪೂರುಷಃ ।**

**ಸ ಜಾತೋ ಅತ್ಯರಿಚ್ಯತ ಪಶ್ಚಾದ್ಭೂಮಿಮಥೋ ಪುರಃ ॥5॥**

**ಆತನಿಂದ ವಿರಾಜನು ಉಂಟಾದನು. ವಿರಾಜನಮೇಲೆ ಪುರುಷನಿದ್ದನು. ಆ ವಿರಾಜನು ಅತಿರಿಕ್ತನಾದನು. ಆ ಬಳಿಕ ಭೂಮಿಯನ್ನೂ ಆ ಬಳಿಕ ಪುರಗಳನ್ನೂ ಸೃಷ್ಟಿಸಿದನು.**

ಈ ಅರ್ಥವನ್ನು ಬೃಹದಾರಣ್ಯಕವೇ ಮುಂತಾದ ಉಪನಿಷತ್ತುಗಳಲ್ಲಿ ಇನ್ನಷ್ಟು ವಿವರಿಸಿದೆ. ಪರಮಾತ್ಮನು ಸಮಷ್ಟಿಮನಃಪ್ರಧಾನನಾದರೆ ಹಿರಣ್ಯಗರ್ಭನೆನಿಸುವನು, ಸಮಸ್ತಸ್ಥೂಲೋಪಾಧಿಯಿಂದ ವಿರಾಟ್ಪುರುಷನೆನಿಸುವನು. ವಿರಾಟ್ಪುರುಷನಿಂದ ದೇವತೆಗಳು, ಮನುಷ್ಯರು – ಮುಂತಾದ ಶರೀರಿಗಳು ತೋರಿಕೊಳ್ಳುವರು ಎಂಬುದು ಈ ಸೃಷ್ಟಿಯ ಕ್ರಮ. ಪರಮೇಶ್ವರನಿಂದ ಸೂಕ್ಷ್ಮ ಭೂತಗಳುಂಟಾಗಿ ಅವುಗಳಿಂದ ಸ್ಥೂಲಭೂತಗಳಾಗುವವು. ಇವುಗಳಿಂದಾಗುವ ಭೌತಿಕಪದಾರ್ಥಗಳೂ ಸೂಕ್ಷ್ಮರೂಪವಾದ ಶರೀರವಿಶೇಷಗಳೂ ಜಗತ್ತಿನ ವೈಚಿತ್ರ್ಯಕ್ಕೆ ಕಾರಣವಾಗಿರುವವು. ಇಷ್ಟೆಲ್ಲ ಸೃಷ್ಟಿಯೂ ಪರಮಾತ್ಮನ ಮಾಯೆಯಿಂದಲೇ ಆದದ್ದು; ಇದೆಲ್ಲದರಲ್ಲಿಯೂ ಆ ಪರಮಾತ್ಮನೇ ತುಂಬಿತುಳುಕುತ್ತಿರುತ್ತಾನೆ.

ಪರಮಾತ್ಮನಿಂದ ಇಡಿಯ ಪ್ರಪಂಚದ ರೂಪದ ಸಮಷ್ಟಿದೇಹವುಳ್ಳ ವಿರಾಡ್ರೂಪವು ಉಂಟಾಗಿದೆಯೆಂದೂ ಅದರಿಂದಲೇ ದೇವತಿರ್ಯಙ್ಮನುಷ್ಯಾದಿ ರೂಪಗಳೂ ತೋರಿಕೊಳ್ಳುತ್ತಿರುವವೆಂದೂ ಉಪದೇಶಿಸಿರುವ ಈ ಋುಕ್ಕು ಸಮಷ್ಟಿಯಂತೆ ವ್ಯಷ್ಟಿಗಳಲ್ಲಿಯೂ ಪರಮೇಶ್ವರನ ಚಿತ್ಕಲೆಯನ್ನು ಕಂಡುಕೊಳ್ಳು ವದಕ್ಕೆ ಸಹಾಯಕವಾಗಿದೆ.

ಇದಕ್ಕೂ ಮುಂದಿನ ಋುಕ್ಕುಗಳು ಈ ಜಗತ್ತಿನಲ್ಲಿ ಕಾಣುತ್ತಿರುವದೆಲ್ಲವೂ ಪರಮಾತ್ಮಪ್ರಾಪ್ತಿಗೆ ಸಾಧನವಾಗಿರುವ ಯಜ್ಞದ ಸಾಧನಗಳು ಎಂಬ ಅಭಿಪ್ರಾಯ ವನ್ನು ಒಳಗೊಂಡಿರುವವು.

# 8. ಮಾನಸಯಜ್ಞ –ಪರಮಾತ್ಮ ಪ್ರಾಪ್ತಿಗೆ ಯಜ್ಞಸಾಧನಗಳು

**(6 ರಿಂದ 10ನೇ ಋಕ್ಕುಗಳು)**

ಯತ್ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ ।
ವಸಂತೋ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ ॥6॥

ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ಪುರುಷಂ ಜಾತಮಗ್ರತಃ ।
ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚಯೇ ॥7॥

ತಸ್ಮಾದ್ಯಜ್ಞಾತ್ಸರ್ವಹುತಃ ಸಂಭೃತಂ ಪೃಷದಾಜ್ಯಮ್ ।
ಪಶೂಂಸ್ತಾಂಶ್ಚಕ್ರೇ ವಾಯುವ್ಯಾನಾರಣ್ಯಾನ್ಗ್ರಾಮ್ಯಾಶ್ಚಯೇ ॥8॥

ತಸ್ಮಾದ್ಯಜ್ಞಾತ್ಸರ್ವಹುತ ಋಚಃ ಸಾಮಾನಿ ಜಜ್ಞಿರೇ ।
ಛಂದಾಂಸಿ ಜಜ್ಞಿರೇ ತಸ್ಮಾದ್ಯಜುಸ್ತಸ್ಮಾದಜಾಯತ ॥9॥

ತಸ್ಮಾದಶ್ವಾ ಅಜಾಯಂತ ಯೇ ಕೇ ಚೋಭಯಾದತಃ ।
ಗಾವೋ ಹ ಜಜ್ಞಿರೇ ತಸ್ಮಾತ್ತಸ್ಮಾಜ್ಜಾತಾ ಅಜಾವಯಃ ॥10॥

ಪುರುಷನೆಂಬ ಹವಿಸ್ಸಿನಿಂದ ದೇವತೆಗಳು ಯಜ್ಞವನ್ನು ಮಾಡಿದರಷ್ಟೆ, ಅದಕ್ಕೆ ವಸಂತವೇ ಆಜ್ಯವಾಯಿತು, ಗ್ರೀಷ್ಮವು ಇಧ್ಮವು, ಶರತ್ಕಾಲವು ಹವಿಸ್ಸು, ಅದಕ್ಕೆ ಏಳು ಪರಿಧಿಗಳಾದವು, ಇಪ್ಪತ್ತೊಂದು ಸಮಿತ್ತುಗಳನ್ನು ಮಾಡಿಕೊಂಡರು. ದೇವತೆಗಳು ಯಜ್ಞವನ್ನು ಮಾಡುವದಕ್ಕೆಂದು ಪುರುಷನೆಂಬ ಪಶುವನ್ನು ಕಟ್ಟಿದರಷ್ಟೆ, ಆ ಮೊದಲು ಹುಟ್ಟಿದ ಪುರುಷರೂಪವಾದ ಯಜ್ಞಸಾಧನವನ್ನು ಯಜ್ಞದಲ್ಲಿ ಪ್ರೋಕ್ಷಣಮಾಡಿದರು. ಈ ಪುರುಷರೂಪವಾದ ಪಶುವಿನಿಂದ ಸಾಧ್ಯದೇವತೆಗಳೂ ಮತ್ತು ಋಷಿಗಳೂ ಯಾಗಮಾಡಿದರು. ಆ ಸರ್ವಹುತವಾದ ಯಜ್ಞದಿಂದ ಪೃಷದಾಜ್ಯವನ್ನೂ ವಾಯುದೇವತಾಕವಾದ ಆರಣ್ಯಗ್ರಾಮ್ಯಪಶುಗಳನ್ನೂ ಉಂಟುಮಾಡಿದನು. ಆ ಸರ್ವಹುತಯಜ್ಞದಿಂದ ಋಕ್ಕುಗಳೂ ಸಾಮಗಳೂ ಉಂಟಾದವು; ಅದರಿಂದ

**ಛಂದಸ್ಸುಗಳುಂಟಾದವು; ಅದರಿಂದಲೇ ಯಜುಸ್ಸು ಉಂಟಾಯಿತು. ಅದರಿಂದ ಅಶ್ವಗಳೂ ಎರಡು ಭಾಗಗಳಲ್ಲಿಯೂ ಹಲ್ಲುಗಳುಳ್ಳ ಮಿಕ್ಕ ಎಲ್ಲಾ ಪಶುಗಳೂ ಉಂಟಾದವು; ಗೋಗಳೂ ಅದರಿಂದ ಉಂಟಾದವು, ಆಡುಕುರಿಗಳೂ ಅದರಿಂದ ಉಂಟಾದವು.**

ಈ ಋಕ್ಕುಗಳ ಒಟ್ಟು ಅರ್ಥವೇನೆಂದರೆ ದೇವತೆಗಳು ಇಡಿಯ ಜಗತ್ತನ್ನು ವಿರಾಟ್ಪುರುಷನೆಂಬ ಪಶುವನ್ನುಪಯೋಗಿಸಿಕೊಂಡು ಒಂದಾನೊಂದು ಮಹಾ ಮಾನಸಯಜ್ಞದಿಂದ ಸೃಷ್ಟಿಸಿರುತ್ತಾರೆ. ವೇದದಲ್ಲಿ ವಿಧಿಸಿರುವ ಬೇರೆಬೇರೆಯ ರೂಪದ ಯಜ್ಞವು ಆ ದೇವತೆಗಳ ಸಂಕಲ್ಪರೂಪವಾದ ಯಜ್ಞದ ಫಲವಾದ ಸಾಮಗ್ರಿಗಳಿಂದಲೇ ಆಗತಕ್ಕದ್ದಾಗಿದೆ. ಈ ಯಜ್ಞದಿಂದಲೇ ಮನುಷ್ಯರು ದೇವತ್ವವನ್ನು ಪಡೆದು ವಿರಾಟ್ಪುರುಷನ ಅವಯುವರೂಪರಾಗುವರು. ಈ ಜಗತ್ತಿನಲ್ಲಿ ನಮಗೆ ಕಾಣಬರುತ್ತಿರುವ ಯಾವ ಪದಾರ್ಥವೂ ಈ ವ್ಯಷ್ಟಿರೂಪವಾದ ನಮ್ಮ ಶರೀರದ ಉಪಭೋಗಕ್ಕಾಗಿ ಸೃಷ್ಟವಾಗಿರುವದಿಲ್ಲ. ಮನುಷ್ಯನು ಅಜ್ಞಾನದಿಂದ ಈ ಪ್ರಪಂಚವೆಲ್ಲವೂ ತನಗಾಗಿ ಸೃಷ್ಟವಾಗಿದೆ ಎಂದು ಭಾವಿಸಿಕೊಳ್ಳುತ್ತಾನೆ; ಈ ಅಲ್ಪಭಾವನೆಯಿಂದಲೇ ಮರ್ತ್ಯನಾಗಿರುತ್ತಾನೆ. ಆದರೆ ನಿಜವಾಗಿ ನೋಡಿದರೆ ಈ ಪ್ರಪಂಚವೆಂಬುದೊಂದು ಮಹಾಯಜ್ಞಶಾಲೆಯಾಗಿರುತ್ತದೆ. ಇಲ್ಲಿ ಕಾಣಬರುತ್ತಿರುವದೆಲ್ಲವೂ ಯಜ್ಞಾಂಗವಾದ ವಸ್ತುಗಳೇ ಆಗಿರುತ್ತವೆ.

ಪ್ರಪಂಚದಲ್ಲಿ ಕಾಣುವ ವಸ್ತುಗಳನ್ನು ತನ್ನ ಭೋಗ್ಯಕ್ಕೆ ಎಂದು ಉಪಯೋಗಿಸಿಕೊಳ್ಳಬೇಕೆಂದು ಹವಣಿಸುತ್ತಿರುವವರು ಅಜ್ಞರು. ಅವರಿಗೆ ಈ ಜಗತ್ತೆಲ್ಲವೂ ವಿರಾಡ್ರೂಪವಾದ ಪ್ರಜಾಪತಿಯ ಯಜ್ಞದ ಫಲವೆಂಬುದು ತಿಳಿಯದು. ಪ್ರಜಾಪತಿಯು ಸೃಷ್ಟಿಯ ಆದಿಯಲ್ಲಿ ತಾನೇ ಪಶುವಾಗಿ ದೇವತೆಗಳ ಯಜ್ಞದ ಮೂಲಕ ಈ ಜಗತ್ತನ್ನು ನಿರ್ಮಿಸಿರುತ್ತಾನೆ. ಕ್ರಿಯಾಕಾರಕಫಲಾತ್ಮಕವಾಗಿರುವ ಜಗತ್ತೇ ಯಜ್ಞಮಯವಾಗಿರುತ್ತದೆ. ಯಜ್ಞದಿಂದಲೇ ಜಗತ್ತಿನ ಬೆಳವಣಿಗೆಯಾಗ ಬೇಕಾಗಿರುತ್ತದೆ; ಅದರಿಂದಲೇ ಪ್ರಜೆಗಳ ಇಷ್ಟಕಾಮಗಳೆಲ್ಲವೂ ದೊರೆಯಬೇಕು–ಎಂಬುದು ಆ ಪ್ರಜಾಪತಿಯ ಸಂಕಲ್ಪವು. ಆದಿಯಜ್ಞವನ್ನು ಮಾಡಿದವರು ದೇವತೆಗಳು, ಋಷಿಗಳು; ಅವರು ಯಜ್ಞದ ಫಲವಾಗಿಯೇ ದೇವತೆಗಳಾಗಿರುತ್ತಾರೆ. ಋಷಿಗಳಾಗಿರುತ್ತಾರೆ. "ಈ ಯಜ್ಞದಿಂದಲೇ ದೇವತೆಗಳನ್ನು ಮನುಷ್ಯರು ಪುಷ್ಟಿಗೊಳಿಸಬೇಕು, ಹಾಗೆ ಪುಷ್ಟರಾದ ದೇವತೆಗಳು ಮನುಷ್ಯರನ್ನು ಮಳೆಬೆಳೆಗಳನ್ನು ಕೊಟ್ಟು ಪುಷ್ಟಿಗೊಳಿಸುವರು. ಹೀಗೆ ಪರಸ್ಪರಭಾವನೆಯಿಂದಲೇ ಎಲ್ಲಾ ಪ್ರಜೆಗಳೂ

ಕ್ರಮಕ್ರಮವಾಗಿ ದೈವೀಸಂಪತ್ತನ್ನು ಪಡೆದು ಜ್ಞಾನಯೋಗ್ಯರಾಗಿ ಪರಮಶ್ರೇಯಸ್ಸನ್ನು ಪಡೆಯಲಿ! ಎಂಬುದೇ ಪ್ರಜಾಪತಿಯ ಸಂಕಲ್ಪವು" ಎಂದು ಗೀತೆಯು ಹೇಳುತ್ತಿದೆ.

ಮನುಷ್ಯನಿಗೆ ಬೇರೆಬೇರೆಯ ಎರಡು ದೃಷ್ಟಿಗಳನ್ನು ಅವಲಂಬಿಸುವದಕ್ಕೆ ಬರುತ್ತದೆ. ಇಂದ್ರಿಯಪ್ರಧಾನನಾಗಿ "ನಾನು, ಕರ್ತೃ, ಭೋಕ್ತೃ; ಈ ಜಗತ್ತೆಲ್ಲವೂ ನನ್ನ ಭೋಗಕ್ಕಾಗಿ ಹುಟ್ಟಿರುತ್ತದೆ. ಇಲ್ಲಿ ನನ್ನಂತೆ ಅನೇಕ ಕರ್ತೃ ಭೋಕ್ತೃಗಳಿರುವದರಿಂದಲೂ ಅವರೆಲ್ಲರಿಗೂ ಇದೇ ಜಗತ್ತೇ ಭೋಗಸಾಮಗ್ರಿಯನ್ನು ಒದಗಿಸಿಕೊಡಬೇಕಾಗಿರುವದರಿಂದಲೂ ನನ್ನ ಬುದ್ಧಿಯನ್ನು ಆದಷ್ಟು ಚುರುಕಾಗಿ ಉಪಯೋಗಿಸಿ ಮಿಕ್ಕೆಲ್ಲವನ್ನೂ ಹಿಂದೆ ಹಾಕಿ ನಾನೇ ಎಲ್ಲರಿಗಿಂತಲೂ ಅಧಿಕತಮವಾದ ಭೋಗವನ್ನು ಸಂಪಾದಿಸಿಕೊಂಡು ಸುಖಿಸುವುದು ನನ್ನ ಕರ್ತವ್ಯವು" ಎಂದು ಭಾವಿಸಿಕೊಳ್ಳುವದು ಒಂದು ದೃಷ್ಟಿ. ಹೃದಯಪ್ರಧಾನವಾಗಿ "ಈ ಜಗತ್ತೆಲ್ಲವೂ ಪರಮೇಶ್ವರದತ್ತವಾಗಿರುತ್ತದೆ. ಇದು ಯಾರೊಬ್ಬರ ಸ್ವಂತ ಧನವಲ್ಲ; ಇದನ್ನು ಬಾಚಿಕೊಂಡು ತಾನೊಬ್ಬನೇ ಸುಖಪಡುವದು ಯಾವನೊಬ್ಬನಿಗೂ ಸಾಧ್ಯವಿಲ್ಲ. ಬುದ್ಧಿಶಕ್ತಿಯ ಬಲದಿಂದ ಸ್ಪರ್ಧೆಯನ್ನು ಪಯೋಗಿಸಿ ಎಲ್ಲರಿಗಿಂತಲೂ ಹೆಚ್ಚಿನ ಭೋಗಸಾಮಗ್ರಿಯನ್ನು ರಾಶಿ ಹಾಕಿಕೊಳ್ಳುವದು ಸ್ವಲ್ಪ ಕಾಲದವರೆಗೆ ಶಕ್ಯವಾಗಬಹುದಾದರೂ ಪರಮಶ್ರೇಯಸ್ಸಾಗಲಾರದು. ಪರಮಾತ್ಮನ ವಿಭೂತಿವಿಶೇಷಗಳೇ ಇಲ್ಲಿರುವ ದೇವಮನುಷ್ಯಾದಿ ಜೀವರುಗಳಾದ್ದರಿಂದ ನಾವೆಲ್ಲರೂ ಪರಸ್ಪರವಾಗಿ ಉಪಕಾರ್ಯೋ ಪಕಾರಕ ಭಾವದಿಂದ ಸಹಕರಿಸಬೇಕು. ಇದೆಲ್ಲವೂ ಪರಮೇಶ್ವರನ ಲೀಲಾರಂಗವೇ ಎಂಬ ಭಾವನೆಯನ್ನು ಬೆಳೆಯಿಸಿಕೊಳ್ಳಬೇಕು. ನಮ್ಮ ಜೀವನವನ್ನು ಒಂದು ಪವಿತ್ರತಮವಾದ ಯಜ್ಞವಾಗಿ ಮಾರ್ಪಡಿಸಿಕೊಳ್ಳಬೇಕು. ಈ ಯಜ್ಞದಲ್ಲಿ ಪ್ರತಿಯೊಬ್ಬನೂ ತನ್ನತನ್ನ ಯೋಗ್ಯತೆಗೆ ತಕ್ಕಂತೆ ಸ್ವತ್ವಬುದ್ಧಿಯ ತ್ಯಾಗವನ್ನು ಮಾಡಿ ಮಿಕ್ಕವರ ಹಿತವನ್ನು ಕೋರಬೇಕು. ಸ್ವತ್ವತ್ಯಾಗವು ನೋಡುವದಕ್ಕೆ ವೆಚ್ಚದ ಮಾರ್ಗವೆಂದು ಕಾಣುತ್ತಿದ್ದರೂ ಇದು ಎಲ್ಲರ ಧಾರಣಪೋಷಣೆಗೆ ಬೇಕಾಗಿರುವ ಒಂದು ನಿಯಮವಾಗಿರುತ್ತದೆ. ಇದೇ ಭಗವಂತನ ಅಭೀಷ್ಟವಾಗಿರುತ್ತದೆ. ಅದರಂತೆ ನಡೆಯಿಸಿ ನಾನು ಆ ಭಗವಂತನನ್ನು ಆರಾಧನೆಮಾಡಿ ಕೃತಾರ್ಥನಾಗಬೇಕು." ಎಂಬುದು ಇನ್ನೊಂದು ದೃಷ್ಟಿಯು. ಈ ಉದಾರದೃಷ್ಟಿಯನ್ನೇ ವೇದದಲ್ಲಿ ಉಪದೇಶಿಸಿರುತ್ತದೆ.

ಯಜ್ಞ, ಜ್ಞಾನ– ಈ ಎರಡು ಶಬ್ದಗಳಲ್ಲಿ ವೇದದ ಉಪದೇಶವೆಲ್ಲ

ಅಡಕವಾಗಿದೆ ಎನ್ನಬಹುದು. ಯಜ್ಞವೆಂಬುದು ಬುದ್ಧಿಯ ಅಲ್ಪತನವನ್ನು ಬಿಡಿಸುವದು, ಶರೀರೇಂದ್ರಿಯಸಂಘಾತದಲ್ಲಿಯೇ ನಾನೆಂಬ ಕೀಳುಬುದ್ಧಿಯನ್ನು ತಪ್ಪಿಸುವದು. ಅದರಿಂದಲೇ ಜಗತ್ತೆಲ್ಲವೂ ಪರಮಾತ್ಮನ ಪವಿತ್ರತನುವೆಂಬ ಉದಾತ್ತ ಭಾವನೆಯು ಮನದಲ್ಲಿ ಮಿಂಚುವದು. ಅತ್ಯಂತಪುರಾತನಕಾಲದಲ್ಲಿದ್ದ ವೈದಿಕ ಯಜ್ಞಗಳು ಈಗ್ಗೆ ಕಣ್ಮರೆಯಗಿರಬಹುದು. ಪಶು, ಯೂಪ, ಹೋಮ, ಅಗ್ನಿಗಳು, ಸಮಿತ್ತು, ಹವಿಸ್ಸು, ಯಜಮಾನ, ಋತ್ವಿಜರು, ಸದಸ್ಸು, ದಕ್ಷಿಣೆ, ಸೋಮ–ಇಂಥ ಶಬ್ದಗಳಿಗೆ ನಮಗೆ ಸರಿಯಾದ ಅರ್ಥವು ಈಗ್ಗೆ ಆಗದೆ ಇರಬಹುದು. ಆದರೆ ಈ ಜಗತ್ತೆಲ್ಲವೂ ದೇವತೆಗಳನ್ನುದ್ದೇಶಿಸಿ ಮಾಡುವ ಸ್ವತ್ತ್ವತ್ಯಾಗರೂಪವಾದ ಯಜ್ಞದ ಭೂಮಿಯೇ ಎಂಬ ತತ್ತ್ವಕ್ಕೆ ಮಾತ್ರ ಈಗಲೂ ಚ್ಯುತಿಯಿಲ್ಲ. ಈ ತತ್ತ್ವವನ್ನು ಮರೆತು ಶರೀರೇಂದ್ರಿಯಗಳ ಭೋಗವೆಂಬ ಅಲ್ಪಧ್ಯೇಯವನ್ನು ಮಾನವನ ಕಣ್ಣಮುಂದೆ ಇಟ್ಟಿರುವದೇ ಇಂದಿನ ನಾಗರಿಕತೆಯಲ್ಲಿರುವ ದೊಡ್ಡ ಕೊರತೆಯಾಗಿದೆ.

ಮನುಷ್ಯನು ನಿಜವಾಗಿ ಮನುಷ್ಯನಾಗಬೇಕಾದರೆ, ಮನುಷ್ಯತ್ವದಿಂದ ಋಷಿತ್ವಕ್ಕೂ ದೇವತ್ವಕ್ಕೂ ಏರಬೇಕಾದರೆ, ಕೊನೆಗೆ ನಾವೆಲ್ಲರೂ ಆ ಪರಮಾತ್ಮನ ಅಂಶಗಳೇ ಆ ಪರಮಾತ್ಮನಲ್ಲಿ ಎಂದೆಂದಿಗೂ ಒಂದಾಗಿರುವವರೇ ಎಂಬ ಉತ್ಕೃಷ್ಟ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕಾದರೆ, ಮತ್ತೆ ವೇದೋಕ್ತವಾದ ಯಜ್ಞದ ಭಾವನೆಯು ನಮ್ಮ ಅಂತಃಕರಣದಲ್ಲಿ ಮೊಳೆಯುವದು ಅತ್ಯವಶ್ಯ. ಯಜ್ಞವಿಲ್ಲದವನಿಗೆ ಈ ಲೋಕದ ಸುಖವೇ ಇಲ್ಲ; ಇನ್ನು ಪರಲೋಕದ ಸುಖವೆಲ್ಲಿಂದ ಬಂದೀತು? ಲೋಕದಲ್ಲಿ ಕಾಣುತ್ತಿರುವ ಗಿಡಮರಗಳೂ ಕ್ರಿಮಿಕೀಟಗಳೂ ಪಶುಪಕ್ಷ್ಯಾದಿಗಳೂ ಮನುಷ್ಯರೂ – ಎಲ್ಲರೂ ಸ್ವತ್ತ್ವತ್ಯಾಗರೂಪವಾದ ಯಜ್ಞದಿಂದಲೇ ಜೀವಿಸಿಕೊಂಡಿರುತ್ತಾರೆ. ಒಂದು ದೃಷ್ಟಿಯಿಂದ ಜೀವನವೆಂದರೆ ಯಜ್ಞವೆನ್ನಬಹುದು. ಯಾವ ಪ್ರಾಣಿಯು ಈ ಯಜ್ಞತತ್ತ್ವವನ್ನು ಕಡೆಗಣಿಸಿ ಸ್ವಾರ್ಥಬುದ್ಧಿಯಿಂದ ಜೀವಿಸಲೆಳಸುವದೋ ಅದು ಕೂಡಲೆ ನಾಶವನ್ನು ಹೊಂದುವದು. ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ– ಈ ಭೂತಗಳೂ ಈ ಭೂತಗಳಿಂದಾಗಿರುವ ಚೇತನಾಚೇತನವಸ್ತುಗಳೂ ಯಜ್ಞಕ್ರಮದಿಂದಲೇ ಒಂದನ್ನೊಂದು ಪೋಷಿಸುತ್ತಾ ಮುಂದುವರೆದಿರುವವು. ಈ ದೃಷ್ಟಿಯಿಂದ ವೇದಾರ್ಥವನ್ನು ಅಭ್ಯಾಸಮಾಡಿ ತಿಳಿದುಕೊಳ್ಳುವದರಿಂದಲೇ ನಮ್ಮ ಅಭ್ಯುದಯವೂ ಪರಮಶ್ರೇಯಸ್ಸೂ ದೊರೆಯುವದು. ಈ ದೃಷ್ಟಿಯನ್ನವಲಂಬಿಸುವದೇ ನಿಜವಾದ ಸಂಸ್ಕೃತಿಯ ಉಜ್ಜೀವನವು.

# 9. ಯಜ್ಞಸಹಾಯಕರು – ಬ್ರಾಹ್ಮಣಾದಿ ವಿಭಾಗ

## (ಹನ್ನೊಂದು, ಹನ್ನೆರಡನೆಯ ಋಕ್ಕುಗಳು)

★ಪ್ರಪಂಚವೆಲ್ಲ ದೇವತೆಗಳ ಮಾನಸಯಜ್ಞದ ಫಲವೆಂದು ವರ್ಣಿಸಿರುವದು ವೇದದಲ್ಲಿರುವ ಒಂದು ವಿಶೇಷವು. ಪರಮಾತ್ಮನಿಂದ ವಿರಾಟ್ಪುರುಷನು ಉತ್ಪತ್ತಿಯಾದ ರೀತಿಯನ್ನೂ ಆ ಪರುಷನನ್ನು ಹವಿಸ್ಸಾಗಿ ಮಾಡಿಕೊಂಡು ದೇವತೆಗಳು ಮಾಡಿದ ಮಾನಸಯಜ್ಞದ ಫಲವಾಗಿ ವಿರಾಟ್ಪುರುಷನಿಂದ ಉಂಟಾದ ವಸ್ತುಗಳೆಲ್ಲವೂ ಹೇಗೆ ಯಜ್ಞಕ್ಕೆ ಬೇಕಾದ ಸಾಮಗ್ರಿಗಳೇ ಆದವೆಂಬುದನ್ನೂ ವರ್ಣಿಸುವ ಪುರುಷಸೂಕ್ತದ ಭಾಗವನ್ನು ಹಿಂದಿನ ಸಂದೇಶದಲ್ಲಿ ತಿಳಿಸಿರುತ್ತೇನೆ.

ಯಜ್ಞವನ್ನು ಮಾಡುವದಕ್ಕೆ ಸಾಮಗ್ರಿಗಳಿದ್ದರೆ ಸಾಲದು, ಯಜ್ಞವನ್ನು ಮಾಡುವವರೂ ಬೇಕು; ಅದಕ್ಕೆ ಸಹಾಯಮಾಡುವವರೂ ಬೇಕು. ಇವರೂ ಈ ದೇವತೆಗಳ ಯಜ್ಞದಿಂದಲೇ ಉಂಟಾದರೆಂದು ಪುರುಷಸೂಕ್ತದಲ್ಲಿ ವರ್ಣಿಸಿರುತ್ತದೆ.

**ಯತ್ಪುರುಷಂ ವ್ಯದಧುಃ ಕತಿಧಾ ವ್ಯಕಲ್ಪಯನ್ ।**

**ಮುಖಂ ಕಿಮಸ್ಯ ಕೌ ಬಾಹೂ ಕಾ ಊರೂ ಪಾದಾ ಉಚ್ಯೇತೇ ॥11॥**

**ಬ್ರಾಹ್ಮಣೋಽಸ್ಯ ಮುಖಮಾಸೀದ್ಬಾಹೂ ರಾಜನ್ಯಃ ಕೃತಃ ।**

**ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥12॥**

ದೇವತೆಗಳು ಪುರುಷನನ್ನು ಹವಿಸ್ಸಾಗಿ ಮಾಡಿಕೊಂಡರಷ್ಟೆ? ಅವನನ್ನು ಎಷ್ಟು ವಿಧವಾಗಿ ಕಲ್ಪಿಸಿಕೊಂಡರು? ಆತನ ಮುಖವು ಯಾವದು? ಬಾಹುಗಳು ಯಾವವು? ತೊಡೆಗಳು ಯಾವವು? ಪಾದಗಳು ಯಾವವು? ಬ್ರಾಹ್ಮಣನೇ ಅವನ ಮುಖವಾದನು; ಕ್ಷತ್ರಿಯನು ಬಾಹುಗಳಾಗಿ ಮಾಡಲ್ಪಟ್ಟನು; ವೈಶ್ಯನಿದಾನಲ್ಲ, ಅವನು ಆತನ ತೊಡೆಗಳು; ಪಾದಗಳಿಂದ ಶೂದ್ರನು ಹುಟ್ಟಿದನು.

ದೇವತೆಗಳು ಆ ಮಾನಸಯಜ್ಞದಲ್ಲಿ ಹೇಗೆಹೇಗೆ ಸಂಕಲ್ಪಿಸಿಕೊಂಡರೋ ಹಾಗೆಹಾಗೆಯೇ ಬ್ರಾಹ್ಮಣಾದಿಗಳು ಆದರು. ಆದ್ದರಿಂದ ಆ ಬ್ರಾಹ್ಮಣಾದಿಗಳು

---

★ ಏಪ್ರಿಲ್ 1955, ಸಂಪುಟ 24, ಪುಟ 205–212

ಈಗಲೂ ಮನುಷ್ಯರಲ್ಲಿ ಕಂಡುಬರುತ್ತಾರೆ. ಆದ್ದರಿಂದ ಮನುಷ್ಯನು ಯಜ್ಞಭಾವನೆಯಿಂದ ಉತ್ತಮಸ್ಥಿತಿಗೆ ಏರಬೇಕು. ಪರಮಾತ್ಮನ ಸ್ವರೂಪವನ್ನು ತಿಳಿದುಕೊಳ್ಳುವ ಮೇಲಿನಂತಸ್ತನ್ನು ಸೇರಬೇಕು.

ಈಗ ಬ್ರಾಹ್ಮಣಾದಿಶಬ್ದಗಳು ನಾಲ್ಕು ಜಾತಿಯವರನ್ನು ಹೇಳುವ ಶಬ್ದಗಳಾಗಿ ಉಳಿದುಕೊಂಡಿವೆ. ಈ ಜಾತಿಯುವರು ತಾವು ಗುಣಕರ್ಮಗಳಿಂದ ಬ್ರಾಹ್ಮಣದಿಗಳಾಗಿರಲಿ ಇಲ್ಲದಿರಲಿ, "ನಾವು ಬ್ರಾಹ್ಮಣರು", "ನಾವು ಕ್ಷತ್ರಿಯರು", "ನಾವು ವೈಶ್ಯರು"– ಎಂದು ಮುಂತಾಗಿ ಹೇಳಿಕೊಳ್ಳುವ ವಾಡಿಕೆಯಿದೆ. ಈ ಮಂತ್ರದ ದುರುಪಯೋಗವನ್ನು ಮಾಡಿಕೊಂಡು "ನಾವು ಪ್ರಜಾಪತಿಯ ಮುಖದಿಂದ ಉತ್ಪನ್ನರಾದವರಾದ್ದರಿಂದ ಮೇಲಿನ ಜಾತಿಯವರು, ಮಿಕ್ಕವರು ನಮಗಿಂತ ಕಡಿಮೆ – ಎಂದು ಉಳಿದವರನ್ನು ತಿರಸ್ಕಾರಭಾವದಿಂದ ಕಾಣುವ ಬ್ರಾಹ್ಮಣಬ್ರುವರೂ ಇದಾರೆ. ಮಿಕ್ಕವರು 'ನಾವೇನೂ ಬ್ರಾಹ್ಮಣರಿಗಿಂತ ಕಡಿಮೆಯಿಲ್ಲ' ಎಂದು ಹೇಳಿಕೊಳ್ಳುತ್ತಿದಾರೆ. ಹೀಗಾಗಿ ವರ್ಣಾಶ್ರಮವಿಭಾಗವೆಂಬುದು ಜನರಲ್ಲಿ ಪರಸ್ಪರದ್ವೇಷಕ್ಕೆ ಕಾರಣವಾದದ್ದೆಂದೂ ಅದರ ಹುಟ್ಟಡಗಿದ ಹೊರತು ನಮ್ಮ ಜನಾಂಗವು ಏಳಿಗೆಯನ್ನು ಕಾಣಲಾರದೆಂದೂ ನಂಬಿರುವವರಿಗೇನೂ ಕಡಿಮೆಯಿಲ್ಲ. ಈ ನಡುವೆ ತಮಗೆ ನಿಜವಾಗಿ ಯಾವ ವರ್ಣದಲ್ಲಿಯೂ ಅಭಿಮಾನವಿಲ್ಲದಿದ್ದರೂ ಬ್ರಾಹ್ಮಣಾದಿಸಂಕೇತಗಳಿಂದಲೇ ಒಬ್ಬರನೊಬ್ಬರು ದ್ವೇಷಬುದ್ಧಿಯಿಂದ ಕಾಣುವದನ್ನು ಪ್ರೋತ್ಸಾಹಿಸುವ ಸ್ವಾರ್ಥಪರರೂ ಹೆಚ್ಚಿಕೊಂಡಿರುತ್ತಾರೆ !

ವೇದದಲ್ಲಿ ಹೇಳಿರುವ ಬ್ರಾಹ್ಮಣಾದಿಶಬ್ದಗಳ ಅಭಿಪ್ರಾಯವು ಇಷ್ಟು ಕೀಳುಮಟ್ಟಕ್ಕೆ ಇಳಿದಿರುವವರಿಗೆ ತಿಳಿಯುವ ಸಂಭವವೇ ಇಲ್ಲ. ಕೆಲವು ಜನ ಕುಹಕಿಗಳು "ಬ್ರಾಹ್ಮಣನು ಪ್ರಜಾಪತಿಯ ಮುಖವು" ಎಂದಿಷ್ಟೆ ಇದೆಯಾದ್ದರಿಂದ ಇಲ್ಲಿ ಬ್ರಾಹ್ಮಣಾದಿಗಳ ಉತ್ಪತ್ತಿಯನ್ನೇ ಹೇಳಿಲ್ಲವೆಂದೂ ವಾದಿಸುತ್ತಾರೆ. ಆದರೆ ಈ ಪ್ರಕರಣವೇ ಪ್ರಜಾಪತಿಯಿಂದ ಹುಟ್ಟಿದ ವಸ್ತುಗಳನ್ನು ಹೇಳುತ್ತದೆ ಎಂಬುದು ಪೂರ್ವಾಪರಸಂದರ್ಭವನ್ನು ನೋಡಿದವರಿಗೆ ಸ್ಫುಟವಾಗುತ್ತದೆ. ಯುಜುರ್ವೇದದ ಏಳನೆಯ ಕಾಂಡವೇ ಮುಂತಾದ ಕಡೆಯಲ್ಲಿ ಬ್ರಾಹ್ಮಣಾದಿವರ್ಣಗಳ ಉತ್ಪತ್ತಿಯನ್ನು ಹೀಗೆಯೇ ವರ್ಣಿಸಿರುವದರಿಂದ ಇದು ವರ್ಣಗಳ ಉತ್ಪತ್ತಿಯನ್ನು ಹೇಳುತ್ತದೆಯೆಂಬುದೇ ಸರಿ ಎಂದು ಸಾಯಣಾದಿಗಳು ಸಮಾಖ್ಯೆಯನ್ನು ಉದಾಹರಿಸಿಯೂ ಇರುತ್ತಾರೆ.

ಈ ವಿಚಾರವಂತಿರಲಿ. ಪುರುಷಸೂಕ್ತವು ಪರಮಾತ್ಮನ ಸ್ವರೂಪವನ್ನು ತಿಳಿಸುವದರಿಂದಲೇ ಮೊದಲಾಗಿರುತ್ತದೆ ಎಂಬುದನ್ನು ಹಿಂದಿನ ಸಂದೇಶಗಳಲ್ಲಿ ತಿಳಿಸಿರುತ್ತೇನೆ. ಪರಮಾತ್ಮನು ತನ್ನ ನಿರ್ವಿಶೇಷಸ್ವರೂಪದಿಂದಲೇ ಇದ್ದುಕೊಂಡು ಮಾಯೆಯಿಂದ ಈ ಪ್ರಪಂಚದ ಆಕಾರದಿಂದಲೂ ತೋರಿಕೊಳ್ಳುತ್ತಿದಾನೆ; ಈ ಸವಿಶೇಷರೂಪವು ವ್ಯವಹಾರಿದೃಷ್ಟಿಯಿಂದ ಪ್ರಾಣಿಗಳ ಕರ್ಮಕ್ಕೆ ಫಲವನ್ನು ಕೊಡುವ ಭೋಗಭೂಮಿಯನ್ನು ಒದಗಿಸಿಕೊಟ್ಟಿರುತ್ತದೆ– ಎಂದೂ ಆಗಲೆ ತಿಳಿಸಿದ್ದಾಗಿರುತ್ತದೆ. ಪ್ರಪಂಚದಲ್ಲಿರುವ ವಸ್ತುಗಳೆಲ್ಲವೂ ಯಜ್ಞರೂಪವಾದ ಕರ್ಮದ ಸಾಮಗ್ರಿಗಳೆಂಬ ಉತ್ತಮಭಾವನೆಗೆ ಸಾಧಕವಾಗುವಂತೆ ಪ್ರಜಾಪತಿಯಿಂದ ಯಜ್ಞಸಾಧನಗಳೆಲ್ಲವೂ ಹುಟ್ಟಿವೆ ಎಂಬುದನ್ನು ಈ ಸೂಕ್ತದಲ್ಲಿ ವಿವರಿಸಿರುತ್ತದೆ. ಈ ಯಜ್ಞವನ್ನು ಮಾಡುವವರೂ, ಸಹಾಯಮಾಡುವವರೂ ಬ್ರಾಹ್ಮಣಾದಿಗಳು ಎಂಬುದನ್ನು ಪ್ರಕೃತಋಕ್ಕುಗಳು ತಿಳಿಸುತ್ತಿವೆ. ಎಲ್ಲವೂ ಪ್ರಜಾಪತಿಯ ಶರೀರದಿಂದಲೇ ಉತ್ಪನ್ನವಾಗಿರುವದರಿಂದ ಧರ್ಮಕ್ಕೆ ಸಾಧನವಾಗಿರುವ ಪವಿತ್ರವಸ್ತುಗಳೆಂಬ ಈ ಸದ್ಭಾವನೆಯ ಪ್ರಕರಣದಲ್ಲಿ ಉಚ್ಚನೀಚಭಾವನೆಗಳ ಕಲ್ಪನೆಗಾದರೂ ಎಡೆಯೆಲ್ಲಿ? ಇಲ್ಲಿ ಉಚ್ಚನೀಚಕಲ್ಪನೆಯನ್ನು ಮಾಡಿಕೊಳ್ಳುವವರು ನಿಜವಾದ ಅರ್ಥದಲ್ಲಿ ಬ್ರಾಹ್ಮಣಾದಿಗಳಾದರೂ ಹೇಗಾದಾರು? ನಾಲ್ಕುವರ್ಣದವರೂ ಧರ್ಮಕ್ಕೆ ಅತ್ಯವಶ್ಯವೆಂಬುದನ್ನೂ ಧರ್ಮಕ್ಕೆ ಎಲ್ಲರೂ ಅಡಿಯಾಳುಗಳೇ ಎಂಬುದನ್ನೂ ಬೃಹದಾರಣ್ಯಕೋಪನಿಷತ್ತಿನಲ್ಲಿ ಬಹುಸುಂದರವಾಗಿ ತಿಳಿಸಿಕೊಟ್ಟಿರುತ್ತದೆ. ಭಗವದ್ಗೀತೆಯಲ್ಲಿಯೂ ಚಾತುರ್ವರ್ಣ್ಯವು ಭಗವಂತನಿಂದಲೇ ಸೃಷ್ಟ ವಾಗಿರುವದೆಂದೂ ಬ್ರಾಹ್ಮಣಾದಿಗಳಿಗೆ ಗುಣಾನುಸಾರವಾಗಿ ಬೇರೆಬೇರೆಯ ಕರ್ಮಗಳು ವಿಂಗಡವಾಗಿರುವವೆಂದೂ ಸ್ಪಷ್ಟವಾಗಿ ಹೇಳಿರುತ್ತದೆ.

ಬ್ರಾಹ್ಮಣಾದಿವಿಭಾಗವು ಜಾತಿಕೃತವೇ, ಗುಣಾದಿಕೃತವೆ? – ಎಂಬ ವಿಷಯದಲ್ಲಿ ಆಗಾಗ್ಗೆ ಚರ್ಚೆಯಾಗುತ್ತಿರುತ್ತದೆ. ಮೂಲದಲ್ಲಿ ಗುಣಕರ್ಮಕೃತವೇ ಆದರೂ ಅದು ಬರುತ್ತಬರುತ್ತಾ ಜಾತಿಕೃತವಾಗಿಯೇ ಪರಿಣಮಿಸುತ್ತದೆ ಎಂಬುದನ್ನು ನಿಷ್ಪಕ್ಷಪಾತದೃಷ್ಟಿಯಿಂದ ನೋಡುವವರೆಲ್ಲರೂ ಒಪ್ಪಬೇಕು. ಮೇಲಾಟದಿಂದ ಜನರು ದಿನಕ್ಕೊಂದು ಬಗೆಯ ವೃತ್ತಿಯನ್ನು ಅನುಸರಿಸುತ್ತಿರುವ ಪಾಶ್ಚಾತ್ಯರ ಆಧುನಿಕನಾಗರಿಕತೆಯಲ್ಲಿ ಯಾವದೊಂದು ಸಮಾಜವೂ ವ್ಯವಸ್ಥೆಯಿಂದ ನಾಲ್ಕುದಿನ ಬಾಳವಂತಿಲ್ಲವೆಂಬುದನ್ನು ನಾವೆಲ್ಲರೂ ಮನಗಂಡಿರುತ್ತೇವೆ.

ಪಾಶ್ಚಾತ್ಯದೇಶಗಳಲ್ಲಿ ವರ್ಣವಿಭಾಗವಿಲ್ಲದ್ದರಿಂದಲೂ ಕೇವಲ ಲೋಕವ್ಯವಹಾರಕ್ಕಾಗಿಯೇ ವರ್ಗಗಳು ಏರ್ಪಟ್ಟಿರುವದರಿಂದಲೂ ಅಲ್ಲಿರುವ ಬುದ್ಧಿಜೀವಿಗಳೇ ಮುಂತಾದವರ ವರ್ಗಗಳು ಗೋಸುಂಬೆಯಂತೆ ಬಣ್ಣದ ಬದಲಾಣೆಗಳನ್ನು ಹೊಂದುತ್ತಿರುವದರಲ್ಲಿ ಆಶ್ಚರ್ಯವೇನೂ ಇಲ್ಲ. ಇದಂತಿರಲಿ, ಬ್ರಾಹ್ಮಣಾದಿ ವರ್ಣವಿಭಾಗವು ಜಾತಿಕೃತವೆ, ಅಲ್ಲವೆ?– ಎಂಬ ವಿಷಯದ ವಿವಾದವನ್ನು ನಾವು ಪ್ರಕೃತವಿಚಾರಕ್ಕೆ ತೆಗೆದುಕೊಳ್ಳಬೇಕಾದದ್ದೇ ಇಲ್ಲ. ಏಕೆಂದರೆ ಗುಣಕರ್ಮನಿಮಿತ್ತವಾದ ಬ್ರಾಹ್ಮಣಾದಿಗಳನ್ನು ಜಾತಿವಾದಿಗಳು ಒಪ್ಪಿರುತ್ತಾರೆ. "ಬ್ರಾಹ್ಮಣನ ಲಕ್ಷಣವು ಶೂದ್ರನಲ್ಲಿ ಕಂಡರೆ ಅವನನ್ನು ಬ್ರಾಹ್ಮಣನೆಂದೇ ಭಾವಿಸಬೇಕು, ಬ್ರಾಹ್ಮಣನಲ್ಲಿ ಶೂದ್ರಲಕ್ಷಣವು ಕಂಡುಬಂದರೆ ಅವನನ್ನು ಶೂದ್ರನೆಂದೇ ಭಾವಿಸಬೇಕು"– ಎಂಬ ಸ್ಪಷ್ಟೋಕ್ತಿಯನ್ನು ಭಾರತದಲ್ಲಿ ಓದಿದ ನೆನಪು ನನಗಿದೆ. ಆದ್ದರಿಂದಲೂ ಸದ್ಯಕ್ಕೆ ಗುಣಕರ್ಮವಿಭಾಗವನ್ನೇ ನಾವು ವಿಚಾರಕ್ಕೆ ತೆಗೆದುಕೊಂಡರೆ ಸಾಕಾಗಿರುತ್ತದೆ.

ವೈದಿಕಧರ್ಮಕ್ಕೆ ವೇದವೇ ಮುಖ್ಯವಾಗಿದ್ದದ್ದರಿಂದ "ಬ್ರಾಹ್ಮಣರು ನಿಷ್ಕಾರಣವಾಗಿಯೇ ಷಡಂಗಸಹಿತವಾಗಿ ವೇದವನ್ನು ಅಧ್ಯಯನಮಾಡಬೇಕು" ಎಂಬ ವಿಧಿಯು ಹಿಂದಕ್ಕೆ ಏರ್ಪಟ್ಟಿತ್ತು. ತ್ರೈವರ್ಣಿಕರಿಗೂ ವೇದಾಧಿಕಾರವು ಇದ್ದು ಅದರ ಆಚರಣೆಯೂ ಇದ್ದಾಗಲೂ ಪ್ರಧಾನವಾಗಿ ಬ್ರಾಹ್ಮಣನಿಗೇ ಅಧ್ಯಯನವೂ ಕರ್ಮವೂ ಕರ್ಮಸಂನ್ಯಾಸಪೂರ್ವಕವಾಗಿ ಮಾಡಬೇಕಾದ ತತ್ತ್ವವಿಚಾರವೂ ವಿಶೇಷರೀತಿಯಿಂದ ವಿಹಿತವಾಗಿದ್ದವು. ಬ್ರಾಹ್ಮಣನಿಗೆ ಅಧ್ಯಾಪನಾದಿಗಳಿಂದಲೇ ವೃತ್ತಿಯು ಕಲ್ಪಿತವಾಗಿದ್ದದ್ದರಿಂದ ಸ್ವತಃ ಧನಾರ್ಜನೆಯ ಮತ್ತು ರಕ್ಷಣೆಯ ಹೊಣೆಗಾರಿಕೆಯಾಗಲಿ ಬಾಧ್ಯತೆಯಾಗಲಿ ಇರಲಿಲ್ಲ; ಆದ್ದರಿಂದ ಅವನು ಪ್ರವೃತ್ತಿನಿವೃತ್ತಿಧರ್ಮಗಳ ಆಚರಣೆಗೆ ಮಿಕ್ಕೆಲ್ಲರಿಗೂ ಆದರ್ಶವಾಗಿ ನಡೆಯುತ್ತಾ ಧರ್ಮಪ್ರಚಾರವನ್ನು ಮಾಡುವದಕ್ಕೆ ಹೊಣೆಗಾರನೆಂದು ಭಾವಿಸಿದ್ದದ್ದು ಯುಕ್ತವೂ ಆಗಿದೆ.

ಬ್ರಾಹ್ಮಣಾದಿಗಳ ಕರ್ತವ್ಯವನ್ನು ಗೀತೆಯಲ್ಲಿ ವಿವರಿಸಿರುವ ಬಗೆಯನ್ನು ಇಲ್ಲಿ ಮನದಂದುಕೊಳ್ಳುವದು ಸಪ್ರಯೋಜನವಾಗಿರುತ್ತದೆ. ಶಮದಮರೂಪವಾಗಿರುವ ಇಂದ್ರಿಯಸಂಯಮವೂ, ಅಂತರ್ಬಹಿಃಶೌಚವೂ, ಕ್ಷಮೆಯೂ, ಋಜುಭಾವವೂ, ಶಾಸ್ತ್ರಜ್ಞಾನವೂ, ಅದನ್ನು ಅನುಭವಕ್ಕೆ ತಂದುಕೊಳ್ಳುವ ವಿಜ್ಞಾನವೂ,

ಶಾಸ್ತ್ರಾರ್ಥದಲ್ಲಿ ಶ್ರದ್ಧೆಯಿರುವ ಆಸ್ತಿಕ್ಯವೂ– ಬ್ರಾಹ್ಮಣನಿಗೆ ಸ್ವಾಭಾವಿಕಕರ್ಮವು. ಶೌರ್ಯ, ದಿಟ್ಟತನರೂಪವಾದ ತೇಜಸ್ಸು, ಏತರಿಂದಲೂ ಕುಸಿಯದಂತಿರುವ ಧೃತಿ, ಒದಗಿದ ಕಾರ್ಯದಲ್ಲಿ ವ್ಯಾಮೋಹವಿಲ್ಲದೆ ಕೂಡಲೆ ಪ್ರವೃತ್ತನಾಗುವ ದಕ್ಷತೆ, ಯುದ್ಧದಲ್ಲಿ ಹಿಮ್ಮೆಟದೆ ಇರುವದು, ಕೊಡುಗೈತನದಿಂದಿರುವ ದಾನ, ಪ್ರಭುಶಕ್ತಿಪ್ರಕಟನ ಸಾಮರ್ಥ್ಯವಾದ ಈಶ್ವರಭಾವ– ಇಷ್ಟೂ ಕ್ಷತ್ರಿಯನ ಕರ್ಮವು. ಕೃಷಿ, ಗೋರಕ್ಷಣೆ, ವಾಣಿಜ್ಯ– ಇವು ವೈಶ್ಯಕರ್ಮವು. ಈ ತ್ರೈವರ್ಣಿಕರಿಗೂ ಎಲ್ಲಾ ಬಗೆಯಿಂದಲೂ ಸಹಾಯಕನಾಗಿ ನಿಲ್ಲುವದು ಶೂದ್ರನ ಕರ್ಮವು.

ಇವೆಲ್ಲವೂ ಧರ್ಮಕ್ಕೆ ಅಂಗವಾಗಿರುವ ವಿಭಾಗವೆಂಬುದನ್ನು ನಾವು ಮರೆಯದೆ ಇರಬೇಕು. ಆ ದೃಷ್ಟಿಯಿಂದ ನೋಡಿದರೆ ಈಗ ಎಲ್ಲಾ ವರ್ಣದವರೂ ತಮ್ಮ ತಮ್ಮ ಕರ್ಮಕ್ಕೆ ಬಲುಮಟ್ಟಿಗೆ ವಿಮುಖರಾಗಿರುತ್ತಾರೆಂದು ಹೇಳಬೇಕಾಗಿದೆ. ಏಕೆಂದರೆ ಧರ್ಮವನ್ನು ಮಾಡಿ ಎಲ್ಲೆಲ್ಲಿಯೂ ಈಶ್ವರಭಾವನೆಯನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಬುದ್ಧಿಬಲಾದಿಗಳನ್ನು ಉಪಯೋಗಿಸುವದರ ಬದಲು ಈಗ ಸ್ವಾರ್ಥಸಾಧನೆಗೇ ಅವುಗಳನ್ನು ಉಪಯೋಗಿಸುವವರು ಹೆಚ್ಚುತ್ತಿದಾರೆ. ಈಗ್ಗೆ ಪ್ರಪಂಚವು ಪರಮೇಶ್ವರನ ವಿಭೂತಿಯಾದ ಹೊರಮೈಯಾಗಿ ತೋರುವದಕ್ಕೆ ಬದಲು ಸ್ವಾರ್ಥಸಾಧನೆಗೆ ಉಪಕರಣವೆಂದು ನಮ್ಮೆಲ್ಲರಿಗೂ ತೋರಹತ್ತಿದೆ. ಮನುಷ್ಯನು ಯಜ್ಞದೃಷ್ಟಿಯಿಂದ ಕರ್ಮವನ್ನು ಮಾಡಿ ದೇವತೆಗಳ ಮತ್ತು ಪರಮಾತ್ಮನ ಅನುಗ್ರಹವನ್ನು ಸಂಪಾದಿಸಿಕೊಳ್ಳುವದು ಕರ್ತವ್ಯವೆಂದು ಭಾವಿಸುವದಕ್ಕೆ ಬದಲಾಗಿ ತನ್ನ ಸ್ವಪ್ರಯತ್ನದಿಂದಲೇ ಭೋಗಸಾಮಗ್ರಿಗಳನ್ನು ಸಂಪಾದಿಸಿಕೊಳ್ಳುವದೇ ಮನುಷ್ಯತ್ವದ ಹೆಗ್ಗುರುತೆಂದು ಭಾವಿಸಿದಂತೆ ಆಗಿಬಿಟ್ಟಿದೆ. ಭೂಲೋಕವೇ ಅಲ್ಲದೆ ಇದಕ್ಕಿಂತಲೂ ಸೂಕ್ಷ್ಮತರವಾದ ಅನೇಕ ಲೋಕಗಳು ಉಂಟೆಂಬ ನಂಬಿಕೆಯೂ ಈ ಜನ್ಮವೊಂದೇ ಅಲ್ಲದೆ ಕರ್ಮದ ಫಲವಾಗಿ ಇನ್ನೂ ಅನೇಕ ಜನ್ಮಗಳು ಆಗಬಹುದೆಂಬ ನಂಬಿಕೆಯೂ ಹೋಗಿಬಿಟ್ಟಿರುವದರಿಂದ ಶಾಸ್ತ್ರದಲ್ಲಿ ಶ್ರದ್ಧೆಯಾಗಲಿ ಕರ್ಮದಲ್ಲಿ ಆದರವಾಗಲಿ ಇಲ್ಲದಂತೆ ಆಗಿಬಿಟ್ಟಿರುತ್ತದೆ. ಎಲ್ಲಕ್ಕೂ ಮಿಗಿಲಾಗಿ ಇಂದ್ರಿಯಮನಸ್ಸುಗಳನ್ನು ಸಂಯಮಮಾಡಿಕೊಂಡು ಅಂತರ್ಮುಖನಾಗಿ ಸರ್ವಾತ್ಮನಾಗಿರುವ ಪರಮಾತ್ಮನೇ ನಮ್ಮೆಲ್ಲರ ಆತ್ಮನೆಂಬ ಅನುಭವವನ್ನು ಸಾಧಿಸುವ ಪರಮಪುರುಷಾರ್ಥದ ಹಂಬಲು ಹಾರಿಹೋಗಿ ಇಂದ್ರಿಯಗಳಿಗೆ ಗೋಚರ ವಾಗುತ್ತಿರುವ ಪ್ರಪಂಚವೇ ನಿಜವಾದ ಪ್ರಪಂಚವೆಂದೂ, ಆತ್ಮಪರಮಾತ್ಮಭಾವನೆ,

ಜ್ಞಾನವೈರಾಗ್ಯಸಾಧನೆ– ಮುಂತಾದ ಉದಾತ್ತಭಾವಗಳು ಮಾಡುವದಕ್ಕೆ ಕೆಲಸವಿಲ್ಲದ ಸೋಮಾರಿಗಳ ಅಥವಾ ನಿರಾಶಾವಾದಿಗಳ ಕಲ್ಪನಾಮಾತ್ರವೆಂಬ ಕುಬುದ್ಧಿಯೂ ಅಂಕುರಿಸಿಬಿಟ್ಟಿರುತ್ತದೆ!

ಈ ಎಲ್ಲಾ ಕಾರಣಗಳಿಂದ ಬ್ರಾಹ್ಮಣ್ಯವು ಮತ್ತೆ ಉದ್ಧಾರವಾಗತಕ್ಕದ್ದು ಅತ್ಯವಶ್ಯವಾಗಿರುತ್ತದೆ. ತಾವು ಬ್ರಾಹ್ಮಣರೆಂದು ಹೆಮ್ಮೆಪಡುತ್ತಿರುವ ಕೆಲವರಾದರೂ ನಿಜವಾದ ಬ್ರಾಹ್ಮಣರಾಗಿ ಮಿಕ್ಕವರಿಗೆ ಮೇಲುಪಙ್ಕ್ತಿಯನ್ನು ಹಾಕಿಕೊಡಬೇಕು. ಧರ್ಮಾಚರಣೆಯಲ್ಲಿ ಶ್ರದ್ಧೆ, ಧರ್ಮಕ್ಕೆ ಅವಿರುದ್ಧವಾದ ರೀತಿಯಿಂದಲೇ ಅರ್ಥಕಾಮಗಳನ್ನು ಅನುಭವಿಸುವೆನೆಂಬ ದೃಢಸಂಕಲ್ಪ; ಶರೀರವು ಭೋಗಕ್ಕಾಗಿ ಹುಟ್ಟಿಲ್ಲವೆಂದೂ ಧರ್ಮಾಚರಣೆಯಿಂದಲೇ ಅದರ ಜನ್ಮವು ಸಾರ್ಥಕವಾಗುವದೆಂದೂ ಗಟ್ಟಿಯಾದ ನಂಬಿಕೆ, ಮನುಷ್ಯನ ಶರೀರದಲ್ಲಿರುವ ಬಲವೂ ಅರ್ಥಸಂಪಾದನೆಗೆ ತೋಚುವ ಕೌಶಲವೂ ಶೌರ್ಯಧೈರ್ಯಾದಿಗುಣಗಳೂ ಧರ್ಮವನ್ನು ಕಾಪಾಡಿಕೊಳ್ಳುವದಕ್ಕೆ ವಿನಿಯೋಗವಾಗತಕ್ಕವೆಂಬ ನಿಶ್ಚಯ, ಜ್ಞಾನವೈರಾಗ್ಯಗಳನ್ನೂ ಸಂಪಾದಿಸಿ ಪರಮಾತ್ಮನಲ್ಲಿ ಬೆರೆತು ಎಲ್ಲರನ್ನೂ ಆತ್ಮಭಾವದಿಂದ ಕಾಣುವ ಜೀವನ್ಮುಕ್ತಿಯೇ ಪರಮಪುರಷಾರ್ಥವೆಂಬ ನಂಬಿಕೆಯಿಂದ ತತ್ತ್ವವಿಚಾರವನ್ನು ಮಾಡುವದರಲ್ಲಿ ಅದರ – ಇವುಗಳನ್ನು ಸಂಪಾದಿಸಿಕೊಳ್ಳುವದೇ ಬ್ರಾಹ್ಮಣನ ಆದ್ಯ ಕರ್ತವ್ಯವಾಗಿರಬೇಕು. **ಹೀಗೆ ಹತ್ತುಹನ್ನೆರಡು ಜನರು ನಿಜವಾದ ಬ್ರಾಹ್ಮಣ್ಯವನ್ನು ತಮ್ಮಲ್ಲಿ ಪ್ರಕಟಪಡಿಸಿಕೊಂಡರೂ ಸಾಕು, ಅವರ ಪ್ರಭಾವದಿಂದ ನಿಜವಾದ ಕ್ಷತ್ರಿಯರೂ ನಿಜವಾದ ವೈಶ್ಯರೂ ನಿಜವಾದ ಶೂದ್ರರೂ ತಾನುತಾನೆಂದು ಮುಂದಕ್ಕೆ ಬರುವರು; ಆಗ ಭೂಮಿಯೇ ಸ್ವರ್ಗವಾಗುವದು.**

ವೇದದಲ್ಲಿ ಬ್ರಾಹ್ಮಣಕ್ಕೆ ಬಹಳ ಹೆಚ್ಚಿನ ಸ್ಥಾನವಿದೆ. ಹುಟ್ಟುವಾಗ ಶೂದ್ರನಾಗಿಯೇ ಹುಟ್ಟುವನೆಂದೂ ಮಹಾಯಜ್ಞಗಳು, ಯಜ್ಞಗಳು– ಇವುಗಳ ಅನುಷ್ಠಾನದಿಂದ ಶರೀರವು ಬ್ರಾಹ್ಮಣಶರೀರವಾಗುವದೆಂದೂ ಸ್ಮೃತಿಗಳು ಸಾರುತ್ತಿರುವವು. ಹೀಗೆಯೇ ವಾಕ್ಕೂ ಮನಸ್ಸೂ ಸತ್ತ್ವಪ್ರಧಾನವಾದ ನಡೆನುಡಿಗಳಿಂದಲೂ ಭಾವನೆಗಳಿಂದಲೂ ಬ್ರಾಹ್ಮಣವಾಕ್ಕೂ ಬ್ರಾಹ್ಮಣಮನಸ್ಸೂ ಆಗುವವು. ಇದೆಲ್ಲ ಕರ್ಮಬ್ರಾಹ್ಮಣ್ಯವಾಯಿತು. ನಿಜವಾದ ಬ್ರಾಹ್ಮಣ್ಯವು ಬ್ರಹ್ಮಜ್ಞಾನದಿಂದಲೇ ಬರುವದೆಂಬುದನ್ನು ಉಪನಿಷತ್ತಿನಲ್ಲಿ ಹೀಗೆ ಹೇಳಿದೆ :

**ಆದ್ದರಿಂದ ಬ್ರಾಹ್ಮಣನು ಪಾಂಡಿತ್ಯವನ್ನು ನಿಃಶೇಷವಾಗಿ ಅರಿತುಕೊಂಡು ಬಾಲ್ಯದಿಂದ ನೆಲೆನಿಲ್ಲಲು ಯತ್ನಿಸಬೇಕು; ಬಾಲ್ಯವನ್ನೂ ಪಾಂಡಿತ್ಯವನ್ನೂ ನಿಃಶೇಷವಾಗಿ ಅರಿತುಕೊಂಡು ಮುನಿಯಾಗಬೇಕು; ಅಮೌನವನ್ನೂ ಮೌನವನ್ನೂ ನಿಃಶೇಷವಾಗಿ ಅರಿತುಕೊಂಡರೆ ಆಗ ಬ್ರಾಹ್ಮಣನಾಗುವನು. ಅವನು ಏತರಿಂದ ಬ್ರಾಹ್ಮಣನಾಗುವನು? ಎಂದರೆ ಏತರಿಂದಾದಾರೂ ಅವನು ಇಂಥ ಬ್ರಾಹ್ಮಣನೇ.**

ಕರ್ಮಬ್ರಾಹ್ಮಣನು ತಾನು ಇಷ್ಟರವುಟ್ಟಿಗೆ ಬ್ರಾಹ್ಮಣನಾಗಿರುವೆ ನೆಂಬುದರಿಂದಲೇ ತೃಪ್ತನಾಗಬಾರದು. ಪಾಂಡಿತ್ಯವನ್ನು ನಿಃಶೇಷವಾಗಿ ಅರಿತುಕೊಳ್ಳಬೇಕು, ಆತ್ಮಜ್ಞಾನವನ್ನು ಶಾಸ್ತ್ರದಿಂದಲೂ ಆಚಾರ್ಯರಿಂದಲೂ ಸಂಪೂರ್ಣವಾಗಿ ಅರಿತುಕೊಳ್ಳಬೇಕು. ಮನುಷ್ಯಲೋಕ, ಪಿತೃಲೋಕ, ದೇವಲೋಕ– ಎಂಬ ಲೋಕತ್ರಯದ ಭೋಗದ ಆಶೆಯನ್ನು ತೊರೆದು ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆ– ಎಂಬ ಧರ್ಮಾನುಗುಣವಾದ ಮೂರು ಪ್ರಬಲವಾದ ಆಶೆಗಳನ್ನು ಕೂಡ ಬಿಟ್ಟೇಳಬೇಕು. ಅಲ್ಲಿಗೆ ಪಾಂಡಿತ್ಯವು ಸಂಪೂರ್ಣವಾಯಿತು. ಅಲ್ಲಿಂದ ಜ್ಞಾನಬಲವನ್ನು ಸಂಪಾದಿಸಿಕೊಂಡು ತಾನು ಇಂಥವನೆಂಬುದನ್ನು ದಂಭದರ್ಪಾದಿಗಳಿಂದ ತೋರ್ಪಡಿಸಿಕೊಳ್ಳದೆ ಬಾಲಕನಂತಿರುವದನ್ನು ಅಭ್ಯಾಸ ಮಾಡಬೇಕು. ಬಾಲ್ಯವನ್ನೂ ಪಾಂಡಿತ್ಯವನ್ನೂ ಹೀಗೆ ಸಾಧಿಸಿ ಮುಗಿಸಿಕೊಂಡ ಬಳಿಕ ತತ್ತ್ವವನ್ನೇ ಮನನಮಾಡುವ ಮುನಿಯಾಗಬೇಕು. ಹೀಗೆ ಪಾಂಡಿತ್ಯ ಬಾಲ್ಯಗಳೆಂಬ ಅಮೌನ, ತತ್ತ್ವಮನನರೂಪವಾದ ಮೌನ– ಇವನ್ನು ಸಂಪೂರ್ಣವಾಗಿ ಕಂಡುಕೊಂಡು ನಿಜವಾದ ಬ್ರಾಹ್ಮಣನಾಗುತ್ತಾನೆ. ಆಗ ಅವನು ಯಾವದಾದರೊಂದು ಆಚರಣೆಯಿಂದ ಬ್ರಾಹ್ಮಣನೆನಿಸಿಕೊಂಡಿರುವದಿಲ್ಲ; ಅವನ ಬಾಹ್ಯಾಚರಣೆಯು ಹೇಗೇ ಇರಲಿ, "ಸರ್ವವೂ ಬ್ರಹ್ಮವೇ, ಎಲ್ಲವೂ ಪರಮಾತ್ಮನೇ, ಪರಮಾತ್ಮನಿಗಿಂತ ವ್ಯತಿರಿಕ್ತನಾಗಿ ಏನೊಂದೂ ಇರುವದೇ ಇಲ್ಲ"– ಎಂಬ ಜ್ಞಾನದಿಂದಲೇ ಬ್ರಾಹ್ಮಣನಾಗಿರುವನು – ಎಂಬುದು ಮೇಲಿನ ಶ್ರುತಿವಾಕ್ಯದ ಅರ್ಥ.

ಇಂಥ ಜೀವನ್ಮುಕ್ತಬ್ರಾಹ್ಮಣನ ಚರ್ಯೆಯ ಸ್ವಭಾವವನ್ನು ಭಾರತಾದಿಗಳಲ್ಲಿ ವರ್ಣಿಸಿರುತ್ತದೆ. ಉದಾಹರಣೆಗಾಗಿ ಕೆಲವು ಶ್ಲೋಕಗಳನ್ನು ಮೋಕ್ಷಧರ್ಮದಿಂದ ಆರಿಸಿ ಇಲ್ಲಿ ಕೊಡುವೆನು :

## ಬ್ರಾಹ್ಮಣನು ಯಾರು ?

(ಮೋಕ್ಷಧರ್ಮ – 245ನೆಯ ಅಧ್ಯಾಯ)

**ಯೇನ ಪೂರ್ಣಮಿವಾಕಾಶಂ ಭವತ್ಯೇಕೇನ ಸರ್ವದಾ ।**
**ಶೂನ್ಯಂ ಯೇನ ಜನಾಕೀರ್ಣಂ ತಂ ದೇವಾ ಬ್ರಾಹ್ಮಣಂ ವಿದುಃ ॥11॥**

11. ಯಾವನು ತಾನು ಒಬ್ಬನೇ ಇರುವನಾದರೂ ಆಕಾಶವೆಲ್ಲವೂ ಒಬ್ಬ ಆತ್ಮನಿಂದಲೇ ಪೂರ್ಣವಾದಂತೆ ಇರುವದೋ ಜನರು ತುಂಬಿರುವ ಸ್ಥಲವೂ ಶೂನ್ಯಪ್ರದೇಶವಾಗಿರುವದೋ ಅವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುವರು.

**ಯೇನಕೇನಚಿದಾಚ್ಛನ್ನೋ ಯೇನಕೇನಚಿದಾಶಿತಃ ।**
**ಯತ್ರ ಕ್ವಚನ ಶಾಯೀ ಚ ತಂ ದೇವಾ ಬ್ರಾಹ್ಮಣಂ ವಿದುಃ ॥12॥**

12. ಯಾವದಾದರೊಂದನ್ನು ಹೊದೆದುಕೊಂಡು, ಏನಾದರದನ್ನು ತಿನ್ನುತ್ತಾ, ಎಲ್ಲಿ ಎಂದರೆ ಅಲ್ಲಿ ಮಲಗುವವನು ಯಾವನೋ ಅವನನ್ನು ದೇವತೆಗಳು ಬ್ರಾಹ್ಮಣನೆನ್ನುವರು.

**ಅಹೇರಿವ ಗಣಾದ್ಭೀತಃ ಸೌಹಿತ್ಯಾನ್ನರಕಾದಿವ ।**
**ಕುಣಪಾದಿವ ಸ್ತ್ರೀಭ್ಯಸ್ತಂ ದೇವಾ ಬ್ರಾಹ್ಮಣಂ ವಿದುಃ ॥13॥**

13. ಹಾವಿಗಂಜುವಂತೆ ಜನರ ಸಂದಣಿಗೆ ಅಂಜುವವನೂ ನರಕಕ್ಕಂಜುವಂತೆ ಮೃಷ್ಟಾನ್ನತೃಪ್ತಿಗೆ ಅಂಜುವವನೂ ಶವಕ್ಕಂಜುವಂತೆ ಹೆಂಗಸರಿಗೆ ಅಂಜುವವನೂ ಯಾವನೋ ಅವನನ್ನು ದೇವತೆಗಳು ಬ್ರಾಹ್ಮಣನೆನ್ನುವರು.

**ನ ಕ್ರುಧ್ಯೇನ್ನ ಪ್ರಹೃಷ್ಯೇಚ್ಚ ಮಾನಿತೋಽಮಾನಿತಶ್ಚ ಯಃ ।**
**ಸರ್ವಭೂತೇಷ್ವಭಯದಸ್ತಂ ದೇವಾ ಬ್ರಾಹ್ಮಣಂ ವಿದುಃ ॥14॥**

14. ಗೌರವಿಸಿದರೆ ಹರ್ಷಿಸನು, ಅಪಮಾನಗೊಳಿಸಿದರೆ ಸಿಟ್ಟಿಗೇಳನು, ಸರ್ವಭೂತಗಳಿಗೂ ಅಭಯವನ್ನು ನೀಡಿರುವನು– ಇಂಥವನು ಯಾವನೋ ಅವನನ್ನು ದೇವತೆಗಳು ಬ್ರಾಹ್ಮಣನೆನ್ನುವರು.

**ವಿಮುಕ್ತಂ ಸರ್ವಸಙ್ಗೇಭ್ಯೋ ಮುನಿಮಾಕಾಶವತ್ ಸ್ಥಿತಮ್ ।**
**ಅಸ್ವಮೇಕಚರಂ ಶಾನ್ತಂ ತಂ ದೇವಾ ಬ್ರಾಹ್ಮಣಂ ವಿದುಃ ॥15॥**

15. ಸರ್ವಲಿಂಗದಿಂದಲೂ ಮುಕ್ತನಾಗಿ ಆಕಾಶದಂತೆ ನಿರ್ಲಿಪ್ತನಾಗಿರುವ ಮುನಿಯಾಗಿ ತನ್ನದೆಂಬುದಿಲ್ಲದೆ, ಶಾಂತನಾಗಿರುವವನು ಯಾವನೋ ಅವನನ್ನು ದೇವತೆಗಳು ಬ್ರಾಹ್ಮಣನೆನ್ನುವರು.

**ಜೀವತಂ ಯಸ್ಯ ಧರ್ಮಾರ್ಥಂ ಧರ್ಮೋ ಹರ್ಯರ್ಥಮೇವ ಚ ।**
**ಅಹೋರಾತ್ರಾಶ್ಚ ಪುಣ್ಯಾರ್ಥಂ ತಂ ದೇವಾ ಬ್ರಾಹ್ಮಣಂ ವಿದಃ ॥17॥**

16. ಯಾವನ ಬಾಳು ಧರ್ಮಾರ್ಥವಾಗಿರುವದೋ, ಧರ್ಮವು ಶ್ರೀಹರಿ ಪ್ರೀತಿಗಾಗಿರುವದೋ ಹಗಲುರಾತ್ರಿಗಳೆಲ್ಲ ಜನರಿಗೆ ಶುಭವನ್ನುಂಟುಮಾಡುವದಕ್ಕೇ ಆಗಿರುವವೋ ಅವನನ್ನು ದೇವತೆಗಳು ಬ್ರಾಹ್ಮನನೆನ್ನುವರು.

**ನಿರಾಶಿಷಮನಾರಮ್ಭಂ ನಿರ್ನಮಸ್ಕಾರಮಸ್ತುತಿಮ್ ।**
**ನಿರ್ಮುಕ್ತಂ ಬನ್ಧನೈಃ ಸರ್ವೈಸ್ತಂ ದೇವಾ ಬ್ರಾಹ್ಮಣಂ ವಿದುಃ ॥17॥**

ಯಾವ ಆಶೆಯೂ ಇಲ್ಲದೆ, ತನಗಾಗಿ ಮಾಡುವ ಯಾವ ಕರ್ಮವೂ ಇಲ್ಲದೆ, ಸ್ತುತಿನಮಸ್ಕಾರಗಳ ಹಂಗಿಲ್ಲದೆ, ಎಲ್ಲಾ ಬಂಧನಗಳಿಂದಲೂ ಬಿಡುಗಡೆಯಾಗಿರುವವನು ಯಾವನೋ ಅವನನ್ನು ದೇವತೆಗಳು ಬ್ರಾಹ್ಮಣನೆನ್ನುವರು.

ಬ್ರಾಹ್ಮಣನೆಂದು ಹೊರಗೆ ತೋರಿಸಿಕೊಳ್ಳುವದಕ್ಕೆ ಹವಣಿಸುವವನು ನಿಜವಾದ ಬ್ರಾಹ್ಮಣನಲ್ಲ. ಪರಬ್ರಹ್ಮನಲ್ಲಿ ನೆಲೆ ನಿಂತಿರುವವನೇ ಬ್ರಾಹ್ಮಣನು. ಅವನೇ ಸಾಕಾರವಾದ ಪರಮೇಶ್ವರನ ಮುಖದಿಂದ ಹುಟ್ಟಿರುವವನು; ಅವನ ಬಾಯಿಂದ ಹೊರಟಿದ್ದೆಲ್ಲವೂ ವೇದವೇ ಆಗಿರುವದು. ಅವನ ಅರ್ಚನೆಯಿಂದ ಜನರು ಸಕಲ ಪುರುಷಾರ್ಥಗಳನ್ನೂ ಪಡೆದುಕೊಳ್ಳುವರು ಅವನ ಬಾಳುವೆಯೇ ಲೋಕಕ್ಕೆ ಕಲ್ಯಾಣಕಾರಕವಾಗಿರುವದು. ಇಂಥ ಬ್ರಾಹ್ಮಣನನ್ನು ಒದಗಿಸಿಕೊಡುವ ಸಂಸ್ಕೃತಿಯೇ ಸುಸಂಸ್ಕೃತಿ. ಇಂಥ ಬ್ರಾಹ್ಮಣ್ಯಕ್ಕೆ ತಕ್ಕ ಧರ್ಮಾಚರಣೆ ಮಾಡುವವರೇ ನಿಜವಾದ ಕರ್ಮಬ್ರಾಹ್ಮಣರು. ಆ ಬ್ರಾಹ್ಮಣರ ಧರ್ಮಾಚರಣೆಗೆ ಯಾವ ಧಕ್ಕೆಯೂ ತಗಲದಂತೆ ನೋಡಿಕೊಳ್ಳುವದಕ್ಕೆ ತಮ್ಮ ವೀರ್ಯವನ್ನೆಲ್ಲ ಉಪಯೋಗಿಸುವವರೇ ನಿಜವಾದ ಕ್ಷತ್ರಿಯರು. ಅವರಿಗೆ ಬೇಕಾದ ಧರ್ಮಸಾಮಗ್ರಿಗಳನ್ನೂ ವಸ್ತುಗಳನ್ನೂ ಒದಗಿಸುವವರೇ ನಿಜವಾದ ವೈಶ್ಯರು. ಹೀಗೆ ಧರ್ಮಾಸಕ್ತರಾಗಿರುವವರಿಗಾಗಿ ತಮ್ಮ ಕಾಯಕಷ್ಟಗಳನ್ನೆಲ್ಲ ವಿನಿಯೋಗಿಸುವವರೇ ನಿಜವಾದ ಶೂದ್ರರು. ಇಂಥ ಬ್ರಾಹ್ಮಣಾದಿಗಳ ಸಂಖ್ಯೆಯು ಕಡಿಮೆಯಾದಷ್ಟೂ ಮಾನವನ ನಾಗರಿಕತೆಯು ಕೀಳುಮಟ್ಟಕ್ಕೆ ಇಳಿಯುವದು; ಅದು ಹೆಚ್ಚಿದಷ್ಟೂ ಅದು ಮೇಲುಮಟ್ಟಕ್ಕೆ ಏಳುವದು.

# 10. ಯಜ್ಞದ ಉತ್ಪನ್ನಗಳು–ದೇವತೆಗಳು, ಲೋಕಗಳು

## (ಹದಿಮೂರು, ಹದಿನಾಲ್ಕನೆಯ ಋಕ್ಕುಗಳು)

★ ದೇವತೆಗಳ ಮಾನಸಿಕಯಜ್ಞದ ಫಲವಾಗಿ ಉತ್ಪನ್ನವಾದ ವಸ್ತುಗಳನ್ನು ಹಿಂದಿನ ಸಂದೇಶಗಳಲ್ಲಿ ವಿವರಿಸಲಾಗಿದೆ. ದಧಿ, ಆಜ್ಯ ಮುಂತಾದ ದ್ರವ್ಯಗಳು, ಗವಾದಿಪಶುಗಳು, ಋಗಾದಿವೇದಗಳು, ಬ್ರಾಹ್ಮಣಾದಿಗಳಾದ ಮನುಷ್ಯರು– ಇವರೆಲ್ಲರೂ ಪ್ರಜಾಪತಿಯಿಂದ ಉತ್ಪನ್ನರಾದಂತೆಯೇ ದೇವತೆಗಳೂ ಆತನಿಂದಲೇ ಉತ್ಪನ್ನರಾದರು. ಲೋಕಗಳೂ ಆತನಿಂದಲೇ ಉತ್ಪನ್ನರಾದರು– ಎಂದು ಪುರುಷಸೂಕ್ತದ ಎರಡು ಋಕ್ಕುಗಳಲ್ಲಿ ವರ್ಣಿಸಿರುತ್ತದೆ :

**ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ**
**ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ ॥13॥**

**ನಾಭ್ಯಾ ಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ ।**
**ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ತಥಾ ಲೋಕಾ ಅಕಲ್ಪಯನ್ ॥14॥**

**ಚಂದ್ರನು ಮನಸ್ಸಿನಿಂದ ಹುಟ್ಟಿದನು; ಚಕ್ಷುಸ್ಸಿನಿಂದ ಸೂರ್ಯನು ಹುಟ್ಟಿದನು. ಮುಖದಿಂದ ಇಂದ್ರನೂ ಅಗ್ನಿಯೂ ಹುಟ್ಟಿದರು, ಪ್ರಾಣದಿಂದ ವಾಯುವುಂಟಾದನು. ಹೊಕ್ಕುಳಿನಿಂದ ಅಂತರಿಕ್ಷವಾಯಿತು, ತಲೆಯಿಂದ ದ್ಯುಲೋಕವುಂಟಾಯಿತು, ಪಾದ ದಿಂದ ಭೂಮಿಯಾಯಿತು; ದಿಕ್ಕುಗಳು ಶ್ರೋತ್ರದಿಂದ; ಹೀಗೆ ಲೋಕಗಳನ್ನು ಕಲ್ಪಿಸಿಕೊಂಡರು.**

ಯಜ್ಞವೆಂದರೆ ದೇವತಾಪೂಜೆ. ದೇವತೆಗಳಿಲ್ಲದ ಯಜ್ಞವು ಯಜ್ಞವೇ ಅಲ್ಲ. ಕರ್ಮಕ್ಕೆ ಸಾಮಗ್ರಿಗಳು ಬೇಕು; ಯಜ್ಞಕ್ಕೆ ಬೇಕಾದ ಪಶುಗಳೂ ಹೋಮ ದ್ರವ್ಯಗಳೂ ಬೇಕು; ಆಯಾ ಕರ್ಮದ ಭಾಗವನ್ನು ನೆರವೇರಿಸುವದಕ್ಕೆ ಅವಶ್ಯವಾದ ಮಂತ್ರಗಳು ಬೇಕು; ಅವುಗಳನ್ನು ಅಧ್ಯಯನಮಾಡಿರುವ ಬ್ರಾಹ್ಮಣಾದಿಗಳೂ ಬೇಕು. ಆದರೆ ಇಷ್ಟೆಲ್ಲ ಇದ್ದರೂ ಯಜ್ಞವು ಯಾರಿಗೋಸ್ಕರವಾಗಿ ಉಂಟಾಗಿರುತ್ತದೆಯೋ ಆ ದೇವತೆಗಳು ಅತ್ಯವಶ್ಯವಾಗಿ ಬೇಕು. ದೇವತೆಗಳು

---

★ ಮೇ 1955, ಸಂಪುಟ 24, ಪುಟ 233–240

ಆದಮೇಲೆ ದೇವತಾರಾಧನೆಯಿಂದ ಪಡೆಯುವ ಕರ್ಮಫಲಗಳಾದ ಲೋಕಗಳು ಬೇಕು. ಅಲ್ಲಿಗೆ ಯಜ್ಞವು ಸಾಂಗವಾಗಿ ಪರಿಪೂರ್ಣವಾಗುವದು.

ಈ ಯಜ್ಞವೆಲ್ಲವೂ ಪರಮಾತ್ಮನ ಬಹಿಃಶರೀರದಲ್ಲಿಯೇ ಅಡಕವಾಗಿರುವ ದೆಂಬುದನ್ನು ನಾವು ಮನದಂದುಕೊಳ್ಳಬೇಕು. ಮನುಷ್ಯನು ತಾನು ಮಾಡುವ ಕರ್ಮಗಳು ತನ್ನ ಭೋಗಕ್ಕಾಗಿಯೇ ಎಂದು ಯಾವಾಗ ಭಾವಿಸಿಕೊಳ್ಳುವನೋ ಅಂದಿನಿಂದ ಅವನು ಪರಮಾತ್ಮನಿಂದ ಹೊರಕ್ಕೆ ಜಾರಿದಂತೆ ಆಗಿ ತನ್ನನ್ನು ತಾನೇ ಬಹಿಷ್ಕರಿಸಿಕೊಳ್ಳುವನು. **ಈ ಕರ್ಮವು ನನ್ನ ಶರೀರೇಂದ್ರಿಯಗಳಿಂದ ನೆರವೇರುತ್ತಿರುವದು; ಹೊರಗಿರುವ ಸಾಮಗ್ರಿಗಳೆಲ್ಲ ನನ್ನ ಭೋಗಕ್ಕಾಗಿ ಹುಟ್ಟಿರುತ್ತವೆ; ಇವುಗಳನ್ನುಪಯೋಗಿಸಿಕೊಂಡು ಇಹಸುಖವನ್ನು ಸಂಪಾದಿಸಿಕೊಳ್ಳುವದೇ ಮನುಷ್ಯತ್ವದ ಸಾಫಲ್ಯವು**– ಎಂದು ಭಾವಿಸಿ ಕೊಳ್ಳುವ ಸ್ವಾರ್ಥಬುದ್ಧಿಯು ಇರುವವರೆಗೂ ಮನುಷ್ಯನಿಗೂ ಬ್ರಹ್ಮಾಂಡಕ್ಕೂ ಇರುವ ನಿಕಟಸಂಬಂಧವು ತಪ್ಪಿಹೋಗಿರುವದು. ರಕ್ತಪರಿಚಲನೆಯು ಕುಂಠಿತವಾಗಿರುವ ಶರೀರದಲ್ಲಿ ಬಗೆಬಗೆಯ ರೋಗಗಳು ಕಾಣಿಸಿಕೊಳ್ಳುವಂತೆ ಇಂಥ ಕ್ಷುದ್ರಬುದ್ಧಿಯ ಫಲವಾಗಿ ಮನುಷ್ಯನು ಕರ್ಮಬಂಧಕ್ಕೆ ಕಟ್ಟುಬಿದ್ದು ಸಂಸಾರದಲ್ಲಿ ತೊಳಲುತ್ತಿರುತ್ತಾನೆ. ಆದರೆ "ಪರಮಾತ್ಮನೇ ಯಜ್ಞಸ್ವರೂಪನು, ಯಜ್ಞಕ್ಕೆ ಅಧಿದೇವತೆಯು; ಆತನ ಆರಾಧನೆಗಾಗಿ ಕರ್ಮವನ್ನು ಮಾಡುತ್ತಿರುವದೇ ನನಗೆ ಇಹಪರಸುಖಗಳಿಗೆ ಕಾರಣವಾಗಿರುತ್ತದೆ; ನಾನು ಆ ಪರಮಾತ್ಮನ ಲೀಲಾರಂಗದಲ್ಲಿ ಉಪಕರಣವಾಗಿ ನನ್ನ ಪಾತ್ರವನ್ನು ಉತ್ತಮ ರೀತಿಯಿಂದ ಅಭಿನಯಿಸಿ ಈ ಲೀಲಾ ನಾಟಕವನ್ನು ಸರ್ವರಿಗೂ ಮನೋರಂಜಕ ವಾಗಿರುವಂತೆ ಮಾಡುವದಕ್ಕೆ ಪ್ರಯತ್ನಿಸುವೆನು" ಎಂಬ ಉದಾರದೃಷ್ಟಿಯುಳ್ಳವನಿಗೆ ಧೈರ್ಯ, ಶೌರ್ಯ, ಉತ್ಸಾಹ, ಸಾತ್ತ್ವಿಕಬುದ್ಧಿ, ಜ್ಞಾನ, ಸುಖ, ಶಾಂತಿ– ಇವುಗಳು ಕಟ್ಟಿಟ್ಟಬುತ್ತಿಯಾಗಿರುವವು. ಇದನ್ನು ಹಿಂದಿನ ಒಂದು ಸಂದೇಶದಲ್ಲಿ ಆಗಲೆ ವಿವರಿಸಿರುತ್ತೇನೆ.

ಈ ಪರಮಾತ್ಮನು ಒಬ್ಬನೇ ಆದರೂ ಅವನು ಸೋಪಾಧಿಕನಾಗಿ ಕಾಣಿಸಿಕೊಳ್ಳುವಾಗ ಅನೇಕ ಶಕ್ತಿಗಳಿಂದೊಡಗೂಡಿದವನಾಗಿ ತೋರುತ್ತಾನೆ. ಈ ಶಕ್ತಿಗಳಿಗೆ **ದೇವತೆಗಳು** ಎಂದು ಹೆಸರು. ಬೆಂಕಿಗೆ ಬಿಸಿ, ಬೆಳಕು, ಅಡುವ ಶಕ್ತಿ– ಎಂಬಿವು ಹೇಗೆ ಬೇರೆಬೇರೆಯ ದೃಷ್ಟಿಯಿಂದ ಬೇರೆಬೇರೆಯಾಗಿ ಕಾಣಿಸುವವೋ ಹಾಗೆಯೇ ಪ್ರಪಂಚದಲ್ಲಿ ನಮಗೆ ಆಗಬೇಕಾಗಿರುವ ಬೇರೆಬೇರೆಯ ಪುರುಷಾರ್ಥಗಳ ಸಾಧನಕ್ಕೆ ಅವಶ್ಯವಾಗಿರುವ ಈ ಪರಮೇಶ್ವರ ಶಕ್ತಿಗಳನ್ನು ನಾವು ಬೇರೆಬೇರೆಯ

ಹೆಸರಿನಿಂದ ಇಂದ್ರ, ಅಗ್ನಿ, ವಾಯು, ಚಂದ್ರ, ಸೂರ್ಯ– ಎಂದು ಮುಂತಾಗಿ ಕರೆಯತ್ತಿರುವೆವು. ಇಲ್ಲಿ ಶಕ್ತಿಗಳು ಬೇರೆಯೆಂದೂ ಶಕ್ತಿವಂತನಾದ ಪರಮೇಶ್ವರನು ಬೇರೆಯೆಂದೂ ತಿಳಿಯುವಂತಿಲ್ಲ. ಆಯಾ ಶಕ್ತಿಯಿಂದೊಡಗೂಡಿದ ಪರಮೇಶ್ವರನೇ ಆಯಾ ಉಪಾಧಿವಿಶೇಷದಿಂದ ಆಯಾ ದೇವತೆಯಾಗಿ ಭಕ್ತರಿಗೆ ಕಾಣಿಸುತ್ತಾನೆಂದು ತಿಳಿಯಬೇಕು. ಮನುಷ್ಯನು ಅಭ್ಯುದಯವನ್ನು ಪಡೆಯುವದಕ್ಕೆ ಈ ದೇವತೆಗಳ ಆರಾಧನೆಯು ಅತ್ಯವಶ್ಯವಾಗಿರುತ್ತದೆ. ಒಂದು ದೃಷ್ಟಿಯಿಂದ ನೋಡಿದರೆ ದೇವತೆಗಳ ಅನುಗ್ರಹಕ್ಕೆ ಕಾರಣವಾಗಿರುವ ಅವಯವಗಳಿಂದದೊಡಗೂಡಿದ ಪ್ರಾಣಿವಿಶೇಷ–ವಾಗಿರುತ್ತಾನೆ, ಅಷ್ಟೆ. ಲೋಕದಲ್ಲಿರುವ ಜೀವರುಗಳಿಗೆಲ್ಲ ಈ ದೇವತೆಗಳ ಅನುಗ್ರಹದಿಂದಲೇ ಕಾರ್ಯಕಾರಣವ್ಯಾಪಾರವು ನಡೆಯುತ್ತಿರುವದು. ಉದಾಹರಣೆಗೆ ಅಗ್ನಿಯು ಪ್ರಜಾಪತಿಯ ಮುಖದಿಂದ ಹುಟ್ಟಿರುತ್ತಾನೆ; ನಮ್ಮಗಳ ಮುಖದಲ್ಲಿದ್ದುಕೊಂಡು ನಮ್ಮ ವಾಗ್ವ್ಯಾಪಾರಕ್ಕೆ ಅನುಗ್ರಹಮಾಡುತ್ತಿರುತ್ತಾನೆ. ವಾಯುವು ಪ್ರಜಾಪತಿಪುರುಷನ ಪ್ರಾಣದಿಂದ ಹುಟ್ಟಿರುತ್ತಾನೆ; ನಮ್ಮಗಳ ನಾಸಿಕದಲ್ಲಿದ್ದುಕೊಂಡು ನಮ್ಮ ಪ್ರಾಣಕ್ಕೆ ಅನುಗ್ರಹಮಾಡುತ್ತಿರುತ್ತಾನೆ. ಆದಿತ್ಯನು ಪ್ರಜಾಪತಿಯ ಚಕ್ಷುಸ್ಸಿನಿಂದ ಹುಟ್ಟಿರುತ್ತಾನೆ; ನಮ್ಮಗಳ ಕಣ್ಣುಗಳಲ್ಲಿದ್ದುಕೊಂಡು ಚಕ್ಷುರ್ವ್ಯಾಪಾರಕ್ಕೆ ಅನುಗ್ರಾಹಕನಾಗಿರುತ್ತಾನೆ. ದಿಕ್ಕುಗಳು ಆ ಸಮಷ್ಟಿಪುರಷನ ಶ್ರೋತ್ರದಿಂದ ಹುಟ್ಟಿರುತ್ತವೆ; ನಮ್ಮಗಳ ಕಿವಿಗಳಲ್ಲಿದ್ದುಕೊಂಡು ಶ್ರೋತ್ರವ್ಯಾಪರಕ್ಕೆ ಅನುಗ್ರಾಹಕವಾಗಿರುತ್ತವೆ. ಚಂದ್ರನು ಆ ಪುರುಷನು ಮನಸ್ಸಿನಿಂದ ಹುಟ್ಟಿರುತ್ತಾನೆ; ನಮ್ಮಗಳ ಮನಸ್ಸಿಗೆ ಅನುಗ್ರಾಹಕನಾಗಿರುತ್ತಾನೆ, ಇತ್ಯಾದಿ, ಇತ್ಯಾದಿ. ಈ ದೇವತೆಗಳ ಅನುಗ್ರಹವು ಎಲ್ಲಿಯುವರೆಗೆ ನಮ್ಮ ಕಾರ್ಯಕರಣಗಳಲ್ಲಿ ಇರುವದೋ ಅಲ್ಲಿಯವರೆಗೂ ನಾವು ನಮ್ಮ ನಮ್ಮ ವ್ಯವಹಾರವನ್ನು ಸಾಗಿಸುತ್ತಿರುವೆವು. ಪ್ರಾಚೀನ ಕರ್ಮಾನುಸಾರವಾಗಿ ನಮ್ಮ ಆಯಸ್ಸು ಮುಗಿಯುವಹೊತ್ತಿಗೆ ಇವರುಗಳೆಲ್ಲರೂ ನಮ್ಮ ಶರೀರೇಂದ್ರಿಯಗಳನ್ನು ತಮ್ಮ ಅಂಶದಿಂದ ಅನುಗ್ರಹಿಸುತ್ತಿರುವದನ್ನು ಬಿಟ್ಟು ತಮ್ಮತಮ್ಮ ಸಮಷ್ಟಿರೂಪದಲ್ಲಿ ನಿಂತುಬಿಡುತ್ತಾರೆ. ಹೀಗೆಂದು ಶ್ರುತಿಗಳು ಹೇಳುತ್ತಿವೆ.

ಇದನ್ನೆಲ್ಲ ಮನದಂದರೆ ನಮ್ಮ ಜೀವನವು ನಮ್ಮ ವ್ಯಕ್ತಿಸ್ವಾತಂತ್ರ್ಯದಿಂದ ನಡೆಯುತ್ತಿಲ್ಲ, ಈ ದೇವತೆಗಳ ಅನುಗ್ರಹದಿಂದಲೇ ಸಾಗುತ್ತಿರುವದು. ನಾವು ಉಪಯೋಗಿಸುತ್ತಿರುವ ಬೆಳಕು, ವಾಯು, ನೀರು, ಆಹಾರವಸ್ತುಗಳು–ಇವುಗಳಲ್ಲಿ ಯಾವದೊಂದೂ ನಮ್ಮಲ್ಲಿ ಒಬ್ಬೊಬ್ಬರ ವೈಯಕ್ತಿಕವಾದ ಸ್ವತ್ತಾಗಿಲ್ಲ. ಪರಮೇಶ್ವರನ

ಅವಯವಗಳಾಗಿರುವ ಈ ದೇವತೆಗಳ ಅನುಗ್ರಹದಿಂದ ದೊರೆತ ಈ ಪದಾರ್ಥಗಳನ್ನೇ ನಾವು ಉಪಯೋಗಿಸಿಕೊಳ್ಳುತ್ತಿರುವೆವು. ನಾವು ಮಾಡುತ್ತಿರುವ ಕರ್ಮದ ಫಲಗಳನ್ನು ಭೂರ್ಭುವಃಸ್ವರ್ಲೋಕಗಳಲ್ಲಿ ಅನುಭವಿಸುತ್ತಿರುವೆವಷ್ಟೆ? ಈ ಲೋಕಗಳಲ್ಲಿ ಯಾವದೊಂದೂ ನಮ್ಮಲ್ಲಿ ಯಾರೊಬ್ಬರ ಸ್ವತ್ತೂ ಆಗಿಲ್ಲ; ಯಾರೊಬ್ಬರ ಅಂಕೆಗೂ ಒಳಪಟ್ಟಿಲ್ಲ. ಆ ಪರಮೇಶ್ವರನ ಅಂಶಗಳಾದ ದೇವತೆಗಳೇ ನಮಗೆ ಇವುಗಳನ್ನು ಅನುಗ್ರಹಿಸಿಕೊಟ್ಟಿರುತ್ತಾರೆ. ಇಷ್ಟೇ ಅಲ್ಲ, ನಾವು ಮಾಡುತ್ತಿರುವ ಕರ್ಮಗಳೂ ಅವುಗಳಿಗೆ ಬೇಕಾದ ಸಂಕಲ್ಪವೂ ನಿಶ್ಚಯವೂ, ಈ ಕರ್ಮಗಳ ಫಲವನ್ನು ಅನುಭವಿಸುವ ಶಕ್ತಿಯೂ ನಮ್ಮೆಲ್ಲರಿಗೂ ಈ ದೇವತೆಗಳ ಅನುಗ್ರಹದಿಂದಲೇ ಸಿಕ್ಕಬೇಕಾಗಿರುತ್ತದೆ. ಹೀಗಿರುವಲ್ಲಿ ಈ ಲೋಕದಲ್ಲಿ ನಮ್ಮ ನಮ್ಮದೆನ್ನುವದು ಯಾವದು ತಾನೆ, ಇದೆ? ಎಲ್ಲವೂ ಆ ಪರಮೇಶ್ವರನ ಅನುಗ್ರಹವೇ. ಆತನು ತನ್ನ ಶರೀರದಿಂದ ಉತ್ಪನ್ನವಾಗಿರುವ ಈ ದೇವತೆಗಳೆಂಬ ಶಕ್ತಿವಿಶೇಷಗಳನ್ನು ಏರ್ಪಡಿಸಿರುತ್ತಾನೆ. ಭಗವದ್ಗೀತೆಯಲ್ಲಿ ಪ್ರಜೆಗಳಿಗೆ ಪ್ರಜಾಪತಿಯು ಹೀಗೆಂದು ಅಪ್ಪಣೆಮಾಡಿರುತ್ತಾನೆಂದು ಹೇಳಿರುತ್ತದೆ :

**ಇಷ್ಟಾನ್ ಭೋಗಾನ್ ಹಿ ವೋ ದೇವಾದಾಸ್ಯಂತೇ ಯಜ್ಞಭಾವಿತಾಃ ।**
**ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವಸಃ ॥**
**(3–12)**

**ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।**
**ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥**
**(3–13)**

**ನಿಮ್ಮಗಳಿಗೆ ಇಷ್ಟವಾದ ಭೋಗಗಳನ್ನು ಯಜ್ಞಭಾವಿತರಾದ ದೇವತೆಗಳು ಕೊಡುತ್ತಾರಲ್ಲವೆ? ಆದ್ದರಿಂದ ಅವರು ಕೊಟ್ಟಿರುವ ಭೋಗ್ಯವಸ್ತುಗಳನ್ನು ಅವರಿಗೆ ಒಪ್ಪಿಸದೆ ಯಾವನು ಭುಂಜಿಸುತ್ತಾನೋ ಅವನು ಕಳ್ಳನೇ ಸರಿ. ಯಜ್ಞವನ್ನು ಮಾಡಿ ಉಳಿದ ಅಮೃತವೆಂಬ ಪ್ರಸಾದವನ್ನು ಯಾರು ಉಣ್ಣುತ್ತಿರುವರೋ ಅವರು ಸರ್ವಕಿಲ್ಬಿಷಗಳಿಂದಲೂ ಮುಕ್ತರಾಗುವರು. ಆದರೆ ಯಾರು ತಮಗಾಗಿ ಪಾಕವನ್ನು ಮಾಡಿಕೊಳ್ಳುತ್ತಿರುವರೋ ಆ ಪಾಪಿಗಳು ಪಾಪವನ್ನೇ ಉಣ್ಣುತ್ತಿರುವರು.**

ಮೇಲೆ ಉದಾಹರಿಸಿರುವ ವಾಕ್ಯಗಳಿಗೆ ಯಾವ ವ್ಯಾಖ್ಯಾನವೂ ಬೇಕಿರುವದಿಲ್ಲ, ಅಷ್ಟು ಸ್ಫುಟವಾಗಿದೆ, ಅವುಗಳ ಅರ್ಥ. ಯಾರು ತಮ್ಮ ಜೀವನವನ್ನು

ದೇವತೆಗಳಿಗೆ, ಅವರ ಸಮಷ್ಟಿಯಾದ ಪರಮೇಶ್ವರನಿಗೆ, ಮುಡಿಪೆಂದು ಮಾಡಿಕೊಂಡಿರುವರೋ ಅವರಿಗೆ ಈ ಲೋಕದಲ್ಲಿರುವ ಸಕಲಭೋಗ್ಯವಸ್ತುಗಳೂ ತುಷ್ಟಿಪುಷ್ಟಿದಾಯಕವಾಗುವವು; ಶರೀರದಲ್ಲಿ ತೇಜಸ್ಸು, ಬುದ್ಧಿಯಲ್ಲಿ ಸಾತ್ತ್ವಿಕತೆ, ಜೀವನದಲ್ಲಿ ಸುಖಶಾಂತಿಗಳು–ಇವು ಅವರಿಗೆ ಪ್ರಸಾದವಾಗಿ ದೊರಕುವವು. ದ್ವಿಜರು ಪಂಚಮಹಾಯಜ್ಞಗಳನ್ನು ಮಾಡಬೇಕೆಂದು ಸ್ಮೃತಿಗಳಲ್ಲಿ ವಿಧಿಸಿರುವದಕ್ಕೆ ಇದೇ ತಾತ್ಪರ್ಯ. ಆದರೆ ಯಾರು ತಮ್ಮ ಶರೀರಕರಣಾದಿಗಳು ತಮ್ಮ ಸ್ವಂತಪದಾರ್ಥಗಳೆಂದೂ ಅವುಗಳನ್ನುಪಯೋಗಿಸಿ ತಾವು ಮಾಡುವ ಕೆಲಸಕ್ಕೆ ಬರುವ ಪ್ರತಿಫಲವು ತಮ್ಮ ಹಕ್ಕೆಂದೂ ಭಾವಿಸಿರುವರೋ ಅವರಿಗೆ ಬೇಕಾದ ಭೋಗ್ಯವಸ್ತುಗಳು ದೊರೆಯುವದೂ ಕಷ್ಟವಾಗಬಹುದು; ಒಂದುವೇಳೆ ಅವು ಸಿಕ್ಕಿದರೂ ಅವುಗಳಿಂದ ದೊರೆಯಬೇಕಾದ ಸುಖಶಾಂತಿಸಮಾಧಾನಗಳು ದೊರಕಲಾರದೆ ಇರುವವು. ಏಕೆಂದರೆ ಈ ಭಾವನೆಯೇ ಪಾಪಸ್ವರೂಪವಾಗಿರುತ್ತದೆ.

ಈಗಿನ ಕಾಲಕ್ಕೆ ಭೂಲೋಕದಲ್ಲಿ ಮನುಷ್ಯರಿಗೆ ಈ ಯಜ್ಞವೆಂಬ ಧರ್ಮದ ಬುದ್ಧಿಯು ಲುಪ್ತವಾಗಿರುವದು. ದೇವತಾರಾಧನರೂಪವಾಗಿ ತಮ್ಮತಮ್ಮ ಕರ್ತವ್ಯಗಳನ್ನು ನೆರವೇರಿಸಬೇಕೆಂಬ ಭಾವನೆಯು ಅವರ ಮನಸ್ಸಿನಲ್ಲಿ ಮಿಂಚದೆ ಇರುತ್ತದೆ. ಇದಕ್ಕೆ ಬದಲಾಗಿ "ಹಕ್ಕು" ಎಂಬ ಭಾವನೆಯು ಎಲ್ಲರ ಮನಸ್ಸಿನಲ್ಲಿಯೂ ಬೇರುಬಿಟ್ಟುಕೊಂಡುಬಿಟ್ಟಿದೆ. ಭೂಮಿಯು ಯಾರದು? ಮಾನವನ ಮೂಲಭೂತವಾದ ಹಕ್ಕುಗಳು ಯಾವವು? ಮನುಷ್ಯನ ಸುಖಜೀವನಕ್ಕೂ ಪುರೋಭಿವೃದ್ಧಿಗೂ ಅವಶ್ಯವಾಗಿರುವ ಸಾಮಗ್ರಿಗಳ ಉತ್ಪಾದನೆಯೂ ಹಂಚಿಕೆಯೂ ಹೇಗೆ ನಡೆಯತಕ್ಕದ್ದು ಯುಕ್ತ? ಮನುಷ್ಯನಿಗೆ ಸುಖಜೀವನಕ್ಕೆ ಬೇಕಾದ ಅವಶ್ಯ ಸೌಕರ್ಯಗಳು ಯಾವವು, ವಿದ್ಯಾಭ್ಯಾಸವು ಯಾವದು, ವಿನೋದಗಳು ಯಾವವು? ಅವುಗಳನ್ನು ಎಲ್ಲರಿಗೂ ದೊರಕಿಸಿ ಕೊಡುವದಕ್ಕೆ ಏನು ಮಾಡಬೇಕು? ಈ ವಿಷಯದಲ್ಲಿ ಸರಕಾರದ ಕರ್ತವ್ಯವು ಯಾವದು? ಅದನ್ನು ಅದು ನೆರವೇರಿಸದಿದ್ದರೆ ಪ್ರಜೆಗಳು ಹೇಗೆ ತಮ್ಮ ಹಕ್ಕನ್ನು ಪಡೆದುಕೊಳ್ಳಬೇಕು?– ಇಂಥ ಪ್ರಶ್ನೆಗಳು ಈಗ್ಗೆ ಭೂಲೋಕದ ಚಿತ್ತಾಕಾಶದಲ್ಲೆಲ್ಲ ಹಾರಾಡುತ್ತಿರುವವು. ಯಾರೊಬ್ಬರೂ ತಮಗೆ ಸಿಕ್ಕುವ ಹೆಚ್ಚಿನ ಸೌಕರ್ಯಗಳನ್ನು ಬಿಡುವದಕ್ಕೆ ಸಿದ್ಧರಿಲ್ಲ, ಯಾರೊಬ್ಬರೂ ಧರ್ಮಾರ್ಥವಾಗಿ ತಮ್ಮ ಕರ್ತವ್ಯವನ್ನು ನೆರವೇರಿಸುವದಕ್ಕೆ ಸಿದ್ಧರಿಲ್ಲ, ದುರ್ಬಲರು, ಅಜ್ಞಾನಿಗಳು, ಅಲ್ಪಸಂಖ್ಯಾತರು, ಇಂಥವರು ಹೇಗಾದರೂ ಮಾಡಿ ಬಲಾತ್ಕಾರದಿಂದಲಾದರೂ ಸರಿಯೆ, ಪ್ರಬಲರೂ ಜ್ಞಾನಿಗಳೂ, ಬಹುಸಂಖ್ಯಾಕರೂ

ಆದವರಿಂದ ತಮ್ಮ ಹಕ್ಕನ್ನು ಕಸಿದುಕೊಳ್ಳಬೇಕೆಂದು ಹವಣಿಸುತ್ತಿರುವರು. ರಾಗದ್ವೇಷಪ್ರೇರಿತರಾಗಿ ತಮ್ಮ ತನುಮನೋಧನಗಳನ್ನೆಲ್ಲ ತಮ್ಮತಮ್ಮ ಹಕ್ಕುಗಳನ್ನೂ ಸ್ವಾತಂತ್ರ್ಯವನ್ನೂ ಆದಷ್ಟು ಬೇಗನೆ ನ್ಯಾಯಮಾರ್ಗದಿಂದಲೋ, ಅನ್ಯಾಯ ಮಾರ್ಗದಿಂದಲೋ ಸಂಪಾದಿಸಿಕೊಂಡು ಬಿಡಬೇಕೆಂದು ಕುತೂಹಲಿಗಳಾಗಿರುವರು. ಆದರೆ ಹೀಗೆ ಬಲಾತ್ಕಾರದಿಂದ ಕಸಿದುಕೊಂಡದ್ದು ಮತ್ತೂ ಹೆಚ್ಚಿನ ರಾಗದ್ವೇಷಗಳಿಗೆ ಎಡೆಯನ್ನುಂಟು ಮಾಡಬಹುದೆಂಬುದನ್ನಾಗಲಿ ಮತ್ತೆ ಬಲಾತ್ಕಾರದಿಂದ ಹಸ್ತಾಂತರವಾಗ ಬಹುದೆಂಬುದನ್ನಾಗಲಿ ಯಾರೊಬ್ಬರೂ ಯೋಚಿಸುತ್ತಿರುವಂತೆ ಕಾಣಿಸುವದಿಲ್ಲ. ಈಗಿನ ನಾಗರಿಕತೆಯಲ್ಲಿ ಕಾಣಬರುವ ಜನರ ತಂಡಗಳು, ವಾಗ್ಬಾಣಗಳು, ಕಾನೂನುಗಳು, ಶಸ್ತ್ರಾಸ್ತ್ರಗಳು, ಘಾತಕಾಸ್ತ್ರಗಳು, ಹೊಡೆದಾಟಗಳು, ಯುದ್ಧಗಳು– ಎಲ್ಲಕ್ಕೂ ಈ ದೃಷ್ಟಿಕೋಣವೇ ಪ್ರೇರಕವಾಗಿದೆ ಎಂದು ಹೇಳಬಹುದು.

ಈ ದುಃಸ್ಥಿತಿಯ ನಿವಾರಣೆಗೆ ಉಪಾಯವು ಯಾವದು? ಎಲ್ಲಕ್ಕೂ ಮೊದಲನೆಯದಾಗಿ ಪ್ರಕೃತಿನಿಯಮಗಳೆಂದು ಭೌತಿಕಶಾಸ್ತ್ರಜ್ಞರು ಹೇಳುತ್ತಿರುವವೆಲ್ಲ ಪರಮೇಶ್ವರನ ನಿಯಮಗಳೆಂದೂ ಆತನ ನಿಯಮಗಳನ್ನು ಸ್ವಲ್ಪವೂ ಮಾರ್ಪಡಿಸುವದಕ್ಕೆ ಜೀವರುಗಳಿಗೆ ಯಾರಿಗೂ ಆಗುವಂತಿಲ್ಲವೆಂದೂ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂದು ಮೂರು ಪಂಗಡವಾಗಿರುವ ಈ ವಿಶ್ವದಲ್ಲೆಲ್ಲ ಆತನ ಕಟ್ಟಳೆಯೇ ನಡೆಯುತ್ತಿದೆಯೆಂದೂ ತಿಳಿಯುವ ವಿಶಾಲವಾದ ಬಗೆಗಣ್ಣನ್ನು ಮಾನವನು ಸಂಪಾದಿಸಿಕೊಳ್ಳುವಂತಾಗಬೇಕು. ನಮ್ಮ ಜೀವನವು ಇಡಿಯ ವಿಶ್ವದ ಜೀವನಕ್ಕೆ ಹೊಂದಿಕೊಂಡಿರುವದೇ ಹೊರತು ನಾವು ಯಾವ ಕಾರಣದಿಂದಲೂ ಅದರಿಂದ ನಮ್ಮ ವ್ಯಕ್ತಿತ್ವವನ್ನು ಬಲಾತ್ಕಾರದಿಂದ ಕಿತ್ತುಕೊಂಡು ಬೇರೆಯಾಗಿಟ್ಟು ಕೊಳ್ಳುವದಕ್ಕೆ ಆಗುವದಿಲ್ಲ ಎಂಬ ತತ್ತ್ವವನ್ನು ಮನಗಾಣುವಂತೆ ಮಾನವರಲ್ಲೆಲ್ಲ ಹರಡುವಂತೆ ಪ್ರಯತ್ನವಾಗಬೇಕು. ಮನುಷ್ಯನ ಸಾಮಾನ್ಯಪೌರುಷಪ್ರಯತ್ನಗಳೆಂಬ ದ್ವಾರದಿಂದ ಅವನು ತಾನುತಾನು ತನಗಾಗಿ ಸಂಪಾದಿಸಿಕೊಳ್ಳುವ ಭೋಗ್ಯವಸ್ತುಗಳು– ಅವು ಆಹಾರವಸ್ತ್ರಾದಿಗಳಂತೆ ಸ್ಥೂಲವಾಗಿರಲಿ, ಜ್ಞಾನಾದಿಗಳಂತೆ ಸೂಕ್ಷ್ಮವಾಗಿರಲಿ– ಎಂದಿಗೂ ಸುಖಶಾಂತಿಗೆ ಕಾರಣವಲ್ಲ ಎಂಬ ನಿಜವು ನಮ್ಮೆಲ್ಲರಿಗೂ ಮನವರಿಕೆಯಾಗಬೇಕು. ನಾವು ಯಜ್ಞರೂಪವಾಗಿ ನಮ್ಮನಮ್ಮ ಕರ್ಮಗಳನ್ನು ಮಾಡಿ ಸರ್ವಭೂತಮಯನಾದ ಹರಿಯನ್ನು ತೃಪ್ತಿಗೊಳಿಸುವದಕ್ಕೆ ಪ್ರಯತ್ನಿಸಬೇಕೆಂಬುದನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡು ಆಚರಣೆಗೆ

ತರುವದಕ್ಕೆ ಯತ್ನಿಸಬೇಕು. ಆಗಲೇ ನಮ್ಮ ದೃಷ್ಟಿಕೋಣವು ಸಂಪೂರ್ಣವಾಗಿ ಮಾರ್ಪಡುವದು. ಆಗಲೇ ಲೋಕಕ್ಕೆ ನಿಜವಾದ ಶಾಂತಿಸುಖಗಳು ದೊರಕುವವು.

ಒಂದು ವಿದ್ಯಾಲಯದಲ್ಲಿ ಉಪಾಧ್ಯಾಯನು "ಈ ದಿನ ನೀವುಗಳು ನಿಮ್ಮನಿಮ್ಮ ಮನಸ್ಸುಬಂದಂತೆ ವರ್ತಿಸಬಹುದು" ಎಂದು ಸರ್ವಸ್ವಾತಂತ್ರ್ಯವನ್ನು ಹುಡುಗರಿಗೆಲ್ಲ ಕೊಡುತ್ತಾನೆಂದು ಇಟ್ಟುಕೊಳ್ಳಿ. ಅಥವಾ ಒಬ್ಬ ರಾಷ್ಟ್ರಾಧಿಪತಿಯು 'ಈ ವಾರದಲ್ಲಿ ಯಾವ ಕಾನೂನಿನ ಅಂಜಿಕೆಯೂ ಇಲ್ಲದೆ ಪ್ರಜೆಗಳು ತಮತಮಗೆ ತೋಚಿದಂತೆ ನಡೆಯಬಹುದು' ಎಂದು ಒಂದು ವಿಶಿಷ್ಟವಾದ ಪ್ರಕಟಣೆಯನ್ನು ಹೊರಡಿಸುತ್ತಾನೆಂದು ಇಟ್ಟುಕೊಳ್ಳಿ. ಆಗ ಆ ದಿನ ಆ ಪಾಠಶಲೆಯಲ್ಲಿ, ಅಥವಾ ಆ ವಾರ ಆ ರಾಷ್ಟ್ರದಲ್ಲಿ, ಯಾವಯಾವ ಅನರ್ಥಗಳು ಆಗಿಹೋಗಬಹುದೆಂಬುದನ್ನು ಕಲ್ಪಿಸುವದಕ್ಕೆ ಬಹಳ ಕಷ್ಟವೇನೂ ಇರುವದಿಲ್ಲ. ಮಾರನೆಯ ದಿನದಿಂದ ಆ ಪಾಠಶಾಲೆಯು ಮತ್ತೆ ವ್ಯವಸ್ಥೆಗೆ ಬರಬೇಕಾದರೆ, ಅಥವಾ ವಾರಾಂತ್ಯದಲ್ಲಿ ಆ ರಾಷ್ಟ್ರವು ಸುವ್ಯವಸ್ಥಿತವಾಗಿ ಜನರು ನೆಮ್ಮದಿಯಿಂದಿರಬೇಕಾದರೆ ಎಷ್ಟು ಕಷ್ಟವಾಗಬಹುದು! ಹೀಗಿರುವಲ್ಲಿ ಅಖಿಲಾಂಡಕೋಟಿಬ್ರಹ್ಮಾಂಡನಾಯಕನಾದ ಪರಮೇಶ್ವರನು, ಪ್ರಜೆಗಳು ಎಂದೆಂದಿಗೂ ಸುಖಶಾಂತಿಗಳಿಂದಿರುವದಕ್ಕೆ ತಕ್ಕ ನಿಯಮಗಳನ್ನು ಏರ್ಪಡಿಸದೆ ಇದ್ದಾನೆ? ಈ ನಿಯಮಗಳೇ ಧರ್ಮಚಕ್ರದ ನಿಯಮಗಳೆನಿಸುವವು. ಭಗವದ್ಗೀತೆಯಲ್ಲಿ ಈ ನಿಯಮವನ್ನು ಹೀಗೆಂದು ವರ್ಣಿಸಿರುತ್ತದೆ :

**ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।**
**ಯಜ್ಞಾದ್ಭವಂತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥ (3–14)**

**ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಮ್ ।**
**ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್ ॥ (3–15)**

**ಅನ್ನದಿಂದಲೇ ಪ್ರಾಣಿಗಳೆಲ್ಲವೂ ಆಗುವವು. ಮಳೆಯಿಂದ ಅನ್ನವುಂಟಾಗುವದು. ಯಜ್ಞದಿಂದ ಮಳೆಯಾಗುವದು. ಯಜ್ಞನೆಂಬ ಅಪೂರ್ವಶಕ್ತಿಯು ಸತ್ಕರ್ಮದಿಂದಾಗುವದು. ಕರ್ಮವು ವೇದದಿಂದ ತಿಳಿಯಬರುವದು. ವೇದವು ಪರಮಾತ್ಮನಿಂದ ಹೊರಬಿದ್ದಿರುವದು. ವೇದವು ಎಲ್ಲವನ್ನೂ ತಿಳಿಸಿಕೊಡುವದಾದರೂ ನಿತ್ಯವೂ ಯಜ್ಞದಲ್ಲಿ ನಿಂತುಕೊಂಡಿರುವದು.**

ಮೇಲೆ ಉದಾಹರಿಸಿರುವ ಭಗವದ್ವಚನದ ಅಭಿಪ್ರಾಯವೇನೆಂದರೆ, ಪ್ರಾಣಿಗಳು ವಿಧವಿಧವಾಗಿ ಹುಟ್ಟುತ್ತವೆಯಷ್ಟೆ. ಅವಕ್ಕೆಲ್ಲ ಅನ್ನವು ಬೇಕು. ಉಂಡ ಅನ್ನದಿಂದ ರಸ, ರಸದಿಂದ ರಕ್ತ, ರಕ್ತದಿಂದ ಮಾಂಸ, ಮಾಂಸದಿಂದ ಮೇದಸ್ಸು, ಅದರಿಂದ ಅಸ್ಥಿ, ಅಸ್ಥಿಯಿಂದ ಮಜ್ಜೆ, ಮಜ್ಜೆಯಿಂದ ವೀರ್ಯ– ಹೀಗೆ ಸಪ್ತಧಾತುಗಳುಂಟಾಗುವವೆಂದು ಶಾಸ್ತ್ರಕಾರರು ಹೇಳುತ್ತಾರೆ. ಆದ್ದರಿಂದ ಪ್ರಾಣಿಜನ್ಮಕ್ಕೆ ಅನ್ನವು ಬೇಕಾಯಿತು. ಅನ್ನವು ಮಳೆಯಿಂದಾಗುತ್ತದೆ. ಇದಿಷ್ಟೂ ನಮಗೆ ಕಾಣಬರುವ ಕಾರ್ಯಕಾರಣಭಾವವು. ಆದರೆ ಮಳೆಯಿಂದಾಗುವದೆಲ್ಲ ಉತ್ತಮವಾದ ಅನ್ನವೆಂದಾಗಲಿ, ಅನ್ನದಿಂದ ಹುಟ್ಟುವ ಪ್ರಾಣಿಗಳೆಲ್ಲ ಸಾತ್ತ್ವಿಕಪ್ರಾಣಿಗಳೆಂದಾಗಲಿ ಹೇಳುವದಕ್ಕೆ ಬರುವದಿಲ್ಲ. ಯಾರು ಉತ್ತಮಕರ್ಮವನ್ನು ಮಾಡಿರುತ್ತಾರೋ, ಅವರ ಕರ್ಮದ ಅದೃಷ್ಟಫಲವಾಗಿ ಉಂಟಾಗುವ ಮಳೆಯೇ ಉತ್ತಮಾಹಾರಕ್ಕೆ ಕಾರಣವಾಗುವದು. ಉತ್ತಮಾಹಾರದಿಂದಲೇ ಉತ್ತಮಪ್ರಾಣಿಗಳು ಹುಟ್ಟುವವು. ಹೀಗೆ ಉತ್ತಮವಾದ ಮಳೆಬೆಳೆಗಳಾಗುವ ಮೂಲಕ ಹುಟ್ಟುವ ಉತ್ತಮವಾದ ಆಹಾರವು ದೊರೆಯುವದಕ್ಕೆ ಮೊದಲು ಉತ್ತಮಕರ್ಮವು ಬೇಕಾಯಿತಷ್ಟೆ? ಈ ಉತ್ತಮ ಕರ್ಮವಾದ ಯಜ್ಞವನ್ನೇ ವೇದವು ಪ್ರಧಾನವಾಗಿ ತಿಳಿಸಿಕೊಡುತ್ತದೆ. **ವೇದವೆಂದರೂ ಒಂದೇ, ಭಗವಂತನು ಲೋಕಸ್ಥಿತಿಗೆ ಏರ್ಪಡಿಸಿರುವ ನಿಯಮವೆಂದರೂ ಒಂದೇ. ಈ ನಿಯಮವನ್ನು ಅನುಸರಿಸಿ ಭಗವದಾರಾಧನಾ ರೂಪವಾಗಿ ಮಾಡುವ ಸತ್ಕರ್ಮವೇ ಲೋಕದಲ್ಲಿ ಸುಖಶಾಂತಿಗಳು ನೆಲೆಸುವದಕ್ಕೆ ಕಾರಣವಾಗುವದು.**

ಲೋಕದಲ್ಲಿ ಮನುಷ್ಯನಂತೆಯೇ ಇತರ ಪ್ರಾಣಿಗಳು ಇದ್ದರೂ ಅವುಗಳಿಗೆ ಧರ್ಮಾಧರ್ಮಗಳನ್ನು ವಿಂಗಡಿಸಿ ಅರಿಯುವ ವಿವೇಕವಿರುವದಿಲ್ಲ. ಆದ್ದರಿಂದ ಅವುಗಳಿಗೆ ಆಹಾರನಿದ್ರಾದಿಗಳು ಸತತವಾಗಿ ನಡೆಯುತ್ತಿದ್ದರೂ ಆಹಾರಾದಿಗಳಲ್ಲಿ ಯಾವ ನಿಯಮವನ್ನು ಅನುಸಿರಿಸಬೇಕೆಂಬುದನ್ನು ತಿಳಿಸುವ ಶಾಸ್ತ್ರಕ್ಕೆ ಅಧಿಕಾರವಿರುವದಿಲ್ಲ. ಮನುಷ್ಯನಿಗೆ ಇಹಪರಲೋಕಗಳ ಅರಿವು ಇರುತ್ತದೆ. ನಾಳೆಯೇನು? ನಾಡಿದ್ದಿಗೇನು?– ಎಂಬ ವಿಚಾರವನ್ನು ಮನುಷ್ಯನೇ ಮಾಡಬಲ್ಲನು. ಸದ್ಯಕ್ಕೆ ಸಿಕ್ಕಿದ ಭೋಗವು ಸಾಕು ಎಂಬ ಪಶುಬುದ್ಧಿಮಾತ್ರದಿಂದ ಮನುಷ್ಯನು ಮನುಷ್ಯನೆನಿಸಿಕೊಳ್ಳುವದಿಲ್ಲ. ಇಹದಲ್ಲಿಯೂ ಪರದಲ್ಲಿಯೂ ಸುಖವೇ ನನಗೆ ಹೇಗೆ ಆದೀತು? ನಿತ್ಯವಾದ ಸುಖಶಾಂತಿ ಸಮಾಧಾನಗಳು ನನಗೆ ಹೇಗೆ

★ ಜೂನ್ 1955, ಸಂಪುಟ 24, ಪುಟ 265–270

ದೊರೆತಾವು?- ಎಂಬ ಯೋಚನೆಯನ್ನು ಹತ್ತಿಸಿಕೊಂಡು ಶಾಸ್ತ್ರದಿಂದ ಯುಕ್ತಾಯುಕ್ತವಿವೇಕವನ್ನು ಪಡೆದು, ಧರ್ಮದಲ್ಲಿ ಕೈಹಾಕುವದಕ್ಕೆ ಮನುಷ್ಯನೇ ಮುಖ್ಯಾಧಿಕಾರಿ. ಇಡಿಯ ಜಗತ್ತೆಲ್ಲ ಪರಮಾತ್ಮನ ಶರೀರವೆಂದೂ ಆ ಶರೀರವನ್ನು ಸೇರಿಸಿಕೊಂಡು ಪರಮಾತ್ಮನನ್ನು ನೋಡುವಾಗ ಧರ್ಮವೇ ಎಲ್ಲವನ್ನೂ ಸುಸ್ಥಿತಿಯಲ್ಲಿಟ್ಟಿರುವ ಸಾಧನವಾಗಿರುತ್ತದೆಯೆಂದೂ, ಇಲ್ಲಿರುವ ವಸ್ತುಗಳೆಲ್ಲವೂ, ಪ್ರಾಣಿಗಳೆಲ್ಲವೂ, ಮನುಷ್ಯರೆಲ್ಲರೂ ಈ ಧರ್ಮದಿಂದಲೇ ತಮ್ಮ ಜೀವನವನ್ನು ನೆಮ್ಮದಿಯಾಗಿಟ್ಟುಕೊಂಡಿರಲಾರರೆಂದೂ ಪರಮಾತ್ಮನ ಶಕ್ತಿವಿಶೇಷಗಳಾದ ದೇವತೆಗಳ ಅನುಗ್ರಹಕ್ಕೆ ಪಾತ್ರನಾಗಿ ಸರ್ವಲೋಕಗಳಲ್ಲಿಯೂ ಸುಖವನ್ನು ಪಡೆದು ಕೊಳ್ಳಬೇಕೆನ್ನುವವರು ಸ್ವಾರ್ಥತ್ಯಾಗರೂಪವಾದ ಯಜ್ಞವೆಂಬ ಕರ್ಮಾಚರಣೆಯನ್ನು ಮಾಡಿ ತಮ್ಮ ಮತ್ತು ಮತ್ತೆಲ್ಲರ ಕಲ್ಯಾಣವನ್ನು ಸಂಪಾದಿಸುವದಕ್ಕೆ ಯತ್ನಿಸಬೇಕೆಂದೂ ತಿಳಿಯುವ ಮನುಷ್ಯನೇ ನಿಜವಾದ ಮನುಷ್ಯನು, ಅವನೇ ಸುಖಿಯು, ಅವನೇ ಧನ್ಯನು.

ಪರಮಾತ್ಮನು ಸರ್ವವ್ಯಾಪಕನೂ, ಸರ್ವಶಕ್ತನೂ ಆಗಿರುತ್ತಾನೆಂಬುದನ್ನು ನಾವೆಲ್ಲರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈ ಪ್ರಪಂಚವೆಂಬುದೆಲ್ಲವೂ ಆತನ ಬಹಿಃಶರೀರವಾಗಿರುವದು. ಇಲ್ಲಿರುವ ಯಾವುದೊಂದು ವಸ್ತುವೂ, ಯಾವುದೊಂದು ಪ್ರಾಣಿಯೂ ಆತನ ಸಂಬಂಧವನ್ನು ಕಡಿದುಹಾಕಿ ತನಗೆತಾನೇ ಇರಲಾರದು. ಪ್ರತಿಯೊಂದು ವಸ್ತುವಿನ, ಪ್ರತಿಯೊಂದು ಸಸ್ಯದ, ಪ್ರತಿಯೊಂದು ಪ್ರಾಣಿಯ, ಪ್ರತಿಯೊಬ್ಬ ಮನುಷ್ಯನ ಒಳಗೂ ಹೊರಗೂ ನಡುವೆಯೂ ಆತನ ವ್ಯಾಪ್ತಿಯೇ ಇದ್ದುಕೊಂಡಿರುವದು. ಆತನಿಗೆ ಅರಿಯದಂತೆ ಯಾವುದೊಂದೂ ನಡೆಯಲಾರದು. ಆತನ ನಿಯಮಗಳನ್ನು ತಪ್ಪಿಸಿಕೊಂಡು ಯಾವನೊಬ್ಬನೂ ಸ್ವತಂತ್ರವಾಗಿರಲಾರನು. ಎಲ್ಲೆಲ್ಲಿಯೂ ಆ ಪರಮೇಶ್ವರನ ಶಕ್ತಿಗಳೇ ವ್ಯಾಪಾರಮಾಡುತ್ತಿವೆ; ಆ ಶಕ್ತಿಗಳು ಚೈತನ್ಯಸ್ವರೂಪನಾದ ಆತನಿಗಿಂತ ಬೇರೆಯಲ್ಲ. ದೇವತೆಗಳ ಆರಾಧನೆಯು ದೇವಾದಿದೇವನಾದ ಆ ಪರಮೇಶ್ವರನ ಆರಾಧನೆಯೂ ನಮ್ಮೆಲ್ಲರ ಕಲ್ಯಾಣಕ್ಕೆ ಕಾರಣವಾಗಿರುತ್ತದೆ. ನಾವೆಲ್ಲರೂ ಒಬ್ಬರಿಗೊಬ್ಬರು ನಿಯತಸಂಬಂಧವುಳ್ಳವರಾಗಿರುವೆವು. ನಿಯತವಾಗಿ ಆತನಲ್ಲಿ ನಿತ್ಯಸಂಬಂಧ ರಾಗಿರುವೆವು- ಎಂಬುದನ್ನು ಕಂಡುಕೊಳ್ಳುವದರಲ್ಲಿ ನಮ್ಮ ಪುರುಷಾರ್ಥವಿದೆ. ಆ ಅರಿವನ್ನು ಸಂಪದಿಸಿಕೊಳ್ಳುವದೇ ಜೀವನದ ಸಾರ್ಥಕ್ಯವು.

# 11. ಆಧ್ಯಾತ್ಮಿಕ ಯಜ್ಞಗಳು – ಜ್ಞಾನಯಜ್ಞ

## (ಹದಿನೈದು, ಹದಿನಾರನೆಯ ಋಕ್ಕುಗಳು)

★ದೇವತೆಗಳು ಆದಿಯಲ್ಲಿ ಮಾನಸಿಕಯಜ್ಞವೊಂದನ್ನು ಮಾಡಿದರೆಂದು ತಿಳಿಸಿ, ಅದರಲ್ಲಿ ಉಂಟಾದ ವಸ್ತುಗಳು–ದ್ರವ್ಯಗಳು, ಪಶುಗಳು, ವೇದಗಳು, ಅಧಿಕಾರಿಗಳಾದ ಮನುಷ್ಯರು, ಅಗ್ನ್ಯಾದಿ ದೇವತೆಗಳು, ಯಜ್ಞಫಲವಾದ ಲೋಕಗಳು, ಇವುಗಳನ್ನು– ಪುರುಷಸೂಕ್ತದಲ್ಲಿ ವರ್ಣಿಸಿರುವ ಬಗೆಯನ್ನು ಈವರೆಗೆ ವಿವರಿಸಿದ್ದಾಯಿತು. ಈಗ ಋಗ್ವೇದದ ಪುರಷಸೂಕ್ತದಲ್ಲಿ ಹೇಳಿರುವ ಕೊನೆಯ ಎರಡು ಋಕ್ಕುಗಳ ಅರ್ಥವನ್ನು ಇಲ್ಲಿ ಕೊಡುವೆನು :

**ಸಪ್ತಾಸ್ಯಾಸನ್ಪರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ ।**
**ದೇವಾ ಯದ್ಯಜ್ಞಂ ತನ್ವಾನಾ ಅಬಧ್ನನ್ಪುರುಷಂ ಪಶುಮ್ ॥15॥**

**ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।**
**ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥16॥**

**ಈ ಯಜ್ಞಕ್ಕೆ ಏಳು ಪರಿಧಿಗಳಾಗಿದ್ದವು, ಇಪ್ಪತ್ತೊಂದು ಸಮಿತ್ತುಗಳಿದ್ದವು. ದೇವತೆಗಳು ಮಾಡಿದ ಆ ಯಜ್ಞಕ್ಕೆ ಪುರುಷನನ್ನೇ ಪಶುವಾಗಿ ಕಟ್ಟಿದ್ದರು. ದೇವತೆಗಳು ಯಜ್ಞದಿಂದ ಯಜ್ಞನನ್ನು ಯಾಗಮಾಡಿದರು. ಅವೇ ಪ್ರಥಮ ಧರ್ಮಗಳಾದವು, ಅವರು ಮಹಿಮಾವಂತರಾಗಿ ಸಾಧ್ಯರಾದ ದೇವತೆಗಳಿರುವರಲ್ಲ, ಆ ನಾಕವನ್ನು ಹೊಂದಿದರು.**

ಮಾನಸಯಜ್ಞದಲ್ಲಿ ಬಾಹ್ಯಯಜ್ಞದಲ್ಲಿರುವದನ್ನೆಲ್ಲಾ ದೇವತೆಗಳು ಕಲ್ಪಿಸಿಕೊಂಡಿದ್ದರು. ಈಗಿನ ಯಜ್ಞದಲ್ಲಿ ಏಳು ಪರಿಧಿಗಳಿರುತ್ತವೆ. ಆಹವನೀಯಾಗ್ನಿಗೆ ಮೂರು, ಉತ್ತರ ವೇದಿಕೆಗೆ ಸಂಬಂಧಪಟ್ಟವು ಮೂರು ಇನ್ನೊಂದು ಪರಿಧಿಗೆ ಪ್ರತಿನಿಧಿಯಾಗಿರುವ ಆದಿತ್ಯನೇ ಏಳನೆಯವನು– ಹೀಗೆ ಏಳು ಪರಿಧಿಗಳನ್ನು

---

★ ಜೂನ್ 1955, ಸಂಪುಟ 24, ಪುಟ 265–270

ಇಟ್ಟುಕೊಂಡಿರುತ್ತಾರೆ. ದೇವತೆಗಳ ಸಾಂಕಲ್ಪಿಕ ಯಜ್ಞದಲ್ಲಿ ಗಾಯತ್ರಿಯೇ ಮುಂತಾದ ಏಳು ಛಂದಸ್ಸುಗಳೇ ಏಳು ಪರಿಧಿಗಳಾಗಿದ್ದವು. ಅವುಗಳಲ್ಲಿ ಇಪ್ಪತ್ತೊಂದು ಸಮಿತ್ತುಗಳನ್ನು ಉಪಯೋಗಿಸಿಕೊಂಡಿದ್ದರು. ಹನ್ನೆರಡು ಮಾಸಗಳು, ಐದು ಋತುಗಳು, ಈ ಮೂರು ಲೋಕಗಳು, ಇಪ್ಪತ್ತೊಂದನೆಯವನಾಗಿ ಆದಿತ್ಯನು– ಇವೇ ಆ ಸಮಿತ್ತುಗಳು. ಆ ಯಜ್ಞಕ್ಕೆ ವಿರಾಟ್ಪುರುಷನೇ ಪಶುವಾಗಿದ್ದನು.

ದೇವತೆಗಳು ಈ ಮಾನಸಯಜ್ಞದಿಂದ ಯಜ್ಞನನ್ನು, ಎಂದರೆ ಈವರೆಗೆ ವರ್ಣಿಸಿರುವ ಸ್ವರೂಪದ ಪ್ರಜಾಪತಿಯೆಂಬ ಯಜ್ಞಸ್ವರೂಪನಾದ ದೇವತೆಯನ್ನು ಪೂಜಿಸಿದರು. ಅವೇ ಪ್ರಥಮಧರ್ಮಗಳಾದವು; ಆ ಧರ್ಮಗಳನ್ನು ಅನುಸರಿಸಿಯೇ ಈಗಿನ ಋತ್ವಿಜರೂ, ಯಜಮಾನರೂ ಯಜ್ಞವನ್ನು ಮಾಡುತ್ತಿದಾರೆ– ಎಂದು ಋಕ್ಕಿನಲ್ಲಿ ಹೇಳಿರುವದನ್ನು ನಾವು ಮನದಂದುಕೊಳ್ಳಬೇಕು. ಯಜ್ಞದಲ್ಲಿ, ಪರಮೇಶ್ವರನ ಪೂಜೆಯಲ್ಲಿ, ಈಗ ನಾವು ಉಪಯೋಗಿಸುವ ಸಾಮಗ್ರಿಗಳೆಲ್ಲವೂ ಆ ದೇವತೆಗಳು ಮಾಡಿದ ಮಾನಸಯಜ್ಞದ ಫಲವಾಗಿ ಉತ್ಪನ್ನವಾಗಿರುತ್ತದೆ. ಇವುಗಳನ್ನು ಆ ಸರ್ವದೇವತಾಮಯನಾದ ಪರಮೇಶ್ವರನ ಆರಾಧನೆಗೆ ಉಪಯೋಗಿಸುವದೇ ನಮ್ಮ ಕರ್ತವ್ಯ. ಇಲ್ಲಿರುವ ಯಾವದೊಂದು ವಸ್ತುವನ್ನೂ ನಮ್ಮ ಐಹಿಕ ಭೋಗ್ಯಕ್ಕೆಂದು ಪರಮೇಶ್ವರನು ಕೊಟ್ಟಿರುವದಿಲ್ಲ– ಎಂಬ ಭಾವವು ಇದರಲ್ಲಿ ಅಡಕವಾಗಿರುತ್ತದೆ.

ಈ ಯಜ್ಞವು ಅನಾದಿಕಾಲದಿಂದ ನಡೆದುಕೊಂಡು ಬಂದಿರುತ್ತದೆ. ಯಜ್ಞವೇ ನಮ್ಮೆಲ್ಲರ ಬಾಳಿನ ತಿರುಳು. ನಮಗೆ ದೊರಕಿದ ಸಾಮಗ್ರಿಗಳಿಂದ ಆ ಯಜ್ಞಕ್ಕೆ ಅಧಿದೇವನಾಗಿರುವ ಪರಮೇಶ್ವರನನ್ನು ಆರಾಧನೆ ಮಾಡಬೇಕು. ಈ ಲೋಕದಲ್ಲಿ ನಿಜವಾದ ಸುಖವನ್ನು ಅನುಭವಿಸುತ್ತಾ ಜೀವಿಸುವದೂ, ಪರಲೋಕದಲ್ಲಿ ಸುಖದಿಂದ ಕಾಲಹರಣವನ್ನು ಮಾಡುವದೂ ಯಜ್ಞಾಚರಣೆಯ, ದೇವತಾಮಯನಾದ ಪರಮೇಶ್ವರನ ಆರಾಧನೆಯ, ಫಲವೇ. **"ನಾಯಂ ಲೋಕೋಽಸ್ತ್ಯಯಜ್ಞಸ್ಯ ಕುತೋಽನ್ಯಃ ಕುರುಸತ್ತಮ"** ಎಂದು ಭಗವಂತನು ಅರ್ಜುನನಿಗೆ ಮಾಡಿರುವ ಉಪದೇಶವೇ ಇದು.

ಈ ಲೋಕದಲ್ಲಿ ಸುಖದಿಂದ ಬಾಳುವದಕ್ಕೆ ಏನು ಬೇಕು? – ಎಂದರೆ ವಿಷಯಗಳ ರಾಶಿಯೇ ಎಂದು ಮೂಢರು ಉತ್ತರ ಕೊಡುತ್ತಾರೆ. ಹೊಲಮನೆ, ಆಳುಕಾಳು, ದನಕರು, ಹೆಂಡತಿಮಕ್ಕಳು, ಧನ, ಬಂಧುಬಾಂಧವರು, ಅಧಿಕಾರ–

ಇವೇ ಮುಂತಾದ ಸಾಮಗ್ರಿಗಳು ಹೇರಳವಾಗಿದ್ದಷ್ಟೂ ನಮಗೆ ಸುಖವು ಹೆಚ್ಚುತ್ತಿರುತ್ತವೆಂದು ಅವಿವೇಕಿಗಳ ನಂಬಿಕೆ. ಆದರೆ ನಿಜವೇನು? ಕಳ್ಳತನ, ದರೋಡೆ, ಮತ್ತೊಬ್ಬರ ಸ್ವತ್ತನ್ನು ಆಕ್ರಮಿಸಿ, ಅಧಿಕಾರದರ್ಪದಿಂದ ದುರ್ಬಲರನ್ನು ಕೆಳಗೆ ಹಾಕಿ ತುಳಿದಿಡುವದು– ಮುಂತಾದ ಉಪಾಯಗಳಿಂದ ಎಷ್ಟು ವಸ್ತುಗಳನ್ನು ರಾಶಿಹಾಕಿಕೊಂಡಿದ್ದರೆತಾನೆ ಸುಖವು ಸಿಕ್ಕೀತೇನು? ಶ್ರೀಮಂತರ ಮನೆಯಲ್ಲಿ ಕಳ್ಳತನ ಮಾಡಿ ಬೆಳ್ಳಿಯ ತಟ್ಟೆಯಲ್ಲಿ ಮೃಷ್ಟಾನ್ನವನ್ನು ಇಟ್ಟುಕೊಂಡು ಭೋಜನಮಾಡುತ್ತಿರುವನಾದರೂ ಅಂಥ ಅಧಾರ್ಮಿಕನ ಮನಸ್ಸಿನಲ್ಲಿ ತನ್ನ ಗುಟ್ಟು ಯಾವಾಗ ರಟ್ಟಾಗುವದೋ ಎಂಬ ಕಳವಳದಿಂದ ಆಹಾರದಲ್ಲಿ ಯಾವ ಸವಿಯೂ ಇಲ್ಲದಿರುವದನ್ನೂ ತಾನೇ ಕಷ್ಟಪಟ್ಟು ದುಡಿದು ಹರ್ಷದಿಂದ ಮನೆಯಲ್ಲಿ ಕುಟುಂಬಭರಣವನ್ನು ಮಾಡಿಕೊಂಡಿರುವ ಬಡವನಿಗೆ ಕದನ್ನದಿಂದಲೂ ಅಮೃತಪಾನದ ಸವಿಯು ಕಾಣುತ್ತಿರುವದನ್ನೂ ತಿಳಿದ ಯಾವ ವಿವೇಕಿಯು ತಾನೇ ವಿಷಯಗಳಲ್ಲಿ ಸುಖವಿದೆ ಎಂದು ಭಾವಿಸಿಯಾನು? ದೊಡ್ಡದೊಡ್ಡ ಜನಾಂಗಗಳು ಬಾಹ್ಯದೃಷ್ಟಿಯಿಂದ ನೋಡಿದಾಗ ಮಿತಿಮೀರಿದ ಭೋಗಸಾಮಗ್ರೀ ಸಂಪತ್ತಿನಿಂದ ಮೆರೆಯುತ್ತಿದ್ದರೂ ಕ್ಷಣಕ್ಷಣಕ್ಕೂ ತಮ್ಮ ಮೇಲೆ ಯಾರು, ಯಾವಾಗ, ಆಕ್ರಮಣಮಾಡುವರೋ ಎಂಬ ಅಂಜಿಕೆಯಿಂದ ಸೇನಾಬಲವನ್ನೂ ಶಸ್ತ್ರಾಸ್ತ್ರಬಲಗಳನ್ನೂ ಹೆಚ್ಚಿಸಿಕೊಳ್ಳುತ್ತಿರುವದನ್ನು ಕಂಡು ಬಾಹ್ಯವಸ್ತುಗಳ ಸಂಚಯದಲ್ಲಿ ಸುಖವಿದೆ ಎಂದು ಯಾವಾತನು ತಾನೇ ಹೇಳಲಾಪನು?

ಹೊರಗೆ ತೋರುವ ಧನರಾಶಿಯಿಂದ ದೊಡ್ಡವರೆಂದು ಕಾಣಿಸಿಕೊಳ್ಳುವವರಿಗಿಂತಲೂ ಧರ್ಮಾನುಷ್ಠಾನದಿಂದ ಔನ್ನತ್ಯವನ್ನು ಪಡೆದಿರುವ ಮಹನೀಯರು ಹೆಚ್ಚಿನ ಸುಖಿಗಳೆಂಬುದನ್ನು ನಾವು ಮನದಂದುಕೊಳ್ಳುವದು ಅತ್ಯವಶ್ಯವು. ಮನುಷ್ಯರಲ್ಲಿ ಸಾತ್ವಿಕಧರ್ಮಗಳನ್ನು ಆಚರಿಸಿ ಸುಖಿಸುತ್ತಿರುವವರೇ ಮನುಷ್ಯದೇವತೆಗಳು. ಇಂಥ ಮನುಷ್ಯದೇವತೆಗಳು ದೇವದೇವನಾದ ಪರಮೇಶ್ವರನನ್ನು ಆರಾಧನೆಮಾಡಿದ್ದರಿಂದಲೇ ಈಗಿನ ಕಲ್ಪದಲ್ಲಿ ಪರಮಾತ್ಮಸೂರ್ಯನ ಕಿರಣಗಳಾಗಿರುವ ದೇವತೆಗಳಾಗಿರುತ್ತಾರೆ. ಇದನ್ನೇ ಋಕ್ಕಿನಲ್ಲಿ **ಯಜ್ಞದಿಂದ ಯಜ್ಞರೂಪನಾದ ದೇವನನ್ನು ದೇವತೆಗಳು ಪೂಜಿಸಿದರು; ಅವರೇ ಮಹಿಮಾವಂತರಾಗಿ ನಾಕವನ್ನು ಸೇರಿರುತ್ತಾರೆ. ಅವರೇ ಈಗ ಸಾಧ್ಯದೇವತೆಗಳಾಗಿರುತ್ತಾರೆ** ಎಂದು ಹೇಳಿರುತ್ತದೆ. ಕ ಎಂದರೆ ಸುಖವು; ಅಕವೆಂದರೆ ಅದಲ್ಲದ್ದು, ದುಃಖವು. ದುಃಖವು ಎಂದೆಂದಿಗೂ ಇಲ್ಲದ ಸ್ಥಿತಿಗೆ ನಾಕ, ಸ್ವರ್ಗ ಎಂಬ

ಹೆಸರನ್ನು ವೇದದಲ್ಲಿ ಕೊಟ್ಟಿರುತ್ತದೆ. ಇಂದಿನ ಕಾಲದಲ್ಲಿ ಯಜ್ಞವನ್ನು, ಪರಮೇಶ್ವರನ ಆರಾಧನೆಯನ್ನು, ಮಾಡಿದ ಮಹಾತ್ಮರೇ, ಈಗ ಆ ಸತ್ಕರ್ಮಗಳ ಫಲವಾಗಿ ದೇವತೆಗಳಾಗಿರುತ್ತಾರೆ. ಹಿಂದಿನ ಕಲ್ಪದಲ್ಲಿ ಯಾರು ಸಾಧಕರಾದ ಯಜ್ಞಾನುಷ್ಠಾತೃಗಳಾಗಿದ್ದರೋ ಅವರೇ ಈಗ ಸಾಧ್ಯರಾದ ದೇವತೆಗಳಾಗಿರುತ್ತಾರೆ ಎಂಬುದು ಋಕ್ಕಿನ ಅಭಿಪ್ರಾಯ.

ಈಗಿನ ಕಾಲಕ್ಕೆ ವೈದಿಕ ಕಾಲದ ಯಜ್ಞಗಳು ಆಚರಣೆಯಲ್ಲಿಲ್ಲ. ಆದರೆ ಯಜ್ಞಭಾವವು, ನಮ್ಮ ಜೀವನವನ್ನು ಪರಮಪುರುಷನಾದ ಪರಮೇಶ್ವರನ ಆರಾಧನೆಯಾಗಿ ಮಾಡಿಕೊಳ್ಳುವ ಭಾವನಾರೂಪದ ಯಜ್ಞದ ಭಾವವು, ಈಗಲೂ ಸಾಧಕರಿಗೆ ಸಾಧ್ಯವಾಗಿದೆ. ಅದನ್ನು ಅನುಷ್ಠಾನಕ್ಕೆ ತಂದುಕೊಂಡರೆ ಫಲವೂ ಇದೆ.

ಭಗವದ್ಗೀತೆಯಲ್ಲಿ ಜ್ಞಾನವನ್ನು ಪ್ರತಿಪಾದಿಸುವದಕ್ಕೆ ಹೊರಟಿರುವ ನಾಲ್ಕನೆಯ ಅಧ್ಯಾಯದಲ್ಲಿ ಜ್ಞಾನವನ್ನು ಯಜ್ಞವೆಂದೇ ಹೊಗಳಿದೆ ಎಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು. ಕರ್ಮಿಗಳು ದೈವಯಜ್ಞವನ್ನು ಮಾಡುತ್ತಾರೆ; ಅದರಿಂದ ಪ್ರೀತರಾದ ದೇವತೆಗಳು ಅವರಿಗೆ ಹೆಚ್ಚಿನ ಸುಖವನ್ನು ಅನುಗ್ರಹಿಸುತ್ತಾರೆ. ಇದು ಹೊರಗಿನ ಯಜ್ಞವಾಯಿತು. ಶ್ರೋತ್ರವೇ ಮುಂತಾದ ಇಂದ್ರಿಯಗಳನ್ನು ಸಂಯಮವೆಂಬ ಅಗ್ನಿಯಲ್ಲಿ ಹೋಮಮಾಡುವದು, ಶಬ್ದಾದಿವಿಷಯಗಳನ್ನು ಇಂದ್ರಿಯಾಗ್ನಿಗಳಲ್ಲಿ ಹೋಮಮಾಡುವದು– ಇವು ಮತ್ತೆ ಬೇರೆ ವಿಧವಾದ ಯಜ್ಞಗಳೆಂದು ಅಲ್ಲಿ ವರ್ಣಿತವಾಗಿರುತ್ತವೆ. ಉತ್ತಮವಾದ ವಿಷಯಗಳನ್ನೇ ಇಂದ್ರಿಯಗಳಿಂದ ಸೇವಿಸುವದೂ, ಇಂದ್ರಿಯಗಳಿಂದ ಸಾತ್ತ್ವಿಕವಿಷಯಗಳನ್ನೇ ಸೇವಿಸುವದೂ ಒಂದು ಬಗೆಯ ಹೋಮವೆಂದು ಭಾವನೆ ಮಾಡುವದು ಒಂದು ಉತ್ತಮವಾದ ಯಜ್ಞವು. ಇಂದ್ರಿಯಗಳನ್ನು ಬಿಗಿಹಿಡಿದು, ಅನವಶ್ಯವಾಗಿ ವಿಲಾಸಕ್ಕೆ ಹರಿಯಗೊಡದಿರುವದು ಮತ್ತೊಂದು ಬಗೆಯ ಯಜ್ಞವು. ಇಂದ್ರಿಯ ವ್ಯಾಪಾರಗಳನ್ನೆಲ್ಲವನ್ನೂ ಪ್ರಾಣವ್ಯಾಪಾರಗಳೆಲ್ಲವನ್ನೂ ಅಂತಃಕರಣದಲ್ಲಿಯೇ ಲಯಮಾಡಿಕೊಳ್ಳುವದು ಮತ್ತೊಂದು ಬಗೆಯ ಯಜ್ಞವು. ಇವುಗಳೆಲ್ಲವೂ ಆಧ್ಯಾತ್ಮಿಕ ಯಜ್ಞಗಳು.

**ದೈವಮೇವಾಪರೇ ಯಜ್ಞಂ ಯೋಗಿನಃ ಪರ್ಯುಪಾಸತೇ ।** **ಅಧ್ಯಾಯ–4**
**ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪ ಜುಹ್ವತಿ** **॥25॥**

**ಶ್ರೋತ್ರಾದೀನಿಂದ್ರಿಯಾಣ್ಯನ್ಯೇ ಸಂಯಮಾಗ್ನಿಷು ಜುಹ್ವತಿ ।**
**ಶಬ್ದಾದೀನ್ವಿಷಯಾನನ್ಯ ಇಂದ್ರಿಯಾಗ್ನಿಷು ಜುಹ್ವತಿ ॥26॥**
**ಸರ್ವಾಣೀಂದ್ರಿಯ ಕರ್ಮಾಣಿ ಪ್ರಾಣಕರ್ಮಾಣಿ ಚಾಪರೇ ।**
**ಆತ್ಮ ಸಂಯಮ ಯೋಗಾಗ್ನೌ ಜುಹ್ವತಿ ಜ್ಞಾನದೀಪಿತೇ ॥27॥**

**ದ್ರವ್ಯಯಜ್ಞಾಸ್ತಪೋ ಯಜ್ಞಾಃ ಯೋಗಯಜ್ಞಾಸ್ತಥಾಽಪರೇ ।**
**ಸ್ವಾಧ್ಯಾಯ ಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ ॥28॥**

**ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇಽಪಾನಂ ತಥಾಪರೇ ।**
**ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮ ಪರಾಯಣಾಃ ॥29॥**

**ಅಪರೇ ನಿಯತಾ ಹಾರಾಃ ಪ್ರಾಣಾನ್ಪ್ರಾಣೇಷು ಜುಹ್ವತಿ ।**
**ಸರ್ವೇಽಪ್ಯೇತೇ ಯಜ್ಞವಿದೋೀಯಜ್ಞಕ್ಷಪಿತ ಕಲ್ಮಷಾಃ ॥30॥**

ಕೆಲವು ಕರ್ಮಯೋಗಿಗಳಾದವರು ಇಂದ್ರಾದಿ ದೇವತೆಗಳನ್ನುದ್ದೇಶಿಸಿ ಯಜ್ಞವನ್ನು ಮಾಡುವರು. ಜ್ಞಾನಯೋಗಿಗಳು ಜ್ಞಾನಯಜ್ಞದಿಂದ ಬ್ರಹ್ಮರೂಪ ಅಗ್ನಿಯಲ್ಲಿ ಆತ್ಮವೆಂಬ ಹವಿಸ್ಸನ್ನು ಹವನಮಾಡುವರು. ಅಂದರೆ ಆತ್ಮ ಬ್ರಹ್ಮೈಕ್ಯಾನುಸಂಧಾನ ಮಾಡುತ್ತಾರೆ ॥25॥ ಇನ್ನು ಕೆಲವರು ಶ್ರೋತ್ರಾದಿ ಇಂದ್ರಿಯಗಳನ್ನು ತತ್ತದ್ವ್ಯಾಪಾರ ನಿರೋಧರೂಪ ಸಂಯಮಾಗ್ನಿಯಲ್ಲಿ ಹವನ ಮಾಡುತ್ತಾರೆ. ಬೇರೆ ಕೆಲವರು (ನಿಷೇಧವಲ್ಲದ) ವಿಷಯಗಳನ್ನು ಇಂದ್ರಿಯಗಳೆಂಬ ಅಗ್ನಿಯಲ್ಲಿ ಹವನ ಮಾಡುತ್ತಾರೆ ॥26॥ ಮತ್ತೆ ಕೆಲವರು ಜ್ಞಾನೇಂದ್ರಿಯ, ಕರ್ಮೇಂದ್ರಿಯ ಮತ್ತು ಪ್ರಾಣಾದಿಗಳ ಎಲ್ಲಾ ವ್ಯಾಪಾರಗಳನ್ನೂ ಜ್ಞಾನದಿಂದ ಪ್ರಜ್ವಲಿತವಾದ ಆತ್ಮಧ್ಯಾನವೆಂಬ ಅಗ್ನಿಯಲ್ಲಿ ಹವನಮಾಡುವರು ॥27॥ ತೀಕ್ಷ್ಣವಾದ ವ್ರತವುಳ್ಳ ಕೆಲವರು ಕೃಚ್ಛ್ರಚಾಂದ್ರಾಯಣಾದಿ ತಪೋರೂಪವಾದ ಯಜ್ಞವನ್ನೂ, ಕೆಲವರು ಸತ್ಪಾತ್ರರಲ್ಲಿ ದ್ರವ್ಯಾರ್ಪಣ ರೂಪಯಜ್ಞವನ್ನೂ, ಕೆಲವರು ಚಿತ್ತವೃತ್ತಿ ನಿರೋಧರೂಪವಾದ ಯೋಗ ಯಜ್ಞವನ್ನೂ, ಕೆಲವು ಬ್ರಹ್ಮಚಾರಿಗಳು ಸ್ವಾಧ್ಯಾಯ ಯಜ್ಞವನ್ನೂ, ಯತಿಗಳಾದ ಸಂನ್ಯಾಸಿಗಳು ಜ್ಞಾನಯಜ್ಞವನ್ನೂ ಮಾಡುವರು ॥28॥ ಪ್ರಾಣಾಯಾಮ ತತ್ಪರರಾದ ಕೆಲವರು ಅಪಾನವೆಂಬ ಅಗ್ನಿಯಲ್ಲಿ ಪ್ರಾಣವನ್ನೂ, ಹಾಗೆಯೇ ಪ್ರಾಣವೆಂಬ ಅಗ್ನಿಯಲ್ಲಿ ಅಪಾನಾಗ್ನಿಯನ್ನೂ ಹವನ ಮಾಡುವರು. ಇನ್ನೂ ಕೆಲವರು ಪ್ರಾಣಾಪಾನಗತಿಗಳೆರಡನ್ನು ನಿರೋಧಮಾಡಿ ಕುಂಭಕವೆಂಬ ಪ್ರಾಣಾಯಾಮ ವನ್ನು ಮಾಡುವರು ॥29॥ ಇನ್ನೂ ಕೆಲವರು ನಿಯತಾಹಾರವುಳ್ಳವರಾಗಿ ಪ್ರಾಣಾದಿ ವಾಯುಗಳಲ್ಲಿ

ಯಾವ ವಾಯುವು ಸ್ವಾಧೀನವಾಗಿರುವದೋ ಅವುಗಳನ್ನು ಅಗ್ನಿ ಎಂದು ಭಾವಿಸಿ ಅವುಗಳಲ್ಲಿ ನಿರುದ್ಧವಾಗದ ವಾಯುಗಳನ್ನು ಹವನ ಮಾಡುವರು– ಅಥವಾ ನಿರೋಧಿಸುವರು ಈ ಹಿಂದೆ ಹೇಳಿದವರೆಲ್ಲರೂ ಯಜ್ಞವನ್ನು ಬಲ್ಲವರಾಗಿ ಅದರಿಂದಲೇ ಸಮಸ್ತ ಪಾಪಗಳನ್ನು ಹೋಗಲಾಡಿಸಿಕೊಂಡವರಾಗಿರುತ್ತಾರೆ.

ಇವಕ್ಕೆ ಸಾಧಕವಾಗಿರುವ ಬಾಹ್ಯಯಜ್ಞಗಳೂ ಗೀತೆಯಲ್ಲಿ ಉಕ್ತವಾಗಿವೆ. ಪಾತ್ರರಾದವರಲ್ಲಿ ದ್ರವ್ಯವಿನಿಯೋಗವನ್ನು ಯಜ್ಞಭಾವನೆಯಿಂದ ಮಾಡುವದು ದ್ರವ್ಯಯಜ್ಞವು. ಯಮನಿಯಮಾಸನಪ್ರಾಣಾಯಾಮಾದ್ಯಂಗಗಳಿಂದ ಕೂಡಿರುವ ಯೋಗವನ್ನು ಮಾಡುವದು ಯೋಗಯಜ್ಞವು, ವೇದವನ್ನು ಅಧ್ಯಯನ ಮಾಡುವದೆಂಬುದು ಸ್ವಾಧ್ಯಾಯಯಜ್ಞವು ಶಾಸ್ತ್ರಗಳನ್ನು ಅಭ್ಯಾಸಮಾಡಿ ತಿಳುವಳಿಕೆಯನ್ನು ಸಂಪಾದಿಸುವದು ಜ್ಞಾನಯಜ್ಞವು. ಇವೆಲ್ಲ ಯಜ್ಞಗಳಲ್ಲಿಯೂ ಒಂದು ಭಾವನೆಯು ಬಹುಮುಖ್ಯವಾಗಿರುತ್ತದೆ. ಇದರಿಂದ ದೇವತೆಗಳಿಗೆ ಪ್ರೀತಿಯಾಗಲಿ, ಪರಮೇಶ್ವರನ ಆರಾಧನೆಯಗಲಿ– ಎಂಬ ನಿಃಸ್ವಾರ್ಥಬುದ್ಧಿಯು ಯಜ್ಞದ ಹೆಗ್ಗುರುತು.

ಯಾವ ಉದಾರಮನಸ್ಕರು ತಮ್ಮತಮ್ಮ ಯೋಗ್ಯತಾನುಸಾರವಾಗಿ ಪರಮೇಶ್ವರನ ಆರಾಧನೆಯ ರೂಪದ ಯಾವದಾದರೊಂದು ಯಜ್ಞವನ್ನು ಮಾಡುವರೋ ಅವರಿಗೆ ದೇವತೆಗಳ ಮತ್ತು ದೇವಾಧಿದೇವನಾದ ಪರಮೇಶ್ವರನ, ಅನುಗ್ರಹವುಂಟಾಗುವದು; ಮನಸ್ಸು ಪ್ರಸನ್ನವಾಗುವದು; ಧರ್ಮಬುದ್ಧಿಯ ನಿಜವಾದ ಸುಖವು ಅವರಿಗೆ ಗೋಚರವಾಗುವದು.

ಯಾವಯಾವ ವಸ್ತುಗಳಲ್ಲಿ ನನ್ನದು ಎಂಬ ಬುದ್ಧಿಯು ಹಿಡಿದುಕೊಂಡಿರುವದೋ ಅದದನ್ನು ಈ ಲೋಕದಲ್ಲಿರುವ ಪಾತ್ರರಾದವರಿಗೆ ಯಜ್ಞಬುದ್ಧಿಯಿಂದ ಹಂಚಿಕೊಡುವ ನಿರ್ಮಮತ್ವಬುದ್ಧಿಯನ್ನು ಸಾಧಕರು ಅಭ್ಯಾಸಮಾಡಬೇಕು. ಪರಮೇಶ್ವರನ ಕಲೆಗಳಾದ ದೇವತೆಗಳು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತಾರೆಂದೂ ಅವರ ಅನುಗ್ರಹದಿಂದಲೇ ನಮ್ಮ ಶರೀರೇಂದ್ರಿಯಗಳು ತಮ್ಮತಮ್ಮ ವ್ಯಾಪಾರವನ್ನು ಮಾಡುತ್ತಿರುವವೆಂದೂ ಇಂಥ ಸ್ವಾರ್ಥತ್ಯಾಗಿಗಳಿಗೇ ಹೊಳೆಯುವದು. ಇಂಥ ಮಹಾತ್ಮರಿಗೇ ಹೊರಗೆಲ್ಲ ಪರಮೇಶ್ವರನ ವಿಭೂತಿಗಳು ಕಂಗೊಳಿಸುವವು. ಅವರಿಗೇ ಮನಸ್ಸು ವಿಶುದ್ಧವಾಗಿ ತಮ್ಮ ಒಳಗೂ ಆ ಪರಮೇಶ್ವರನನ್ನು ಕಂಡುಕೊಳ್ಳುವ ಸುಬುದ್ಧಿಯು ಉಂಟಾಗುವದು. ಯಜ್ಞವನ್ನು ಮಾಡಿ ಉಳಿದ ಪರಮೇಶ್ವರನ

ಪ್ರಸಾದರೂಪವಾದ ಅಮೃತಭೋಜಿಗಳ ದೇಹೇಂದ್ರಿಯಗಳೇ ಸ್ವಾತ್ತ್ವಿಕ ಕರ್ಮಕ್ಕೆ ಯೋಗ್ಯವಾಗುವವು. ಅಂಥವರಿಗೆ ಶುದ್ಧಭಾವನೆಗಳೂ ವಿಚಾರವೂ ನಿರ್ವಿಘ್ನವಾಗಿ ಮುಂದುವರಿಯುವವು. ಅಂಥವರಿಗೇ ತಮ್ಮ ಅಂತಃಕರಣವನ್ನು ಸೂಕ್ಷ್ಮವಾಗಿ ಮಾಡಿಕೊಂಡು ಉತ್ತಮರೀತಿಯಿಂದ ಏಕಾಗ್ರತೆಗೊಳಿಸಿ, ಸೂಕ್ಷ್ಮಕ್ಕಿಂತಲೂ ಸೂಕ್ಷ್ಮವಾಗಿರುವ ಪರಮಾತ್ಮನನ್ನು ಕಂಡುಕೊಳ್ಳುವ ಅರ್ಹತೆಯು ಇರುವದು. ಅಂಥವರೇ ಜ್ಞಾನಯಜ್ಞಕ್ಕೆ ಅರ್ಹರಾಗುವರು.

**ಜ್ಞಾನಯಜ್ಞವೆಂದರೇನು?** ಇದನ್ನು ಗೀತೆಯಲ್ಲಿ ಹೀಗೆಂದು ವರ್ಣಿಸಿದೆ : **ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪಜುಹ್ವತಿ (4– 25) ವೇದಾಂತದಲ್ಲಿ ಬ್ರಹ್ಮಶಬ್ದದಿಂದ ಹೇಳಿರುವ ತತ್ತ್ವವು ಯಾವದು? 'ಸತ್ಯವೂ ಜ್ಞಾನವೂ ಅನಂತವೂ ಆದದ್ದು ಬ್ರಹ್ಮವು. ಯಾವದು ಸಾಕ್ಷಾತ್ತಾಗಿ ಅಪರೋಕ್ಷವಾಗಿರುವ ಬ್ರಹ್ಮವೋ, ಯಾವನು ನಮ್ಮಲ್ಲಿ ಎಲ್ಲಕ್ಕೂ ಒಳಗಿರುವ ಆತ್ಮನೋ, ಹಸಿವು ಬಾಯಾರಿಕೆಗಳು ಮುಪ್ಪುಸಾವುಗಳು, ಶೋಕಮೋಹಗಳು ಎಂಬ ಎಲ್ಲಾ ದೋಷಗಳನ್ನೂ ಯಾವನು ಮೀರಿರುವನೋ** ಎಂದು ಮುಂತಾಗಿ ಬಗೆಬಗೆಯಿಂದ ವರ್ಣಿಸಿರುವ ಪರಮಾತ್ಮನೇ ಅದು. ನಾವು ಕಲ್ಪಿಸುವ ಅತ್ಯಂತ ಉತ್ತಮವಾದ ಗುಣಗಳೂ ಆ ಪರಮಾತ್ಮತತ್ತ್ವಕ್ಕೆ ತೀರ ಕೀಳುಮಟ್ಟದ ವಿಶೇಷಣಗಳಾಗಿರುವವು; ಅದರಲ್ಲಿ ಈ ಯಾವ ವಿಶೇಷಣಗಳೂ ಇಲ್ಲವೆಂಬುದನ್ನು ಶ್ರುತಿಯು 'ಇದಲ್ಲ, ಇದಲ್ಲ' ಎಂದು ವರ್ಣಿಸಿ ತಿಳಿಸುತ್ತಿರುವದು. ಇದನ್ನೇ ಅಗ್ನಿ ಎಂದು ಈ ಯಜ್ಞದಲ್ಲಿಟ್ಟುಕೊಂಡಿರುತ್ತದೆ; ಇದರಲ್ಲಿಯೇ ಜ್ಞಾನಯಜ್ಞವನ್ನು ಮಾಡುವವರು ಹೋಮವನ್ನು ಮಾಡುತ್ತಾರೆ.

ಇನ್ನು ಶರೀರ, ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ– ಎಂಬ ಉಪಾಧಿಗಳಿಂದ ಕೂಡಿದ ನಮ್ಮ ಆತ್ಮರೂಪವನ್ನು ಇಲ್ಲಿ ಹೋಮದ್ರವ್ಯವಾದ ಯಜ್ಞವೆಂದಿದೆ. ಆತ್ಮಯಜ್ಞವನ್ನು ಯಜ್ಞರೂಪದಿಂದಲೇ ಹೋಮಮಾಡುವದೇ ಜ್ಞಾನಯಜ್ಞವು. ಉಪಾಧಿಗಳಿಂದ ಕೂಡಿರುವ ಈ ಆತ್ಮವನ್ನು ಯಾವ ಉಪಾಧಿಯ ಧರ್ಮಗಳೂ ನಿಜವಾಗಿ ಇವನಲ್ಲಿಲ್ಲವೆಂಬುದನ್ನು ವಿಚಾರದಿಂದ ಅರಿತುಕೊಂಡು ಇವನು ವೇದೋಕ್ತನಾಗಿರುವ ನಿರುಪಾಧಿಕನಾದ ಪರಮಾತ್ಮನೇ, ಬ್ರಹ್ಮವೇ,– ಎಂದು ತಿಳಿದರೆ ಯಜ್ಞವನ್ನು ಯಜ್ಞರೂಪದಿಂದ ಹೋಮ ಮಾಡಿದಂತೆ ಆಯಿತು. ಹಾಗೆ ಮಾಡುವವರು ಹೆಚ್ಚಿನ ದೈವೀಸಂಪತ್ತಿನವರೇ ಆಗಿರಬೇಕಾದ್ದರಿಂದ 'ಯಜ್ಞೇನ ಯಜ್ಞಮಯ ಜನ್ತ ದೇವಾಃ', ಯಜ್ಞರೂಪನಾದ ಆತ್ಮನನ್ನು ದೇವತೆಗಳಂತಿರುವ

ಸಾಧಕರು ಪರಬ್ರಹ್ಮರೂಪಯಜ್ಞನೆಂದರಿತು ಆ ದರ್ಶನದಿಂದ ಯಾಗ ಮಾಡುತ್ತಾರೆ ಎಂಬ ಹೆಚ್ಚಿನ ಅರ್ಥವೂ ಈ ಋಕ್ಕಿನಲ್ಲಿ ಹುದುಗಿರುತ್ತದೆ.

ವಾಚಕವೃಂದ, ನಿಮ್ಮ ವ್ಯವಹಾರವು ಸ್ವಾರ್ಥಬುದ್ಧಿಯ ಮನವನ್ನು ಕಳೆದುಕೊಂಡು ಪರೋಪಕಾರಬುದ್ಧಿಯಿಂದ ಮಾಡುವ ವ್ಯವಹಾರರೂಪವನ್ನು ತಳೆದು ಯಜ್ಞವಾಗಲಿ! ಆಮೇಲೆ ದೇವತೆಗಳಿಗೆ ಆರಾಧನೆಯನ್ನು ಮಾಡುವ ಶಾಸ್ತ್ರೀಯ ಯಜ್ಞರೂಪವನ್ನು ತಳೆಯಲಿ! ಆಮೇಲೆ ಆಧ್ಯಾತ್ಮಿಕವಾದ ಇಂದ್ರಿಯಾಂತಃಕರಣಗಳ ಸಂಯಮರೂಪವಾದ ಯೋಗಯಜ್ಞವಾಗಲಿ! ಮುಂದೆ ಇದೇ ಭಗವಂತನ ಅನುಗ್ರಹದಿಂದ ಜ್ಞಾನಯಜ್ಞವಾಗುವದು, ನೀವು ಧನ್ಯರಾಗುವಿರಿ! ವೇದದಲ್ಲಿ ಯಜ್ಞ, ದಾನ, ತಪಸ್ಸು– ಎಂಬ ಮೂರು ಮುಖ್ಯ ಸಾಧನಗಳನ್ನು ಹೇಳಿರುತ್ತದೆ. ಅವುಗಳನ್ನು ಎಂದಿಗೂ ಬಿಡಬಾರದು. ಅವಶ್ಯವಾಗಿ ಮಾಡಬೇಕು; ಏಕೆಂದರೆ ಅವುಗಳು ಮನುಷ್ಯನನ್ನು ಪವಿತ್ರಗೊಳಿಸುವ ಸಾಧನಗಳಾಗಿರುತ್ತವೆ– ಎಂದು ಭಗವಂತನು ಗೀತೆಯಲ್ಲಿ ಅಪ್ಪಣೆಕೊಡಿಸಿರುತ್ತಾನೆ. ಈಗಿನ ಕಾಲದಲ್ಲಿ ಯಜ್ಞವೆಂಬ ಮಾತನ್ನು ಜನರು ಕಂಡಕಂಡ ಕಾರ್ಯಗಳಿಗೆಲ್ಲ ಹೊಸದಾಗಿ ಬಳಸುವದು ಕಂಡುಬರುತ್ತಿದೆ. ಆದರೆ ಯಾವ ಕ್ರಿಯೆಯು, ದಾನವು, ಅಥವಾ ತಪಸ್ಸು, ಪರಮೇಶ್ವರನ ಪ್ರೀತಿಗೆಂಬ ಉದಾತ್ತಭಾವದಿಂದ ಪ್ರೇರಿತವಾಗಿರುವದೋ ಅದೊಂದೇ ನಿಜವಾದ ಅರ್ಥದಲ್ಲಿ ಯಜ್ಞವೆನಿಸುವದು, ಅದೇ ನಿಜವಾದ ಅರ್ಥದಲ್ಲಿ ದಾನವೆನಿಸುವದು, ಅದೇ ನಿಜವಾದ ಅರ್ಥದಲ್ಲಿ ತಪಸ್ಸೆನಿಸುವದು. ಈ ಇಡಿಯ ವಿಶ್ವವೇ ಪರಮೇಶ್ವರನ ವಿಭೂತಿಯು; ಆ ಬುದ್ಧಿಯಿಂದ ಸರ್ವಭೂತಮಯನಾದ ಪರಮೇಶ್ವರನನ್ನು ಆರಾಧನೆಮಾಡುವ ಯಜ್ಞದಾನ ತಪಸ್ಸುಗಳು ನಿಮಗೆ ಲಭಿಸುವಂತೆ ಆತನು ಅನುಗ್ರಹಿಸಲಿ !

*****

# ಉಪಸಂಹಾರ

# 12. ಪರಮಾತ್ಮಭಾವನೆ ಚಿತ್ಸ್ವರೂಪವಾದ ಬೆಳಕು

### (ಕೃಷ್ಣ ಯಜುರ್ವೇದದ ಎರಡು ಋಕ್ಕುಗಳು)

★ ಋಗ್ವೇದದಲ್ಲಿರುವಂತೆ ಪುರುಷಸೂಕ್ತದ ಹದಿನಾರು ಋಕ್ಕುಗಳಲ್ಲಿ ಅಭಿಪ್ರಾಯವನ್ನು ಈವರೆಗೆ ಹತ್ತು ಲೇಖನಗಳಿಂದ ವಿವರಿಸುತ್ತಾ ಬಂದಿರುತ್ತೇನೆ.

ಆ ಸೂಕ್ತದಿಂದ ನಮಗೆ ತಿಳಿದುಬರುವ ಒಟ್ಟರ್ಥವು ಇಷ್ಟು: ಪರಮಾತ್ಮನು ನಾಮರೂಪಗಳನ್ನು ಮೀರಿ ತನ್ನ ಸ್ವರೂಪದಲ್ಲಿಯೇ ತಾನು ಇರುತ್ತಿದ್ದರೂ ನಾಮರೂಪಪ್ರಪಂಚವನ್ನು ಮಾತ್ರ ಕಾಣಬಲ್ಲ ಇಂದ್ರಿಯಪ್ರಧಾನರಾದ ಜನರಿಗೆ ವಿಶ್ವಾಕಾರವಾಗಿಯೂ ತೋರಿಕೊಳ್ಳುತ್ತಿರುತ್ತಾನೆ. ಆತನು ಈ ವಿಶ್ವವನ್ನು ಎಲ್ಲೆಲ್ಲಿಯೂ ತುಂಬಿಕೊಂಡಿರುವದರಿಂದ ಪುರುಷವೆನಿಸಿಕೊಂಡಿರುತ್ತಾನೆ. ಬ್ರಹ್ಮನಿಂದ ಹಿಡಿದು ಸ್ತಂಬದವರೆಗಿನ ಪ್ರಾಣಿಗಳಲ್ಲೆಲ್ಲ ಆತನೇ ಆತ್ಮನಾಗಿ ಇದ್ದುಕೊಂಡಿರುತ್ತಾನೆ. ಆತನೇ ಈ ಜಗತ್ತೆಂಬ ಸ್ಥೂಲೋಪಾಧಿಯಿಂದಲೂ ನಮ್ಮೆಲ್ಲರ ಅಂತರ್ಬಹಿಃಕರಣ ರೂಪವಾದ ಸೂಕ್ಷ್ಮೋಪಾಧಿಯಿಂದಲೂ ಸಾಕಾರನಾಗಿ ಕಾಣಿಸಿಕೊಳ್ಳುತ್ತಿರುತ್ತಾನೆ. ಆದ್ದರಿಂದ ನಾವು ಹೊರಗೆ ಕಾಣುವ ಎಲ್ಲಾ ಪ್ರಾಣಿಗಳನ್ನೂ ಎಲ್ಲಾ ಮಾನವರನ್ನೂ ಎಲ್ಲಾ ಅತಿಮಾನವರಾದ ದೇವರ್ಷಿಗಳನ್ನೂ ಪರಮಾತ್ಮಭಾವನೆಯಿಂದಲೇ ಕಂಡು ನಡೆದುಕೊಳ್ಳುವ ಉತ್ತಮಭಾವನೆಯನ್ನು ಕಲಿಯಬೇಕು.

ಇಡಿಯ ದೃಶ್ಯಪ್ರಪಂಚವೆಲ್ಲವೂ ಆತನ ಮಹಿಮೆಯೆ. ಆತನ ಈ ಮಹಾವಿಭೂತಿಯು ತತ್ತ್ವವನ್ನು ಮನಗಂಡು ಪೂಜ್ಯಬುದ್ಧಿಯಿಂದ ಆರಾಧಿಸುವದನ್ನು ನಾವು ಅಭ್ಯಾಸಮಾಡಬೇಕು. ನಿಜವಾಗಿ ನೋಡಿದರೆ ಪರಮಾತ್ಮನು ಈ ಪ್ರಪಂಚವನ್ನು ಮೀರಿದ ತನ್ನ ಸ್ವಭಾವದಲ್ಲಿಯೇ ಯಾವಾಗಲೂ ಇರುತ್ತಿರುವನು. ಆದರೂ ಆತನು ತನ್ನ ಮಾಯಾಶಕ್ತಿಯ ಬಲದಿಂದ ಈ ಪ್ರಪಂಚರೂಪವಾಗಿಯೂ ಕಾಣಿಸಿಕೊಳ್ಳುತ್ತಿರುವನು. ಈ ಪ್ರಪಂಚವು ನಮ್ಮ ಭೋಗಕ್ಕೆ ಅನುಕೂಲಿಸುವ ವಸ್ತುಗಳನ್ನು ಒದಗಿಸುವ ಸ್ಥಾನವೆಂದು ತಿಳಿಯುವದು

---
★ ಜುಲೈ 1955, ಸಂಪುಟ 24, ಪುಟ 289–296

ಕುಸಂಸ್ಕೃತಿಯ ಫಲವು. ಈ ಪ್ರಪಂಚವೆಲ್ಲ ಒಂದು ಮಹಾಯಜ್ಞಶಾಲೆಯು; ಇಲ್ಲಿ ಪರಮೇಶ್ವರನ ಆರಾಧನಾರೂಪವಾದ ಯಜ್ಞಕ್ಕೆ ಬೇಕಾದ ಸಾಮಗ್ರಿಗಳೆಲ್ಲವೂ ಕಾಣಬರುತ್ತವೆ. ನಾವು ನಮ್ಮ ತನುಮನಧನಗಳೆಲ್ಲವನ್ನೂ ಈ ಆರಾಧನೆಗೆ ಉಪಯೋಗಿಸಿಕೊಂಡು ಒಬ್ಬರಿಗೊಬ್ಬರು ಸಹಕಾರವನ್ನು ಮಾಡುತ್ತಾ ಬಾಳಬೇಕು.

ವಿಶ್ವದಲ್ಲಿರುವ ಸ್ಥಾವರಜಂಗಮಪ್ರಾಣಿಗಳೆಲ್ಲವೂ ಆ ಪರಮಾತ್ಮನ ಚೈತನ್ಯದಿಂದಲೇ ವ್ಯಾಪ್ತವಾಗಿರುವವು. ಇವೆಲ್ಲವೂ ಆ ಪರಮಾತ್ಮನಲ್ಲಿ ಒಂದಾಗಿರುವವು. ಇವುಗಳಲ್ಲಿ ಉತ್ತಮರಾಗಿರುವ ದೇವತೆಗಳೆಂಬವರು ಪರಮಾತ್ಮನ ಶಕ್ತಿವಿಶೇಷಗಳೇ ಆಗಿರುತ್ತಾರೆ. ದೇವತೆಗಳ ಆರಾಧನೆಯೆಂದರೆ ಆ ಪರಮೇಶ್ವರನ ಆರಾಧನೆಯೇ ಆಗಿರುತ್ತದೆ. ಮನುಷ್ಯನು ಯಜ್ಞದಾನತಪಸ್ಸುಗಳಿಂದ ಪರಮೇಶ್ವರನ ಆರಾಧನೆಯನ್ನು ಮಾಡುತ್ತಿರಬೇಕು. ಎಲ್ಲಾ ಪ್ರಾಣಿಗಳಲ್ಲಿಯೂ, ಎಲ್ಲಾ ಮನುಷ್ಯರಲ್ಲಿಯೂ, ಎಲ್ಲೆಲ್ಲಿಯೂ, ಕೊನೆಗೆ ತನ್ನಲ್ಲಿಯೂ, ಆ ಪರಮಾತ್ಮನ ಇರವನ್ನೇ ಕಂಡುಕೊಂಡು ನಲಿಯುವ ಸುಯೋಗವನ್ನು ಸಂಪಾದಿಸಿಕೊಳ್ಳಬೇಕು.

**ಪರಮಾತ್ಮನು ಬಾಹ್ಯಪ್ರಪಂಚದಲ್ಲೆಲ್ಲ ತುಂಬಿಕೊಂಡಿದ್ದು ಆ ಪ್ರಪಂಚರೂಪದಿಂದಲೇ ನಮಗೆ ಕರ್ಮೋಪಾಸನೆಗಳ ಫಲಗಳನ್ನು ಕೊಡುತ್ತಿರುತ್ತಾನೆ. ಈ ಮಾಯಿಕ ಪ್ರಪಂಚವನ್ನೆಲ್ಲ ಮೀರಿದ ತನ್ನ ಪರಮೋತ್ತಮವಾದ ಸ್ವರೂಪದಿಂದಲೂ ಇದ್ದುಕೊಂಡಿರುತ್ತಾನೆ. ಆಂತರಿಕವಾದ ಸ್ವಾನುಭವದಿಂದ ಆತನ ಪ್ರಪಂಚಾತೀತ ತತ್ತ್ವವನ್ನು ನೇರಾಗಿ ಕಂಡುಕೊಂಡು ನಿತ್ಯಾನಂದದಲ್ಲಿ ನೆಲೆನಿಲ್ಲುವದೇ ಮಾನವಸಂಸ್ಕೃತಿ–ಪರ್ವತದ ಪರಮೋಚ್ಚಶಿಖರವು.**

ಮೇಲೆ ಹೇಳಿರುವದು ಋಗ್ವೇದದಲ್ಲಿರುವ ಪುರುಷಸೂಕ್ತದ ಅಭಿಪ್ರಾಯವು. ಇದೇ ಸೂಕ್ತವು ಕೃಷ್ಣಯಜುರ್ವೇದದ ತೈತ್ತಿರೀಯಾರಣ್ಯಕದಲ್ಲಿಯೂ ಕಂಡುಬರುತ್ತದೆ. ಯಜುರ್ವೇದದಲ್ಲಿ ಕಂಡು ಬರುವ ಹೆಚ್ಚಿನ ಎರಡು ಋಕ್ಕುಗಳ ಅರ್ಥವನ್ನು ಈ ಕೆಳಗೆ ಕೊಟ್ಟಿರುತ್ತದೆ :

**ವೇದಾಹಮೇತಂ ಪುರುಷಂ ಮಹಾನ್ತಮ್ । ಆದಿತ್ಯವರ್ಣಂ ತಮಸಸ್ತು ಪಾರೇ । ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ । ನಾಮಾನಿ ಕೃತ್ವಾಽಭಿವದನ್ ಯದಾಸ್ತೇ ॥17॥**

**ಧಾತಾ ಪುರಸ್ತಾದ್ಯಮುದಾಜಹಾರ । ಶಕ್ರಃ ಪ್ರವಿದ್ವಾನ್ ಪ್ರದಿಶಶ್ಚತಸ್ರಃ । ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪಂಥಾ ಅಯನಾಯ ವಿದ್ಯತೇ ॥18॥**

**"ಈ ಮಹಾಪುರುಷನನ್ನು ನಾನು ಬಲ್ಲೆನು. ಅವನು ಆದಿತ್ಯವರ್ಣನು, ಕತ್ತಲೆಯ ಆಚೆಗೆ ಇರುತ್ತಾನೆ. ಸರ್ವರೂಪಗಳನ್ನೂ ನಾಮಗಳನ್ನೂ ಉಂಟುಮಾಡಿ ವ್ಯವಹರಿಸುತ್ತಾ ಇರುತ್ತಾನೆ. ಪೂರ್ವದಲ್ಲಿ ಬ್ರಹ್ಮನು ಯಾವನನ್ನು ತಿಳಿಸಿದನೋ, ಇಂದ್ರನು ಯಾವಾತನನ್ನು ನಾಲ್ಕು ದಿಕಿನವರಿಗೂ ತಿಳಿಸಿದನೋ ಆತನನ್ನು ಹೀಗೆಂದು ಅರಿತುಕೊಂಡರೆ ಇಲ್ಲಿಯೇ ಅಮೃತನಾಗುತ್ತಾನೆ. ಅವನನ್ನು ಪಡೆಯುವದಕ್ಕೆ ಮತ್ತೊಂದು ಮಾರ್ಗವಿರುವದಿಲ್ಲ".**

ವೇದದಲ್ಲಿ ಹೇಳಿರುವ ಪರಮಾತ್ಮನು ಮಹಾಪುರುಷನು. ಒಂದೊಂದು ಪುರದಲ್ಲಿ, ಎಂದರೆ ಒಂದೊಂದು ಶರೀರದಲ್ಲಿ, ಇರುವವರು ಸಾಮಾನ್ಯಪುರುಷರು. ಆದರೆ ಆತನು ಮಹಾಪುರುಷನು, ಬ್ರಹ್ಮಾಂಡದಲ್ಲಿ ಎಲ್ಲೆಲ್ಲಿಯೂ ಪೂರ್ಣನಾಗಿರುವವನು, ತನ್ನ ಸ್ವರೂಪದಿಂದ ಅನಂತವಾಗಿರುವವನು. ಆತನೇ ಎಲ್ಲಾ ನಾಮರೂಪಗಳನ್ನೂ ಉಂಟುಮಾಡಿರುವವನು. ಈ ಜಗತ್ತು ನಾಮರೂಪಾತ್ಮಕವಾಗಿರುತ್ತದೆ. ಈ ಪ್ರಪಂಚದಲ್ಲಿ ಯಾವದೇ ಆಗಲಿ ಹೆಸರಿಸಲ್ಪಡುವ ವಸ್ತು, ವಸ್ತುವಿನ ಹೆಸರು- ಎಂಬ ಈ ಎರಡರೊಳಗೇ ಅಡಕವಾಗಿರುತ್ತದೆ. ಆದ್ದರಿಂದ ಪರಮೇಶ್ವರನು ನಾಮರೂಪಗಳನ್ನು ಮಾಡಿರುತ್ತಾನೆ ಎಂದರೆ ಪ್ರಪಂಚವನ್ನೇ ಮಾಡಿರುತ್ತಾನೆ ಎಂದು ಅರ್ಥ.

ಪರಮಾತ್ಮನು ಪ್ರಪಂಚವನ್ನು ಮಾಡಿರುತ್ತಾನೆಂದರೆ ಹೇಗೆ? ಬಡಗಿಯು ಮರದ ಸಾಮಾನುಗಳನ್ನು ಮಾಡುವಂತೆ, ಅಥವಾ ಶಿಲ್ಪಿಯು ಕಲ್ಲಿನವಿಗ್ರಹವೇ ಮುಂತಾದವುಗಳನ್ನು ಕೆತ್ತುವಂತೆ, ಇದ್ದದ್ದನ್ನೇ ರೂಪಾಂತರಗೊಳಿಸುತ್ತಾನೆಂದೇನೂ ಅರ್ಥವಲ್ಲ. ವಸ್ತುವನ್ನು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ತರುವದಕ್ಕೂ ಜಾಣತನವು ಬೇಕು. ಮಹಾಮಹಾಶಿಲ್ಪವಿದ್ಯೆಯನ್ನು ಕಲಿತವರು ದೊಡ್ಡದೊಡ್ಡ ಸೇತುವೆಗಳನ್ನೂ ಭವನಗಳನ್ನೂ ಕೋಟೆಕೊತ್ತಲುಗಳನ್ನೂ ನಿರ್ಮಿಸಿದ್ದನ್ನು ನೋಡಿದರೆ ನಮಗೆ ಅತ್ಯಾಶ್ಚರ್ಯವಾಗುವದು ನಿಜ. ಆದರೆ ವೇದದಲ್ಲಿ ಪರಮೇಶ್ವರನು ಹೀಗೆ ಜಗತ್ತನ್ನು ನಿರ್ಮಾಣಮಾಡುತ್ತಾನೆಂದು ಹೇಳಿರುವದಿಲ್ಲ.

**ಈ ಜಗತ್ತಿಗೆ ಪರಮಾತ್ಮನು ಪ್ರಜ್ಞಾವಂತನಾದ ಶಿಲ್ಪಿಯಂತೆ ನಿರ್ಮಾಣಕರ್ತನೆಂಬುದೂ ನಿಜ; ಆದರೆ ಅದರ ಉಪಾದಾನಕಾರಣವೂ ಅವನೇ ಆಗಿರುತ್ತಾನೆ– ಎಂಬುದು ಇಲ್ಲಿ ವಿಶೇಷವು. "ಅವನು ನಾನು ಬಹುವಾಗುವೆನು, ನಾನೇ ರೂಪಾಂತರದಿಂದ ಹುಟ್ಟುವೆನು" ಎಂದು ಸಂಕಲ್ಪಿಸಿಕೊಂಡು ಅದರಂತೆ ಈ ಚಿತ್ರವಿಚಿತ್ರವಾದ ಜಗತ್ತನ್ನು ಸೃಷ್ಟಿಸಿರುತ್ತಾನೆ– ಎಂದು ಶ್ರುತಿಗಳು ಸಾರುತ್ತಿವೆ.**

ಪರಮಾತ್ಮನೇ ಈ ಜಗತ್ತಿಗೆ ಉಪಾದಾನಕಾರಣವಾದರೆ– ಮಣ್ಣು ಮಡಕೆಗೂ ಬೀಜವು ಮರಕ್ಕೂ ಕಾರಣವಾಗಿರುವಂತೆ ವಸ್ತುರೂಪವಾದ ಕಾರಣನೂ ಅವನೇ ಆದರೆ– ಮಣ್ಣು ಮಡಕೆಯಾಗಿ ಮಾರ್ಪಟ್ಟಂತೆಯೂ ಬೀಜವು ಮರವಾಗಿ ಮಾರ್ಪಟ್ಟಂತೆಯೂ ಆತನೇ ಜಗತ್ತಾಗಿ ಮಾರ್ಪಟ್ಟನೆಂದು ಅರ್ಥವಾಗುವದು. ಬೀಜವು ಮರವಾದಮೇಲೆ ಬೀಜವು ಉಳಿದುಕೊಂಡಿರದೆ ಇರುವಂತೆ ಜಗತ್ತಾಗಿ ಮಾರ್ಪಟ್ಟಮೇಲೆ ಆತನು ಉಳಿದಕೊಂಡೇ ಇರುವದಿಲ್ಲವೆಂದೂ ಅರ್ಥವಾಗುವದು. ಆದರೆ ಈ ಅಭಿಪ್ರಾಯವೇನೂ ಶ್ರುತಿವಾಕ್ಯದಲ್ಲಿ ಅಡಗಿರುವದಿಲ್ಲ. ಏಕೆಂದರೆ ಪರಮಾತ್ಮನು ನಿತ್ಯನಿರವಯವನು; ಅವನ ಅವಯವಗಳ ವಿನ್ಯಾಸಕ್ರಮವು ಹೆಚ್ಚುಕಡಿಮೆಯಾಗಿ ಪ್ರಪಂಚವಾಗಿರುವದೆಂಬ ಅಭಿಪ್ರಾಯವೇನೂ ಇಲ್ಲಿಲ್ಲ. **ಪರಮಾತ್ಮನು ಸೃಷ್ಟಿಗೆ ಮೊದಲು ಇದ್ದಂತೆಯೇ ಸೃಷ್ಟಿಯಾದಮೇಲೂ ಇದ್ದುಕೊಂಡಿರುವನು, ಜಗತ್ತಿನ ರೂಪವನ್ನು ಪಡೆದು ಕೊಂಡಿರುವನು. ಇಂಥ ವಿಲಕ್ಷಣಸೃಷ್ಟಿಯಿದು! ಈ ಅಭಿಪ್ರಾಯವನ್ನು ವಿಶದಗೊಳಿಸುವದಕ್ಕೆ ಶಂಕರಾ ಚಾರ್ಯರು ತಮ್ಮ ಭಾಷ್ಯಗಳಲ್ಲಿ ಆಗಾಗ್ಗೆ ಒಂದು ಉದಾಹರಣೆಯನ್ನು ಕೊಡುತ್ತಿರುವದುಂಟು. ಮೊದಲು ನೀರೇ ಆಗಿದ್ದದ್ದು ಆಮೇಲೆ ನೊರೆಯಾದರೆ, ನೊರೆಯಾದಾಗಲೂ ನೀರೇ ಆಗಿದ್ದುಕೊಂಡೇ ನೊರೆಯೆಂಬ ರೂಪವನ್ನೂ ಹೆಸರನ್ನೂ ಪಡೆಯುವದು. ಅಲ್ಲವೆ? ಇದರಂತೆ ಸೃಷ್ಟಿಗೆ ಪೂರ್ವದಲ್ಲಿ ಪರಮಾತ್ಮನು ತಾನು ಇದ್ದಂತೆಯೇ ಆಮೇಲೂ ಇದ್ದುಕೊಂಡೇ ಜಗತ್ತೆಂಬ ಹೆಸರನ್ನೂ ರೂಪವನ್ನೂ ಪಡೆದುಕೊಳ್ಳುವನು– ಎಂದು ಆ ಆಚಾರ್ಯರು ಬರೆದಿರುತ್ತಾರೆ. ಈ ದೃಷ್ಟಾಂತದಲ್ಲಿಕೂಡ ವಿವಕ್ಷಿತವಾಗಿರುವಷ್ಟು ಅಂಶವನ್ನೇ ತೆಗೆದುಕೊಳ್ಳಬೇಕು. ನೀರು ಸಾವಯವವಸ್ತುವಾಗಿದೆ. ಅದು ಅವಯವಗಳ ಮಾರ್ಪಾಡಿನಿಂದ ನೊರೆಯ ರೂಪವನ್ನು ಪಡೆದಿದೆ. ಆದರೆ ಪರಮಾತ್ಮನು ಹಾಗೇನೂ ರೂಪಾಂತರವನ್ನು ಪಡೆದಿರುವದಿಲ್ಲ; ತಾನು ಇದ್ದಂತೆಯೇ ಇದ್ದು ನಾಮರೂಪಗಳಾಗಿಯೂ ತೋರು ತ್ತಿದಾನೆ. ಇಷ್ಟೇ ಇಲ್ಲಿ ದೃಷ್ಟಾಂತದಾರ್ಷ್ಟಾಂತಿಕಗಳಿಗೆ ಸಮಾನವಾಗಿರುವ ಅಂಶ.**

ಪ್ರಪಂಚದಲ್ಲಿ ಪ್ರತಿಯೊಂದು ವಸ್ತುವೂ ನಾಮರೂಪಗಳಾಗಿ ಕಾಣುತ್ತಿರುತ್ತದೆ. ಇಂಥ ರೂಪಕ್ಕೆ ಇಂಥ ನಾಮವಿದೆ–ಎಂದು ವಾಚ್ಯವಾಚಕರೂಪವಾಗಿ ತೋರುವದೇ ಈ ಪ್ರಪಂಚದ ಸ್ವಭಾವವು. ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಂಬಂಧ, ಅಭಾವ– ಎಂದು ರೂಪದಲ್ಲಿ ಕಾಣುವ ಪ್ರತಿಯೊಂದು ವಸ್ತುವಿಗೂ ಇಲ್ಲಿ ಒಂದೊಂದು ಹೆಸರು ಇರುತ್ತದೆ. ವಿಷಯವಿಷಯಿರೂಪವಾಗಿ ಕಾಣಿಸುವದೇ ಈ ಪ್ರಪಂಚದ ಸ್ವಭಾವವು. ಪರಮಾತ್ಮನು ಪ್ರಪಂಚದಲ್ಲಿ ಎಲ್ಲಾ ರೂಪಗಳನ್ನೂ ಮಾಡಿ ಅವುಗಳನ್ನು ಅವವುಗಳ ಹೆಸರಿನಿಂದ ಕರೆಯುತ್ತಿರುತ್ತಾನೆ ಎಂಬುದಕ್ಕೆ ಇಷ್ಟೆ ಅರ್ಥ.

ಆದರೆ ಪರಮಾತ್ಮನು ಈ ಜಗತ್ತನ್ನು ಹೀಗೆ ಸೃಷ್ಟಿಸಿರುತ್ತಾನೆಂಬುದೂ ಇದು ನಾಮರೂಪಗಳ ಮೊತ್ತವೆಂಬುದೂ ಇಲ್ಲಿ ಮುಖ್ಯವಾಗಿ ತಿಳಿಯತಕ್ಕ ಕೊನೆಯ ತೀರ್ಮಾನವಲ್ಲ. ಆ ಪರಮಾತ್ಮನು ಈ ನಾಮರೂಪಗಳ, ವಿಷಯವಿಷಯಿಗಳ, ಪ್ರಪಂಚವನ್ನು ಮೀರಿ ಆಚೆಗೆ ಇರುತ್ತಾನೆ ಎಂಬುದೇ ಇಲ್ಲಿ ಹೆಚ್ಚು ಲಕ್ಷ್ಯವಿಡತಕ್ಕ ವಿಷಯವಾಗಿರುತ್ತದೆ. ಆತ್ಮನು ಪ್ರಪಂಚವನ್ನು ಮಾಡಿರುತ್ತಾನೆ ಎಂಬುದು ನಾಮರೂಪಗಳಾಗಿ ವಿಂಗಡಿಸಿರುತ್ತಾನೆ ಎಂದೇ ಶ್ರುತಿಗಳಲ್ಲಿ ಕರೆದಿರುತ್ತದೆ. ಈ ಜಗತ್ತು ವ್ಯಾಕೃತಜಗತ್ತು ಎಂದರೆ ನಾಮರೂಪಗಳಾಗಿ ವಿಂಗಡಿಸಿಕೊಂಡು ತೋರುತ್ತಿರುವ ಜಗತ್ತು ಎಂದರ್ಥ. ಈ ಪ್ರಪಂಚದಲ್ಲಿ ನಾಮರೂಪಗಳು ಹೇಗೆಹೇಗೆ ಹರಡಿಕೊಂಡಿರುತ್ತವೆ? ಎಂಬುದನ್ನು ಮನಸ್ಸಿಗೆ ತಂದುಕೊಂಡರೆ ಇಲ್ಲಿ ಭೂತಭೌತಿಕ ಪದಾರ್ಥಗಳು ನಮ್ಮ ಹೊರಗೂ ಒಳಗೂ ಇರುತ್ತವೆ ಎಂಬುದು ಕಾಣಬರುವದು. ಸಾಮಾನ್ಯದೃಷ್ಟಿಯಿಂದ ನಾವು ಕರ್ತೃಭೋಕ್ತೃಗಳೆಂದು ಭಾವಿಸಿಕೊಂಡಿರುವಂತೆ ತಮ್ಮನ್ನು ಕರ್ತೃಭೋಕ್ತೃಗಳೆಂದು ಭಾವಿಸಿಕೊಂಡಿರುವ ಅನೇಕ ಜೀವರುಗಳು ಇಲ್ಲಿ ಕಂಗೊಳಿಸುತ್ತಿರುವರು. ಆ ಕರ್ತೃಭೋಕ್ತೃಗಳು ಮಾಡುತ್ತಿರುವ ಕ್ರಿಯೆಗಳು, ಅವುಗಳಿಗೆ ಬೇಕಾದ ಕಾರಕಗಳು, ಅವುಗಳಿಂದಾಗುವ ಫಲಗಳು– ಎಲ್ಲವೂ ನಾಮರೂಪಗಳ ಹರಡುವಿಕೆಯೇ. ಅವರು ಭೋಕ್ತೃಗಳಾಗಿ ಈ ಜಗತ್ತಿನ ವಸ್ತುಗಳಲ್ಲಿ ಒಳ್ಳೆಯ ಕೆಟ್ಟ ಭಾವನೆಗಳನ್ನು ಮಾಡುತ್ತಿರುವದು, ಅವುಗಳ ವಿಷಯಕ್ಕೆ ಆಶ್ಚರ್ಯ, ಭಯ, ರಾಗ, ದ್ವೇಷ– ಮುಂತಾದ ಭಾವಗಳನ್ನು ತಳೆಯುತ್ತಿರುವದು, ಅವುಗಳಿಂದ ಸುಖದುಃಖಗಳನ್ನು ಪಡೆದು ಉಬ್ಬುವದು ತಗ್ಗುವದು– ಇವೆಲ್ಲ ನಾಮರೂಪಗಳ ಹರಡುವಿಕೆಯೇ. ಕ್ರಿಯಾಕಾರಕಫಲಗಳಿಗೆ ಗೊತ್ತಾಗಿರುವ ದೇಶ, ಕಾಲ, ನಿಮಿತ್ತ– ಇವುಗಳೂ

ನಾಮರೂಪಗಳ ಹರಡುವಿಕೆಯೇ. ಹೀಗೆ ನಮ್ಮೊಳಗೂ ಹೊರಗೂ ಹರಡಿಕೊಂಡಿರುವ ನಾಮರೂಪಗಳ ಅಂಗಡಿಯೇ **'ಪ್ರಪಂಚ'** ಎಂಬ ಶಬ್ದದಿಂದ ತಿಳಿಯಬೇಕಾದ ತೋರಿಕೆಯು.

ಈ ಪ್ರಪಂಚವು ನಮ್ಮ ಲೌಕಿಕಶಾಸ್ತ್ರೀಯವ್ಯವಹಾರಗಳಿಗೆಲ್ಲ ಕ್ಷೇತ್ರವಾಗಿರುತ್ತದೆ. ಇಲ್ಲಿರುವ ಜೀವರುಗಳೆಲ್ಲರೂ ತಮ್ಮತಮ್ಮ ಯೋಗ್ಯತೆಗೆ ತಕ್ಕಂತೆ ಅಳತೆಯ ಜ್ಞಾನವುಳ್ಳವರಾಗಿರುತ್ತಾರೆ. ಇವರಿಗೆ ಯಾರಿಗೂ ತತ್ತ್ವದ ಪೂರ್ಣಜ್ಞಾನವು, ಸರಿಯಾದ ತಿಳಿವಳಿಕೆಯು, ಇರುವದಿಲ್ಲ. ಆದ್ದರಿಂದ ಇದೆಲ್ಲವನ್ನೂ **ತಮಸ್ಸು 'ಕತ್ತಲೆ'** ಎಂದು ವೇದದಲ್ಲಿ ಕರೆದಿರುತ್ತದೆ.

ಇಷ್ಟನ್ನು ಮನಸ್ಸಿಗೆ ತಂದುಕೊಂಡರೆ ನಾವು ಮೇಲೆ ಉದಾಹರಿಸಿರುವ ಮೊದಲನೆಯ ಸೂಕ್ತದ ಅಭಿಪ್ರಾಯವು ನಮಗೆ ಹೊಳೆಯುತ್ತದೆ. 'ಆ ಪರಮಾತ್ಮನೆಂಬ ಮಹಾಪುರುಷನನ್ನು **ನಾನು** ಅರಿತಿದ್ದೇನೆ' ಎಂದು ಋಷಿಯು ಹೇಳಿಕೊಂಡಿರುತ್ತಾನೆ. ಸಾಮಾನ್ಯ ಜನರು ಈ ಪ್ರಪಂಚವನ್ನು ಅರಿತಿರುತ್ತೇವೆ ಎಂದುಕೊಳ್ಳುತ್ತಿದ್ದರೂ ಅವರು ತಮಸ್ಸಿನಲ್ಲಿ ಕಗ್ಗತ್ತಲೆಯಲ್ಲಿ– ಇರುತ್ತಾರೆ. ಅವರು ಪರಮಾರ್ಥತತ್ತ್ವವಾದ ಪರಮಪುರುಷನನ್ನು ಅರಿಯರು. ಅವರು ಕತ್ತಲೆಯಲ್ಲಿ ನಿದ್ರಿಸುತ್ತಾ ಕನಸುಕಾಣುತ್ತಾ ಸುಖದುಃಖಮೋಹಗಳಿಂದ ನರಳುತ್ತಾ ಸಂಸಾರದ ಗೊಂಡಾರಣ್ಯದಲ್ಲಿ ತೊಳಲುತ್ತಿರುವರು. ಪರಮಾತ್ಮನು ಈ ಕಗ್ಗತ್ತಲೆಯ ಆಚೆಗೆ ಇರುತ್ತಾನೆ. ನಮ್ಮಗಳಿಗೆ ಕತ್ತಲೆಯಾಗಿರುವಾಗಲೂ ದೇಶಾಂತರದಲ್ಲಿ ಬೆಳಕೇ ಆಗಿರುವಂತೆ, ಅಜ್ಞರಿಗೆ ನಿಜವಾದ ಪರಮಾರ್ಥದ ಜ್ಞಾನವಿಲ್ಲದ ಅಜ್ಞಾನನಿದ್ರೆ ಯಿರುವಾಗಲೇ, ಜ್ಞಾನಿಗಳು ಎಚ್ಚರದಿಂದ ಜ್ಞಾನಪ್ರಕಾಶದ ಸುಖವನ್ನು ಅನುಭವಿಸುತ್ತಿರುತ್ತಾರೆ. ಆ ಪರಮಾತ್ಮನು ಆದಿತ್ಯವರ್ಣನು, ಸೂರ್ಯನಂತೆ ಸ್ವಯಂಪ್ರಕಾಶನಾಗಿರುವ ಸ್ವಭಾವದವನು. ಏಕೆಂದರೆ ಚೈತನ್ಯರೂಪವಾದ ಬೆಳಕೇ ಆತನ ಸ್ವರೂಪವಾಗಿರುತ್ತದೆ. ಸೂರ್ಯನು ಮಿಕ್ಕವರಿಗೆ ಕವಿದುಕೊಂಡಿರುವ ಕತ್ತಲೆಯನ್ನು ಹೋಗಲಾಡಿಸಿ, ಅವರ ಕಣ್ಣಿಗೆ ಅನುಗ್ರಹವನ್ನುಂಟುಮಾಡುವದರಿಂದ ವಸ್ತುಜ್ಞಾನವನ್ನು ಯಥಾರ್ಥವಾಗಿ ಮಾಡಿಕೊಡುವಂತೆ, **ಈ ಜ್ಞಾನಸೂರ್ಯನಾದ ಪರಮಾತ್ಮನು ತಾನೂ ತನ್ನ ಸ್ವರೂಪದಿಂದ ನಿತ್ಯವೂ ಬೆಳಗುತ್ತಾ ತನ್ನ ಬೆಳಕಿನಿಂದ ಅಂತಃಕರಣ, ಇಂದ್ರಿಯಗಳು–ಇವುಗಳಿಗೂ ತನ್ನ ಬೆಳಕಿನ ನೆರವನ್ನು ಕೊಟ್ಟು ಅನುಗ್ರಹಿಸಿ ಬಾಹ್ಯವಸ್ತುಗಳ ಅರಿವನ್ನುಂಟುಮಾಡುತ್ತಿರುತ್ತಾನೆ.**

ಹೀಗೆ ನಾಮರೂಪತ್ಮಕವಾದ ಜಗತ್ತನ್ನುಂಟುಮಾಡುವದೂ ಆ ನಾಮರೂಪಜಗತ್ತಿನ ರೂಪದಲ್ಲಿದ್ದು ತೋರಿಕೊಳ್ಳುವದೂ ಅಲ್ಲದೆ ತನ್ನದೇ ಆದ ಸ್ವಪ್ರಕಾಶನಾದ ಸೂರ್ಯನಂತಿರುವ ನಿತ್ಯಚೈತನ್ಯಸ್ವರೂಪದಲ್ಲಿಯೇ ಇದ್ದು ಕೊಂಡಿರುವದೇ ಆ ಪರಮಾತ್ಮನ ಹೆಚ್ಚುಗಾರಿಕೆ. ಆದ್ದರಿಂದಲೇ ಆತನು **ಮಹಾಪುರುಷ**ನೆನಿಸಿಕೊಂಡಿರುತ್ತಾನೆ. ಪರಮಾತ್ಮನು ನಾಮರೂಪಾತ್ಮಕವಾದ ಜಗತ್ತಾಗಿರುತ್ತಾನೆಂದೂ ಅದನ್ನು ತನ್ನ ಚೈತನ್ಯರೂಪದಿಂದ ಬೆಳಗುತ್ತಿದಾನೆಂದೂ ಹೇಳುವದರಿಂದ ಬೆಳಗುವ ಚೈತನ್ಯರೂಪವೊಂದು ಆ ಬೆಳಕಿಗೆ ವಿಷಯವಾಗಿರುವ ಅಚೇತನರೂಪವೊಂದು– ಹೀಗೆ ಎರಡು ಭಾಗವಾಗಿ ಒಡೆದು ಕೊಂಡಿರುತ್ತಾನೆಂದು ಭಾವಿಸುವಹಾಗಿಲ್ಲ. ಏಕೆಂದರೆ ಈ ಚೈತನ್ಯಸ್ವರೂಪವನ್ನು ಕಂಡುಕೊಂಡರೆ ಅದಕ್ಕೆ ಯಾವ ಎಲ್ಲೆಕಟ್ಟೂ ಇರುವದಿಲ್ಲವೆಂಬುದು ಸ್ಪಷ್ಟವಾಗುತ್ತದೆ. 'ಇಲ್ಲಿಗೆ ಚೈತನ್ಯಪ್ರಕಾಶದ ಹರಡುವಿಕೆಯು ಮುಗಿಯಿತು, ಇಲ್ಲಿಂದ ನಾಮರೂಪವು ಮೊದಲಾಗುತ್ತದೆ'– ಎಂದು ಕಲ್ಪಿಸುವದಕ್ಕೆ ಬರುವದಿಲ್ಲ. ಏಕೆಂದರೆ ನಾಮರೂಪಪ್ರಪಂಚವು ಚೈತನ್ಯದ ಬೆಳಕಿನಿಂದ ತೋರುತ್ತಿದೆ ಎಂಬುದಿಷ್ಟೇ ಅಲ್ಲ; ನಾಮರೂಪದೊಳಗೂ ಹೊರಗೂ ನಡುವೆಯೂ, ಮಂಜಿನಗಡ್ಡೆಯಲ್ಲೆಲ್ಲ ನೀರೇ ಇದ್ದುಕೊಂಡಿರುವಂತೆ, ಆತ್ಮಚೈತನ್ಯವೇ ಇದ್ದು ತನಗೆರಡನೆಯದಿಲ್ಲದ್ದಾಗಿ ತಾನೇ ತಾನಾಗಿರುತ್ತದೆ.

**ಇದಿಷ್ಟೂ ಮೊದಲನೆಯ ಋಕ್ಕಿನ ಅಭಿಪ್ರಾಯ**. ಇನ್ನು ಎರಡನೆಯ ಋಕ್ಕಿನ ಅರ್ಥವನ್ನು ಒಳಹೊಕ್ಕು ಪರಿಶೀಲಿಸೋಣ. ಬ್ರಹ್ಮನು ಈ ಪರಮಾತ್ಮ ಸ್ವರೂಪವನ್ನು ಮೊದಲು ತಿಳಿಸಿಕೊಟ್ಟನು; ಇಂದ್ರನು ಇದನ್ನು ಅರಿತುಕೊಂಡು ನಾಲ್ಕು ದಿಕ್ಕುಗಳಲ್ಲಿಯೂ ಹರಡಿದನು. ಪ್ರಜಾಪತಿಬ್ರಹ್ಮನಿಂದ ಈ ಇಡಿಯ ಜಗತ್ತೇ ಸೃಷ್ಟವಾಗಿದೆಯೆಂದಲ್ಲವೆ, ಶ್ರುತಿಸ್ಮೃತಿಗಳು ಹೇಳುತ್ತಿವೆ? ಆ ಬ್ರಹ್ಮನನ್ನು ಪರಮಾತ್ಮನು ಮೊದಲು ಸೃಷ್ಟಿಮಾಡಿ ಅವನಿಗೆ ವೇದಗಳನ್ನು ಮನಸ್ಸಿನಲ್ಲಿ ಹೊಳೆಯುವಂತೆ ಅನುಗ್ರಹಸುತ್ತಾನೆಂದೂ ಆ ಜ್ಞಾನದ ಬಲದಿಂದಲೇ ಅವನೂ ಸೃಷ್ಟಿಯನ್ನು ಮಾಡುತ್ತಾನೆಂದೂ ಶ್ರುತಿಯಿದೆ. ಪುರಾಣದಲ್ಲಿಯೂ ವರ್ಣಿಸಿದೆ. ಆ ಬ್ರಹ್ಮನು ಹೇಗೆ ಈ ಪರಮಾತ್ಮನನ್ನು ಅರಿತುಕೊಂಡನೋ ಹಾಗೆಯೇ ಮಿಕ್ಕವರೂ ಆತನನ್ನು ಅರಿತುಕೊಳ್ಳಬೇಕಾಗಿದೆ. ಒಮ್ಮೆ ದೇವಾಸುರಯುದ್ಧದಲ್ಲಿ ದೇವತೆಗಳಿಗೆ ಪರಮೇಶ್ವರನ ಅನುಗ್ರಹದಿಂದ ಜಯವಾಗಲು, ದೇವತೆಗಳು ತಾವು ತಮ್ಮತಮ್ಮ ಶಕ್ತಿಯಿಂದಲೇ ಗೆದ್ದೆವೆಂದು ಹೆಮ್ಮೆಪಟ್ಟುಕೊಳ್ಳುತ್ತಿದ್ದರಂತೆ, ಆದರೆ ಪರಮಾತ್ಮನು ಅವರ ಮುಂದೆ

ಒಂದು ಅದ್ಭುತಾಕಾರದಿಂದ ತೋರಿಕೊಂಡು ಅವರ ತಪ್ಪುತಿಳಿವಳಿಕೆಯನ್ನು ಕಳೆದುಹಾಕಿದನು. ಪರಮೇಶ್ವರನ ಅನುಗ್ರಹವಿಲ್ಲದೆ ಒಂದು ಸಣ್ಣ ಕಡ್ಡಿಯನ್ನು ಕೂಡ ಸುಡಲಾರೆನೆಂದು ಅಗ್ನಿಯೂ, ಎತ್ತಲಾರೆನೆಂದು ವಾಯುವೂ ಆಗ ತಿಳಿದುಕೊಂಡರಂತೆ. ಉಮಾದೇವಿಯ ಉಪದೇಶದಿಂದ ಪರಮಾತ್ಮನೇ ಎಲ್ಲರಿಗೂ ಆತ್ಮನೆಂದೂ ಸತ್ಯಜ್ಞಾನಾನಂತಸ್ವರೂಪವನಾದ ಆತನ ಅನುಗ್ರಹದಿಂದಲೇ ದೇವತೆಗಳಿಗೆ ಜಯವಾಯಿತೆಂದೂ ಇಂದ್ರನು ತಿಳಿದುಕೊಂಡು ಈ ವಿಷಯವನ್ನು ಮಿಕ್ಕ ದೇವತೆಗಳಿಗೂ ತಿಳಿಯಿಸಿದನೆಂದು ಉಪನಿಷತ್ತಿನಲ್ಲಿ ಒಂದು ಕಥೆಯಿದೆ. ಹೊರಗಣ್ಣಿನಿಂದ ನೋಡುವಾಗ ಎಂಥ ಮಹಾಮಹಿಮರಾದ ದೇವತೆಗಳಿಗೂ ಪರಮಾತ್ಮನ ಜ್ಞಾನವು ಆಗುವದಿಲ್ಲವೆಂತಲೂ ಬಲ್ಲವರ ಉಪದೇಶ ವಿಶೇಷದಿಂದ ಒಳನೋಟದಿಂದ ನೋಡಿದರೆ ತಮ್ಮತಮ್ಮಲ್ಲಿಯೇ ಆತನ ನಿಜವನ್ನು ಅರಿತುಕೊಳ್ಳ ಬಹುದೆಂತಲೂ ಈ ಕಥೆಗಳಿಂದ ಸೂಚಿತವಾಗಿರುತ್ತದೆ.

ಮನುಷ್ಯನಿಗೆ ತಾನು ಎಂದೆಂದಿಗೂ ಅಮರನಾಗಿರಬೇಕೆಂದು ಆಶೆಯಿದೆ. ಆದರೆ ಅಮರರೆನಿಸಿಕೊಂಡಿರುವ ದೇವತೆಗಳಿಗೆಕೂಡ ಮುಖ್ಯವಾದ ಅಮೃತತ್ತ್ವವು ಇರುವದಿಲ್ಲ. ಏಕೆಂದರೆ ಆಯಾ ಕಲ್ಪದಲ್ಲಿ ಮಾತ್ರವೇ ಅವರು ಅಮರ ರಾಗಿದ್ದುಕೊಂಡಿರುತ್ತಾರೆ. ಬ್ರಹ್ಮನು ತನ್ನ ಒಂದು ಕಲ್ಪದವರೆಗೆ ಜ್ಞಾನೈಶ್ವರ್ಯಾದಿ ಗುಣಗಳಿಂದ ಕೂಡಿದ್ದು ಜಗತ್ತನ್ನೆಲ್ಲ ಸೃಷ್ಟಿಸಿ ಆಳುತ್ತಿರುವಲ್ಲಿ ಅವನಿಗೆ ಇಂದ್ರಾದಿದೇವತೆಗಳು ಆ ಕೆಲಸಕ್ಕೆ ಸಹಾಯಕರಾಗಿರುವರು. ದೇವತೆಗಳಿಗೆ ಎಂಥ ಸಿದ್ಧಿಗಳಿರಲಿ, ಎಂಥ ಭೋಗಸಾಮರ್ಥ್ಯವಿರಲಿ, ಅವರಿಗೆ ದೇವತ್ವ ಪ್ರಾಪ್ತಿಮಾತ್ರ ದಿಂದಲೇ ಅಮೃತತ್ವವು ಎಂದಿಗೂ ದೊರೆಯಲಾರದು. ಅವರೂ ಪರಮಾತ್ಮನ ಸ್ವರೂಪವನ್ನು ಇದ್ದದ್ದು ಇದ್ದಂತೆ ಅರಿತುಕೊಳ್ಳಬೇಕು; ಆಗಲೇ ಅವರು ಆ ಪರಮಾತ್ಮನಲ್ಲಿ ಒಂದಾಗಿ ಅಮೃತವಾದ ಸರ್ವಾತ್ಮಭಾವವನ್ನು ಹೊಂದುವರು.

ಇದರಂತೆ ಋಷಿಗಳೂ ಆ ಪರಮಾತ್ಮನನ್ನೇ ಅರಿತುಕೊಂಡು ಅಮೃತತ್ವವನ್ನು ಹೊಂದಿರುವರು. ಆದ್ದರಿಂದ ಈ ಋಕ್ಕಿನಲ್ಲಿ ಋಷಿಯು ಉದ್ಘೋಷಿಸಿರುವದೇ ನೆಂದರೆ ನಾನು ಈ ಮಾರ್ಗದಿಂದಲೇ ಅರಿತುಕೊಂಡು ಅಮೃತನಾಗಿರುತ್ತೇನೆ. ಇಂದ್ರಿಯಗಳ ದೃಷ್ಟಿಯಿಂದ ಹೊರಮುಖರಾಗಿರುವವರೆಗೂ ಎಂದಿಗೂ ನಿಮಗೆ ಮರ್ತ್ಯತ್ವವು ತಪ್ಪಲಾರದು. ಇಂದ್ರಿಯಗಳ ಭೋಗವು ಮರ್ತ್ಯತ್ವಕ್ಕೇ ಎಲ್ಲರನ್ನೂ ಒಯ್ಯುತ್ತಿರುವದು. ಆದ್ದರಿಂದ ನಿಮಗೆ ನಿಜವಾದ ಅಮೃತತ್ವವನ್ನು ಪಡೆದುಕೊಂಡು

ಕೃತಕೃತ್ಯರಾಗಬೇಕೆಂಬ ಅಭಿಲಾಷೆಯಿದ್ದರೆ ಇಂದ್ರಿಯಗಳಿಂದ ಹಿಂತಿರುಗಿರಿ, ಅಂತಃಕರಣದಿಂದಲೂ ಹಿಂತಿರುಗಿರಿ; ಇಂದ್ರಿಯಾಂತಃಕರಣಗಳಿಗೂ ತನ್ನ ಬೆಳಕನ್ನು ಕೊಟ್ಟು ಅನುಗ್ರಹಿಸುತ್ತಿರುವ ಆ ಸಚ್ಚಿದಾನಂದಸ್ವರೂಪನಾದ ಸಾಕ್ಷಿಯನ್ನು ನಿಮ್ಮ ನಿಮ್ಮಲ್ಲಿಯೇ ಒಳನೋಡದ ನೇರಾದ ಅನುಭವದಿಂದ ಕಂಡುಕೊಳ್ಳಿರಿ. ಆಗ ನೀವು ಅಮೃತರಾಗುವಿರಿ. **ಈ ಅಮೃತತ್ವಕ್ಕೆ ಈ ಬಗೆಯ ಬ್ರಹ್ಮವಿದ್ಯೆಯೊಂದಲ್ಲದೆ ಮತ್ತೊಂದು ದಾರಿಯಿಲ್ಲ.**

ವಾಚಕವೃಂದ, ಈ ವಿಶ್ವವು ಸಾಮಾನ್ಯವಾದ ದೃಷ್ಟಿಗೇ ಅದ್ಭುತವಾದ ವಿಚಿತ್ರದೃಶ್ಯಗಳನ್ನು ತೋರ್ಪಡಿಸಿಕೊಳ್ಳುತ್ತಿರುವದು. ಆಕಾಶದಲ್ಲಿ ಕಾಣುವ ಸೂರ್ಯಚಂದ್ರನಕ್ಷತ್ರಾದಿಗಳನ್ನು ಮಾನವನು ವಿಚಾರಮಾಡಿದಂತೆಲ್ಲ ವಿಶ್ವವು ಎಷ್ಟು ಅಮೇಯವಾದ ಸ್ವರೂಪವುಳ್ಳದ್ದು ಎಂಬ ಭಾವನೆಯು ನಿಮ್ಮ ಮನಸ್ಸಿನಲ್ಲಿ ಮೂಡುವದು. ಅಸಂಖ್ಯಾತವಾದ ತಾರಾಗ್ರಹಗಳು ಹೇಗೆ ಸ್ಪಷ್ಟವಾಗಿ, ನಿಯತವಾದ ರೀತಿಯಿಂದ ಬೆಳಗುತ್ತಲೂ ಸಂಚರಿಸುತ್ತಲೂ ಇರುವವು- ಎಂಬುದನ್ನು ತಿಳಿಯುವ ಕುತೂಹಲವು ಹೆಚ್ಚುವದು. ನಿಮ್ಮ ಸುತ್ತಲೂ ಇರುವ ಆಧಿಭೌತಿಕವಾದ ಅಚೇತನವಸ್ತುಗಳೂ ಸ್ಥಾವರಜಂಗಮಾತ್ಮಕವಾದ ಪ್ರಾಣಿಗಳೂ ಚಿತ್ರವಿಚಿತ್ರವಾದ ಸ್ವಭಾವವನ್ನು ತೋರ್ಪಡಿಸುತ್ತಾ ನಿಮ್ಮನ್ನು ಬೆರಗುಮಾಡುವವು. ನಿಮ್ಮೊಳಗೆ ಇಣಿಕಿನೋಡಿದರೆ ಕೂಡ ಇಂದ್ರಿಯಮನಸ್ಸುಗಳ ಅದ್ಭುತವರ್ತನೆಯು ನಿಮಗೆ ಅಗಾಧವಾಗಿ ತೋರುವದು. ಆದರೆ ಪರಮಾತ್ಮಜ್ಞಾನಕ್ಕೆ ಹೋಲಿಸಿದಾಗ ಈ ಇಡಿಯ ವಿಶ್ವದ ಜ್ಞಾನವೂ ಸೂರ್ಯಪ್ರಕಾಶದ ಮುಂದಿನ ದೀಪದ ಹುಳುವಿನಂತೆ ಕಾಣುವದು! ಏಕೆಂದರೆ ಪರಮಾತ್ಮಸ್ವರೂಪವನ್ನು ಇದ್ದದ್ದು ಇದ್ದಂತೆ ಅರಿತುಕೊಂಡಾಗ ನಿಮ್ಮ ಚಿತ್ಸ್ವರೂಪದ ಬೆಳಕು ಎಲ್ಲೆಲ್ಲಿಯೂ ಹರಡಿಕೊಂಡಿರುವದು. ಪ್ರಳಯಕಾಲದಲ್ಲಿ ಮೇರೆದಪ್ಪಿದ ಸಮುದ್ರವು ಎಲ್ಲೆಲ್ಲಿಯೂ ಪ್ರಪಂಚವನ್ನೆಲ್ಲ ಜಲಮಯವಾಗಿ ಮಾಡಿಬಿಡುವಂತೆ ನಿಮ್ಮ ಆನಂದಸಮುದ್ರವೇ ಎಲ್ಲೆಲ್ಲಿಯೂ ತನ್ನ ಅಮೃತಸ್ವರೂಪದ ಅಲೆಗಳನ್ನು ಆಡಿಸುತ್ತಾ ಇದೆ ಎಂಬ ಅದ್ಭುತವಾದ ಘನತತ್ತ್ವವು ನಿಮಗೆ ಅನುಭವಗೋಚರವಾಗುವದು. **ಆಗ ಇರುವದೆಲ್ಲ ಆ ಮಹಾಪುರುಷನೇ; ನಾನು, ನೀನು, ಅವರು-ಎಂಬುದೆಲ್ಲ ಆ ಸಚ್ಚಿದನಂದಸಾಗರದ ಅಲೆಗಳೇ- ಎಂಬುದು ನಿಶ್ಚಿತವಾಗಿಬಿಡುವದು.**

---

★ ಆಗಸ್ಟ್ 1955, ಸಂಪುಟ 24, ಪುಟ 329–334

# 13. ಉತ್ತರನಾರಾಯಣ

## ವಿಶ್ವದಲ್ಲಿ ಪರಮೇಶ್ವರನ ಭಾವನೆಯಿಂದಲೇ ಪರಮಾನಂದವು

★ವೇದೋಕ್ತವಾದ ಪುರುಷಸೂಕ್ತದ ಋಕ್ಕುಗಳ ಅಭಿಪ್ರಾಯವನ್ನು ಈವರೆಗೆ ವರ್ಣಿಸಿ ತಿಳಿಸಿರುತ್ತೇನೆ. ತೈತ್ತಿರೀಯಾರಣ್ಯಕದಲ್ಲಿರುವ ಈ ಭಾಗವನ್ನು ನಾಯಾಯಣಾನುವಾಕವೆಂದು ವೈದಿಕರು ಕರೆಯುತ್ತಾರೆ. ಇದರ ಮುಂದಿನ ಅನುವಾಕಕ್ಕೆ ಉತ್ತರನಾರಾಯಣವೆಂಬ ಹೆಸರು ಬಂದಿರುತ್ತದೆ. ಈಗ ಅದನ್ನೂ ಪುರುಷಸೂಕ್ತವೆಂದೇ ಕರೆಯುವ ರೂಢಿಯಿರುತ್ತದೆ. ಇದು ಈ ಸಂಪುಟದ ಕಡೆಯ ಸಂಚಿಕೆಯಾದ್ದರಿಂದ ಆ ಅನುವಾಕದ ಅರ್ಥದ ಸಾರವನ್ನು ಸಂಗ್ರಹಿಸಿ ಇಲ್ಲಿ ಕೊಡುವೆನು.

**ಅದ್ಭ್ಯಸ್ಸಂಭೂತಃ ಪೃಥಿವ್ಯೈರಸಾಚ್ಚ । ವಿಶ್ವಕರ್ಮಣಃ ಸಮವರ್ತತಾಧಿ । ತಸ್ಯ ತ್ವಷ್ಟಾ ವಿದಧದ್ ರೂಪಮೇತಿ । ತತ್ಪುರುಷಸ್ಯ ವಿಶ್ವಮಾಜಾನಮಗ್ರೇ ॥1॥**

ವಿರಾಟ್‌ಪುರುಷನು ಉದಕದಿಂದಲೂ, ಭೂಸಂಬಂಧವಾದ ಸಾರದಿಂದಲೂ ಹುಟ್ಟಿದನು. ಆ ತರುವಾಯ ಜಗತ್ಕರ್ತನಾದ ಪರಮೇಶ್ವರನ ಮೂಲಕ ಹೆಚ್ಚಾಗಿ ಬೆಳೆಯಿತು. ಆ ವಿರಾಟ್‌ಪುರುಷನ ಹದಿನಾಲ್ಕು ಲೋಕರೂಪವಾದ ಅವಯವ ಸನ್ನಿವೇಶವನ್ನು ನಾನಾ ರೂಪವಾಗಿ ರಚಿಸುವ ವಿಶ್ವಕರ್ಮನಾದ ಪರಮೇಶ್ವರನು ಸೃಷ್ಟ್ಯಾದಿ ಕಾರ್ಯದಲ್ಲಿ ತೊಡಗುತ್ತಾನೆ. ವಿರಾಟ್‌ಪುರುಷ ಸಂಬಂಧವಾಧ ದೇವ ಮನುಷ್ಯಾದಿರೂಪವಾದ ಜಗತ್ತೆಲ್ಲ ಸೃಷ್ಟ್ಯಾದಿಯಲ್ಲಿ ಎಲ್ಲೆಲ್ಲಿಯೂ ಉತ್ಪನ್ನವಾಯಿತು.

**ವೇದಾಹಮೇತಂ ಪುರುಷಂ ಮಹಾನ್ತಮ್ । ಆದಿತ್ಯವರ್ಣಂ ತಮಸಃ ಪರಸ್ತಾತ್। ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪಂಥಾ ವಿದ್ಯತೇಯನಾಯ ॥2॥**

ನಾನು ಈ ಪುರುಷನನ್ನು ಮಹಾಮಹಿಮನೆಂತಲೂ, ಸೂರ್ಯನಂತೆ ಬೆಳಗುವ ಪ್ರಕಾಶಭರಿತನೆಂತಲೂ, ಅವಿವೇಕ ಅಥವಾ ಅಜ್ಞಾನವೆಂಬ ಅಂಧಕಾರಕ್ಕೆ ಹೊರಗಾದವನೆಂತಲೂ ತಿಳಿಯುತ್ತೇನೆ. ಆತನನ್ನು ಈ ಪ್ರಕಾರವಾಗಿ ಅರಿತವನು

ಈ ಜನ್ಮದಲ್ಲಿಯೇ ಮರಣ ರಹಿತನು ಆಗುತ್ತಾನೆ. ಮೋಕ್ಷಕ್ಕೆ ಮತ್ತೊಂದು ಮಾರ್ಗವು ಇರುವದಿಲ್ಲ.

**ಪ್ರಜಾಪತಿಶ್ಚರತಿ ಗರ್ಭೇ ಅಂತಃ । ಅಜಾಯಮಾನೋ ಬಹುಧಾ ವಿಜಾಯತೇ।**

**ತಸ್ಯ ಧೀರಾಃ ಪರಿಜಾನಂತಿ ಯೋನಿಮ್ । ಮರೀಚೀನಾಂ ಪದಮಿಚ್ಛಂತಿ ವೇಧಸಃ ॥3॥**

ಬ್ರಹ್ಮನು ಬ್ರಹ್ಮಾಂಡಾತ್ಮಕವಾದ ಗರ್ಭದಲ್ಲಿ ನಡುವೆ ಸಂಚರಿಸುತ್ತಾನೆ. ಈತನು ಜನ್ಮರಹಿತನಾಗಿದ್ದರೂ ನಾನಾ ಪ್ರಕಾರವಾಗಿ ಜನ್ಮವನ್ನು ತಳೆಯುತ್ತಾನೆ. ವಿವೇಕಿಗಳು ಆತನ ಜಗತ್ಕಾರಣ ಸ್ವರೂಪವನ್ನು ಚೆನ್ನಾಗಿ ಅರಿತಿರುವರು, ಚತುರ್ಮುಖನ ಸೃಷ್ಟಿಗೆ ಒತ್ತಾಸೆ ಮಾಡುವ ಮರೀಚಿಯೇ ಮುಂತಾದವರು ಪ್ರಜಾಪತಿಗಳೆನಿಸಿದವರು. ತಮಗಿಂತ ಮೊದಲು ಸೃಷ್ಟಿಕಾರ್ಯವನ್ನು ನಿರ್ವಹಿಸಿದ ನವಬ್ರಹ್ಮರ ಸ್ಥಾನವನ್ನು ಬಯಸುತ್ತಾರೆ.

**ಯೋ ದೇವೇಭ್ಯ ಆತಪತಿ । ಯೋ ದೇವಾನಾಂ ಪುರೋಹಿತಃ । ಪೂರ್ವೋ**

**ಯೋ ದೇವೇಭ್ಯೋ ಜಾತಃ । ನಮೋ ರುಚಾಯ ಬ್ರಾಹ್ಮಯೇ ॥4॥**

ಯಾವ ಪರಮೇಶ್ವರನು ದೇವತೆಗಳಿಗಾಗಿ ಎಲ್ಲೆಲ್ಲಿಯೂ ಬೆಳಗುತ್ತಿರುವನೋ, ಯಾವಾತನು ದೇವತೆಗಳಿಗೆ ಬೃಹಸ್ಪತಿರೂಪದಿಂದ ಸಕಲಕರ್ಮನಿರ್ವಾಹಕನಾಗಿರುವನೋ, ಯಾವಾತನು ದೇವತೆಗಳಿಗಿಂತಲೂ ಮೊದಲಿಗನಾಗಿ ಕಾಣಿಸಿಕೊಂಡನೋ ಅಂತಹ ಸ್ವಯಂಪ್ರಕಾಶಭರಿತವಾದ ವೇದಪ್ರತಿಪಾದ್ಯವಾದ ಪರಬ್ರಹ್ಮ ಸ್ವರೂಪಕ್ಕೆ ನಮಸ್ಕಾರ.

**ರುಚಂ ಬ್ರಾಹ್ಮಂ ಜನಯಂತಃ । ದೇವಾ ಅಗ್ರೇ ತದಬ್ರುವನ್ । ಯಸ್ತ್ವೈವಂ**

**ಬ್ರಾಹ್ಮಣೋ ವಿದ್ಯಾತ್ । ತಸ್ಯ ದೇವಾ ಅಸನ್‌ವಶೇ ॥5॥**

ದೇವತೆಗಳು ಸೃಷ್ಟಿಯ ಆದಿಯಲ್ಲಿ ಬ್ರಹ್ಮವಿದ್ಯಾಸಂಪ್ರದಾಯ ಪ್ರವರ್ತನ ಕಾಲದಲ್ಲಿ ಪರಬ್ರಹ್ಮಸಂಬಂಧವಾದ ಚೈತನ್ಯವನ್ನು ವಿದ್ಯೆಯ ಮೂಲಕ ಪ್ರಾದುರ್ಭಾವಗೊಳಿಸತಕ್ಕವರಾಗಿ ಆ ಬ್ರಹ್ಮತತ್ತ್ವವನ್ನು ಸಂಬೋಧಿಸಿ, ಈ ಮುಂದಣವಾಕ್ಯವನ್ನು ಹೇಳಿದರು. ಎಲೆ ಪರಮಾತ್ಮನೆ, ಯಾವ ಬ್ರಹ್ಮಜ್ಞಾನಾಮೃತಪಿಪಾಸೆಯುಳ್ಳ ಮನುಷ್ಯನು,

ಹಿಂದೆ ಹೇಳಿದಮೇರೆಗೆ ನಿನ್ನ ವಾಸ್ತವಸ್ವರೂಪವನ್ನು ತಿಳಿಯು ತ್ತಾನೆಯೋ ಅಂತಹ ಬ್ರಹ್ಮವೇತ್ತನಿಗೆ ಸಕಲದೇವತೆಗಳೂ ಅಧೀನರಾಗುತ್ತಾರೆ.

ಈ ಅನುವಾಕವನ್ನು ಆದಿತ್ಯೋಪಸ್ಥಾನಕ್ಕೆ ಆಪಸ್ತಂಬರು ವಿನಿಯೋಗಿಸಿರು ತ್ತಾರೆ. ಆದಿತ್ಯನೇ ನಮಗೆ ಪ್ರಸಿದ್ಧವಾಗಿರುವ ತೇಜಸ್ಸುಗಳಲ್ಲೆಲ್ಲ ಅತ್ಯಂತ ತೇಜೋಮಯನಾಗಿರುವವನು. ಆದಿತ್ಯನ ಮೂಲಕವಾಗಿಯೇ ಹಿರಣ್ಯಗರ್ಭನ ಪ್ರಾಪ್ತಿಯಾಗುವದೆಂದು ಶಾಸ್ತ್ರಪ್ರಸಿದ್ಧಿ. ಪರಮಾತ್ಮನೂ ಆದಿತ್ಯನಂತೆಯೇ ಜ್ಯೋತಿಗಳಿಗೆಲ್ಲ ಜ್ಯೋತಿಯಾಗಿರುವ ಚೈತನ್ಯಪ್ರಕಾಶನು. ಈ ಕಾರಣದಿಂದ ಇದರಲ್ಲಿ ಪರಮಾತ್ಮ ಸ್ವರೂಪವನ್ನು ಪ್ರಶಂಸಿಸಿರುವದು ಯೋಗ್ಯವೇ ಆಗಿದೆ.

ಈ ವಿರಾಟ್ಪುರುಷನೆಂಬ ಪ್ರಜಾಪತಿಯು ಬ್ರಹ್ಮಾಂಡದಲ್ಲೆಲ್ಲ ಇದ್ದು ಕೊಂಡಿರುವನು. ನಿಜವಾಗಿ ನೋಡಿದರೆ ಅವನ ವಾಸ್ತವರೂಪವು ಪರಮಾತ್ಮನೇ. ಪರಮಾತ್ಮನಿಗೆ ಜನ್ಮಾದಿವಿಕಾರಗಳು ಯಾವವೂ ಇರುವದೇ ಇಲ್ಲ. ಆದರೂ ಆತನೇ ಈ ಸ್ಥಾವರಜಂಗಮ ರೂಪವಾದ ವಿವಿಧಪ್ರಾಣಿಗಳ ರೂಪದಿಂದ ಮಾಯೆಯಿಂದ ಹುಟ್ಟಿ ತೋರಿಕೊಳ್ಳುತ್ತಿರುವನು. ಪ್ರಜಾಪತಿಗೂ ಕಾರಣನಾಗಿರುವ ಆ ಪರಮಕಾರಣನಾದ ಪರಮಾತ್ಮನನ್ನು ಅಧ್ಯಾತ್ಮಯೋಗವನ್ನು ಮಾಡಿದ ಧೀರರಾದ ಮಹಾತ್ಮರು ಮಾತ್ರ ಸರಿಯಾಗಿ ಬಲ್ಲರು. ಇಂದ್ರಿಯಗಳನ್ನು ಮನಸ್ಸಿನಲ್ಲಿಯೂ ಮನಸ್ಸನ್ನು ಅದಕ್ಕೂ ಸಾಕ್ಷಿಯಾದ ಆತ್ಮನಲ್ಲಿಯೂ ಲಯಮಾಡಿಕೊಳ್ಳವದೇ ಅಧ್ಯಾತ್ಮಯೋಗವು. ಅದನ್ನು ಅಳವಡಿಸಿಕೊಂಡವರು ಮಾತ್ರವೇ ಆ ಪರಮಾತ್ಮನನ್ನು ಅರಿತುಕೊಂಡು ಅಮೃತರಾಗುವರು. ಬ್ರಹ್ಮಾದಿಗಳು ಕೂಡ ಆ ಪರಮಾತ್ಮಸ್ವರೂಪವನ್ನು ಅರಿತು ಉಪಾಸನೆಮಾಡಿಯೇ ಜಗತ್ತನ್ನು ಸೃಷ್ಟಿಸುವ ಶಕ್ತಿಯನ್ನು ಪಡೆದುಕೊಳ್ಳುವರು. ಮರೀಚಿ, ಅತ್ರಿ, ಪುಲಹ– ಮುಂತಾದ ಮಹರ್ಷಿಗಳು ಸೃಷ್ಟಿಕರ್ತಗಳಾದದ್ದು ಹೀಗೆಯೇ. ಆ ಪರಮಾತ್ಮನನ್ನು ಯಾರುಯಾರು ಅರಿತುಕೊಂಡರೆ ಅವರವರು ಸರ್ವಾತ್ಮಭಾವವನ್ನು ಹೊಂದುವರು.

ಆ ಪರಮೇಶ್ವರನೇ ದೇವತೆಗಳಿಗೆ ದೇವತ್ವವನ್ನು ಅನುಗ್ರಹಿಸಿರುವಾತನು. ದೇವತೆಗಳೆಂದರೆ ಪ್ರಕಾಶರೂಪರಾದವರು. ಇಂದ್ರ, ಅಗ್ನಿ–ಮುಂತಾದ ದೇವತೆಗಳ ಹೃದಯದಲ್ಲಿದ್ದುಕೊಂಡು ಅವರ ಆತ್ಮಚೈತನ್ಯರೂಪದಿಂದ ಆ ಪರಮಾತ್ಮನು– ಸೂರ್ಯನು ಈ ಲೋಕಕ್ಕೇ ಹೇಗೆ ತನ್ನ ಪ್ರಕಾಶದಿಂದ ವಸ್ತುಗಳನ್ನು ತೋರಿಸಿಕೊಟ್ಟು ಅನುಗ್ರಹಿಸುತ್ತಿರುವನೋ ಹಾಗೆ–ನಿತ್ಯವಾಗಿ ಬೆಳಗುತ್ತಿರುವದ

ರಿಂದಲೇ ಆ ದೇವತೆಗಳಿಗೆ ಶರೀರದಲ್ಲಿ ಅಪ್ರತಿಮವಾದ ಪ್ರಕಾಶವಿರುವದು; ಇಂದ್ರಿಯಗಳಲ್ಲಿಯೂ ಮನಸ್ಸಿನಲ್ಲಿಯೂ ಅಪ್ರತಿಮವಾದ ವಿಷಯಜ್ಞಾನವಿರುವದು. ಆ ದೇವತ್ವದಿಂದಲೇ ಅವರು ಅಣಿಮಾದಿ ಸಿದ್ಧಿಗಳುಳ್ಳವರಾಗಿ ಕಾಮರೂಪರಾಗಿ ಕಾಮಭೋಗಿಗಳಾಗಿ ಸಂಚರಿಸುತ್ತಿರುವರು; ಮನುಷ್ಯರಿಗೂ ಅನುಗ್ರಹವನ್ನು ಮಾಡುವ ಸಾಮರ್ಥ್ಯವನ್ನು ಪಡೆದುಕೊಂಡಿರುವರು. ಮನುಷ್ಯರಲ್ಲಿರುವ ಅಂತಃಕರಣ ಬಹಿಃಕರಣಗಳಿಗೂ ಆ ದೇವತೆಗಳ ಅನುಗ್ರಹವೇ ವಿಷಯಪ್ರಕಾಶನಶಕ್ತಿಯನ್ನು ಕೊಡುತ್ತಿರುತ್ತದೆ. ಹೀಗೆ ದೇವತೆಗಳಿಗೂ ಅವರ ಮೂಲಕ ಮಿಕ್ಕವರಿಗೂ ಎಲ್ಲಾ ಬಗೆಯ ತೇಜಸ್ಸನ್ನೂ ಜ್ಞಾನದ ಬೆಳಕನ್ನೂ ಅನುಗ್ರಹಿಸುತ್ತಾ ಎಂದೆಂದಿಗೂ ಪ್ರಕಾಶಿಸುತ್ತಿರುವ ಚೈತನ್ಯ ಸೂರ್ಯನು, ಆ ಪರಮಾತ್ಮನು. ಆತನೇ ದೇವತೆಗಳಿಗೂ ಪುರೋಹಿತನಾದ ಬೃಹಸ್ಪತಿ ಎಂಬ ವಿಭೂತಿ ವಿಶೇಷದಿಂದ ಅನುಗ್ರಹಿಸುತ್ತಿರುವವನು. ಬೃಹಸ್ಪತಿಯು ಸರ್ವಜ್ಞಕಲ್ಪನಾಗಿ ದೇವತೆಗಳಿಗೆ ಆಗಾಗ್ಗೆ ಬೇಕಾದ ಸೂಚನೆಗಳನ್ನು ಕೊಡುತ್ತಿರುವನಷ್ಟೆ; ಅವನ ಜ್ಞಾನಶಕ್ತಿಯೆಲ್ಲವೂ ಆ ಪರಮಾತ್ಮನದೇ.

ದೇವತೆಗಳು, ಋಷಿಗಳು– ಎಲ್ಲರಿಗೂ ಆ ಪರಮಾತ್ಮನೇ ಆದಿಯು. ಆ ಪರಮಾತ್ಮನಿಗೆ ಇಂಥದ್ದು ಆದಿ, ಇಂಥದ್ದು ಮಧ್ಯ, ಇಂಥದ್ದು ಅಂತ– ಎಂಬುದನ್ನು ದೇವತೆಗಳಾಗಲಿ ಋಷಿಗಳಾಗಲಿ ಅರಿಯರು. ಅವರ ಅರಿವೆಲ್ಲ ಆ ಪರಮಾತ್ಮನಿಂದ ಎರವಲಾಗಿ ಬಂದದ್ದು ಆತನ ಜ್ಞಾನವು ಆದ್ಯಂತಮಧ್ಯಗಳಿಲ್ಲದ್ದು; ಏಕೆಂದರೆ ಅದು ಆತನ ಸ್ವರೂಪವೇ ಆಗಿರುತ್ತದೆ. ಆತನೇ ದೇವತೆಗಳಿಗಿಂತ ಮುಂಚೆ ಹುಟ್ಟುವ ಹಿರಣ್ಯಗರ್ಭನಾಗಿ ತೋರಿಕೊಳ್ಳುವಾತನು. ಆ ಪರಬ್ರಹ್ಮಸ್ವರೂಪವಾದ ಜ್ಞಾನಪ್ರಕಾಶಕ್ಕೆ ನಮಸ್ಕಾರ !

ದೇವತೆಗಳು ಪರಮಾತ್ಮನ ಚೈತನ್ಯಪ್ರಕಾಶದ ಅನುಗ್ರಹಿದಿಂದಲೇ ಈ ಜಗತ್ತನ್ನು ಸೃಷ್ಟಿಮಾಡಿರುವರಷ್ಟೆ. ಅವರು ಸೃಷ್ಟಿಕಾಲಕ್ಕೆ ಬ್ರಹ್ಮವಿದ್ಯೆಯ ಪ್ರವರ್ತಕರಾಗಿ ತಮ್ಮ ಒಳಗೆ ತುಂಬಿರುವ ಆ ಬ್ರಹ್ಮತೇಜಸ್ಸಿನಿಂದ ಹೊರಗೂ ಬ್ರಹ್ಮವರ್ಚಸ್ಸಿನ ಕಿರಣಗಳನ್ನು ಹರಡುತ್ತಾ ಇಂತೆಂದರಂತೆ : "ಹೇ ದೇವ, ಯಾವನು ನಿನ್ನನ್ನು ಹೀಗೆಂದು ಅರಿತುಕೊಳ್ಳುವನೋ ಅವನೇ ಬ್ರಾಹ್ಮಣನು; ಅವನಿಗೆ ನಾವು ವಶರು". ಯಾವನು ಆ ಪರಮಾತ್ಮನನ್ನು ಹೀಗೆ ನಿತ್ಯವೂ ಸ್ವಯಂಪ್ರಕಾಶವೂ ಸರ್ವದೇವಾನುಗ್ರಾಹಕವೂ ಆಗಿರುವ ಚೈತನ್ಯತೇಜೋಮಯನೆಂದು ಅರಿತುಕೊಳ್ಳುತ್ತಾನೋ, ಅವನೇ ಬ್ರಾಹ್ಮಣನು, ಪರಮಾತ್ಮನಿಗಿಂತ ಮತ್ತೊಂದು ದೊಡ್ಡದಿಲ್ಲವಾದ್ದರಿಂದ ಅದೇ ಬ್ರಹ್ಮವು; ಅದನ್ನು

ಇದ್ದದ್ದು ಇದ್ದಂತೆ ಅನುಭವದಲ್ಲಿ ಕಂಡುಕೊಂಡಿರುವವನೇ ಬ್ರಾಹ್ಮಣನು. ಆ ಬ್ರಾಹ್ಮಣನಿಗೆ ದೇವತೆಗಳು ಅಧೀನರಾಗಿರುತ್ತಾರೆ. ಏಕೆಂದರೆ ಅವನೇ ಆ ದೇವತೆಗಳಿಗೆಲ್ಲ ಆತ್ಮನಾಗಿರುತ್ತಾನೆ. ಅವನ ಜ್ಞಾನಪ್ರಕಾಶದಿಂದಲೇ ಅವರು ಬೆಳಗುತ್ತಾ ಬ್ರಹ್ಮವರ್ಚಸಿಗಳಾಗಿರುತ್ತಾರೆ. ಆದ್ದರಿಂದ ದೇವತೆಗಳು ಮಿಕ್ಕವರಿಗೆ ನಿಗ್ರಹಾನುಗ್ರಹವನ್ನು ಮಾಡಬಲ್ಲ ಸಮರ್ಥರಾಗಿದ್ದರೂ ಆ ಪರಮಾತ್ಮನನ್ನು ಅರಿತಿರುವ ಮಹಾತ್ಮನಿಗೆ ವಶರಾಗಿಯೇ ವರ್ತಿಸುತ್ತಿರುತ್ತಾರೆ.

ಉತ್ತರನಾರಾಯಣದ ಅಭಿಪ್ರಾಯವನ್ನು ಮೇಲೆ ಸ್ವಲ್ಪದರಲ್ಲಿಯೇ ಕೊಟ್ಟಿರುತ್ತದೆ. ಋಗ್ವೇದದಲ್ಲಿ ಬೀಜರೂಪದಿಂದಿರುವ ಅಧ್ಯಾತ್ಮವಿದ್ಯೆಯನ್ನೇ ಉಪನಿಷತ್ತುಗಳು ವಿಸ್ತಾರವಾಗಿ ಪ್ರತಿಪಾದಿಸುತ್ತವೆಯೆಂಬುದೂ ಇತಿಹಾಸ ಪುರಾಣಗಳಲ್ಲಿ ಅದನ್ನೇ ವಿವರಿಸಿದೆಯೆಂಬುದೂ ಈವರೆಗೆ ಬರೆದಿರುವ ಸಂದೇಶಗಳಿಂದ ವಾಚಕರಿಗೆ ಒಂದಿಷ್ಟಾದರೂ ಮನಸ್ಸಿಗೆ ಬಂದಿದ್ದರೆ ನಾನು ಧನ್ಯನು. ಅಧ್ಯಾತ್ಮವಿದ್ಯೆ ಎಂಬುದೊಂದು ದೊಡ್ಡ ಆಲದಮರವಿದ್ದಂತೆ, ವೇದದಲ್ಲಿ ಇದರ ಬೀಜಾವಾಪವನ್ನು ಮಾಡಿದೆ. ಇದು ಉಪನಿಷತ್ತುಗಳಲ್ಲಿ ಮೊಳೆತು ಬೆಳೆದು ಮಹಾವೃಕ್ಷವಾಗಿ ಪರಿಣಮಿಸಿರುತ್ತದೆ. ಭಗವದ್ಗೀತೆಯಲ್ಲಿಯೂ ಪುರಾಣಗಳಲ್ಲಿಯೂ ಆ ಮರಕ್ಕೆ ಹೆಚ್ಚು ಹೆಚ್ಚು ಬಿಳಿಲುಗಳು ಬಿಟ್ಟುಕೊಂಡಿರುತ್ತವೆ. ಈ ವಿದ್ಯೆಯನ್ನು ಅನುಭವದಲ್ಲಿ ಕಂಡುಕೊಂಡ ಋಷಿಗಳೂ ಸಾಧುಗಳೂ ಸಂನ್ಯಾಸಿಗಳೂ ಅವಿಚ್ಛಿನ್ನಸಂಪ್ರಾದಾಯದಿಂದ ಒಬ್ಬರಿಗೊಬ್ಬರು ಈ ವಿದ್ಯೆಯನ್ನು ಉಪದೇಶಿಸುತ್ತಾ ಜನರಲ್ಲಿ ಪ್ರಸಾರ ಮಾಡುತ್ತಾ ಬಂದಿರುತ್ತಾರೆ. ಬಾಹ್ಯಕಾರಣಗಳಿಂದಲೂ ಸಾಧಕರ ಮನೋವೃತ್ತಿಯ ಮಾರ್ಪಾಡಿನ ಕಾರಣದಿಂದಲೂ ಆಗಾಗ್ಗೆ ಈ ಸಂಪ್ರದಾಯವು ಅಲ್ಪಸ್ವಲ್ಪ ಖಿಲವಾಗಿರಬಹುದು. ಆದರೆ ಪರಮಾತ್ಮನ ಸ್ವರೂಪವು ಹೇಗೆ ಅಮೃತವೋ, ಹಾಗೆಯೇ ಆತನ ವಿಭೂತಿವಿಶೇಷವಾದ ಈ ಅಧ್ಯಾತ್ಮವಿದ್ಯೆಯೂ ಅಮೃತವೇ ಆಗಿರುತ್ತದೆ. ಅದು ಸಂಪೂರ್ಣವಾಗಿ ಅಳಿಯುವ ಸಂಭವವೇ ಇಲ್ಲ. ಏಕೆಂದರೆ ಅದರಿಂದಲೇ ಪರಮಾತ್ಮನು ಜಗತ್ತಿನ ಸ್ಥಿತಿಯನ್ನು ಪರಿಪಾಲನೆಮಾಡುತ್ತಾನೆ.

ಈ ವಿದ್ಯೆಯ ಸಾರವು ಯಾವದು? ಈ ವಿದ್ಯೆಯೆಲ್ಲವೂ ಆ ಪರಬ್ರಹ್ಮನ ವಿಗ್ರಹವೇ; ಇದೆಲ್ಲವೂ ಆತನಲ್ಲಿ ಓತಪ್ರೋತವಾಗಿರುತ್ತದೆ. ಆತನ ನಿಜವಾದ ಸ್ವರೂಪವು ಈ ವಿಶ್ವವನ್ನೂ ಮೀರಿದ, ಮನೋವಾಕ್ಕುಗಳಿಗೆ ನಿಲುಕದ, ನಿರ್ವಿಶೇಷರೂಪವಾಗಿದ್ದರೂ ಮನುಷ್ಯನ ಮೈಯೊಳಗೆಲ್ಲ ರಕ್ತದ ಬಿಸಿಯೇ ವ್ಯಾಪಿಸಿಕೊಂಡು ಅವನ ಚಲನ ವಲನಗಳಿಗೆಲ್ಲ ಕಾರಣವಾಗಿರುವಂತೆ ವಿಶ್ವದಲ್ಲಾಗುವ

ಸಕಲವ್ಯಾಪಾರಗಳಿಗೂ ಆತನೇ ಕಾರಣನಾಗಿರುವದರಿಂದ ಆತನು ನಮಗೆ ದೂರದಲ್ಲಿಲ್ಲ. ವಿಶೇಷವಾಗಿ ಮಾನವನು ಮೂಲದಲ್ಲಿ ಈ ಪರಮೇಶ್ವರನೇ ತಾನೆಂಬ ಅರಿವನ್ನು ಸಂಪಾದಿಸಿಕೊಳ್ಳುವದಕ್ಕೆ ಅರ್ಹನಾಗಿರುತ್ತಾನೆ. ಮನುಷ್ಯರೆಲ್ಲರೂ ಆ ಪರಮೇಶ್ವರಸೂರ್ಯನ ಕಿರಣಗಳೇ ಎಂಬುದನ್ನು ಎಲ್ಲರೂ ಪರಸ್ಪರ ಸಹಕಾರದಿಂದ ಅರಿತುಕೊಳ್ಳುವದೇ ಮಾನವ ಸಂಸ್ಕೃತಿಯ ಹೆಗ್ಗುರಿ. ವಿಶ್ವವೆಲ್ಲವೂ ಆ ಪರಮಾತ್ಮನ ಬಾಹ್ಯವಿಗ್ರಹವೆಂದು ಪೂಜ್ಯಬುದ್ಧಿಯಿಂದ ಆರಾಧಿಸುವದೇ ಮಾನಜೀವನದ ಜೀವಾಳ.

ಉತ್ತರನಾರಾಯಣದ ಕೊನೆಯಲ್ಲಿ ಯಜುಸ್ಸಿನ ರೂಪದ ಒಂದು ಮಂತ್ರವಿದೆ. ಅದು ಪರಮಾತ್ಮನ ಸ್ತೋತ್ರರೂಪವಾಗಿರುತ್ತದೆ; ಪರಮಾತ್ಮನ ವಿಶ್ವಾಕಾರದ ನೆನಪನ್ನು ಕೊಡುವದಕ್ಕೆ ತಕ್ಕದ್ದಾಗಿದೆ. ಆದ್ದರಿಂದ ಆ ಮಂತ್ರದ ಅಭಿಪ್ರಾಯವನ್ನು ಇಲ್ಲಿ ಕೊಡುವೆನು :

**ಹ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ । ಅಹೋರಾತ್ರೇ ಪಾರ್ಶ್ವೇ । ನಕ್ಷತ್ರಾಣಿ ರೂಪಮ್। ಅಶ್ವಿನೌ ವ್ಯಾತ್ತಮ್ । ಇಷ್ಟಂ ಮನಿಷಾಣ । ಅಮುಂ ಮನಿಷಾಣ । ಸರ್ವಂ ಮನಿಷಾಣ ॥6॥**

**ಪರಮಾತ್ಮನೇ, ಹ್ರೀ, ಲಕ್ಷ್ಮಿ – ಇವರಿಬ್ಬರೂ ನಿನ್ನ ಪತ್ನಿಯರು. ಹಗಲುರಾತ್ರೆಗಳು ಪಾರ್ಶ್ವಗಳು; ನಕ್ಷತ್ರಗಳು ರೂಪವು; ಅಶ್ವಿನೀದೇವತೆಗಳು ವ್ಯಾತ್ತವು. ಇಷ್ಟಕ್ಕೆ ಅನುಮತಿ ಕೊಡು! ಅದಕ್ಕೂ ಅನುಮತಿ ಕೊಡು! ಸರ್ವಕ್ಕೂ ಅನುಮತಿ ಕೊಡು!**

ಪರಮಾತ್ಮನಿಗೆ ಲಜ್ಜಾದೇವತೆ, ಲಕ್ಷ್ಮೀದೇವತೆ– ಎಂಬ ಇಬ್ಬರು ಪತ್ನಿಯರಿರುವರು. ಯಾವನಿಗೆ ಬೇಕಾದಷ್ಟು ಧನಸಂಪತ್ತು, ವಿದ್ಯಾಸಂಪತ್ತು, ಕೀರ್ತಿಸಂಪತ್ತು, ಬ್ರಹ್ಮವರ್ಚಸ್ಸಿನ ಸಂಪತ್ತು, ಪುತ್ರಪೌತ್ರಾದಿಗಳ ಸಂಪತ್ತು, ಬಂಧುಬಾಂಧವರ ಸಂಪತ್ತು, ಅಧಿಕಾರಸಂಪತ್ತು ಶರೀರದ ಆಯುಸ್ಸು, ಆರೋಗ್ಯ, ಬುದ್ಧಿ ಮುಂತಾದವುಗಳ ಸಂಪತ್ತು– ಇಂಥವುಗಳೆಲ್ಲವೂ ಒದಗಿಬಂದಿರುವವೋ ಆದರೂ ಯಾವನು ಇವುಗಳಿಂದ ಮತ್ತನಾಗದೆ ವಿನಯದಿಂದಲೂ ಗುರುಹಿರಿಯರಲ್ಲಿ ಶ್ರದ್ಧೆಯಿಂದಲೂ ಬಂಧುಬಾಂಧವರಲ್ಲಿ ಪ್ರೇಮದಿಂದಲೂ ಜನ ಸಾಮಾನ್ಯದಲ್ಲಿ ಮೈತ್ರೀಕರುಣೆಗಳಿಂದಲೂ ಪೂರಿತನಾಗಿರುವನೋ ಅವನಿಗೆ

ಪರಮಾತ್ಮನ ಪತ್ನಿಯರಂತಿರುವ ಹ್ರೀಲಕ್ಷ್ಮೀದೇವತೆಗಳ ನಿಜವಾದ ಅನುಗ್ರಹವಾಗಿರುತ್ತದೆ ಎಂದು ತಿಳಿಯಬೇಕು.

ಆ ಪರಮಾತ್ಮನಿಗೆ ಹಗಲುರಾತ್ರಿಗಳು ಎಡಬಲ ರೆಕ್ಕೆಗಳಂತೆ; ನಕ್ಷತ್ರಗಳು ಶರೀರದಂತೆ ಇರುವವು. ಆ ಪರಮಾತ್ಮನು ತೇಜೋಮಯನಾಗಿದ್ದು ಕಾಲರೂಪದಿಂದ ಜಗಚ್ಚಕ್ರವನ್ನು ಪರಿಭ್ರಮಣಮಾಡಿಸುತ್ತಿರುವನು. ಅಶ್ವಿನೀದೇವತೆಗಳು ಅವನ ತೆರೆದ ಬಾಯಿಯಂತಿರುವರು. ಆತನು ಅವರ ಮೂಲಕ ಲೋಕದ ಯೋಗ್ಯವಾದ ಸುಸ್ಥಿತಿಯನ್ನು ಏರ್ಪಡಿಸುತ್ತಿರುವನು. ಇಲ್ಲಿ ಹೇಳಿರುವದು ಉಪಲಕ್ಷಣವು. ಇಡಿಯ ಬ್ರಹ್ಮಾಂಡವೇ ಆ ಪರಮಾತ್ಮನಿಗೆ ದೇಹವು. ವ್ಯವಹಾರದಲ್ಲಿ ಒಬ್ಬನ ಶರೀರವನ್ನು ಕಂಡು ಅವನ ಯೋಗ್ಯತೆಗೆ ಅದನ್ನು ಸಂಕೇತವಾಗಿ ಇಟ್ಟುಕೊಳ್ಳುವಂತೆ, ಈ ಬ್ರಹ್ಮಾಂಡವನ್ನೇ ನಾವು ನೆಪವಾಗಿಟ್ಟುಕೊಂಡು ಆ ಪರಮಾತ್ಮನ ನಿಜವನ್ನು ಕಂಡುಕೊಳ್ಳುವವರೆಗೂ ಭಕ್ತಿಶ್ರದ್ಧೆಗಳಿಂದ ಆರಾಧಿಸಬೇಕು.

**"ಅಗ್ನಿಯು ಮೂರ್ಧವು, ಚಂದ್ರಸೂರ್ಯರು ಕಣ್ಣುಗಳು, ದಿಕ್ಕುಗಳು, ಶ್ರೋತ್ರಗಳು, ವಿವರವಾದ ವೇದಗಳು ವಾಕ್ಕು, ವಾಯುವು ಪ್ರಾಣನು, ವಿಶ್ವವು ಈತನ ಹೃದಯವು, ಪೃಥಿವಿಯು ಪಾದಗಳು. ಹೀಗೆ ಈತನು ಸರ್ವಭೂತಾಂತರಾತ್ಮನು"**

**(ಮುಂ. 3–14)**

**"ಯಾವನಿಗೆ ಅಗ್ನಿಯೇ ಮುಖ್ಯವೋ, ದ್ಯುಲೋಕವು ತಲೆಯೋ, ಆಕಾಶವು ಹೊಕ್ಕುಳೋ, ಭೂಮಿಯು ಕಾಲುಗಳೋ, ಸೂರ್ಯನು ಕಣ್ಣೋ, ದಿಕ್ಕುಗಳು ಕಿವಿಯೋ, ಅಂಥ ಲೋಕಾತ್ಮನಿಗೆ ನಮಸ್ಕಾರ !"**

**(ಮುಂ.ಧ. 47–68)**

ಪರಮಾತ್ಮನ ವಿಶ್ವರೂಪವನ್ನು ಹೀಗೆ ವರ್ಣಿಸಿರುವ ಸಂದರ್ಭಗಳು ಪುರಾಣೇತಿಹಾಸಗಳಲ್ಲಿ ಹೇರಳವಾಗಿ ಕಂಡುಬರುತ್ತಿವೆ. ಇವುಗಳಲ್ಲಿ ಪರಮಾತ್ಮನ ಇಂಥಿಂಥ ಅವಯವವು ವಿಶ್ವದ ಇಂಥಿಂಥ ಭಾಗವು– ಎಂಬುದೇನೂ ವಿವಕ್ಷಿತವಲ್ಲವಾದ್ದರಿಂದ ಆ ವಿಷಯದಲ್ಲಿ ಪರಸ್ಪರವಿರೋಧವನ್ನು ಹುಡುಕುತ್ತಾ ಕೂರಬಾರದು. ಪರಮಾತ್ಮನು ತಾನು ಇದ್ದಂತೆಯೇ ಇದ್ದು ವಿಶ್ವಾಕಾರದಿಂದಲೂ ತೋರಿಕೊಳ್ಳುತ್ತಿದಾನೆ ಎಂಬುದೇ ಇಲ್ಲಿ ಗ್ರಹಿಸತಕ್ಕದ್ದು. ಆಧ್ಯಾತ್ಮಿಕ, ಆಧಿಭೌತಿಕ,

ಆಧಿದೈವಿಕ– ಎಂದು ವಿಭಕ್ತವಾಗಿ ತೋರುತ್ತಿರುವ ಈ ವಿಶ್ವವೆಲ್ಲವೂ ಆ ಪರಮಾತ್ಮನ ವಿಗ್ರಹವೇ ಎಂಬುದನ್ನು ಮಾತ್ರ ಮನಸ್ಸಿಗೆ ತಂದುಕೊಳ್ಳಬೇಕು.

ನಮಗೆ ಕಾಣಿಸುತ್ತಿರುವ ವಿಶ್ವದಲ್ಲಿ ಪರಮೇಶ್ವರನ ಭಾವನೆಯನ್ನು ಮಾಡಿದರೆ ಯಾವ ಫಲವಾಗುವದು?– ಎಂದರೆ ಇಹಸುಖ, ಪರಸುಖ, ಪರಮಪುರಷಾರ್ಥ– ಇವೆಲ್ಲವೂ ದೊರಕುವವು. ಸ್ವಾರ್ಥತೆಯಿಂದ ನಮಗೆ ಧನಕನಕವಸ್ತುವಾಹನಾದಿಗಳ ಸಂಪತ್ತು ರಾಶಿಯಾಗಬಹುದು.ಆದರೆ ಅದರಿಂದ ನಮಗೆಲ್ಲರಿಗೂ ಇಷ್ಟವಾದ ಸುಖವು ದೊರಕುವ ಸಂಭವವು ಬಹಳ ಕಡಿಮೆ. ಪರಮೇಶ್ವರನ ಆರಾಧನೆಯಿಂದ ನಮಗೆ ಹೇರಳವಾಗಿ ಭೋಗ್ಯವಸ್ತುಗಳು ಸಿಕ್ಕದೆ ಇರಬಹುದು; ಆದರೆ ಸುಖಜೀವನವು ಕಟ್ಟಿಟ್ಟ ಬುತ್ತಿಯಾಗುವದು. ಪರಲೋಕದ ಸುಖವಂತೂ ಶಾಸ್ತ್ರದೃಷ್ಟಿಯಿಂದ ಮಾಡುವ ಸತ್ಕರ್ಮದ ಮತ್ತು ಉಪಾಸನೆಯ ಫಲವಾಗಿರುತ್ತದೆ; ಅದು ಪರಮೇಶ್ವರನ ಆರಾಧನೆಯಿಂದಲೇ ದೊರಕತಕ್ಕದ್ದು. ಇನ್ನು ಬಾಹ್ಯವಸ್ತುಗಳ ಭೋಗದ ಆಶೆಯಿಲ್ಲದೆ ನಿಷ್ಕಾಮರಾಗಿ ಪರಮೇಶ್ವರನನ್ನು ಆರಾಧಿಸುವವರಿಗಂತೂ ಇಲ್ಲಿಯೇ ಆತನ ಪರಮಾನಂದತತ್ತ್ವದ ಅನುಭವವಾಗಿ ಬಿಡುತ್ತದೆ. ಅದೇ ಪರಮಪುರುಷಾರ್ಥವೆನಿಸುವದು. ಆದ್ದರಿಂದ ಭಗವಂತನು ಅರ್ಜುನನಿಗೆ ವಿಶ್ವರೂಪವನ್ನು ತೋರಿಸಿ ಅನುಗ್ರಹಿಸಿದ ಬಳಿಕ ಹೀಗೆಂದು ಬೋಧಿಸಿರುತ್ತಾನೆ; "ನಾಲ್ಕು ವೇದಗಳ ಅಧ್ಯಯನದಿಂದಲಾಗಲಿ, ಉಗ್ರವಾದ ತಪಸ್ಸನ್ನು ಮಾಡುವದರಿಂದಾಗಲಿ, ದಾನದಿಂದಲಾಗಲಿ, ಯಜ್ಞದಿಂದಲಾಗಲಿ ನನ್ನನ್ನು ಈ ವಿಶ್ವರೂಪದಿಂದ ಕಾಣುವದು ಶಕ್ಯವಲ್ಲ. ಆದರೆ ಅನನ್ಯಭಕ್ತಿಯಿಂದ ಮಾತ್ರವೇ ಈ ರೀತಿಯಿಂದ ಅರಿತುಕೊಳ್ಳವದಕ್ಕೂ, ಇದ್ದಂತೆಯೇ ಕಂಡುಕೊಳ್ಳುವದಕ್ಕೂ, ನನ್ನಲ್ಲಿಯೇ ಪ್ರವೇಶಿಸಿ ಪರಮಪುರುಷಾರ್ಥವನ್ನು ಪಡೆದುಕೊಳ್ಳುವದಕ್ಕೂ ಆಗುತ್ತದೆ".

**ವಾಚಕವೃಂದ, ನಿಮಗೆ ಆ ವಿಶ್ವಾಕಾರನಾದ ಪರಮೇಶ್ವರನಲ್ಲಿ ಆದಷ್ಟು ಬೇಗ ಅನನ್ಯಭಕ್ತಿಯುಂಟಾಗಲೆಂದು ಪ್ರಾರ್ಥಿಸಿರಿ! ಇಡಿಯ ವಿಶ್ವವೇ ಆತನ ಬಾಹ್ಯರೂಪವೆಂಬ ಭಾವನೆಯು ನಿಮ್ಮ ಹೃದಯದಲ್ಲಿ ಮೂಡಲಿ! ಇಲ್ಲಿರುವ ಎಲ್ಲಾ ಜೀವರುಗಳ ಹೃದಯಲ್ಲಿಯೂ ಅಂತರ್ಯಾಮಿಯಾಗಿರುವ ಆ ಪರಮೇಶ್ವರನ ಕಡೆಗೆ ನಿಮ್ಮ ಮನಸ್ಸು ಒಲಿಯಲಿ! ಕ್ರಮಕ್ರಮವಾಗಿ ಆತನ ಪರಮಾರ್ಥಸ್ವರೂಪದಲ್ಲಿಯೇ ನೆಲೆನಿಲ್ಲುವ ಪರಮಾನಂದವು ನಿಮಗೆ ಸೂರೆಯಾಗುವದು.**